ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಉತ್ತರ ಪ್ರದೇಶ: ಅಖಿಲೇಶ್ ಯಾದವ್ ಗಂಭೀರ ಆರೋಪ

‘ಮತಯಂತ್ರ ತಿರುಚಲು ಸೂಚನೆ’

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಬಿಜೆಪಿ ಪರವಾಗಿ ಫಲಿತಾಂಶ ಬರುವಂತೆ ಮತಯಂತ್ರಗಳನ್ನು ತಿರುಚಲು ಸರ್ಕಾರದಿಂದ ಜಿಲ್ಲಾಧಿಕಾರಿಗಳಿಗೆ ಸೂಚನೆ ಬಂದಿದೆ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಆರೋಪಿಸಿದ್ದಾರೆ. ವಾರಾಣಸಿಯಲ್ಲಿ ಇವಿಎಂಗಳನ್ನು ಸಾಗಿಸುತ್ತಿದ್ದ ಎರಡು ಟ್ರಕ್‌ಗಳನ್ನು ಎಸ್‌ಪಿ ಕಾರ್ಯಕರ್ತರು ತಡೆದು ನಿಲ್ಲಿಸಿ, ಪ್ರತಿಭಟನೆ ನಡೆಸಿದ್ದಾರೆ. ಪೊಲೀಸರು ಹರಸಾಹಸದ ನಂತರ ಟ್ರಕ್‌ಗಳು ಮುಂದೆ ಸಾಗಲು ಅನುವು ಮಾಡಿಕೊಟ್ಟಿದ್ದಾರೆ.

‘ವಾರಾಣಸಿಯ ಪಹಾಡಿಯಾದಲ್ಲಿ ಇರುವ ಸ್ಟ್ರಾಂಗ್‌ರೂಂ ಬಳಿ ಟ್ರಕ್‌ಗಳನ್ನು ತಡೆದು ನಿಲ್ಲಿಸಲಾಗಿದೆ. ಸ್ಟ್ರಾಂಗ್ ರೂಂನಿಂದ ಮತಯಂತ್ರಗಳನ್ನು ಸಾಗಿ-

ಚುನಾವಣೆಯು ಪ್ರಜಾಪ್ರಭುತ್ವದ ಅತ್ಯಂತ ಪ್ರಬಲ ಮತ್ತು ಕೊನೆಯ ಯುದ್ಧ. ಕಾರ್ಯಕರ್ತರೆಲ್ಲರೂ ಕ್ಯಾಮೆರಾ ಹಿಡಿದು ಸ್ಟ್ರಾಂಗ್ ರೂಂಗಳನ್ನು ಕಾಯಿರಿ

ಅಖಿಲೇಶ್ ಯಾದವ್
ಎಸ್‌ಪಿ ಮುಖ್ಯಸ್ಥ

ಸಲಾಗುತ್ತಿದೆ’ ಎಂದು ಅಖಿಲೇಶ್ ಯಾದವ್ ಆರೋಪಿಸಿದ್ದಾರೆ. ಟ್ರಕ್‌ಗಳಲ್ಲಿ ಮತಯಂತ್ರಗಳು ಇರುವ ದೃಶ್ಯವಿರುವ ವಿಡಿಯೊವನ್ನು ಸಮಾಜವಾದಿ ಪಕ್ಷವು ಟ್ವೀಟ್ ಮಾಡಿದೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ರಾಜ್ಯದ ಎಲ್ಲಾ ಸ್ಟ್ರಾಂಗ್‌ರೂಂಗಳ ಬಳಿ ಕಾವಲು ಇರಿ. ಬಹಳ ಎಚ್ಚರದಿಂದ ಇರಿ ಎಂದು ಅಖಿಲೇಶ್ ತಮ್ಮ ಪಕ್ಷದ ಕಾರ್ಯಕರ್ತರಿಗೆ ಸೂಚನೆ ನೀಡಿದ್ದಾರೆ.

ಈ ಬಗ್ಗೆ ವಾರಾಣಸಿ ಜಿಲ್ಲಾಧಿಕಾರಿ ಸ್ಪಷ್ಟನೆ ನೀಡಿದ್ದಾರೆ. ‘ಚುನಾವಣೆಯಲ್ಲಿ ಬಳಸಿರುವ ಮತಯಂತ್ರಗಳನ್ನು ಸ್ಟ್ರಾಂಗ್ ರೂಂನಲ್ಲಿ ಭದ್ರವಾಗಿ ಇರಿಸಲಾಗಿದೆ. ಅಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಕಣ್ಗಾವಲು ಇದೆ. ಸ್ಟ್ರಾಂಗ್‌ರೂಂನಿಂದ ಯಾವುದೇ ಮತಯಂತ್ರಗಳನ್ನು ಸಾಗಿಸಿಲ್ಲ. ಟ್ರಕ್‌ನಲ್ಲಿ ಇರುವ ಮತಯಂತ್ರಗಳನ್ನು ಚುನಾವಣೆಯಲ್ಲಿ ಬಳಸಿಲ್ಲ. ಮತ ಎಣಿಕೆ ಸಿಬ್ಬಂದಿಗೆ ತರಬೇತಿ ನೀಡಲು ಈ ಮತಯಂತ್ರಗಳನ್ನು ಸಾಗಿಸಲಾಗುತ್ತಿತ್ತು. ರಾಜಕೀಯ ಪಕ್ಷಗಳು ಮಾಡಿರುವ ಆರೋಪದಲ್ಲಿ ಹುರುಳಿಲ್ಲ’ ಎಂದು ಜಿಲ್ಲಾಧಿಕಾರಿ ಕೌಶಲ್ ರಾಜ್ ಶರ್ಮಾ ಸ್ಪಷ್ಟನೆ ನೀಡಿದ್ದಾರೆ.

‘ಯೋಗಿ ಆಪ್ತರಿಂದ ಸೂಚನೆ’

‘ಬಿಜೆಪಿ ಸೋಲುವ ಸ್ಥಿತಿ ಇರುವ ಕ್ಷೇತ್ರಗಳಲ್ಲಿ ಮತಯಂತ್ರಗಳನ್ನು ತಿರುಚಲು ಯೋಗಿ ಆದಿತ್ಯನಾಥ ಅವರ ಆಪ್ತ ಅಧಿಕಾರಿಯೊಬ್ಬರಿಂದ ಅಧೀನ ಅಧಿಕಾರಿಗಳಿಗೆ ಸೂಚನೆ ಬಂದಿದೆ. ಬಿಜೆಪಿ ಈವರೆಗೆ ಗೆಲ್ಲದೇ ಇರುವ 47 ಕ್ಷೇತ್ರಗಳಲ್ಲಿ ಇಂತಹ ಸೂಚನೆ ನೀಡಲಾಗಿದೆ. ಮತಯಂತ್ರ ತಿರುಚುವುದು ಗೊತ್ತಾಗದೇ ಇರಲಿ ಎಂದೇ ಮತದಾನೋತ್ತರ ಸಮೀಕ್ಷೆಯಲ್ಲಿ ಬಿಜೆಪಿ ಗೆಲ್ಲುತ್ತದೆ ಎಂದು ಬಿಂಬಿಸಲಾಗಿದೆ’ ಎಂದು ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.

ಬಿಬಿಎಂಪಿ ಬಜೆಟ್: ನಿಗದಿಯಾಗದ ದಿನಾಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ವರ್ಷ ಮುಕ್ತಾಯಗೊಳ್ಳುವುದಕ್ಕೆ ಮೂರು ವಾರಗಳು ಮಾತ್ರ ಬಾಕಿ ಇವೆ. ಇಷ್ಟರೊಳಗೆ ಬಿಬಿಎಂಪಿಯು 2022–23ನೇ ಸಾಲಿನ ಬಜೆಟ್‌ಗೆ ಅಂಗೀಕಾರ ಪಡೆಯಬೇಕಿತ್ತು. ಆದರೆ, ಬಜೆಟ್ ಮಂಡನೆಯ ದಿನಾಂಕವೇ ನಿಗದಿ ಆಗಿಲ್ಲ.

2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 194ರ ಪ್ರಕಾರ ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಜ.15ರಂದು ಅಥವಾ ನಂತರ ಆದಷ್ಟು ಬೇಗ ಮುಖ್ಯ ಆಯುಕ್ತರು ಬಜೆಟ್‌ಗೆ ಸಂಬಂಧಿಸಿದಂತೆ ಕಳುಹಿಸುವ ಅಂದಾಜುಗಳನ್ನು ಮತ್ತು ಪ್ರಸ್ತಾವನೆಗಳನ್ನು ಪರಿಶೀಲಿಸಬೇಕು. ಇತರ ಸ್ಥಾಯಿ ಸಮಿತಿಗಳ ಪ್ರಸ್ತಾವನೆಗಳೇನಾದರೂ ಇದ್ದರೆ ಅವುಗಳನ್ನು ಪಡೆದುಕೊಂಡು ಮುಖ್ಯ ಆಯುಕ್ತರಿಂದ ಇದರ ಕುರಿತ ವಿವರವಾದ ಮಾಹಿತಿ ಪಡೆದು ಬಜೆಟ್ ಅಂದಾಜನ್ನು ಸಿದ್ಧಪಡಿಸಬೇಕು. ಬಿಬಿಎಂಪಿ ಕಾಯ್ದೆಯ ಸೆಕ್ಷನ್ 196ರ ಪ್ರಕಾರ ಬಿಬಿಎಂಪಿ ಬಜೆಟ್ ಅನ್ನು ಮುಂದಿನ ಆರ್ಥಿಕ ವರ್ಷಾರಂಭಕ್ಕಿಂತ ಕನಿಷ್ಠ ಮೂರು ವಾರಗಳಿಗೆ ಮುಂಚೆ ಅಂಗೀಕರಿಸಬೇಕಿದೆ. ಆ ಪ್ರಕಾರ ಮಾ.10ರ ಒಳಗೆ ಬಜೆಟ್ ಮಂಡನೆ ಆಗಬೇಕಿತ್ತು.

ಅಂಕಿ-ಅಂಶಗಳು

₹9,286.80 ಕೋಟಿ
ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಗೆ ಅನುಮೋದನೆಗಾಗಿ ಕಳುಹಿಸಿ 2021–22ನೇ ಸಾಲಿನ ಬಜೆಟ್ ಗಾತ್ರ

₹9,951.8 ಕೋಟಿ
ಸರ್ಕಾರದಿಂದ ಅನುಮೋದನೆಗೊಂಡ ಬಜೆಟ್ ಗಾತ್ರ

ಬಜೆಟ್ ಮಂಡನೆಗೆ ಸಂಬಂಧಿಸಿ ಬಿಬಿಎಂಪಿಯು ಕಳೆದ ವರ್ಷದಂತೆ ಈ ಬಾರಿಯೂ ಕಾಯ್ದೆಯನ್ನು ಉಲ್ಲಂಘಿಸಿದೆ. ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲ. ಮೇಯರ್ ಹಾಗೂ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಅಧಿಕಾರವನ್ನು ಆಡಳಿತಾಧಿಕಾರಿಯೇ ಹೊಂದಿರುತ್ತಾರೆ. ಬಜೆಟ್ ರೂಪಿಸುವ ಹೊಣೆಗಳೆಲ್ಲವೂ ಆಡಳಿತಾಧಿಕಾರಿಯವರದಾಗಿರುತ್ತದೆ. ಬಜೆಟ್ ಮಂಡನೆ ವಿಳಂಬವಾಗಿರುವ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ‘ಈ ತಿಂಗಳ ಅಂತ್ಯದೊಳಗೆ ಬಜೆಟ್ ಮಂಡಿಸಲಿದ್ದೇವೆ’ ಎಂದರು.

‘ಬಿಬಿಎಂಪಿ ಬಜೆಟ್ ಮಂಡನೆಗೆ ಅಗತ್ಯ ಸಿದ್ಧತೆ ಮಾಡಿಕೊಂಡಿದ್ದೇವೆ. ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಬಿಬಿಎಂಪಿಗೆ ಎಷ್ಟು ಅನುದಾನ ಸಿಗುತ್ತದೆ ಎಂಬುದನ್ನು ನೋಡಿಕೊಂಡು ನಗರದ ಅಭಿವೃದ್ಧಿ ಯೋಜನೆಗಳಿಗೆ ರೂಪರೇಷೆ ತಯಾರಿಸಬೇಕು. ಹಾಗಾಗಿ ಬಜೆಟ್ ಮಂಡನೆ ತುಸು ವಿಳಂಬವಾಗಿದೆ. ಈ ವಾರವೇ ಹಿರಿಯ ಅಧಿಕಾರಿಗಳು ಚರ್ಚಿಸಿ ಬಜೆಟ್‌ಗೆ ದಿನಾಂಕ ನಿಗದಿಪಡಿಸಲಿದ್ದಾರೆ. ಮಾರ್ಚ್ ಕೊನೆಯ ವಾರದಲ್ಲಿ ಬಜೆಟ್ ಮಂಡನೆಯಾಗಲಿದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಹೊಸ ಕಾರ್ಯಕ್ರಮಗಳಿಲ್ಲ: ವಾಸ್ತವಕ್ಕಿಂತಲೂ ಹೆಚ್ಚು ತೆರಿಗೆ ವರಮಾನ ನಿರೀಕ್ಷಿಸಿ ಬೇಕಾಬಿಟ್ಟಿ ಅನುದಾನ ಘೋಷಿಸುವ ಪರಿಪಾಠಕ್ಕೆ ಕಳೆದ ವರ್ಷ ಕಡಿವಾಣ ಹಾಕಲಾಗಿತ್ತು. ಅನಗತ್ಯವಾಗಿ ಹೊಸ ಯೋಜನೆಗಳನ್ನು ಪ್ರಕಟಿಸದೆ, ನಿರ್ವಹಣೆ ಕಾರ್ಯಗಳಿಗೆ ಆದ್ಯತೆ ನೀಡಲಾಗಿತ್ತು. ವಾರ್ಡ್‌ನಲ್ಲಿ ಸಂಗ್ರಹವಾಗುವ ಆಸ್ತಿ ತೆರಿಗೆಯಲ್ಲಿ ಶೇ 1ರಷ್ಟನ್ನು ಅದೇ ವಾರ್ಡ್‌ಗೆ ಒದಗಿಸುವ ಮಹತ್ವದ ತೀರ್ಮಾನವನ್ನು ಕೈಗೊಳ್ಳಲಾಗಿತ್ತು. ಆ ಅನುದಾನ ಬಳಕೆ ಬಗ್ಗೆ ವಾರ್ಡ್ ಸಮಿತಿ ತೀರ್ಮಾನ ಕೈಗೊಳ್ಳಬೇಕು ಎಂದು ಸೂಚಿಸಲಾಗಿತ್ತು.

ಬಿಬಿಎಂಪಿಯು 2021–22ನೇ ಸಾಲಿನ ಅಂತಿಮ ಬಜೆಟ್‌ನಲ್ಲಿ ತೆರಿಗೆ ಮತ್ತು ಕರಗಳ ರೂಪದಲ್ಲಿ ಒಟ್ಟು ₹ 3353.20 ಕೋಟಿ ಸಂಗ್ರಹಿಸುವ ಗುರಿ ಹೊಂದಿತ್ತು. ₹ 1250.78 ಕೋಟಿ ತೆರಿಗೆಯೇತರ ವರಮಾನವನ್ನು ನಿರೀಕ್ಷೆ ಮಾಡಿತ್ತು. ಮಾ.5ರವರೆಗೆ ₹2,838 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ.

ಡಾಂಗಲ್ ಬಳಸಿ ಕಂಪ್ಯೂಟರ್ ಆಪರೇಟರ್ ಕೃತ್ಯ: ಶಂಕೆ

ಸರ್ವರ್ ದುರ್ಬಳಕೆ: ಅಕ್ರಮ ಇ–ಖಾತೆ

• ಆರ್. ಜಿತೇಂದ್ರ

ರಾಮನಗರ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆಯ ಸರ್ವರ್ ದುರ್ಬಳಕೆ ಮಾಡಿಕೊಂಡು ಜಿಲ್ಲೆ, ಹೊರ ಜಿಲ್ಲೆ ವ್ಯಾಪ್ತಿಯ ಆಸ್ತಿಗಳಿಗೆ ಅಕ್ರಮವಾಗಿ ಇ–ಖಾತೆ ಮಾಡಿಕೊಡುತ್ತಿದ್ದ ಜಾಲ ಪತ್ತೆಯಾಗಿದೆ. ಈ ಸಂಬಂಧ ಜಿಲ್ಲೆಯ ಹಾರೋಹಳ್ಳಿ ಪಟ್ಟಣ ಪಂಚಾಯಿತಿ ಹಾಗೂ ಬೈರಮಂಗಲ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಸೈಬರ್ ವಿಭಾಗದ ಪೊಲೀಸರು ಶೋಧ ನಡೆಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇಬ್ಬರ ಹೆಸರಿಗೆ 36 ಇ–ಖಾತೆಗಳನ್ನು ಮಾಡಿಕೊಡಲಾಗಿತ್ತು. ತಮ್ಮ ಗಮನಕ್ಕೆ ಬಾರದೆಯೇ ಬೇರೆಯವರು ಈ ಕೃತ್ಯ ಎಸಗಿದ್ದಾರೆ ಎಂದು ಅಲ್ಲಿನ ಅಧಿಕಾರಿಗಳು ಪೊಲೀಸರಿಗೆ ದೂರು ಸಲ್ಲಿಸಿದ್ದರು.

ಪ್ರಕರಣದ ಬೆನ್ನು ಹತ್ತಿದ ಪೊಲೀಸರಿಗೆ ಮತ್ತೊಂದು ಜಿಲ್ಲೆಯಲ್ಲಿ ಈ ಕೃತ್ಯ ನಡೆದಿರುವುದು ತನಿಖೆ ವೇಳೆ ಗಮನಕ್ಕೆ ಬಂದಿತ್ತು. ಹಾರೋಹಳ್ಳಿ ಗ್ರಾಮ ಪಂಚಾಯಿತಿಯ (ಈಗ ಪಟ್ಟಣ ಪಂಚಾಯಿತಿ) ಹಿಂದಿನ ಅಧ್ಯಕ್ಷರ ಹೆಸರಿನಲ್ಲಿದ್ದ ಇಂಟರ್‌ನೆಟ್ ಡಾಂಗಲ್ ಕಾರ್ಡ್ ಬಳಸಿ ಲಾಗಿನ್ ಆಗಿ ಈ ಕೃತ್ಯ ಎಸಗಲಾಗಿತ್ತು. ತನಿಖೆಯ ವೇಳೆ ಪೊಲೀಸರಿಗೆ ಅಲ್ಲಿಯ ಕಂಪ್ಯೂಟರ್ ಆಪರೇಟರ್ ಈ ಅಕ್ರಮ ಎಸಗಿರುವ ಮಾಹಿತಿ ಲಭ್ಯವಾಗಿದೆ.

ಬೈರಮಂಗಲ ಗ್ರಾ.ಪಂ.ವ್ಯಾಪ್ತಿಯಲ್ಲೂ ಇಂತಹದ್ದೇ ಪ್ರಕರಣ ನಡೆದಿದೆ ಎನ್ನಲಾಗಿದ್ದು, ಪೊಲೀಸರು ಅಲ್ಲಿನ ಕಂಪ್ಯೂಟರ್‌ಗಳಲ್ಲಿನ ದತ್ತಾಂಶ ಸಂಗ್ರಹಿಸಿದ್ದಾರೆ. ಇಷ್ಟು ದಿನ ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಇ–ಖಾತೆ ಅಕ್ರಮಗಳು ನಡೆಯುತ್ತಿದ್ದವು. ಇದೀಗ ಹೊರ ಜಿಲ್ಲೆಯಲ್ಲಿ ಇನ್ನೊಂದು ಜಿಲ್ಲೆಯ ಸ್ವತ್ತಿನ ಇ–ಖಾತೆ ನಡೆಸಿರುವುದು ಪತ್ತೆಯಾಗಿದೆ.

ದೇವನಹಳ್ಳಿಯಲ್ಲಿ ಮೂಲ: 2021ರ ಸೆಪ್ಟೆಂಬರ್ 17ರಿಂದ 20ರವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನಹಳ್ಳಿ ಗ್ರಾಮ ಪಂಚಾಯಿತಿಯ ಪಿಡಿಒ ಅವರ ಇ–ಸ್ವತ್ತು ಲಾಗಿನ್ ದುರ್ಬಳಕೆ ಮಾಡಿಕೊಂಡು ತಿರುಪತಿ ರೆಡ್ಡಿ ಹಾಗೂ ಅಜಯ್ ನರನೆ ಎಂಬುವರ ಹೆಸರಿಗೆ 36 ಇ–ಸ್ವತ್ತು ಖಾತೆ ಮಾಡಿಕೊಡಲಾಗಿತ್ತು. ಇದಕ್ಕಾಗಿ ಚನ್ನಹಳ್ಳಿ ಗ್ರಾ.ಪಂ. ಪಿಡಿಒ ಹಾಗೂ ದೇವನಹಳ್ಳಿ ತಾ.ಪಂ. ಇಒ ಅವರ ಇ–ಸ್ವತ್ತು ಲಾಗಿನ್ ಐ.ಡಿ ದುರ್ಬಳಕೆ ಮಾಡಿಕೊಳ್ಳಲಾಗಿತ್ತು.

‘ಎಚ್.ಎನ್.ಗುರುಪ್ರಸಾದ್ ಹೆಸರಿನಲ್ಲಿದ್ದ ಡಾಂಗಲ್ ಕಾರ್ಡ್ ಅಸೈನ್ ಮಾಡಿ ತಮ್ಮ ಐ.ಡಿ ಹ್ಯಾಕ್ ಮಾಡಲಾಗಿದೆ. ಇ–ಖಾತೆ ವಿಚಾರವೇ ನಮ್ಮ ಗಮನಕ್ಕೆ ಬಂದಿಲ್ಲ’ ಎಂದು ದೇವನಹಳ್ಳಿ ತಾ.ಪಂ. ಇಒ ಎಚ್.ಡಿ.ವಸಂತ ಕುಮಾರ್ ದೂರು ದಾಖಲಿಸಿದ್ದರು. ಮಾಹಿತಿ ತಂತ್ರಜ್ಞಾನ ಕಾಯ್ದೆ 2008ರ ಅಡಿ ಬೆಂಗಳೂರು ಈಶಾನ್ಯ ವಿಭಾಗ ಸೈಬರ್ ಠಾಣೆ ಪೊಲೀಸರು 2021ರ ಡಿ.4ರಂದು ಪ್ರಕರಣ ದಾಖಲಿಸಿಕೊಂಡಿದ್ದರು.

ಎಚ್.ಎನ್.ಗುರುಪ್ರಸಾದ್ ಹೆಸರಿನ ಡಾಂಗಲ್ ಕಾರ್ಡ್‌ನ ಗುರುತು ಹುಡುಕಿಕೊಂಡು ಹೊರಟ ಪೊಲೀಸರಿಗೆ ಅದು ಹಾರೋಹಳ್ಳಿ ಗ್ರಾ.ಪಂ. ಅಧ್ಯಕ್ಷರ ಹೆಸರಿನಲ್ಲಿರುವುದು ಪತ್ತೆಯಾಗಿತ್ತು. ಸೈಬರ್ ವಿಭಾಗದ ಪೊಲೀಸರು ಆರೋಪಿಗಳಿಗೆ ನೋಟಿಸ್ ನೀಡಿದ್ದಾರೆ. ತನಿಖೆಯನ್ನು ಇನ್ನಷ್ಟು ಚುರುಕುಗೊಳಿಸಿದ್ದಾರೆ.

ಆರೋಪಿಗಳು ಹೇಳುವುದೇನು?

‘2021ರ ಜೂನ್‌ನಲ್ಲಿಯೇ ನಮ್ಮ ಗ್ರಾ.ಪಂ ಆಡಳಿತ ಅವಧಿ ಮುಗಿದಿದೆ. ನಂತರ ನನ್ನ ಹೆಸರಿನಲ್ಲಿ ಇದ್ದ ಡಾಂಗಲ್ ಕಾರ್ಡ್ ಅನ್ನು ಗ್ರಾ.ಪಂ.ಸಿಬ್ಬಂದಿಗೆ ಹಸ್ತಾಂತರಿಸಿದ್ದೆ. ಆಗಿನ್ನೂ ಆಡಳಿತಾಧಿಕಾರಿ ನೇಮಕ ಆಗಿಲ್ಲದ ಕಾರಣ ಮಾಹಿತಿ ನೀಡಿರಲಿಲ್ಲ. ಪೊಲೀಸರು ನೋಟಿಸ್ ನೀಡಿದ ಬಳಿಕ ಹಾಜರಾಗಿ ಎಲ್ಲವನ್ನೂ ಹೇಳಿದ್ದೇನೆ' ಎಂದು ಹಾರೋಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಗುರುಪ್ರಸಾದ್ ಅವರು ತಮ್ಮ ಮೇಲಿನ ಆರೋಪಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿದರು.

ಪ್ರಜಾವಾಣಿ ವಿಶೇಷ

ಪರ್ಯಾಯ ಮೂಲಗಳಿಂದ ತೈಲ ಆಮದು ಚಿಂತನೆ: ನಿರ್ಮಲಾ ಸೀತಾರಾಮನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಅಗತ್ಯದ ಶೇ 85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿರುವುದರಿಂದ ಪರ್ಯಾಯ ಮೂಲಗಳಿಂದ ತೈಲ ಆಮದು ಮಾಡಿಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ರಾಜ್ಯ ಬಿಜೆಪಿ ಘಟಕವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ‘ಆತ್ಮನಿರ್ಭರ ಅರ್ಥವ್ಯವಸ್ಥೆ’ ಸಂವಾದದಲ್ಲಿ ಅವರು ಮಾತ ನಾಡಿದರು.

‘ರಷ್ಯಾ–ಉಕ್ರೇನ್ ಯುದ್ಧವು ದೇಶದ ಆರ್ಥಿಕತೆಯ ಮೇಲೂ ಪರಿಣಾಮ ಬೀರಲಿದೆ. ಇದನ್ನು ಸವಾಲಾಗಿ ಸ್ವೀಕರಿಸಿ, ಪರಿಣಾಮ ತಗ್ಗಿಸಲು ಸಜ್ಜಾಗಿದ್ದೇವೆ. ತೈಲ ಬೆಲೆ ಏರುಪೇರು ತಡೆಯಲು ಬಜೆಟ್‌ನಲ್ಲಿ ಕೆಲವು ಅಂಶಗಳನ್ನು ಸೇರಿಸಲಾಗಿದೆ. ಆದರೆ ಈಗ ಅಂತರರಾಷ್ಟ್ರೀಯ ಕಚ್ಚಾ ತೈಲ ಬೆಲೆ ಭಾರಿ ಏರಿಕೆಯಾಗಿದೆ. ಪೆಟ್ರೋಲಿಯಂ ಕಂಪನಿಗಳು ಇಂಧನ ದರ ನಿರ್ಧರಿಸಲಿವೆ’ ಎಂದು ಹೇಳಿದರು.

‘ರಷ್ಯಾ–ಉಕ್ರೇನ್ ಯುದ್ಧ ಭಾರತಕ್ಕೆ ಸವಾಲೊಡ್ಡಿದೆ. ಯುದ್ಧದಿಂದಾಗಿ ಜಾಗತಿಕ ಮಟ್ಟದಲ್ಲಿ ಗೋಧಿ ಪೂರೈಕೆ ವ್ಯತ್ಯಯವಾಗಿದೆ. ಭಾರತದ ರೈತರು ಹೇರಳ ಪ್ರಮಾಣದಲ್ಲಿ ಗೋಧಿಯನ್ನು ಉತ್ಪಾದಿಸುತ್ತಿದ್ದಾರೆ. ಆತ್ಮನಿರ್ಭರ ಭಾರತವು ಇಡೀ ವಿಶ್ವಕ್ಕೆ ಉತ್ಪನ್ನಗಳನ್ನು ಪೂರೈಸುವ ಸಾಮರ್ಥ್ಯ ಹೊಂದಿದೆ. ಈ ಸಂದರ್ಭದಲ್ಲಿ ನಾವು ಜಾಗತಿಕ ದೃಷ್ಟಿಕೋನದಿಂದ ಸವಾಲು ಸ್ವೀಕರಿಸಬೇಕು’ ಎಂದರು.

ಕಾರ್ಯಕ್ರಮದಲ್ಲಿ ನಿರ್ಮಲಾ ಸೀತಾರಾಮನ್ ಮತ್ತು ಸಿ.ಎನ್‌.ಅಶ್ವತ್ಥನಾರಾಯಣ ಚರ್ಚಿಸಿದರು –ಪ್ರಜಾವಾಣಿ ಚಿತ್ರ

‘ಸ್ವದೇಶಿ ಉತ್ಪನ್ನ ಖರೀದಿಸಿ’

‘ಆಮದು ಸುಂಕ ಹೆಚ್ಚಳದ ಬಗ್ಗೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ನಮ್ಮಲ್ಲಿ ವಿದೇಶಗಳಿಂದ ವಿವಿಧ ವಸ್ತುಗಳನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳಲಾಗುತ್ತಿದೆ. ನಮ್ಮಲ್ಲೇ ತಯಾರಾಗುವ ವಸ್ತುಗಳನ್ನು ಇಲ್ಲಿನವರು ಖರೀದಿಸಬೇಕು. ಈ ಕಾರಣದಿಂದಲೇ ಆಮದು ಮೇಲೆ ಸುಂಕ ಹೆಚ್ಚಿಸಲಾಯಿತು. ಇಲ್ಲೇ ತಯಾರಾಗಿರುವ ಉತ್ಪನ್ನಗಳ ಮೇಲೆ ಸುಂಕ ಕಡಿಮೆ ಮಾಡಿದ್ದೇವೆ’ ಎಂದೂ ನಿರ್ಮಲಾ ಸೀತಾರಾಮನ್ ಹೇಳಿದರು.

‘ಆತ್ಮನಿರ್ಭರ ಭಾರತವು ಕೊರೊನಾ ಸಂದರ್ಭವನ್ನು ಸಮರ್ಥವಾಗಿ ಎದುರಿಸಿದೆ. ಆರು ತಿಂಗಳಲ್ಲಿ 5 ಲಕ್ಷ ಪಿಪಿಇ ಕಿಟ್ ತಯಾರಿಸಲಾಯಿತು. ಬಳಿಕ ಪಿಪಿಇ ಕಿಟ್ ಆಮದು ಸ್ಥಗಿತ ಮಾಡಲಾಯಿತು. ವಿಶ್ವಕ್ಕೆ ಅಗತ್ಯವಿರುವ ಶೇ 66ರಷ್ಟು ಲಸಿಕೆಯನ್ನು ಭಾರತ ಪೂರೈಕೆ ಮಾಡಿದೆ. ಕೋವಿಡ್ ಲಸಿಕೆಯ ಡಿಜಿಟಲ್ ದಾಖಲೆ ವ್ಯವಸ್ಥೆ ಬೇರೆ ದೇಶಗಳಲ್ಲಿ ಇಲ್ಲ’ ಎಂದರು.

‘ದೇಶದಲ್ಲಿ ಮಹಿಳೆಯರ ರಕ್ಷಣೆಗಾಗಿ ತಂತ್ರಜ್ಞಾನಗಳನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. 2014ರ ನಂತರ ಮಹಿಳೆಯರ ಭಾಗವಹಿಸುವಿಕೆ ಎಲ್ಲ ವಲಯಗಳಲ್ಲಿ ಹೆಚ್ಚಾಗಿದೆ. ಲಿಂಗಾನುಪಾತವು ಸಾವಿರ ಪುರುಷರಿಗೆ 1,026 ಮಹಿಳೆಯರು ಇರುವಷ್ಟು ಏರಿದೆ. ರಫೇಲ್ ಯುದ್ಧ ವಿಮಾನವನ್ನು ಮಹಿಳೆಯರೇ ಚಲಾಯಿಸುತ್ತಿದ್ದಾರೆ. ಮಹಿಳೆಯರಿಗೆ ಉತ್ತಮ ಅವಕಾಶಗಳನ್ನು ನೀಡಲಾಗುತ್ತಿದೆ. ಬಿಜೆಪಿ ಒಂದು ವಿಶಾಲವಾದ ಮನೆ. ಇಲ್ಲಿ ಮಹಿಳೆಯರಿಗೆ ರಾಜಕೀಯದಲ್ಲಿ ರಕ್ಷಣೆಯ ಹಾಗೂ ಆದ್ಯತೆಯ ವಾತಾವರಣವಿದೆ’ ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿದರು. ರಾಜ್ಯ ಬಿಜೆಪಿ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ ಭಾಗವಹಿಸಿದ್ದರು.

ಎಸ್‌.ಪ್ರಸಾದಸ್ವಾಮಿ (ಎಡದಿಂದ ಐದನೆಯವರು) ಅವರ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭ ಮಂಗಳವಾರ ನಡೆಯಿತು. ಪ್ರಕಾಶಕ ಎಂ.ಎಲ್‌. ಗಿರಿರಾಜು, ಎಸ್‌.ಪ್ರವೀಣ್ ಕುಮಾರ್‌, ಟಿ.ಯಲ್ಲಪ್ಪ, ರಮೇಶ್ಚಂದ್ರ ದತ್ತ, ರಾಗಂ ಮತ್ತು ಎಸ್‌. ಬಿ. ಉಮೇಶ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ/

ಸ್ಪರ್ಧಾತ್ಮಕ ಪರೀಕ್ಷೆಗೆ ‘ಕನ್ನಡ ಸಾಹಿತ್ಯ ಅಧ್ಯಯನ’ ಆಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವವರಿಗೆ ಹಾಗೂ ಕನ್ನಡ ಸಾಹಿತ್ಯ ಅಧ್ಯಯನ ಮಾಡುವವರಿಗೆ ‘ಕನ್ನಡ ಸಾಹಿತ್ಯ ಅಧ್ಯಯನ’ ಕೃತಿ ಉತ್ತಮವಾದ ಆಕರಗ್ರಂಥ ಎಂದು ಭಾಷಾಂತರ ಇಲಾಖೆಯ ಅನುವಾದಕ ಡಾ.ಎಸ್.ಪ್ರವೀಣಕುಮಾರ್ ಹೇಳಿದರು.

ಕೆ.ಆರ್.ಪುರ ಸರ್ಕಾರಿ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಪ್ರಸಾದ್ ಸ್ವಾಮಿ ಎಸ್. ಅವರ ನಾಲ್ಕು ಕೃತಿಗಳ ಬಿಡುಗಡೆ ಕಾರ್ಯಕ್ರಮ ಮಂಗಳವಾರ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರವೀಣ್‌ಕುಮಾರ್, ‘ವರ್ಣಮಾಲೆಯಿಂದ ಆರಂಭಿಸಿ ಶಾಸನ, ಹಳೆಗನ್ನಡ, ಕಾವ್ಯ, ಛಂದಸ್ಸು, ಆಧುನಿಕ ಸಾಹಿತ್ಯವನ್ನು ಸಮಗ್ರವಾಗಿ ಪರಿಚಯಿಸುವ ಗ್ರಂಥ ಇದಾಗಿದೆ. ವಚನಕಾರರು ಹಾಗೂ ಅವರು ಬರೆದ ವಚನಗಳ ಅಧಿಕೃತ ಪಟ್ಟಿಯೂ ಇಲ್ಲಿದೆ. ಅಲಕ್ಷಿತ ವಚನಕಾರರ ಬಗ್ಗೆಯೂ ವಿಶೇಷ ಆಸ್ಥೆಯಿಂದ ಅಧ್ಯಯನ ನಡೆಸಿ ಪುಸ್ತಕದಲ್ಲಿ ವಿವರಿಸಿದ್ದಾರೆ’ ಎಂದರು.

ಕವನ ಸಂಕಲನ ‘ಮುನ್ನುಡಿ’ ಕುರಿತು ಮಾತನಾಡಿದ ಕವಿ ಡಾ. ಟಿ. ಯಲ್ಲಪ್ಪ, ‘ಏಕತೆಯ ಹೆಸರಿನಲ್ಲಿ ಬಹುತ್ವಭಾರತವನ್ನೇ ಒಡೆದು ಹಾಕುತ್ತಿರುವ ಸಂದರ್ಭದಲ್ಲಿ ಪ್ರಸಾದಸ್ವಾಮಿ ಅವರು ಸಮಕಾಲೀನ ತಲ್ಲಣಗಳಿಗೆ ಸ್ಪಂದಿಸುವ ಕವಿತೆಗಳನ್ನು ಬರೆದಿದ್ದಾರೆ. ತಮ್ಮ ಕವನ ನೇರ, ಸರಳ, ಚಿಕ್ಕದು ಎನ್ನುವ ಅವರ ಕವಿತೆಗಳು ಚೊಕ್ಕವಾಗಿದ್ದು, ಚೇಳು ತನ್ನ ಕೊಂಡಿಯಿಂದ ಕುಟುಕುವಂತೆ ಸಮಾಜ ವಿರೋಧಿಗಳನ್ನು ಚುಚ್ಚಿದ್ದಾರೆ’ ಎಂದು ಹೇಳಿದರು.

ಪಿ. ಲಂಕೇಶ್‌ರ ಬರಹಗಳನ್ನು ಪರಿಚಯಿಸುವ ‘ಕನ್ನಡ ನವಿಲು’ ಕೃತಿ ಬಗ್ಗೆ ಪ್ರಾಧ್ಯಾಪಕ ಡಾ.ರಮೇಶ್ಚಂದ್ರ ದತ್ತ, ಆಧುನಿಕ ಸಾಹಿತ್ಯ ವಿಮರ್ಶೆಯ ಪುಸ್ತಕ ‘ಬೆಡಗು–ಬಿನ್ನಾಣ’ದ ಬಗ್ಗೆ ವಿಮರ್ಶಕ ಡಾ.ರಾಗಂ ಅವರು ಮಾತನಾಡಿದರು.

ನಾಲ್ಕೂ ಕೃತಿಗಳನ್ನು ‘ಪ್ರಜಾವಾಣಿ’ಯ ಬೆಂಗಳೂರು ವರದಿಗಾರರ ವಿಭಾಗದ ಮುಖ್ಯಸ್ಥ ವೈ.ಗ.ಜಗದೀಶ್ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಲೇಖಕ ಡಾ.ಪ್ರಸಾದ ಸ್ವಾಮಿ ಎಸ್., ಸಹಾಯಕ ನಿರ್ದೇಶಕ ಡಾ.ಎಸ್. ಬಿ.ಉಮೇಶ್ ಹಾಗೂ ಕಣ್ವ ಪ್ರಕಾಶನದ ಎಂ.ಆರ್. ಗಿರಿರಾಜು ಉಪಸ್ಥಿತರಿದ್ದರು.

ಅತ್ಯಾಚಾರ ಆರೋಪಿಗೆ ಪರೀಕ್ಷೆ ಬರೆಯಲು ಅವಕಾಶ

ಬೆಂಗಳೂರು: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಜೈಲು ಸೇರಿರುವ ಬಿ.ಕಾಂ. ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಯೊಬ್ಬನಿಗೆ ಇದೇ 15ರಿಂದ ಆರಂಭವಾಗಲಿರುವ ಪರೀಕ್ಷೆ ಬರೆಯಲು ಹೈಕೋರ್ಟ್ ಷರತ್ತುಬದ್ಧ ಅವಕಾಶ ಕಲ್ಪಿಸಿದೆ.

‘ನನಗೆ ಪರೀಕ್ಷೆ ಬರೆಯಲು ಅನುವಾಗುವಂತೆ ಜಾಮೀನು ನೀಡಬೇಕು‘ ಎಂದು ಕೋರಿ ವಿಚಾರಣಾಧೀನ ಆರೋಪಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಷಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ‘ಪ್ರಕರಣ ತನಿಖಾ ಹಂತದಲ್ಲಿರುವ ಕಾರಣ ಆರೋಪಿಯ ಭವಿಷ್ಯವನ್ನು ಅಪಾಯಕ್ಕೆ ತಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಪರೀಕ್ಷೆ ಬರೆಯಲು ಸೂಕ್ತ ವ್ಯವಸ್ಥೆ ಮಾಡುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ಯಾರ ವಿರುದ್ಧವೂ ಕಾನೂನುಕ್ರಮಕ್ಕೆ ಅನುಮತಿ ನೀಡಿಲ್ಲ’

ನವದೆಹಲಿ: ಲೋಕಪಾಲ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು ಮೂರು ವರ್ಷವಾಗಿದೆ. ಆದರೆ, ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಯಾರ ವಿರುದ್ಧವೂ ಕಾನೂನು ಕ್ರಮ ಜರುಗಿಸಲು ಅನುಮತಿ ನೀಡಿಲ್ಲ ಎಂಬುದು ಆರ್‌ಟಿಐ ಅಡಿ ಸಲ್ಲಿಸಿದ್ದ ಅರ್ಜಿಗೆ ಲೋಕಪಾಲ ಕಚೇರಿ ನೀಡಿರುವ ಉತ್ತರದಿಂದ ತಿಳಿದು ಬಂದಿದೆ.

ಮೇಕೆದಾಟು ಯೋಜನೆ: ತಮಿಳುನಾಡು ಸರ್ಕಾರಕ್ಕೆ ವಿರೋಧಪಕ್ಷಗಳ ಒತ್ತಾಯ

‘ಕರ್ನಾಟಕ ಅಣೆಕಟ್ಟು ನಿರ್ಮಿಸದಂತೆ ನೋಡಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಚೆನ್ನೈ: ಕರ್ನಾಟಕ ಸರ್ಕಾರ ಮೇಕೆದಾಟು ಯೋಜನೆಗೆ ಬಜೆಟ್‌ನಲ್ಲಿ ₹1,000 ಕೋಟಿ ಹಂಚಿಕೆ ಮಾಡಿದ ಬೆನ್ನಲ್ಲೇ, ತಮಿಳುನಾಡಿನ ವಿರೋಧ ಪಕ್ಷಗಳು ಈ ವಿಷಯವನ್ನೇ ಮುಂದಿಟ್ಟುಕೊಂಡು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ಆರಂಭಿಸಿವೆ.

‘ಕಾವೇರಿ ನದಿಗೆ ಕರ್ನಾಟಕ ಸರ್ಕಾರ ಅಣೆ ಕಟ್ಟು ನಿರ್ಮಿಸದಂತೆ ನೋಡಿಕೊಳ್ಳುವುದಾಗಿ ಖಾತ್ರಿಪಡಿಸಬೇಕು’ ಎಂದು ಡಿಎಂಕೆ ನೇತೃತ್ವದ ಸರ್ಕಾರವನ್ನು ವಿರೋಧ ಪಕ್ಷಗಳಾದ ಎಐಎಡಿಎಂಕೆ ಹಾಗೂ ಪಿಎಂಕೆ ಒತ್ತಾಯಿಸಿವೆ.


ಒ.ಪನ್ನೀರ್‌ಸೆಲ್ವಂ

‘ಮೇಕೆದಾಟು ಯೋಜನೆಗೆ ಸಂಬಂಧಿಸಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಕೂಡಲೇ ಸರ್ವಪಕ್ಷ ಸಭೆ ಕರೆಯಬೇಕು’ ಎಂದು ಎಐಎಡಿಎಂಕೆ ಸಮನ್ವಯಕಾರ ಒ.ಪನ್ನೀರ್‌ಸೆಲ್ವಂ ಹಾಗೂ ಪಿಎಂಕೆ ಮುಖಂಡ ಅನ್ಬುಮಣಿ ರಾಮದಾಸ್ ಅವರು ಪ್ರತ್ಯೇಕವಾಗಿ ಬಿಡುಗಡೆ ಮಾಡಿರುವ ಪ್ರಕಟಣೆಗಳಲ್ಲಿ ಆಗ್ರಹಿಸಿದ್ದಾರೆ.

‘ಮೇಕೆದಾಟು ಯೋಜನೆ ವಿರೋಧಿಸಿ ನಡೆಸುವ ಹೋರಾಟಕ್ಕೆ ತಮ್ಮ ಪಕ್ಷ ಗಳು ರಾಜ್ಯ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡುತ್ತವೆ’ ಎಂದೂ ಅವರು ಭರವಸೆ ನೀಡಿದ್ದಾರೆ.

ವಿರೋಧ ಪಕ್ಷಗಳ ಹೇಳಿಕೆಗಳಿಗೆ ಪ್ರತಿಕ್ರಿಯಿಸಿರುವ ಜಲಸಂಪನ್ಮೂಲ ಸಚಿವ ದೊರೈ ಮುರುಗನ್, ‘ಅಗತ್ಯ ಕಂಡು ಬಂದಲ್ಲಿ, ಈ ವಿಷಯಕ್ಕೆ ಸಂಬಂಧಿಸಿ ವಿಧಾನಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಲಾಗುವುದು’ಎಂದು ಹೇಳಿದ್ದಾರೆ.

‘ಮಾತುಕತೆ ಅಗತ್ಯವಿಲ್ಲ’: ‘ಮೇಕೆದಾಟು ಯೋಜನೆಯನ್ನು ನಿಲ್ಲಿಸಲೇಬೇಕು. ಈ ವಿಷಯವಾಗಿ ಯಾವುದೇ ಮಾತುಕತೆಯ ಅಗತ್ಯ ಇಲ್ಲ ಎಂಬ ನಿಲುವನ್ನೇ ತಮಿಳುನಾಡು ಸರ್ಕಾರ ಯಾವಾಗಲೂ ತಳೆಯುತ್ತಾ ಬಂದಿದೆ’ ಎಂದು ಪನ್ನೀರ್ ಸೆಲ್ವಂ ಹೇಳಿದ್ದಾರೆ.

‘ಕರ್ನಾಟಕ ಸರ್ಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸದಂತೆ ತಡೆಯಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ತಮಿಳುನಾಡು ಸರ್ಕಾರ ಕೈಗೊಳ್ಳಬೇಕು’ ಎಂದು ರಾಮದಾಸ್ ಹೇಳಿದ್ದಾರೆ.

ಬುಧವಾರ, ಮಾರ್ಚ್ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 68 | ಪುಟ 16
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಆಪ್ತಸಮಾಲೋಚಕರ ಬಳಿ ತಮ್ಮ ಮನಃಸ್ಥಿತಿಯ ಬಗ್ಗೆ ಹೇಳಿಕೊಳ್ಳುವವರಿಗಿಂತಲೂ ಕಂಪ್ಯೂಟರ್ ಪರದೆ ಮೇಲೆ ಬರುವ ಆಪ್ತಸಮಾಲೋಚಕ 'ಅವತಾರ್'ನೊಂದಿಗೆ ಜನರು ಹೆಚ್ಚು ಮುಕ್ತವಾಗಿ ಮಾತಾಡುತ್ತಾರೆ.

ರಷ್ಯಾದ ತೈಲ ಉತ್ಪನ್ನಗಳ ಆಮದು ಮೇಲೆ ಅಮೆರಿಕ ನಿಷೇಧ 6

ಅನುಭವ ಮಂಟಪ
ಒಬಿಸಿ ರಾಜಕೀಯ ಮೀಸಲು: ಕಗ್ಗಂಟಿನ ಹುರುಳೇನು?

ದೇಶದ ಬಡತನಕ್ಕೆ ಕಾಂಗ್ರೆಸ್ ಕಾರಣ: ಬೊಮ್ಮಾಯಿ 5

ಸೆನ್ಸೆಕ್ಸ್	ನಿಫ್ಟಿ	₹/$
53,424 ▲	16,013 ▲	77 ▼

ಕೋವಿಡ್: ನಾಲ್ಕನೇ ಅಲೆ ಸಾಧ್ಯತೆ ಇಲ್ಲ

ನವದೆಹಲಿ (ಪಿಟಿಐ): ಭಾರತದಲ್ಲಿ ಕೊರೊನಾ ಸೋಂಕಿನ ಮೂರನೇ ಅಲೆಯು ಬಹುತೇಕ ಅಂತ್ಯವಾಗಿದೆ. ಜನಸಮೂಹವನ್ನು ಬಾಧಿಸಬಹುದಾದ ಹೊಸ ರೂಪಾಂತರ ತಳಿಯು ಸೃಷ್ಟಿಯಾಗದಿದ್ದರೆ ನಾಲ್ಕನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಕಡಿಮೆ ಎಂದು ಸೂಕ್ಷ್ಮ ರೋಗಾಣು ತಜ್ಞ ಟಿ.ಜಾಕೊಬ್ ಜಾನ್ ಹೇಳಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕರೂ ಆದ ಜಾನ್, 'ಮುಂದಿನ ನಾಲ್ಕು ವಾರದಲ್ಲಿ ಮೂರನೇ ಅಲೆ ಅಂತ್ಯವಾಗಲಿದೆ' ಎಂದು ಪ್ರತಿಪಾದಿಸಿದರು.

'ಬಹುತೇಕ ಎಲ್ಲ ರಾಜ್ಯಗಳಲ್ಲಿ ಸೋಂಕಿನ ಪ್ರಮಾಣ ಸದ್ಯ ಒಂದೇ ಗತಿಯಲ್ಲಿದೆ. ನಿತ್ಯದ ಸೋಂಕು ಪ್ರಮಾಣವು ಕ್ರಮೇಣ ಕುಗ್ಗುತ್ತಿದೆ. ಜನಸಮೂಹವು ಸೋಂಕಿನ ಜೊತೆಗೇ ಜೀವಿಸುವುದನ್ನು 'ಅಂತಿಮ ಹಂತ' ಎಂದು, ಸೋಂಕು ಸಮೂಹವನ್ನು ಹೆಚ್ಚು ಬಾಧಿಸುವ ಸ್ಥಿತಿಯನ್ನು 'ಸಾಂಕ್ರಾಮಿಕ ಹಂತ' ಎಂದು ಗುರುತಿಸಲಾಗುತ್ತದೆ' ಎಂದೂ ವಿವರಿಸಿದರು.

ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತರುವುದಾಗಿ ಮಾಧುಸ್ವಾಮಿ ಭರವಸೆ

ಕೃಷಿಗೆ ಅರಣ್ಯ ಭೂಮಿ: ಸಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಪ್ರದೇಶದಲ್ಲಿ ಕೃಷಿ ಉದ್ದೇಶಕ್ಕಾಗಿ ಒತ್ತುವರಿ ಮಾಡಿದ ಭೂಮಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆಯ 192 (ಎ)ಗೆ ಇದೇ ಅಧಿವೇಶನದಲ್ಲಿ ತಿದ್ದುಪಡಿ ಮಾಡುವುದಾಗಿ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಪ್ರಕಟಿಸಿದ್ದಾರೆ.

ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ಅವರು ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೇಲೂರಿನಲ್ಲಿ ಪಾರಂಪರಿಕ ಅರಣ್ಯವಾಸಿಗಳ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ದೌರ್ಜನ್ಯ ನಡೆಸಿ, ತೋಟವನ್ನು ನಾಶ ಮಾಡಿದ ಘಟನೆಯನ್ನು ಪ್ರಸ್ತಾಪಿಸಿದರು. ಇದಕ್ಕೆ ಉತ್ತರ ನೀಡಿದ ಮಾಧುಸ್ವಾಮಿ, 'ಕಾಯ್ದೆಯ ಸೆಕ್ಷನ್ 192 (ಎ)ಯಿಂದ ಸಮಸ್ಯೆ ಆಗುತ್ತಿದೆ. ಈ ಸಮಸ್ಯೆಯನ್ನು ಶಾಶ್ವತವಾಗಿ ಕೊನೆಗಾಣಿಸಲು ಕಾಯ್ದೆಗೆ ತಿದ್ದುಪಡಿ ಮಾಡುತ್ತೇವೆ' ಎಂದು ಹೇಳಿದರು.

'ಬೆಂಗಳೂರು ಸುತ್ತಮುತ್ತ ಭಾರಿ ಪ್ರಮಾಣದಲ್ಲಿ ಸರ್ಕಾರಿ ಜಮೀನು ಕಬಳಿಕೆ ಆಗಿದ್ದು, ಅದರ ಮೇಲೆ ಕಠಿಣ ಕ್ರಮ ಜರುಗಿಸಲು ಬೆಂಗಳೂರಿನಲ್ಲಿ ವಿಶೇಷ ನ್ಯಾಯಾಲಯವನ್ನೂ ಸ್ಥಾಪಿಸಲಾಗಿದೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಗಾಗಿ ನಡೆದಿರುವ ಒತ್ತುವರಿ ಪ್ರಕರಣಗಳನ್ನೇ 'ಭೂಕಬಳಿಕೆ' ಎಂದು ವ್ಯಾಖ್ಯಾನಿಸಿ ಈ ನ್ಯಾಯಾಲಯದ ವ್ಯಾಪ್ತಿಗೆ ಎಳೆದು ತರಲಾಗುತ್ತಿದೆ. ಇದರಿಂದ ದೂರದ ಊರುಗಳಿಂದ ರೈತರು ಪ್ರತಿನಿತ್ಯವೂ ನ್ಯಾಯಾಲಯಕ್ಕೆ ಬರಬೇಕಾಗಿದೆ. 8-10 ಬ್ಯಾಚ್‌ಗಳಲ್ಲಿ 300 ರಿಂದ 400 ರೈತರು ಬಂದು ನಿಲ್ಲುವುದನ್ನು ನೋಡಿ ನಾಚಿಕೆ ಆಗುತ್ತದೆ. ಕಾಯ್ದೆಯಲ್ಲಿ ಭೂ ಒತ್ತುವರಿ ಎಂಬುದರ ಬದಲಿಗೆ ಭೂಕಬಳಿಕೆ ಎಂಬ ಪದ ಬಳಸಲಾಗಿದೆ. ಇದರಿಂದ ಸಮಸ್ಯೆ ಸೃಷ್ಟಿಯಾಗಿದೆ' ಎಂದು ಮಾಧುಸ್ವಾಮಿ ತಿಳಿಸಿದರು.

11ನೇ ಪುಟ ನೋಡಿ

> **ಅರಣ್ಯ ಅಧಿಕಾರಿಗಳು ಕ್ರೂರವಾಗಿ ನಡೆದುಕೊಂಡ ಕಾರಣ ಮಹಿಳೆಯರು ವಿಷ ಕುಡಿದಿದ್ದಾರೆ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

> **ಕಿರುಕುಳದಿಂದಾಗಿಯೇ ಮಹಿಳೆಯರು ವಿಷಸೇವಿಸಿದ್ದಾರೆ. ಈ ಘಟನೆ ಅತ್ಯಂತ ದುರದೃಷ್ಟಕರ. ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ**
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಶಾಸಕ

> **ಅಧಿಕಾರಿಗಳು ದರ್ಪ ಮತ್ತು ದಬ್ಬಾಳಿಕೆಯ ಮೂಲಕ ಭಯದ ವಾತಾವರಣ ಸೃಷ್ಟಿ ಮಾಡಿದ್ದಾರೆ. ಮೃತಪಟ್ಟ ಮಹಿಳೆಯ ಕುಟುಂಬಕ್ಕೆ ಪರಿಹಾರ ನೀಡಬೇಕು**
> **ಎಚ್.ಕೆ. ಪಾಟೀಲ,** ಕಾಂಗ್ರೆಸ್ ಶಾಸಕ

> **ಅಡಿಕೆ, ತೆಂಗಿನ ಮರಗಳನ್ನು ಕಡಿವಿ ನಾಶ ಮಾಡಿದ್ದಾರೆ. ಇವರಿಗೆ ಮನುಷ್ಯತ್ವವೇ ಇಲ್ಲ. ಸುಪ್ರೀಂ ಕೋರ್ಟ್, ಹಸಿರು ಪೀಠ ಆದೇಶ ಇದೆ ಎಂದು ಜನರಿಗೆ ಹಿಂಸೆ ಕೊಡಬೇಡಿ**
> **ವಿಶ್ವೇಶ್ವರ ಹೆಗಡೆ ಕಾಗೇರಿ**
> ವಿಧಾನಸಭಾಧ್ಯಕ್ಷ

192(ಎ) ಪ್ರಕಾರ ಅಪರಾಧವೇನು?

- ಸರ್ಕಾರದ ಭೂಮಿಯನ್ನು ಕಬಳಿಕೆಯ ಮಾಡುವ ಉದ್ದೇಶದಿಂದ ಯಾವುದೇ ಸರ್ಕಾರಿ ಭೂಮಿಯನ್ನು ಕಾನೂನು ಬಾಹಿರವಾಗಿ ಪ್ರವೇಶಿಸುವುದು ಅಥವಾ ಸ್ವಾಧೀನಪಡಿಸಿಕೊಳ್ಳುವುದು ಅಪರಾಧ. ಹೀಗೆ ಮಾಡಿದವರಿಗೆ ಒಂದು ವರ್ಷ ಜೈಲು ಶಿಕ್ಷೆ ಮತ್ತು ₹50ಸಾವಿರ ದಂಡ ವಿಧಿಸಬಹುದು. (ಆದರೆ, ಕೊಡಗು ಜಿಲ್ಲೆಯಲ್ಲಿ ಜಮ್ಮಾ, ಬಾಣೆ ಭೂಮಿಗಳ ಅಥವಾ ಒತ್ತುವರಿ ಮಾಡಿಕೊಂಡಿರುವುದನ್ನು ಸಕ್ರಮಗೊಳಿಸಿರುವ ಅಥವಾ 94 ಎ, 94 ಬಿ ಮತ್ತು 94 ಸಿ ಪ್ರಕರಣಗಳ ಮೇರೆಗೆ ರಚಿಸಲಾದ ಸಮಿತಿಗೆ ಅನ್ವಯ ಆಗುವುದಿಲ್ಲ.)

694 ವಿದ್ಯಾರ್ಥಿಗಳ ತೆರವು

ಉಕ್ರೇನ್‌ನ ಸುಮಿ ನಗರದಿಂದ ಪೋಲ್ಟಾವಾದತ್ತ ಪ್ರಯಾಣ

ನವದೆಹಲಿ (ಪಿಟಿಐ): ಯುದ್ಧಪೀಡಿತ ಉಕ್ರೇನ್‌ನ ಸುಮಿ ನಗರದಲ್ಲಿ ಸಿಲುಕಿದ್ದ 694 ಭಾರತೀಯ ವಿದ್ಯಾರ್ಥಿಗಳನ್ನು ಅಲ್ಲಿಂದ ತೆರವು ಮಾಡಲಾಗಿದೆ. ಉಕ್ರೇನ್‌ನ ಮತ್ತೊಂದು ನಗರ ಪೋಲ್ಟಾವಾದತ್ತ ಅವರು ಮಂಗಳವಾರ ಪ್ರಯಾಣ ಬೆಳೆಸಿದ್ದಾರೆ.

ಸುಮಿಯಿಂದ ಪೋಲ್ಟಾವಾಕ್ಕೆ ಹೊರಡುವ ಮುನ್ನ ಭಾರತೀಯ ವಿದ್ಯಾರ್ಥಿಗಳು ಉಪಾಹಾರ ಸೇವಿಸಿದರು –ಪಿಟಿಐ ಚಿತ್ರ

ಸುಮಿಯಲ್ಲಿ ಸಿಲುಕಿದ್ದ ವಿದ್ಯಾರ್ಥಿಗಳ ತೆರವು ಕಾರ್ಯಾಚರಣೆಗೆ ಅನುಕೂಲವಾಗುವ ನಿಟ್ಟಿನಲ್ಲಿ ರಷ್ಯಾ ಮತ್ತು ಉಕ್ರೇನ್ 'ಸುರಕ್ಷಿತ ಕಾರಿಡಾರ್' ಘೋಷಿಸಿದ್ದರಿಂದ ತೆರವು ಕಾರ್ಯಾಚರಣೆ ಸಾಧ್ಯವಾಗಿದೆ.

'ವಿದ್ಯಾರ್ಥಿಗಳನ್ನು ಪೋಲ್ಟಾವಾದಿಂದ ರೈಲಿನ ಮೂಲಕ ದೇಶದ ಪಶ್ಚಿಮ ಗಡಿಗೆ ಕರೆತರಲಾಗುತ್ತದೆ. ಅಲ್ಲಿಂದ ಅವರನ್ನು ಭಾರತಕ್ಕೆ ಕರೆದೊಯ್ಯಲು ವಿಮಾನಗಳು ಸಿದ್ಧವಾಗಿವೆ' ಎಂದು ವಿದೇಶಾಂಗ ಇಲಾಖೆ ವಕ್ತಾರ ಅರಿಂದಮ್ ಬಾಗ್ಚಿ ಟ್ವೀಟ್ ಮಾಡಿದ್ದಾರೆ. ಆದರೆ ಗಡಿಯ ಯಾವ ಸ್ಥಳಕ್ಕೆ ಅವರನ್ನು ಕರೆದೊಯ್ಯಲಾಗುತ್ತಿದೆ ಹಾಗೂ ಯಾವ ದೇಶದ ಮೂಲಕ ಭಾರತದ ವಿಮಾನ ಹತ್ತಿಸಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿಲ್ಲ.

'ಸುಮಿಯಿಂದ ತೆರವು ಕಾರ್ಯಾಚರಣೆ ಮಂಗಳವಾರ ಶುರುವಾಗಿದೆ. ಎಲ್ಲ ವಿದ್ಯಾರ್ಥಿಗಳನ್ನು ಆ ನಗರದಿಂದ ಹೊರಕ್ಕೆ ಕರೆತರಲಾಗಿದೆ. ಭಾರತಕ್ಕೆ ಕರೆದೊಯ್ಯಲು ಸಾಧ್ಯವಾಗುವ ಸ್ಥಳಕ್ಕೆ ಅವರನ್ನು ಕಳುಹಿಸಲಾಗುತ್ತಿದೆ' ಎಂದು ವಿದ್ಯಾರ್ಥಿ ಸಂಯೋಜಕ ಅನ್ವದ್ ಅಲಿ ಎಂಬುವರು ಹೇಳಿದ್ದಾರೆ. 'ಸುಮಿ ನಗರಕ್ಕೆ ಬಸ್‌ಗಳು ಬಂದಿದ್ದು, ವಿದ್ಯಾರ್ಥಿಗಳನ್ನು ಕರೆದೊಯ್ಯಲಾಗುತ್ತಿದೆ' ಎಂದು ಸುಮಿ ವಿಶ್ವವಿದ್ಯಾಲಯದ ವಿದ್ಯಾರ್ಥಿಯೊಬ್ಬರು ಖಚಿತಪಡಿಸಿದ್ದಾರೆ.

'ಬಸ್ ಹತ್ತಲು ಸೋಮವಾರ ಕೊರೆಯುವ ಚಳಿಯಲ್ಲಿ ಮೂರು ಗಂಟೆ ಸರದಿಯಲ್ಲಿ ನಿಂತಿದ್ದೆವು. ಆದರೆ ನಮಗೆ ಹೊರಡಲು ಸಾಧ್ಯವಾಗಲಿಲ್ಲ. ಆದರೆ ಮಂಗಳವಾರ ಸುಮಿ ತೊರೆಯಲು ಸಾಧ್ಯವಾಗಿದೆ. ನಾವು ಸುರಕ್ಷಿತ ಜಾಗಕ್ಕೆ ಹೋಗುತ್ತಿದ್ದೇವೆ ಎಂಬ ವಿಶ್ವಾಸವಿದೆ' ಎಂದು ಮತ್ತೊಬ್ಬ ವೈದ್ಯಕೀಯ ವಿದ್ಯಾರ್ಥಿ ಹುಸೇನ್ ಸರ್ಕಾರ್ ಹೇಳಿದ್ದಾರೆ.

ಸುರಕ್ಷಿತ ಕಾರಿಡಾರ್ ನಿರ್ಮಿಸುವ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಹಾಗೂ ಉಕ್ರೇನ್ ಅಧ್ಯಕ್ಷರ ಜೊತೆ ಸೋಮವಾರ ಮಾತುಕತೆ ನಡೆಸಿದ್ದರು.

ವಿಶೇಷ ಪುಟ 6

ಚಿನಕುರಳಿ
ಪ್ರಕಾಶ್ ಶೆಟ್ಟಿ

ಫಲಿತಾಂಶಕ್ಕೂ ಮುನ್ನ ಬಿರುಸುಗೊಂಡ ರಾಜಕೀಯ ಚಟುವಟಿಕೆ

ಗೋವಾ: ರೆಸಾರ್ಟ್‌ನತ್ತ ಕಾಂಗ್ರೆಸ್ ಅಭ್ಯರ್ಥಿಗಳು

ಪಣಜಿ (ಪಿಟಿಐ): ಗೋವಾದಲ್ಲಿ ಅತಂತ್ರ ವಿಧಾನಸಭೆ ಏರ್ಪಡಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿವೆ.

ಫಲಿತಾಂಶ ಘೋಷಣೆಗೂ ಮುನ್ನ, ಅಭ್ಯರ್ಥಿಗಳನ್ನು ರೆಸಾರ್ಟ್‌ಗೆ ಸ್ಥಳಾಂತರಿಸಲು ಕಾಂಗ್ರೆಸ್ ಮುಂದಾಗಿದೆ. ಉತ್ತರ ಗೋವಾದ ರೆಸಾರ್ಟ್‌ವೊಂದರಲ್ಲಿ ಬುಧವಾರ ಉಳಿದುಕೊಳ್ಳಲಿರುವ ಪಕ್ಷದ ಅಭ್ಯರ್ಥಿಗಳು, ಅಲ್ಲಿಂದಲೇ ಮತ ಎಣಿಕೆ ಕೇಂದ್ರಗಳಿಗೆ ತೆರಳಲಿದ್ದಾರೆ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

> **ಟಿಎಂಸಿ ಹಾಗೂ ಎಂಜಿಪಿ ಸಹಕಾರವಿಲ್ಲದೇ ಯಾವ ಪಕ್ಷವೂ ಗೋವಾದಲ್ಲಿ ಸರ್ಕಾರ ರಚಿಸಲು ಸಾಧ್ಯವಿಲ್ಲ. ಬೆಂಬಲ ಕೇಳಿದರೆ ಸಿ.ಎಂ ಹುದ್ದೆಗೆ ಚೌಕಾಸಿ ಮಾಡುತ್ತೇವೆ**
> **ಕಿರಣ್ ಕಂಡೋಲಕರ್**
> ಗೋವಾ ಟಿಎಂಸಿ ಮುಖ್ಯಸ್ಥ

11ನೇ ಪುಟ ನೋಡಿ

ಗೋವಾ: ಶಿವಕುಮಾರ್ ವಿಶೇಷ ವೀಕ್ಷಕ

ಪಣಜಿ: ಸಂಕಷ್ಟ ಕಾಲದಲ್ಲಿ ನೆರವಿಗೆ ಬಂದು, ಪರಿಹಾರ ನೀಡಬಲ್ಲರು ಎಂದೇ ಪಕ್ಷದಲ್ಲಿ ಗುರುತಿಸಿಕೊಂಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಪಕ್ಷವು ಗೋವಾದ ವಿಶೇಷ ವೀಕ್ಷಕರನ್ನಾಗಿ ನಿಯೋಜಿಸಿದೆ.

ಮತ್ತೊಬ್ಬ ಮುಖಂಡ ಸತೀಶ ಜಾರಕಿಹೊಳಿ ಅವರು ಸಹ ಗೋವಾಕ್ಕೆ ಆಗಮಿಸಿದ್ದು, ಮತ ಎಣಿಕೆಗೂ ಮುನ್ನ ಪಕ್ಷದ ಮಟ್ಟದಲ್ಲಿ ಮಾಡಿಕೊಳ್ಳಬೇಕಾದ ಸಿದ್ಧತೆಗಳ ಮೇಲ್ವಿಚಾರಣೆ ನಡೆಸಿದ್ದಾರೆ.

ಗುರುವಾರ (ಮಾರ್ಚ್ 10) ಮತ ಎಣಿಕೆ ಕಾರ್ಯ ನಡೆಯಲಿದೆ. ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಸಮಬಲದ ಪೈಪೋಟಿ ಇರಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ಹೇಳಿರುವ ಹಿನ್ನೆಲೆಯಲ್ಲಿ ಶಿವಕುಮಾರ್ ಅವರ ನಿಯೋಜನೆಗೆ ಮಹತ್ವ ಬಂದಿದೆ.

ಮೇಕೆದಾಟು: ಮುಂದಿನ ವಾರ ಸರ್ವಪಕ್ಷ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆಯ ಬಗ್ಗೆ ತಮಿಳುನಾಡು ಸರ್ಕಾರದೊಂದಿಗೆ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ. ಯೋಜನೆಯ ಅನುಷ್ಠಾನದ ಬಗ್ಗೆ ಚರ್ಚಿಸಲು ಮುಂದಿನ ವಾರ ಸರ್ವಪಕ್ಷ ಸಭೆ ಕರೆಯಲಾಗುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆಯ ವೇಳೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮೇಕೆದಾಟು ಯೋಜನೆಯ ಬಗ್ಗೆ ಪ್ರಸ್ತಾಪಿಸಿದರು. 'ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರ ಮಾತುಕತೆಯ ಮೂಲಕ ವಿವಾದ ಪರಿಹರಿಸಿಕೊಳ್ಳಬೇಕು ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಸಲಹೆ ನೀಡಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಯವರು ಪ್ರತಿಕ್ರಿಯೆಯನ್ನೇ ನೀಡಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಗ ಮಧ್ಯಪ್ರವೇಶಿಸಿದ ಬೊಮ್ಮಾಯಿ, 'ತಮಿಳುನಾಡಿನೊಂದಿಗೆ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದೇನೆ. ಮೇಕೆದಾಟು ಯೋಜನೆಯ ಬಗ್ಗೆ 2018ರಲ್ಲಿ ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದ್ದು, ಅದಕ್ಕೆ ಕಾವೇರಿ ನೀರು ನಿರ್ವಹಣಾ ಮಂಡಳಿಯಿಂದ ಅನುಮತಿ ಸಿಗಬೇಕಿದೆ. ಪರಿಸರ ಅನುಮೋದನೆಯೂ ಬಾಕಿ ಇದೆ. ಇನ್ನೊಂದೆಡೆ, ಯೋಜನೆಯನ್ನು ವಿರೋಧಿಸಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಈ ಎಲ್ಲ ವಿಷಯಗಳ ಬಗ್ಗೆ ರಾಜ್ಯದ ಕಾನೂನು ತಜ್ಞರ ಜತೆಗೆ ಸಮಾಲೋಚನೆ ನಡೆಸುತ್ತೇನೆ. ಸರ್ವಪಕ್ಷ ಸಭೆ ನಡೆಸಿದ ಬಳಿಕ ಕೇಂದ್ರಕ್ಕೆ ಮತ್ತೊಂದು ಪತ್ರ ಬರೆಯಲಾಗುವುದು' ಎಂದರು.

5ನೇ ಪುಟ ನೋಡಿ

GRT JEWELLERS
Since 1964

ಯುಗಗಳ ದೈವಿಕ ಸೌಂದರ್ಯ
ಇದೀಗ ನಿಮ್ಮ ಸಮೀಪದಲ್ಲಿ

ಅಮೋಘ ಪ್ರಾರಂಭ
ಕೆ ಆರ್ ಪುರಂ ನಲ್ಲಿ
ಇಂದಿನಿಂದ

ನಮ್ಮ ಜ್ಯುವೆಲರಿ ಪರ್ಚೇಸ್ ಪ್ಲಾನ್ ಸೇರಿರಿ ಹಾಗೂ ಆಕರ್ಷಕ ಎರಡು ಗಿಫ್ಟ್‌ಗಳನ್ನು ಪಡೆಯಿರಿ.

ಚಿನ್ನದ ಮೇಲೆ ಪ್ರತಿ ಗ್ರಾಂಗೆ ₹50* ಕಡಿಮೆ
ಆಭರಣ ಖರೀದಿ

ಹಳೆಯ ಚಿನ್ನದ ಮೇಲೆ ಪ್ರತಿ ಗ್ರಾಂಗೆ ₹50* ಹೆಚ್ಚಾಗಿ ಪಡೆಯಿರಿ
ಆಭರಣ ಎಕ್ಸ್‌ಚೇಂಜ್

ವಜ್ರದ ಮೇಲೆ ಒಂದು ಕ್ಯಾರೆಟ್‌ಗೆ ₹7500* ಕಡಿತ

25%* ಕಡಿತ, ಬೆಳ್ಳಿ ಸಾಮಾಗ್ರಿಗಳ ಮಜೂರಿಯ ಮೇಲೆ

10%* ಕಡಿತ, ಬೆಳ್ಳಿ ಆಭರಣಗಳ MRPಯ ಮೇಲೆ

*ಈ ಆಫರ್ KR ಪುರಂನಲ್ಲಿ ಶೋರೂಮ್‌ನಲ್ಲಿ ಸೀಮಿತ ಅವಧಿಗೆ ಮಾತ್ರ ಲಭ್ಯ. ಇದು ಚಿನ್ನದ ನಾಣ್ಯಗಳು ಹಾಗೂ ಬಾರ್‌ಗಳಿಗೆ ಅನ್ವಯಿಸುವುದಿಲ್ಲ.
ಇದನ್ನು ಬೇರೆ ಯಾವುದೇ ಆಫರ್‌ಗಳ ಜೊತೆ ಸೇರಿಸಲಾಗುವುದಿಲ್ಲ. ಈ ಆಫರ್ 7%ಗಿಂತ ಕಡಿಮೆ ವೇಸ್ಟೇಜ್ (VA) ಇರುವ ಆಭರಣಗಳಿಗೆ ಅನ್ವಯಿಸುವುದಿಲ್ಲ. ನಿಯಮ ನಿಬಂಧನೆಗಳು ಅನ್ವಯಿಸುತ್ತವೆ.

*AVAIL ATTRACTIVE GIFTS ON UPI PAYMENTS.

NO: 44/2, JCMS COMPLEX, OLD MADRAS ROAD-NH 75 (NEAR SUB REGISTRAR OFFICE), KRISHNARAJAPURAM (KR PURAM), BENGALURU - 560 036. PH: 080 - 2990 1515

Shop online at: www.oriana.com | mail@grtjewels.com
GRT LIVE VIDEO SHOPPING Shop from the comfort of your home

ನಗರದೆಲ್ಲೆಡೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆ • ರೋಟರಿ ಕ್ಲಬ್‌ನಿಂದ ಮಹಿಳೆಯರ ಬುಲೆಟ್ ರ್ಯಾಲಿ

ಸ್ತ್ರೀ ಶಕ್ತಿ ಅನಾವರಣ: ತ್ಯಾಗ, ಸೇವೆಯ ಗುಣಗಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನದುದ್ದಕ್ಕೂ ಎದುರಾದ ಹಲವು ಸಂಕಷ್ಟಗಳನ್ನು ಮೆಟ್ಟಿನಿಂತು ದಿಟ್ಟತನದ ಬದುಕು ಕಟ್ಟಿಕೊಂಡಿರುವ, ಸಮಾಜ ಮತ್ತು ಕುಟುಂಬದ ಶ್ರೇಯೋಭಿವೃದ್ಧಿಗಾಗಿ ನಿಸ್ವಾರ್ಥ ಮನೋಭಾವದಿಂದ ಹಗಲಿರುಳು ದುಡಿಯುತ್ತಿರುವ ಮಹಿಳೆಯರ ಗುಣಗಾನ ನಗರದಲ್ಲಿ ನಡೆಯಿತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಎಲ್ಲೆಡೆ ಮಂಗಳವಾರ ಸಂಭ್ರಮದಿಂದ ಆಚರಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸ್ತ್ರೀಯರನ್ನು ಗೌರವಿಸಲಾಯಿತು. ಮಹಿಳಾ ಸಬಲತೆಯ ಮಾತುಗಳೂ ಕೇಳಿಬಂದವು.

ಸ್ವಕೃತ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಐಎಎಸ್ ನಿವೃತ್ತ ಅಧಿಕಾರಿ ಕೆ.ರತ್ನಪ್ರಭಾ, ದೊಡ್ಡ ಉದ್ಯಮಿಗಳಾಗಲು ಶ್ರಮಿಸುವಂತೆ ಮಹಿಳೆಯರಿಗೆ ಕಿವಿಮಾತು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಮನೋವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಬೀದಿ ನಾಟಕದ ಮೂಲಕ ಮಹಿಳೆಯರ ಹಕ್ಕು ಹಾಗೂ ಸಮಾನ ಅವಕಾಶಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು. ಜಯನಗರದ ನ್ಯಾಷನಲ್ ಕಾಲೇಜಿನಲ್ಲಿ ಮಹಿಳಾ ದಿನದ ಮಹತ್ವದ ಬಗ್ಗೆ ತಿಳಿಸಲಾಯಿತು.

ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದಲ್ಲೂ (ಬಿಎಂಆರ್‌ಸಿಎಲ್) ವಿಶೇಷ ಕಾರ್ಯಕ್ರಮಗಳು ನಡೆದವು.

ಮರಳಿ ಉದ್ಯೋಗಕ್ಕಾಗಿ 98 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿರುವ ಐಟಿಐ ಕಾರ್ಮಿಕರೊಂದಿಗೆ ಎಐಸಿಸಿಟಿಯು ಹಾಗೂ ಅಸಂಘಟಿತ ಕಾರ್ಮಿಕ ಸಂಘಟನೆ ಸದಸ್ಯರು 'ವಿಶ್ವ ದುಡಿಯುವ ಮಹಿಳೆಯರ ದಿನ' ಆಚರಿಸಿದರು.

ಕೆ.ಎಂ.ಎಫ್.ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 40 ಹಸುಗಳನ್ನು ಸಾಕಿ ದಿನಕ್ಕೆ ಸರಾಸರಿ 130 ಲೀಟರ್ ಹಾಲು ಸರಬರಾಜು ಮಾಡುವ ರಾಮನಗರ ತಾಲ್ಲೂಕಿನ ಎಚ್. ಗೊಲ್ಲಹಳ್ಳಿಯ ಎಸ್.ಜಿ.ಅನ್ನಪೂರ್ಣ ಅವರನ್ನು ಸನ್ಮಾನಿಸಲಾಯಿತು.

ರೈಲ್ವೆ ಪೊಲೀಸರು ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಎಡಿಜಿಪಿ ಭಾಸ್ಕರ್ ರಾವ್ ಅವರು ವಿದ್ಯಾರ್ಥಿನಿಯರಿಗೆ ಗುಲಾಬಿ ಹೂಗಳನ್ನು ನೀಡಿ ಶುಭ ಕೋರಿದರು. ಜಯಕರ್ನಾಟಕ ಸಂಘಟನೆ ವತಿಯಿಂದ ಮಾತೃಶ್ರೀ ಮನೋವಿಕಾಸ ಕೇಂದ್ರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರನ್ನು ಗೌರವಿಸಲಾಯಿತು.

ನಂದಿನಿ ಲೇಔಟ್ ವಾರ್ಡ್‌ನ ನಂದಿನಿ ಮಹಿಳಾ ಸಾಂಸ್ಕೃತಿಕ ಸಂಘ, ಕರ್ನಾಟಕ ವಿಮೆನ್ ಟ್ರಸ್ಟ್ ಹಾಗೂ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ವತಿಯಿಂದಲೂ ಕಾರ್ಯಕ್ರಮಗಳು ನಡೆದವು. ಸ್ಪೆಷಲಿಸ್ಟ್ ಆಸ್ಪತ್ರೆಯಿಂದ ಮಹಿಳಾ ಪೊಲೀಸ್ ಸಿಬ್ಬಂದಿಗೆ ಉಚಿತ ಆರೋಗ್ಯ ತರಬೇತಿ ಶಿವಬಿರ ಹಾಗೂ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಗ್ಲೋಬಲ್ ಸೇವಾ ಟ್ರಸ್ಟ್ ಸಹಯೋಗದಲ್ಲಿ ಹೊಂಬೇಗೌಡನಗರ ವಾರ್ಡ್‌ನ ಗಂಗಮ್ಮ ಹೊಂಬೇಗೌಡ ಬಾಲಕಿಯರ ಶಾಲೆಯ 500 ವಿದ್ಯಾರ್ಥಿನಿಯರಿಗೆ ಉಚಿತ ನೇತ್ರ ತಪಾಸಣೆ ನಡೆಸುವ ಜೊತೆಗೆ ಕನ್ನಡಕ ಹಾಗೂ ಮುಖಗವಸು ಉಚಿತವಾಗಿ ವಿತರಿಸಲಾಯಿತು. ಪೀಪಲ್ ಟ್ರೀ ಆಸ್ಪತ್ರೆಯಿಂದ ಮಹಿಳಾ ಸಾಧಕಿಯರನ್ನು ಗೌರವಿಸಲಾಯಿತು. ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ರಂಗೋಲಿ ಕಲಾವಿದ ಅಕ್ಷಯ ಆಚಾರ್ಯ ಬಿಡಿಸಿದ್ದ ಲತಾ ಮಂಗೇಶ್ಕರ್ ಅವರ ಚಿತ್ರ ನೆರೆದಿದ್ದವರನ್ನು ಆಕರ್ಷಿಸಿತು.ಕೋರಮಂಗಲದ ಕೆಎಸ್‌ಆರ್‌ಪಿ ಪೊಲೀಸ್ ಪಬ್ಲಿಕ್ ಶಾಲೆ ಆವರಣದಲ್ಲಿ ಬಾಲಕಿಯರಿಗಾಗಿ ಸ್ವಯಂ ರಕ್ಷಣಾ ತರಬೇತಿ ಹಾಗೂ ಕೌಶಲ ವಸ್ತುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

2014ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಪೊಲೀಸ್ ಇಲಾಖೆ ಸಿಬ್ಬಂದಿ ಸುಶ್ಮಿತಾ ಪವಾರ್, ಜಯಂತಿ ಅವರನ್ನು ₹ 3 ಲಕ್ಷ ಬಹುಮಾನದ ಚೆಕ್ ನೀಡಿ ಸನ್ಮಾನಿಸಲಾಯಿತು.

ಮಹಿಳಾ ದಿನದ ಪ್ರಯುಕ್ತ ರೋಟರಿ ಕ್ಲಬ್ ಬೆಂಗಳೂರು ಹಮ್ಮಿಕೊಂಡಿದ್ದ ಮಹಿಳೆಯರ ಬುಲೆಟ್ ರ್ಯಾಲಿಗೆ ರೋಟರಿ ಕ್ಲಬ್ ಅಧ್ಯಕ್ಷ ಆರ್‌.ಗಿರೀಶ್ ಅವರು ವಿಧಾನಸೌಧದ ಎದುರು ಮಂಗಳವಾರ ಚಾಲನೆ ನೀಡಿದರು–ಪ್ರಜಾವಾಣಿ ಚಿತ್ರ



ಮಹಿಳಾ ದಿನದ ಅಂಗವಾಗಿ ಕೇಂದ್ರ ಅಂಚೆ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಲತಾ ಮಂಗೇಶ್ಕರ್ ನೆನಪಿಗಾಗಿ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಲಾಯಿತು. (ಎಡದಿಂದ) ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್‌.ರಾಜೇಂದ್ರಕುಮಾರ್, ಗಾಯಕಿ ಬಿ.ಕೆ.ಸುಮಿತ್ರ, ಲೇಡಿಸ್ ಸರ್ಕಲ್‌ನ ರಾಷ್ಟ್ರೀಯ ಘಟಕದ ಅಧ್ಯಕ್ಷೆ ಸ್ವಪ್ನಾ ರಾಜೇಶ್, ಏರಿಯಾ–6 ಉಪಾಧ್ಯಕ್ಷೆ ಸಿಮ್ರಿತಾ ರಂಜನ್ ಹಾಗೂ ಕಲ್ಪನಾ ಸುಮನ್ ಇದ್ದಾರೆ–ಪ್ರಜಾವಾಣಿ ಚಿತ್ರ

ಠಾಣಾಧಿಕಾರಿ ಕೆಲಸ ಮಾಡಿದ ಮಹಿಳಾ ಸಿಬ್ಬಂದಿ

ಮಹಿಳಾ ದಿನಾಚರಣೆಯನ್ನು ನಗರದ ಪೊಲೀಸರು ವಿಶೇಷವಾಗಿ ಆಚರಿಸಿದರು. ಬಹುತೇಕ ಠಾಣೆಗಳಲ್ಲಿ ಪುರುಷ ಸಿಬ್ಬಂದಿ ಠಾಣಾಧಿಕಾರಿ ಆಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಮಂಗಳವಾರ ನಗರದ ಎಲ್ಲ ಠಾಣೆಗಳಲ್ಲಿ ಮಹಿಳಾ ಸಿಬ್ಬಂದಿಯೇ ಠಾಣಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಲಾಯಿತು.

ಠಾಣಾಧಿಕಾರಿ ಕುರ್ಚಿಯಲ್ಲಿ ಕುಳಿತ ಅವರು ದೂರು ಆಲಿಸಿದರು. ವಾಕಿಟಾಕಿ ಹಿಡಿದು ನಿಯಂತ್ರಣ ಕೊಠಡಿ ಸಿಬ್ಬಂದಿಗೆ ಸಂದೇಶ ರವಾನಿಸಿದರು. ಠಾಣೆಯ ಕಚ್ಚಾ ಪುಸ್ತಕ, ಡೈರಿ ಹಾಗೂ ಪ್ರಕರಣಗಳ ತನಿಖೆ ಕಡತಗಳನ್ನು ಪರಿಶೀಲಿಸಿದರು. ಮಹಿಳೆಯರ ಕೆಲಸಕ್ಕೆ ಉಳಿದೆಲ್ಲ ಸಿಬ್ಬಂದಿ ಸಹಕಾರ ನೀಡಿದರು.

ಠಾಣೆ ವ್ಯಾಪ್ತಿಯ ಶಾಲಾ ಬಾಲಕಿಯರನ್ನು ಠಾಣೆಗೆ ಕರೆಸಿ, ಪೊಲೀಸ್ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಲಾಯಿತು. ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಹಾಗೂ ಇತರೆ ಸಿಬ್ಬಂದಿ ಕೆಲಸವೇನು ಎಂಬುದನ್ನು ತಿಳಿಸಲಾಯಿತು.

ಮಹಿಳೆಯರ ಆರೋಗ್ಯ ತಪಾಸಣೆ

ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಗರದ ಪೋರ್ಟಿಸ್ ಆಸ್ಪತ್ರೆ ವೈದ್ಯರು 200 ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿದರು.

ವಿದ್ಯಾ ಫೌಂಡೇಷನ್ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಗಾಯತ್ರಿ ಕಾಮತ್, 'ಬಡ ಕುಟುಂಬದ ಮಹಿಳೆಯರು ಆರೋಗ್ಯದ ಬಗ್ಗೆ ಅಷ್ಟಾಗಿ ಕಾಳಜಿ ವಹಿಸುವುದಿಲ್ಲ. ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡರೂ ಆಸ್ಪತ್ರೆಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳುವುದು ಅಪರೂಪ. ಇದರಿಂದಾಗಿ ಅವರ ಆರೋಗ್ಯ ಮತ್ತಷ್ಟು ಹದಗೆಡುತ್ತದೆ' ಎಂದರು.

ನಗರದ ವಿವಿಧೆಡೆಯಿಂದ ಬಂದ ಮಹಿಳೆಯರಿಗೆ ರಕ್ತ, ವಿಟಮಿನ್ ಡಿ, ಬಿ–12 ಸೇರಿದಂತೆ ವಿವಿಧ ಪರೀಕ್ಷೆಗಳನ್ನು ನಡೆಸಲಾಯಿತು. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಮಾತ್ರೆಗಳನ್ನು ವಿತರಿಸಲಾಯಿತು.

ಬಾಲಕಿಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

'ಮುಟ್ಟು–ಮುಕ್ತ ಮಾತುಕತೆಗೆ ಅವಕಾಶ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಲ್ಡ್ ಆಫ್ ವಿಮೆನ್ ಸಂಸ್ಥೆಯು ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ 'ಮುಟ್ಟು ಹಾಗೂ ಅದರ ನಿರ್ವಹಣೆ' ಕುರಿತು ಆಸ್ಟಿನ್ ಟೌನ್‌ನ ಬಾನ್ ಸೆಕೋರ್ಸ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಅರಿವು ಮೂಡಿಸಿತು. ಜಾಗೃತಿ ಜೊತೆಗೆ ಈ ಸಮಸ್ಯೆ ಬಗ್ಗೆ ಮುಕ್ತವಾಗಿ ಮಾತನಾಡುವಂತೆ ತಜ್ಞರು ಬಾಲಕಿಯರಿಗೆ ಕಿವಿಮಾತು ಹೇಳಿದರು.

'ಮುಟ್ಟಿನ ಬಗ್ಗೆ ಮಾತನಾಡುವುದಕ್ಕೆ ಹಲವರು ಸಂಕೋಚ ಪಡುತ್ತಾರೆ. ಅವರ ಮನಸ್ಥಿತಿ ಬದಲಾಯಿಸಬೇಕು. ಅದರ ಬಗ್ಗೆ ಮುಕ್ತವಾಗಿ ಮಾತನಾಡುವಂತಾಗಬೇಕು. ಈ ಮೂಲಕವಿದ್ಯಾರ್ಥಿನಿಯರ ಶೈಕ್ಷಣಿಕ ಸಾಮರ್ಥ್ಯ ವೃದ್ಧಿಸುವುದು ಹಾಗೂ ಶಾಲೆ ಹಾಜರಾತಿ ಹೆಚ್ಚಿಸುವುದು ಕಾರ್ಯಕ್ರಮದ ಉದ್ದೇಶ' ಎಂದು ವರ್ಲ್ಡ್ ಆಫ್ ವಿಮೆನ್‌ನ ಅಧ್ಯಕ್ಷೆ ಶಿಖಾ ಗೋಲ್ಚೆ ಹೇಳಿದರು.

'ಮುಟ್ಟಿನ ಸಮಸ್ಯೆ ನಿರ್ವಹಿಸುವುದು, ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ಬಗ್ಗೆಯೂ ಬಾಲಕಿಯರಿಗೆ ತಿಳಿಸಲಾಯಿತು' ಎಂದರು.

ಕಾರ್ಯಕ್ರಮದಲ್ಲಿ ಆರ್ಥಿಕವಾಗಿ ಹಿಂದುಳಿದ 13–15 ವರ್ಷದೊಳಗಿನ ಒಟ್ಟು 430 ಬಾಲಕಿಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

ಸಾಧಕಿಯರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ

'ಆರ್ಥಿಕ ಕ್ರಾಂತಿ: ಮಹಿಳೆಯರು ಮುನ್ನುಡಿ ಬರೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಆರ್ಥಿಕ ಕ್ರಾಂತಿಯಲ್ಲಿ ಮಹಿಳೆಯರ ಪಾತ್ರ ಬಹುಮುಖ್ಯ. ಈ ದಿಸೆಯಲ್ಲಿ ಎಲ್ಲಾ ತಾಯಂದಿರು ಹೆಜ್ಜೆ ಇಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಮ್ಮಿಕೊಂಡಿದ್ದ ಮಹಿಳೆ ಮತ್ತು ಮಕ್ಕಳ ದಿನ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಂಗಳವಾರ ಮಾತನಾಡಿದರು.

'ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಆಗ ದೇಶ ಪ್ರಗತಿ ಕಾಣಲು ಸಾಧ್ಯ. ಮಹಿಳೆಯರು ಪ್ರಾಮಾಣಿಕತೆ, ಉಳಿತಾಯ ಹಾಗೂ ಕಠಿಣ ಪರಿಶ್ರಮದ ಪ್ರತಿರೂಪವಿದ್ದಂತೆ. ಇವುಗಳ ಆಧಾರದ ಮೇಲೆ ಅವರ ಆರ್ಥಿಕತೆ ಉತ್ತಮಪಡಿಸಬೇಕು. ಹೀಗಾಗಿ ಗುಡಿ ಕೈಗಾರಿಕೆಯಿಂದ ನವೋದ್ಯಮ ತೆರೆಯುವವರೆಗೂ ಎಲ್ಲಾ ಬಗೆಯ ಪ್ರೋತ್ಸಾಹ ನೀಡಲಾಗುತ್ತದೆ' ಎಂದರು.

'ಗ್ರಾಮೀಣ ಭಾಗದ ತಾಯಂದಿರ ದುಡಿಮೆ ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ. ಅವರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ಈ ಉದ್ದೇಶದಿಂದಲೇ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳಿಗೆ ಸುಮಾರು ₹43,118 ಕೋಟಿ ಮೀಸಲಿಡಲಾಗಿದೆ' ಎಂದು ಅವರು ತಿಳಿಸಿದರು.

'ಎಲ್ಲಾ ಸ್ವಸಹಾಯ ಸಂಘಗಳು ಕಿರು ಉದ್ಯೋಗದ ನೆಲೆಗಳಾಗಬೇಕು. ಆರ್ಥಿಕ ಸ್ವಾತಂತ್ರ್ಯ ಗಳಿಸಲು ಹಾಗೂ ಉದ್ಯಮಶೀಲತೆ ವೃದ್ಧಿಗಾಗಿ ಸಂಘಗಳಿಗೆ ತಲಾ ₹1.5 ಲಕ್ಷ ನೆರವು ಒದಗಿಸಲಾಗುತ್ತದೆ. ಇದಕ್ಕಾಗಿ ಪ್ರಸಕ್ತ ವರ್ಷದಲ್ಲಿ ₹500 ಕೋಟಿ ಬಿಡುಗಡೆ ಮಾಡಲಾಗುವುದು. ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಸಹಯೋಗದಲ್ಲಿ ಏಕಗವಾಕ್ಷಿ ಸಾಲ ಸೌಲಭ್ಯ ಒದಗಿಸಲೂ ಕ್ರಮ ಕೈಗೊಳ್ಳಲಾಗುತ್ತದೆ. ಸ್ವಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳಿಗೆ ಮೌಲ್ಯವರ್ಧನೆ ವ್ಯವಸ್ಥೆ ಕಲ್ಪಿಸುವ ಮೂಲಕ ಸೂಕ್ತ ಮಾರುಕಟ್ಟೆ ಒದಗಿಸಲಾಗುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಸರ್ಕಾರವು ಅಮೆಜಾನ್ ಹಾಗೂ ಫ್ಲಿಕ್‌ಪಾರ್ಟ್ ಜೊತೆ ಒಪ್ಪಂದ ಮಾಡಿಕೊಳ್ಳಲಿದೆ' ಎಂದು ಹೇಳಿದರು.

'ಸದೃಢ ಸಮಾಜ ನಿರ್ಮಾಣಕ್ಕೆ ತಾಯಿ ಮತ್ತು ಮಕ್ಕಳ ಆರೋಗ್ಯ ತುಂಬಾ ಮುಖ್ಯ. ಹೀಗಾಗಿ ಸರಾಸರಿ ಪೌಷ್ಟಿಕತೆ ಮಟ್ಟಕ್ಕಿಂತ ಕಡಿಮೆ ಇರುವ 110 ತಾಲ್ಲೂಕುಗಳಲ್ಲಿ ವಿಶೇಷ ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಮುಂದಿನ ದಿನಗಳಲ್ಲಿ ಮಹಿಳೆಯರಿಂದ ದೊಡ್ಡ ಆರ್ಥಿಕ ಕ್ರಾಂತಿ ನಡೆಯಬೇಕು. ಸರ್ಕಾರ ಅದರ ನಿರೀಕ್ಷೆಯಲ್ಲಿದೆ' ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರು ಹಾಗೂ ಸಂಘ ಸಂಸ್ಥೆಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಸಚಿವ ಹಾಲಪ್ಪ ಆಚಾರ್, ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ, ಇಲಾಖೆಯ ಕಾರ್ಯದರ್ಶಿ ಡಾ.ಮಂಜುಳಾ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮಿಳಾ ಆರ್‌.ನಾಯ್ಡು ಹಾಗೂ ಇತರರು ಇದ್ದಾರೆ –ಪ್ರಜಾವಾಣಿ ಚಿತ್ರ

'ಅಮೃತಧಾರೆ' ಎದೆಹಾಲು ಬ್ಯಾಂಕ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಾಣಿವಿಲಾಸ ಆಸ್ಪತ್ರೆಯಲ್ಲಿ ನಿರ್ಮಿಸಲಾಗಿರುವ ಎದೆ ಹಾಲು ಬ್ಯಾಂಕ್ 'ಅಮೃತಧಾರೆ'ಗೆ ಮಂಗಳವಾರ ಅಧಿಕೃತ ಚಾಲನೆ ದೊರೆತಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಥಾಪಿತವಾದ ಮೊದಲ ತಾಯಂದಿರ ಎದೆ ಹಾಲು ಬ್ಯಾಂಕ್ ಇದಾಗಿದೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಬಿಎಂಸಿಆರ್‌ಐ) ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರು ಎದೆ ಹಾಲಿನ ಬ್ಯಾಂಕ್ ಹಾಗೂ ಅಪಾಯಕಾರಿ ಹೆರಿಗೆ ನಿಭಾಯಿಸುವ ಕಟ್ಟಡ ಉದ್ಘಾಟಿಸಿದರು. 'ತಾಯಿಯ ಎದೆಹಾಲಿಗಿಂತ ಅಮೃತ ಬೇರೆ ಇಲ್ಲ. ರಾಜ್ಯದಲ್ಲಿ ನಾಲ್ಕು ಕಡೆ ಎದೆ ಹಾಲು ಸಂಗ್ರಹ ಕೇಂದ್ರವಿದೆ. ಈ ಕೇಂದ್ರ ಹೊಂದಿದ ಮೊದಲ ಸರ್ಕಾರಿ ಆಸ್ಪತ್ರೆ ಎಂಬ ಹಿರಿಮೆಗೆ ವಾಣಿವಿಲಾಸ ಆಸ್ಪತ್ರೆ ಭಾಜನವಾಗಿದೆ. ಎದೆಹಾಲು ವಂಚಿತ ಮಕ್ಕಳಿಗೆ ಈ ಕೇಂದ್ರ ನೆರವಾಗಲಿದೆ' ಎಂದು ಹೇಳಿದರು.

72 ಹಾಸಿಗೆಗಳು: 'ಅಪಾಯಕಾರಿ ಹೆರಿಗೆ ನಿಭಾಯಿಸುವ ಕಟ್ಟಡವು ಒಟ್ಟು 72 ಹಾಸಿಗೆಗಳನ್ನು ಹೊಂದಿವೆ. ಇದರಲ್ಲಿ 28 ಶಿಶುಗಳ ತೀವ್ರ ನಿಗಾ ಘಟಕ (ಎನ್‌ಐಸಿಯು) ಹಾಸಿಗೆ ಹಾಗೂ ತಲಾ 22 ಮಕ್ಕಳ ತೀವ್ರ ನಿಗಾ ಘಟಕ (ಐಸಿಯು) ಮತ್ತು ಹೆರಿಗೆ ಐಸಿಯು ಹಾಸಿಗೆಗಳು ಇವೆ. ಮಾತೃ ವಂದನಾ, ನಗುಮಗು, ಜನನಿ ಸುರಕ್ಷಾ ಸೇರಿದಂತೆ ವಿವಿಧ ಯೋಜನೆಗಳ ಮೂಲಕ ಮಹಿಳೆಯರಿಗೆ ನೆರವು ನೀಡಲಾಗುತ್ತಿದೆ' ಎಂದರು.

'ಮಹಿಳೆಯರಿಗೆ ಉದ್ಯೋಗಾವಕಾಶ ಹೆಚ್ಚಿಸಿ'

ಬೆಂಗಳೂರು: 'ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕು. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿಯನ್ನು ಸರ್ಕಾರ ತಕ್ಷಣವೇ ಜಾರಿ ಮಾಡಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

'ವಿಶ್ವ ಸಂಸ್ಥೆಯ ಇತ್ತೀಚಿನ ಸಮೀಕ್ಷೆಯ ಪ್ರಕಾರ ಶೇ 29ರಷ್ಟು ಮಹಿಳೆಯರು ದುಡಿಮೆಯಿಂದ ಹೊರದೂಡಲ್ಪಟ್ಟಿದ್ದಾರೆ. ಶೇ 56ರಷ್ಟು ಯುವತಿಯರ ಕೂಲಿ ಕಡಿತಗೊಳಿಸಲಾಗಿದ್ದು, ಅವರು ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ. ಶೇ 67ಕ್ಕಿಂತ ಹೆಚ್ಚಿನ ಮಹಿಳೆಯರು ಮನೆಗೆಲಸದಲ್ಲಿ ನಿರತರಾಗಿದ್ದಾರೆ' ಎಂದು ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷೆ ದೇವಿ ಕಳವಳ ವ್ಯಕ್ತಪಡಿಸಿದ್ದಾರೆ.

'ಗ್ರಾಮೀಣ ಉದ್ಯೋಗ ಖಾತ್ರಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಬೇಕು' ಎಂದೂ ಆಗ್ರಹಿಸಿದ್ದಾರೆ.

ಮಂಗಳವಾರ ವಂಡರ್‌ಲಾಗೆ ಬಂದ ಮಹಿಳೆಯರು

ಉಚಿತ ಕೊಡುಗೆ: ವಂಡರ್‌ಲಾ ಮುಂದೆ ಸಾಲುಗಟ್ಟಿ ನಿಂತ ಮಹಿಳೆಯರು

ಪ್ರಜಾವಾಣಿ ವಾರ್ತೆ

ರಾಮನಗರ: ಬಿಡದಿಯ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್ ಮಹಿಳಾ ದಿನಾಚರಣೆ ಅಂಗವಾಗಿ ಪಾರ್ಕ್‌ಗೆ ವಿಶೇಷ ಕೊಡುಗೆ ಘೋಷಿಸಿದ್ದು, ಇದನ್ನು ನೆಚ್ಚಿ ಬಂದ ಸಾವಿರಾರು ಮಹಿಳೆಯರು ಟಿಕೆಟ್ ಸಿಗದೆ ನಿರಾಸೆಯಿಂದ ವಾಪಸ್ ಆದರು.

ಮಹಿಳಾ ದಿನದ ಅಂಗವಾಗಿ ವಂಡರ್‌ಲಾ ಮಂಗಳವಾರ ಇಡೀ ಪಾರ್ಕ್ ಅನ್ನು ಸ್ತ್ರೀಯರಿಗಾಗಿ ಮೀಸಲಿಟ್ಟಿತ್ತು. ಅಂತೆಯೇ ಒಂದು ಟಿಕೆಟ್ ಕೊಂಡಲ್ಲಿ ಮತ್ತೊಬ್ಬ ಮಹಿಳೆಗೆ ಉಚಿತ ಪ್ರವೇಶದ ಕೊಡುಗೆ ನೀಡಿತ್ತು. ಸಾಕಷ್ಟು ಮುಂಚೆಯೇ ಆನ್‌ಲೈನ್ ಬುಕ್ಕಿಂಗ್ ಆರಂಭ ಆಗಿತ್ತು. ಬುಕ್ಕಿಂಗ್ ಹೆಚ್ಚಾದ ಹಿನ್ನೆಲೆಯಲ್ಲಿ ಮೂರು ದಿನದ ಹಿಂದೆಯೇ ಆನ್‌ಲೈನ್ ಬುಕ್ಕಿಂಗ್ ನಿಲ್ಲಿಸಲಾಗಿತ್ತು.

ಹೃದಯಾಘಾತಕ್ಕೆ ನ್ಯಾನೊ ಚಿಕಿತ್ಸೆ

ಬೆಂಗಳೂರು: ವೈದ್ಯಕೀಯ ಕ್ಷೇತ್ರದಲ್ಲಿ ನ್ಯಾನೋ ತಂತ್ರಜ್ಞಾನ ಬಳಕೆ ಹೆಚ್ಚುತ್ತಿದ್ದು, ಈ ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ ಕಾರ್ಡಿಯಾಕ್ ಪಟ್ಟಿಗಳನ್ನು ಉಪಯೋಗಿಸಿ ಹೃದಯಾಘಾತಕ್ಕೆ ಸಮರ್ಥ ಚಿಕಿತ್ಸೆ ನೀಡಬಹುದು ಎಂದು ತಂಜಾವೂರಿನ ಶಾಸ್ತ್ರ ನ್ಯಾನೊ ತಂತ್ರಜ್ಞಾನ ಮತ್ತು ಆಧುನಿಕ ಸಂಶೋಧನಾ ಕೇಂದ್ರದ ಹಿರಿಯ ನ್ಯಾನೊ ವಿಜ್ಞಾನಿ ಡಾ.ಎಸ್. ಸ್ವಾಮಿನಾಥನ್ ಹೇಳಿದರು.

ಬೆಂಗಳೂರು– ಇಂಡಿಯಾ ನ್ಯಾನೊ ಸಮಾವೇಶದ ಎರಡನೇ ದಿನವಾದ ಮಂಗಳವಾರ ವರ್ಚುವಲ್ ಉಪನ್ಯಾಸ ನೀಡಿದ ಅವರು, ಈ ಚಿಕಿತ್ಸೆಯಲ್ಲಿ ನ್ಯಾನೋ ಫೈಬರ್‌ಗಳು ಉಪಯುಕ್ತ ಪಾತ್ರವಹಿಸಲಿವೆ ಎಂದು ತಿಳಿಸಿದರು.

ಈ ಚಿಕಿತ್ಸೆಯನ್ನು ಪ್ರಾಣಿಗಳ ಮೇಲೆ ಪ್ರಾಯೋಗಿಕವಾಗಿ ಪರೀಕ್ಷಿಸಲಾಗಿದೆ. ಸಕಾರಾತ್ಮಕ ಫಲಿತಾಂಶ ಬಂದಿದೆ. ವಿಸ್ತೃತ ಅಧ್ಯಯನಕ್ಕೆ ವೈದ್ಯಕೀಯ ಸಂಸ್ಥೆಗಳು ನೆರವು ನೀಡಲು ಮುಂದೆ ಬಂದಿವೆ. ಇನ್ನು ಕೆಲವೇ ವರ್ಷಗಳಲ್ಲಿ ಈ ಚಿಕಿತ್ಸೆ ಜನಪ್ರಿಯ ಆಗಲಿವೆ' ಎಂದರು.

'ಬಿಜೆಪಿ ಸರ್ಕಾರ ಮಹಿಳಾ ವಿರೋಧಿ'

ಬೆಂಗಳೂರು: 'ರಾಜ್ಯದಲ್ಲಿ ಸದ್ಯ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಮಹಿಳಾ ವಿರೋಧಿ' ಎಂದು ಆರೋಪಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಈ ಸರ್ಕಾರ ಮಹಿಳೆಯರಿಗೆ ನೀಡಿದ ಯಾವ ಭರವಸೆಗಳನ್ನೂ ಈಡೇರಿಸಿಲ್ಲ' ಎಂದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೆಪಿಸಿಸಿ ಮಹಿಳಾ ಘಟಕ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕಳೆದ ಚುನಾವಣೆಯಲ್ಲಿ ಬಿಜೆಪಿಯವರು ಮಹಿಳೆಯರ ಅಭಿವೃದ್ಧಿಗೆ ₹ 10 ಸಾವಿರ ಕೋಟಿ ಕೊಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದರು. ಅಲ್ಲದೆ, ₹ 2 ಲಕ್ಷದವರೆಗೆ ಸಾಲ, ಬಡ ಮಹಿಳೆಯರಿಗೆ ಸ್ಮಾರ್ಟ್ ಫೋನ್, 3 ಗ್ರಾಂ ತಾಳಿ, ₹ 25 ಸಾವಿರ ಹಣ ನೀಡುವುದಾಗಿ ಭರವಸೆ ನೀಡಿದ್ದರು' ಎಂದರು.

'ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಹೊಸ ಹೆಜ್ಜೆ ಇಟ್ಟಿದ್ದು, ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ದೊಡ್ಡ ಪರಿವರ್ತನೆಯ ಹೆಜ್ಜೆ ಇಟ್ಟಿದ್ದಾರೆ. ಮಹಿಳೆಯರು ಮತ್ತು ಪುರುಷರಿಗೆ ಸಮಾನ ಅವಕಾಶ ನೀಡುವಂತೆ ಅವರು ಧ್ವನಿ ಎತ್ತಿದ್ದಾರೆ. ಅವರ ತಂದೆ ರಾಜೀವ್ ಗಾಂಧಿ ಅವರು ಮಹಿಳೆಯರಿಗೆ ಮೀಸಲಾತಿಯಂಥ ಕ್ರಾಂತಿಕಾರಿ ಬದಲಾವಣೆ ತಂದಿದ್ದರು. ನಾವು ನಮ್ಮ ಪ್ರಣಾಳಿಕೆಯಲ್ಲಿ ಶೇ 33ರಷ್ಟು ಮೀಸಲಾತಿ ನೀಡುವುದಾಗಿ ಹೇಳಿದ್ದೆವು. ಆದರೆ, ರಾಜ್ಯಸಭೆಯಲ್ಲಿ ಅನುಮೋದನೆಯಾದ ಈ ವಿಚಾರವನ್ನು ಲೋಕಸಭೆಯಲ್ಲಿ ಬಿಜೆಪಿ ಇನ್ನು ಕಾರ್ಯರೂಪಕ್ಕೆ ತಂದಿಲ್ಲ' ಎಂದರು.

'ಪಕ್ಷದ ಕಾರ್ಯಕರ್ತರಲ್ಲದವರಿಗೆ ಸ್ಪರ್ಧೆಯೊಂದರಲ್ಲಿ ಭಾಗವಹಿಸಲು ಪಕ್ಷದಿಂದ ಅವಕಾಶ ಕಲ್ಪಿಸಿದ್ದು, ಮೂರು ನಿಮಿಷದ ವಿಡಿಯೊ ಹಾಕಿ, ಮಹಿಳೆ ಯಾವ ರೀತಿ ಹೋರಾಟ ಮಾಡಬಲ್ಲಳು ಎಂಬ ವಿಚಾರವಾಗಿ ಅಭಿಪ್ರಾಯ ಹಂಚಿಕೊಳ್ಳಲು ಅವಕಾಶ ನೀಡಲಾಗಿದೆ.

ಇದು ಮುಕ್ತ ಸ್ಪರ್ಧೆಯಾಗಿದ್ದು, ನಾನು ಕೂಡ ಈ ವಿಚಾರವಾಗಿ ವಿಡಿಯೊ ಮಾಡಿಸಿ, ಬೇರೆಯವರು ಮಾಡುವಂತೆ ಮನವಿ ಮಾಡುತ್ತೇನೆ. ಅತ್ಯುತ್ತಮ ವಿಡಿಯೊಗಳಿಗೆ ಬಹುಮಾನ ನೀಡುವ ಬಗ್ಗೆಯೂ ಚಿಂತನೆ ನಡೆಸುತ್ತೇನೆ' ಎಂದರು.

ಅಪರಾಧ ಸುದ್ದಿ

ಸ್ಪಾ ಮೇಲೆ ದಾಳಿ: ನಾಲ್ವರ ರಕ್ಷಣೆ

ಬೆಂಗಳೂರು: ನಾಗರಬಾವಿ ಬಳಿಯ ಬ್ಲೂಮೂನ್ ಯೂನಿಸೆಕ್ಸ್ ಸಲೂನ್ ಆ್ಯಂಡ್ ಸ್ಪಾ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ನಾಲ್ವರು ಮಹಿಳೆಯರನ್ನು ರಕ್ಷಿಸಿದ್ದಾರೆ.

'ಕೆಲಸದ ಆಮಿಷವೊಡ್ಡಿ ಹೊರರಾಜ್ಯದಿಂದ ಮಹಿಳೆಯರನ್ನು ಕರೆತಂದು ಸ್ಪಾದಲ್ಲಿ ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ಹೆಚ್ಚು ಹಣ ನೀಡುವುದಾಗಿ ಹೇಳಿ ವೇಶ್ಯಾವಾಟಿಕೆ ಜಾಲಕ್ಕೆ ದೂಡಲಾಗಿತ್ತು. ಸ್ಪಾ ನಡೆಸುತ್ತಿದ್ದ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಸರಗಳ್ಳರ ಬಂಧನ

ಬೆಂಗಳೂರು: ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಮಹಿಳೆಯರನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತೊಯ್ಯುತ್ತಿದ್ದ ಇಬ್ಬರು ಆರೋಪಿಗಳನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

'ಪುನೀತ್‌ಕುಮಾರ್ ಹಾಗೂ ಗುರುಸ್ವಾಮಿ ಬಂಧಿತರು. ಅವರಿಂದ ₹ 8 ಲಕ್ಷ ಮೌಲ್ಯದ ಚಿನ್ನಾಭರಣ, ಎರಡು ಬೈಕ್ ಜಪ್ತಿ ಮಾಡಲಾಗಿದೆ.ಠಾಣೆ ವ್ಯಾಪ್ತಿಯ ರಸ್ತೆಯಲ್ಲಿ ಫೆ. 28 ರಂದು ನಡೆದುಕೊಂಡು ಹೊರಟಿದ್ದ ಮಹಿಳೆಯೊಬ್ಬರ 70 ಗ್ರಾಂ ತೂಕದ ಚಿನ್ನದ ಸರವನ್ನು ಕಿತ್ತೊಯ್ಯಲಾಗಿತ್ತು' ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ಕಳ್ಳತನ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮೂವರು ಆರೋಪಿಗಳನ್ನು ನಂದಿನಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ. ಅವರಿಂದ 1 ಕೆಜಿ 120 ಗ್ರಾಂ ಚಿನ್ನಾಭರಣ, 1 ಕೆ.ಜಿ 960 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈರುತ್ಯ ರೈಲ್ವೆ

ಟೆಂಡರ್ ನೋಟಿಸ್ ಸಂ. SWR/W/CS/2022/01/E ದಿನಾಂಕ: 04.03.2022

[illegible]

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31–03–2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನೀಯರ್ ಟ್ರ್ಯಾಕ್ ಪ್ರೊಕ್ಯೂರಮೆಂಟ್ / ಎಚ್‌ಕ್ಯೂ / ಹುಬ್ಬಳ್ಳಿ

PUB/445/AAV/PRB/SWR/2021-22

S.W.Railways SWRRLY SWRRLY

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ: ಬೆಂಅಪ್ರಾ/2021–22/ಇಎಲ್/ವರ್ಕ್_ಇಂಡೆಂಟ್ 1474 ದಿನಾಂಕ: 07.03.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸರ್ ಎಂ.ವಿ.ಲೇಔಟ್ 1 ರಿಂದ 9ನೇ ಬ್ಲಾಕ್‌ನ ವಿವಿಧ ಸ್ಥಳಗಳಲ್ಲಿ ಹಾಲಿ ಇರುವ ಟ್ರಾನ್ಸ್‌ಫಾರ್ಮರ್‌ಗಳಿಗೆ ಅರ್ಥಿಂಗ್ ಒದಗಿಸಲು ಹಾಗೂ ಹಾಲಿ ಇರುವ ವಿದ್ಯುತ್ ಕಂಬಗಳಿಗೆ 70 ವ್ಯಾಟ್ ಎಲ್‌ಇಡಿ ಬೀದಿದೀಪಗಗಳನ್ನು ಅಳವಡಿಸಲು ಅಂದಾಜಿಗಾಗಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿದೆ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಅವಧಿ: **08.03.2022 (2)** ಅಗತ್ಯ ದಾಖಲೆಗಳೊಂದಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **22.03.2022, 17.00 ಗಂಟೆ. (3)** ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **24.03.2022, 17.00 ಗಂಟೆಗೆ.**

ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್: https://www eproc.karnataka.gov.in ಇಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೋಡಬಹುದು ಅಥವಾ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಇವರ ಕಛೇರಿ, ಬಿಡಿಎ, ಟಿ.ಚೌಡಯ್ಯ ರಸ್ತೆ, ಕುಮಾರಪಾರ್ಕ್ ರಸ್ತೆ ಪಶ್ಚಿಮ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು. ಸಂಪರ್ಕ ಸಂಖ್ಯೆ: + 919845630164. ವಿಚಾರಣೆಗೆ ಸಂಪರ್ಕಿಸಿ ಇಮೇಲ್ ಐಡಿ: eeelec.bda@gmail.com

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್)

BDA/PRO/TN/25/2021-22

ನಗರಸಭಾ ಕಾರ್ಯಾಲಯ, ರಾಮನಗರ

ರಾಮನಗರ ಜಿಲ್ಲೆ–562159

ದೂರವಾಣಿ: 080–27271286, ಫ್ಯಾಕ್ಸ್: 080–27271883

Website: www.ramanagaracity.mrc.gov.in e-Mail: itstaff_ulb_ramanagaram@yahoo.com

ಸಂಖ್ಯೆ: ನಸರಾ/ತಾ.ವಿ/ಟೆಂಡರ್/ಸಿಆರ್/12/2021–22 ದಿನಾಂಕ: 25.02.2022

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **ರಾಮನಗರ ನಗರ ಸಭಾ ವ್ಯಾಪ್ತಿಯಲ್ಲಿ 2017–18ನೇ ಸಾಲಿನ 14ನೇ ಹಣಕಾಸಿನ ಜಿ.ಪಿ.ಜಿ ಅನುದಾನದಲ್ಲಿ, 2020–21ನೇ ಸಾಲಿನ 15ನೇ ಹಣಕಾಸಿನ ಉಳಿಕೆ ಅನುದಾನದಲ್ಲಿ, 2021–22ನೇ ಸಾಲಿನ 15ನೇ ಹಣಕಾಸಿನ ಅನುದಾನ ಹಾಗೂ 2021–22ನೇ ಸಾಲಿನ ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ ಹಾಗೂ ನಗರಸಭಾ ನಿಧಿ ಶೇ. 7.25 ಮತ್ತು ಶೇ. 5 ಮತ್ತು ನಗರಸಭಾ ನಿಧಿ ಅನುದಾನದಲ್ಲಿ** ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. ಒಟ್ಟು 13 ಪ್ಯಾಕೇಜ್ ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ: ರೂ. 45.00 ಲಕ್ಷ, ಕನಿಷ್ಠ ಅಂದಾಜು ಮೊತ್ತ: ರೂ. 4.50 ಲಕ್ಷಗಳಿದ್ದು, **ಪ್ಯಾಕೇಜ್ ಸಂಖ್ಯೆ 3, 8 ಮತ್ತು 12ನ್ನು ಪರಿಶಿಷ್ಟ ಜಾತಿಗೆ ಮತ್ತು ಪ್ಯಾಕೇಜ್ ಸಂಖ್ಯೆ: 10ನ್ನು ಪರಿಶಿಷ್ಟ ಪಂಗಡದ ಗುತ್ತಿಗೆದಾರರು ಮಾತ್ರ ಭಾಗವಹಿಸಲು ಮೀಸಲಿಡಲಾಗಿದೆ.** ಹೆಚ್ಚಿನ ವಿವರಗಳಿಗೆ ಈ ಕಚೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. https://eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 23.03.2022ರ ಸಂಜೆ 4:30ರ** ಒಳಗಾಗಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಚೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು ಹಾಗೂ ಕಚೇರಿಯ ಅಧಿಕೃತ ವೆಬ್‌ಸೈಟ್ www.ramanagaracity.mrc.gov.in ನಲ್ಲಿ ಸಹ ಪಡೆಯಬಹುದು.

ಸಹಿ/– ಅಧ್ಯಕ್ಷರು ನಗರಸಭೆ, ರಾಮನಗರ

ವಾಸಾಸಂಇ/ರಾನ/ಬ್ರಾಂಚ್/528/2021–22

ಸಹಿ/– ಪೌರಾಯುಕ್ತರು ನಗರಸಭೆ, ರಾಮನಗರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆಗಳ ವಿಭಾಗ, ಯಲಹಂಕ ವಲಯ, ಬೆಂಗಳೂರು – 560 092.

ಸಂಖ್ಯೆ: ಬೃಬೆಂಮಪಾ/ಯಲಹಂಕ/ಕಾಪಾಅ(ಯೋ)/ಟೆಂಡರ್/16/2021–22 ದಿನಾಂಕ: 08–03–2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ), ಯಲಹಂಕ, ಇವರು ಬೃಬೆಂಮಪಾ ಮುಖ್ಯ ಆಯುಕ್ತರ ಪರವಾಗಿ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಯಿಂದ ನೋಂದಾಯಿತ ಅರ್ಹ ತಯಾರಕರು/ಸರಬರಾಜುದಾರರಿಂದ ಕೆಳಕಂಡ ಸೇವೆಗಳಿಗಾಗಿ ಟೆಂಡರ್ ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	1) ವಾರ್ಡ್ ಸಂ.04 ರ ಅಂಬೇಡ್ಕರ್ ಭವನಕ್ಕೆ ಭದ್ರತೆ ಹಾಗೂ ಇತರೆ ಸೇವೆಗಳು, ವಾರ್ಡ್ ಸಂ.05ಕ್ಕೆ ರಾತ್ರಿ ತಂಗುದಾಣ ಕೇಂದ್ರ, ಮೇಡಿ ಅಗ್ರಹಾರದಲ್ಲಿ ಪ್ರಾಣಿಗಳ ಜನನ ನಿಯಂತ್ರಣ ಕೇಂದ್ರ, ವಾರ್ಡ್ ಸಂ.09 ರಲ್ಲಿ ವಿದ್ಯಾರಣ್ಯಪುರ ಹೊರಾಂಗಣ ಕ್ರೀಡಾಂಗಣ ಮತ್ತು ವಾರ್ಡ್ ಸಂ. 02 ರಲ್ಲಿ ಸಮುದಾಯ ಭವನ ಒದಗಿಸುವುದು.	84.50 ಲಕ್ಷಗಳು	1.69 ಲಕ್ಷಗಳು

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪ್ರಶ್ನಾವಳಿಗಳಿಗಾಗಿ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): **16.03.2022ರ ಸಂಜೆ 4:00 ಗಂಟೆವರೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **18.03.2022ರ ಸಂಜೆ 4:00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **19.03.2022ರ ಸಂಜೆ 4:30 ಗಂಟೆಗೆ ಸಾಧ್ಯವಾದಲ್ಲಿ ಮುಂದಿನ ಕೆಲಸದ ದಿವಸ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21.03.2022ರ ಸಂಜೆ 4:00 ಗಂಟೆಗೆ ಸಾಧ್ಯವಾದಲ್ಲಿ.**

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಅಥವಾ ಬೃಬೆಂಮಪಾ ವೆಬ್‌ಸೈಟ್: www.bbmp.gov.in ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ಯೋಜನಾ ವಿಭಾಗ), ಯಲಹಂಕ ವಲಯ, ಬೃಬೆಂಮಪಾ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆ್ಯಪ್ ಆಧಾರಿತ ಟ್ಯಾಕ್ಸಿ: ಸರ್ಕಾರದಿಂದ ಸಾಧ್ಯವೇ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಆರಂಭವಾದ ಬಳಿಕ ಟ್ಯಾಕ್ಸಿ ಸೇವೆ ಸ್ವರೂಪವೇ ಬದಲಾಗಿ ಹೋಯಿತು. ಮೊದ ಮೊದಲು ಪ್ರಯಾಣಿಕರಿಗೆ ಕಡಿಮೆ ದರ, ಚಾಲಕರಿಗೆ ಉತ್ತಮ ಪ್ರೋತ್ಸಾಹ ಧನ ನೀಡುವ ಮೂಲಕ ಟ್ಯಾಕ್ಸಿ ಮಾರುಕಟ್ಟೆಯನ್ನೇ ಈ ಕಂಪನಿಗಳು ಕಬ್ಜ ಮಾಡಿಕೊಂಡವು.

ಬೆಂಗಳೂರಿನಲ್ಲಿ ಇದ್ದ ಟ್ಯಾಕ್ಸಿ ಸ್ಟ್ಯಾಂಡ್‌ಗಳು ಮೆಲ್ಲಗೆ ಕಣ್ಮರೆಯಾದವು. ನಗರದ ಟ್ಯಾಕ್ಸಿ ವಲಯವನ್ನು ಸಂಪೂರ್ಣವಾಗಿ ಆ್ಯಪ್ ಆಧಾರಿತ ಕಂಪನಿಗಳೇ ನಿರ್ವಹಿಸುತ್ತಿವೆ. ದಿನ ಕಳೆದಂತೆ ಪ್ರಯಾಣ ದರವೂ ಹೆಚ್ಚಾಯಿತು, ಚಾಲಕರಿಗೆ ನೀಡುತ್ತಿದ್ದ ಪ್ರೋತ್ಸಾಹಧನವೂ ಕಡಿಮೆಯಾಯಿತು.

ಆ್ಯಪ್ ಆಧಾರಿತ ಸೇವೆ ಬಿಟ್ಟು ಟ್ಯಾಕ್ಸಿ ನಿಲ್ದಾಣದಲ್ಲಿ ಕಾರು ನಿಲ್ಲಿಸಿಕೊಂಡು ಗ್ರಾಹಕರಿಗೆ ಕಾಯುವ ಅವಕಾಶವೇ ಈಗ ಇಲ್ಲವಾಗಿ ಹೋಗಿದೆ. ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿರುವ ಕಂಪನಿಗಳು ನಿಗದಿಪಡಿಸುವ ದರವೇ ಅಂತಿಮವಾಗಿದೆ. ಸದ್ಯ ಈ ಕಂಪನಿಗಳ ಪರವಾನಗಿ ನವೀಕರಣ ಅರ್ಜಿಗಳು ಸಾರಿಗೆ ಇಲಾಖೆ ಮುಂದಿವೆ. ಈ ಸಂದರ್ಭದಲ್ಲಿ ಕಂಪನಿಗಳಿಗೆ ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಬೇಕು, ಇಲ್ಲವೇ ಸರ್ಕಾರವೇ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸಬೇಕು ಎಂಬುದು ಕಾರು ಮಾಲೀಕರು ಮತ್ತು ಚಾಲಕರ ಬೇಡಿಕೆಯಾಗಿದೆ. ಈ ಕುರಿತು ಚಾಲಕರ ಸಂಘಟನೆಗಳು 'ಪ್ರಜಾವಾಣಿ' ಜತೆ ಅಭಿಪ್ರಾಯ ಹಂಚಿಕೊಂಡಿವೆ.

ರಾಜಧಾನಿ ಒಡಲದನಿ

ನೀತಿ, ನಿಯಮದ ವ್ಯಾಪ್ತಿಗೆ ತರಬೇಕು

ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಹೇಗಿರಬೇಕು ಎಂಬುದಕ್ಕೆ ರಾಜ್ಯ ಸರ್ಕಾರ 2016ರಲ್ಲಿ ನೀತಿ ರೂಪಿಸಿದೆ. ಒಲಾ, ಉಬರ್ ಕಂಪನಿಗಳು ಇ–ಕಾಮರ್ಸ್ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಈ ನೀತಿಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿವೆ. 2021ರ ನವೆಂಬರ್‌ನಲ್ಲಿ ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸುತ್ತೋಲೆ ಹೊರಡಿಸಿ, ಈ ಕಂಪನಿಗಳು ಮೋಟಾರು ವಾಹನ ಕಾಯ್ದೆ ವ್ಯಾಪ್ತಿಯೊಳಗೆ ಇರಬೇಕು ಎಂದು ತಿಳಿಸಿದೆ. ಅದನ್ನು ಹೈಕೋರ್ಟ್‌ಗೆ ಸಲ್ಲಿಸಿ ತಡೆಯಾಜ್ಞೆ ತೆರವುಗೊಳಿಸಲು ಪ್ರಯತ್ನಿಸಬೇಕು. ಬೇರೆ ಕಂಪನಿಗಳಿಗೆ ಪರವಾನಗಿ ನೀಡದೆ ಸರ್ಕಾರವೇ ಆ್ಯಪ್ ಅಭಿವೃದ್ಧಿಪಡಿಸಿ ನಿರ್ವಹಿಸಲು ಕಾನೂನಿನ ತೊಡಕುಗಳಿವೆ. ಸರ್ಕಾರದ ಏಕಸೌಮ್ಯಕ್ಕೂ ಅವಕಾಶ ಆಗಲಿದೆ. ಆದ್ದರಿಂದ ಕೇಂದ್ರ ಸರ್ಕಾರದ ಸುತ್ತೋಲೆ ಪಾಲಿಸುವಂತೆ ಮಾಡಿದರೆ ಎಲ್ಲಾ ಸಮಸ್ಯೆಗಳಿಗೂ ಉತ್ತರ ಸಿಗಬಹುದು.

–**ಕೆ. ರಾಧಾಕೃಷ್ಣ ಹೊಳ್ಳ,** ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘದ ಅಧ್ಯಕ್ಷ

ಆ್ಯಪ್ ನಿರ್ವಹಣೆ– ಸರ್ಕಾರಕ್ಕೆ ಕಷ್ಟವಾಗದು

ನೂರಾರು ಕೋಟಿ ನಷ್ಟದಲ್ಲಿರುವ ಬಿಎಂಟಿಸಿಯನ್ನೇ ಸರ್ಕಾರ ನಿರ್ವಹಣೆ ಮಾಡುತ್ತಿದೆ. ವರಮಾನ ಬರಬಹುದಾದ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸಲು ಕಷ್ಟವೇನು ಆಗುವುದಿಲ್ಲ. ಖಾಸಗಿ ವ್ಯವಸ್ಥೆಯಲ್ಲಿ ರೋಸಿ ಹೋಗಿರುವ ಕಾರು ಮಾಲೀಕರು ಮತ್ತು ಚಾಲಕರು ಸರ್ಕಾರದ ವ್ಯವಸ್ಥೆಯೊಳಕ್ಕೆ ಬರಲಿದ್ದಾರೆ. ಸ್ಪರ್ಧೆಯೊಂದು ಇದ್ದರೆ ದರ ಏರಿಳಿತಕ್ಕೆ ಈ ಕಂಪನಿಗಳು ಅಷ್ಟಾಗಿ ಮುಂದಾಗುವುದಿಲ್ಲ. ಸರ್ಕಾರವೇ ನೇರವಾಗಿ ನಿರ್ವಹಣೆ ಮಾಡದಿದ್ದರೂ, ಹೊರಗುತ್ತಿಗೆ ವ್ಯವಸ್ಥೆ ಮೂಲಕ ಟ್ಯಾಕ್ಸಿ ಸೇವೆ ನಿರ್ವಹಿಸಲು ಅವಕಾಶ ಇದೆ. ಇದರಿಂದ ಸರ್ಕಾರಕ್ಕೂ ಹೆಸರು ಬರಲಿದೆ, ಪ್ರಯಾಣಿಕರು ಮತ್ತು ಕಾರು ಚಾಲಕರಿಗೂ ಅನುಕೂಲ ಆಗಲಿದೆ. ಈ ಸಂಬಂಧ ಸಾರಿಗೆ ಸಚಿವರನ್ನು ಮತ್ತೊಮ್ಮೆ ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ.

–**ತನ್ವೀರ್ ಪಾಷಾ,** ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷ

ಸರ್ಕಾರವೇ ಆ್ಯಪ್ ನಿರ್ವಹಿಸಲಿ

ಲಕ್ಷಾಂತರ ಬಂಡವಾಳ ಹಾಕಿ ಕಾರು ಖರೀದಿ ಮಾಡಿದ್ದೇವೆ. 10 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಆಟೋರಿಕ್ಷಾ ಮತ್ತು ಟ್ಯಾಕ್ಸಿ ನಂಬಿಕೊಂಡಿವೆ. ಸಣ್ಣಪುಟ್ಟ ವ್ಯತ್ಯಾಸ ಇದ್ದರೂ ಪೊಲೀಸರು ಮತ್ತು ಸಾರಿಗೆ ಇಲಾಖೆ ಅಧಿಕಾರಿಗಳು ನಮ್ಮ ಹೊಟ್ಟೆ ಮೇಲೆ ಹೊಡೆಯುತ್ತಾರೆ. ಒಲಾ–ಉಬರ್ ಕಂಪನಿಗಳ ಪರವಾನಗಿ ನವೀಕರಣ ಮಾಡುವ ಬದಲು ಸರ್ಕಾರವೇ ಆ್ಯಪ್ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುವುದು ಸೂಕ್ತ. ಆಗ ಚಾಲಕರಿಗೂ ತೊಂದರೆಯಾಗುವುದಿಲ್ಲ, ಪ್ರಯಾಣಿಕರಿಗೂ ಹೊರೆಯಾಗುವುದಿಲ್ಲ. ಅದಕ್ಕೆ ಕಾನೂನಿನಲ್ಲಿ ತೊಡಕುಗಳಿದ್ದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಪರಿಶೀಲಿಸಿ ಸರಿಪಡಿಸಬೇಕಾಗುತ್ತದೆ. ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವ ವ್ಯವಸ್ಥೆಯನ್ನಂತೂ ಸರ್ಕಾರ ಸಂಪೂರ್ಣ ತಡೆಗಟ್ಟಬೇಕು.

–**ಜವರೇಗೌಡ,** ಟ್ಯಾಕ್ಸಿ ಮತ್ತು ಆಟೋರಿಕ್ಷಾ ಮಾಲೀಕರ ಸಂಘದ ಅಧ್ಯಕ್ಷ

ಮಣಿಪಾಲ್ ಆಸ್ಪತ್ರೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆ

ಅಂಗಾಂಗ ದಾನದ ಜಾಗೃತಿ

ಬೆಂಗಳೂರು: ತಮ್ಮವರ ನೋವಿಗೆ ಸ್ಪಂದಿಸುವ ಜತೆಗೆ ಅಂಗಾಂಗ ದಾನ ಮಾಡುವ ಮೂಲಕ ಮರುಜನ್ಮಕ್ಕೆ ನೆರವಾದ ಮಹಿಳೆಯರನ್ನು ಹಳೆ ವಿಮಾನ ನಿಲ್ದಾಣ ರಸ್ತೆ ಬಳಿಯ 'ಮಣಿಪಾಲ್ ಆಸ್ಪತ್ರೆ' ವತಿಯಿಂದ ಅಭಿನಂದಿಸಲಾಯಿತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಆಸ್ಪತ್ರೆಯು 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮಕ್ಕೆ ನಟಿ ಸೋನಿಕಾ ಗೌಡ ಚಾಲನೆ ನೀಡಿದರು.

ಯಕೃತ್ತು ವೈಫಲ್ಯದ ಸಮಸ್ಯೆ ಎದುರಿಸುತ್ತಿದ್ದವರಿಗೆ ಅಂಗಾಂಗ ದಾನ ಮಾಡಿದವರು ತಮ್ಮ ಅನುಭವ ಹಂಚಿಕೊಂಡರೆ, ಕಸಿ ನಡೆಸಿದ ಡಾ. ರಾಜೀವ್ ಲೋಚನ್ ಹಾಗೂ ವೈದ್ಯರಾದ ಡಾ. ಸ್ಮಿತಾ ಪಂಚೋಲಿಯಾ, ಡಾ. ಜಾಹ್ನವಿ, ಡಾ. ರಾಧಿಕಾ ಮತ್ತು ಡಾ. ಪೂಜಾ ಚಿಕಿತ್ಸೆ ವೇಳೆಯ ಸವಾಲುಗಳ ಬಗ್ಗೆ ವಿವರಿಸಿದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಯಕೃತ್ತು ಸಮಸ್ಯೆ ಎದುರಿಸುತ್ತಿದ್ದ ಬಾಲಕಿ ಪಹಲ್‌ಗೆ ತಾಯಿ ಚಂಚಲ್, ಬಾಲಕ ಅದ್ವಿತ್‌ಗೆ ತಾಯಿ ಲಾವಣ್ಯ ಅವರು ಯಕೃತ್ತು ದಾನ ಮಾಡಿದ್ದಾರೆ. ವೇದಾ ಅವರು ತಂದೆ ರಘು ಅವರಿಗೆ ಯಕೃತ್ತು ದಾನ ಮಾಡುವ ಮೂಲಕ ಚೇತರಿಕೆಗೆ ನೆರವಾಗಿದ್ದಾರೆ. ಯಕೃತ್ತು ಸಮಸ್ಯೆ ಎದುರಿಸುತ್ತಿದ್ದ ನಂದಿನಿ ಅವರಿಗೆ ಜೀವಸಾರ್ಥಕತೆ ಯೋಜನೆಯಡಿ ಅಂಗ ಕಸಿ ಮಾಡಲಾಗಿದೆ.

ಆಸ್ಪತ್ರೆಯ ನಿರ್ದೇಶಕ ಡಾ. ಮನೀಶ್ ರೈ ವಿಡಿಯೊ ಸಮಾಲೋಚನೆ ವ್ಯವಸ್ಥೆಗೆ ಚಾಲನೆ ನೀಡಿದರು.

ಮಹಾರಾಷ್ಟ್ರ: ಆದಿತ್ಯ ಠಾಕ್ರೆ ಆಪ್ತರ ಮನೆ ಮೇಲೆ ಐಟಿ ದಾಳಿ

ಮುಂಬೈ: ಮಹಾರಾಷ್ಟ್ರ ಸಚಿವರಾದ ಆದಿತ್ಯ ಠಾಕ್ರೆ ಹಾಗೂ ಅನಿಲ್ ಪರಬ್ ಅವರ ಆಪ್ತರ ಮನೆ ಮತ್ತು ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿದ್ದಾರೆ.

ಆದಿತ್ಯ ಠಾಕ್ರೆ ಹಾಗೂ ಅನಿಲ್ ಪರಬ್ ಆಪ್ತರು ಮುಂಬೈ, ಪುಣೆಗಳಲ್ಲಿ ಹೊಂದಿರುವ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆದಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಮಹಾವಿಕಾಸ್ ಆಘಾಡಿ (ಎಂವಿಎ) ಸರ್ಕಾರದಲ್ಲಿ ಆದಿತ್ಯ ಠಾಕ್ರೆ ಅವರು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರಾಗಿದ್ದು, ಅನಿಲ್ ಪರಬ್ ಸಾರಿಗೆ ಮಂತ್ರಿ.

'ಶಿವಸೇನಾ ಮುಖಂಡ ಹಾಗೂ ಶಿರಡಿ ಟ್ರಸ್ಟ್‌ನ ಸದಸ್ಯ ರಾಹುಲ್ ಕನಾಲ್ ಅವರ ಮನೆ ಮೇಲೆ ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ರಾಹುಲ್, ಆದಿತ್ಯ ಠಾಕ್ರೆ ಅವರ ಆಪ್ತ ಎನ್ನಲಾಗಿದೆ.

'ಕೇಬಲ್ ಆಪರೇಟರ್ ಆಗಿರುವ ಸದಾನಂದ ಕದಂ, ಬಜರಂಗ ಖರ್ಮಾಟೆ ಅವರಿಗೆ ಸೇರಿದ ಮನೆ ಹಾಗೂ ಕಚೇರಿಗಳ ಮೇಲೂ ದಾಳಿ ನಡೆಸಲಾಗಿದೆ. ಈ ಇಬ್ಬರು, ಸಚಿವ ಅನಿಲ್ ಪರಬ್ ಅವರ ಆಪ್ತರು ಎನ್ನಲಾಗಿದೆ' ಎಂದು ವರದಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

11ರಿಂದ ಆದಿಚುಂಚನಗಿರಿ ಜಾತ್ರೆ

ನಾಗಮಂಗಲ: ತಾಲ್ಲೂಕಿನ ಆದಿಚುಂಚನಗಿರಿ ಕ್ಷೇತ್ರದಲ್ಲಿ ಇದೇ 11ರಿಂದ 19ರವರೆಗೆ ಜಾತ್ರಾ ಮಹೋತ್ಸವ ನಡೆಯಲಿದೆ. 11ರಂದು ಬೆಳಿಗ್ಗೆ 8.30ಕ್ಕೆ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಧರ್ಮಧ್ವಜ ಸ್ಥಾಪನೆ ಮೂಲಕ ಚಾಲನೆ ನೀಡಲಿದ್ದಾರೆ. ಬಳಿಕ, ನಾಂದಿ ಪೂಜೆ, 10.30ಕ್ಕೆ ಯುವ ಸಮ್ಮೇಳನ ನಡೆಯಲಿದೆ.

14ರಿಂದ ಬ್ಯಾಂಕಿಂಗ್ ಪರೀಕ್ಷೆಗೆ ತರಬೇತಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಇದೇ 14ರಿಂದ ಬ್ಯಾಂಕಿಂಗ್ ಪರೀಕ್ಷೆಗಾಗಿ ಆನ್‌ಲೈನ್ ಹಾಗೂ ಆಫ್‌ಲೈನ್ ತರಬೇತಿ ನೀಡಲು ನಿರ್ಧರಿಸಿದ್ದು ಇದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಆಸಕ್ತರು ಇದೇ 12ರೊಳಗೆ ಹೆಸರು ನೋಂದಾಯಿಸಬೇಕು. ಮಾಹಿತಿಗಾಗಿ ನಂ.15, 2ನೇ ಹಂತ, ಎಚ್‌ಎಎಲ್ ಹಳೇ ವಿಮಾನ ನಿಲ್ದಾಣ ರಸ್ತೆ, ಗಾಲ್ಫ್ ಅವೆನ್ಯೂ ರಸ್ತೆ, ಕೋಡಿಹಳ್ಳಿ, ಬೆಂಗಳೂರು–08 ಅಥವಾ ಇ–ಮೇಲ್: ksfbangalore@gmail.com ಅಥವಾ ವೆಬ್ ವಿಳಾಸ: www.ksfkarnataka.com ಗೆ ಸಂಪರ್ಕಿಸಬಹುದು.

ಸಂಪರ್ಕಕ್ಕೆ: 7625000990 ಅಥವಾ 9740552965.

ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕೇಂದ್ರದಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 9ರಂದು ಅತ್ತಿಬೆಲೆ ಉಪಕೇಂದ್ರದ ವ್ಯಾಪ್ತಿಯಲ್ಲಿ ಅನಿಯಮಿತ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯ ಆಗಲಿರುವ ಸ್ಥಳಗಳು: ಅತ್ತಿಬೆಲೆ ಪಟ್ಟಣ, ಆನೇಕಲ್ ರಸ್ತೆ.

ಆ್ಯನಿಮೇಷನ್‌ನಲ್ಲಿ ಮೂಡಿದ 'ಸುತ್ತೂರು ಶ್ರೀಮಠ – ಗುರುಪರಂಪರೆ'

ಚಿತ್ರೋತ್ಸವದಲ್ಲಿ ಸುತ್ತೂರು 'ಜಾತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸ್ವಾಮೀಜಿಗಳು ಮತ್ತು ಭಕ್ತರ 'ಜಾತ್ರೆ'ಯೇ ಮಂಗಳವಾರ ಸಂಜೆ ನಡೆಯಿತು.

ಕಾರಣವಿಷ್ಟೇ 'ಸುತ್ತೂರು ಶ್ರೀಮಠ – ಗುರುಪರಂಪರೆ' ಚಿತ್ರವು ಆ್ಯನಿಮೇಷನ್ ವಿಭಾಗದ ಅಡಿ ಪ್ರದರ್ಶನಕ್ಕೆ ನಿಗದಿಯಾಗಿತ್ತು. ಪ್ರದರ್ಶನಕ್ಕೂ ಮುನ್ನ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಔಪಚಾರಿಕವಾಗಿ ಮಾತನಾಡಲು ಬಂದಿದ್ದರು. ಅವರ ಹಿಂದೆಯೇ ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸಹಿತ ವಿವಿಧ ಹಿರಿ–ಕಿರಿಯ ಮಠಾಧೀಶರು ಆಗಮಿಸಿದರು.

ಇಷ್ಟಾದ ಮೇಲೆ ಭಕ್ತಗಣ ಸುಮ್ಮನಾದೀತೇ, ಸಾಲಾಗಿ ದೀರ್ಘದಂಡ ನಮಸ್ಕಾರ, ಹಾರಾರ್ಪಣೆ ಸನ್ಮಾನ ಶುರು ಮಾಡಿಯೇಬಿಟ್ಟರು. ಸಂಘಟಕರು ಇದನ್ನು ನಿಯಂತ್ರಿಸಲು ಹೆಣಗಾಡಿದರು.

13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಆ್ಯನಿಮೇಟೆಡ್ ಚಿತ್ರ ಪ್ರದರ್ಶನಕ್ಕೂ ಪೂರ್ವದ ಸಭೆಯಲ್ಲಿ ಮೈಸೂರು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು. ಹಿರಿಯ ವಿದ್ವಾಂಸ ಗೋ.ರು. ಚನ್ನಬಸಪ್ಪ, ತುಮಕೂರು ಸಿದ್ಧಗಂಗಾಮಠದ ಸಿದ್ಧಲಿಂಗ ಸ್ವಾಮೀಜಿ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ಚಿತ್ರದ ನಿರ್ದೇಶಕ ಅಬ್ದುಲ್ ಕರೀಂ ಇದ್ದರು

ಹೀಗೆ ಸನ್ಮಾನ ಆಶೀರ್ವಾದ ಮುಗಿದ ಬಳಿಕ ದೇಶಿಕೇಂದ್ರ ಸ್ವಾಮೀಜಿ ಅವರು ಆ್ಯನಿಮೇಷನ್ ಚಿತ್ರದ ಬಗ್ಗೆ ಮಾತನಾಡಿದರು.

'ಚಿತ್ರ ನಿರ್ಮಾಣ ಆರಂಭವಾದಾಗ ಆ್ಯನಿಮೇಷನ್ ಸಿನಿಮಾಗೆ ಇಷ್ಟೊಂದು ಶ್ರಮವಿದೆ ಎಂದು ಭಾವಿಸಿರಲಿಲ್ಲ. ಈಗ ಅರಿವಾಗಿದೆ. ಸಾಕಷ್ಟು ಸಂಶೋಧನೆ, ಚರ್ಚೆಗಳ ಬಳಿಕ ಅತ್ಯುತ್ತಮವಾಗಿ ನಿರ್ಮಿಸಲು ಪ್ರಯತ್ನಿಸಿದ್ದೇವೆ' ಎಂದು ಸ್ವಾಮೀಜಿ ಹೇಳಿದರು.

50 ನಿಮಿಷಗಳ ಈ ಚಿತ್ರ, ಮಠದ ಗುರುಪರಂಪರೆಯ ಸಮಗ್ರ ಚಿತ್ರಣ ಮತ್ತು ಜನಪರ ಸೇವೆ, ತ್ರಿವಿಧ ದಾಸೋಹದ ವಿವರವನ್ನು ಕಟ್ಟಿಕೊಟ್ಟಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಈ ಚಿತ್ರ ನಿರ್ಮಾಣವಾಗಿದೆ.ಚಿತ್ರದ ನಿರ್ದೇಶಕ ಅಬ್ದುಲ್ ಕರೀಂ ಇದ್ದರು.

ನಗರದಲ್ಲಿ ಇಂದು

ಶ್ರೀರಾಘವೇಂದ್ರ ತೀರ್ಥ ಗುರುಸಾರ್ವಭೌಮರ ಜನ್ಮದಿನ: ರಾಘವೇಂದ್ರ ಅಷ್ಟಾಕ್ಷರ ಹೋಮ, ರಥೋತ್ಸವ, ಪುಷ್ಪಾಲಂಕಾರ, ಆಯೋಜನೆ ಮತ್ತು ಸ್ಥಳ–ಉಡುಪಿ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 9.30ರಿಂದ

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಮಹಿಳೆಯರಿಗೆ ಗೌರವ ಸಮರ್ಪಣೆ: ಸಚಿವ ಕೆ.ಎಸ್.ಈಶ್ವರಪ್ಪ, ಸ್ಥಳ–ಜಿಲ್ಲಾ ಪಂಚಾಯಿತಿ ಆಯುಕ್ತಾಲಯ, ಕೆ.ಜಿ.ರಸ್ತೆ, ಗಾಂಧಿನಗರ, ಮಧ್ಯಾಹ್ನ 12.30

ಮಹಿಳೆಯರಲ್ಲಿ ಆರೋಗ್ಯ ಜಾಗೃತಿ (ಲೈಂಗಿಕ ಸಮಸ್ಯೆ) ಕುರಿತು ವೆಬಿನಾರ್: ಉದ್ಘಾಟನೆ–ಡಾ.ಸುರೇಶ್ ಕುಡ್ವ, ಅತಿಥಿ–ಪ್ರಸೂತಿ ಹಾಗೂ ಲೈಂಗಿಕ ತಜ್ಞೆ ಪದ್ಮಿನಿ ಪ್ರಸಾದ್, ಅಧ್ಯಕ್ಷತೆ–ವೀಣಾ ಎಸ್.ಭಟ್, ಡಾ.ಅನುರಾಧಾ ಪರಮೇಶ್, ಆಯೋಜನೆ–ಭಾರತೀಯ ವೈದ್ಯಕೀಯ ಸಂಘ ಅಕಾಡೆಮಿ, ರಾತ್ರಿ 8.30 (ಆನ್‌ಲೈನ್ ಕಾರ್ಯಕ್ರಮ)

ಚಿತ್ರೋತ್ಸವದಲ್ಲಿ ಇಂದು

ಒರಾಯನ್ ಮಾಲ್:
ತೆರೆ 1ರಿಂದ 3: ವಿವಿಧ ವಿಶ್ವ ಚಲನಚಿತ್ರಗಳು ಹಾಗೂ ಆಸ್ಕರ್ ವಿಭಾಗದ ಚಿತ್ರಗಳ ಪ್ರದರ್ಶನ
ತೆರೆ 4: ಬೆಳಿಗ್ಗೆ 10: ಕಾಡುಮಳೆ, ಮಧ್ಯಾಹ್ನ12.30: ದೇವದ ಕಾಡ್, 3.15: ಓ ನನ್ನ ಚೇತನ, ಸಂಜೆ 7: ಗಜಾನನ ಆ್ಯಂಡ್ ಗ್ಯಾಂಗ್.
ತೆರೆ 5ರಿಂದ 10: ವಿವಿಧ ವಿಭಾಗಗಳ ಚಿತ್ರಗಳ ಪ್ರದರ್ಶನ
ತೆರೆ 11: ಬೆಳಿಗ್ಗೆ 10.30: ಗೋಷ್ಠಿ: ನಾನ್ ಫಂಗಿಬಲ್ ಟೋಕನ್ಸ್– ಸಿನಿಮಾಸ್ ಇನ್ ಡಿಜಿಟಲ್ ಎರಾ. ಮಧ್ಯಾಹ್ನ 2.30: ಚಿತ್ರೋತ್ಸವಗಳ ಹುಟ್ಟು ಮತ್ತು ಬೆಳವಣಿಗೆ– ವಿಷಯ ಮಂಡನೆ: ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎಚ್.ಎನ್. ನರಹರಿ ರಾವ್
ಸುಚಿತ್ರಾ ಸಿನಿ ಅಕಾಡೆಮಿ: ಬೆಳಿಗ್ಗೆ 10ಕ್ಕೆ: ಬಂಗಾರ್ ಪಟ್ಲೇರ್ (ತುಳು), ಮಧ್ಯಾಹ್ನ 1.15: ವಿಶ್ವ ಸಿನಿಮಾ, 3.15: ದೊಡ್ಡಹಟ್ಟಿ ಬೋರೇಗೌಡ (ಕನ್ನಡ)
ಡಾ.ರಾಜ್‌ಕುಮಾರ್ ಭವನ ಚಾಮರಾಜಪೇಟೆ: ಮಧ್ಯಾಹ್ನ 1: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಜೆ 4: ನಮ್ಮ ಚಿಲ್ಡ್ರನ್ಸ್ ಇಂಡಿಯಾ ಡಾಟ್ ಕಾಂ 7: ಫಿಸಿಕ್ಸ್ ಟೀಚರ್

TRUST OF HERO
Hero 100 MILLION | Hero WORLD'S NO.1 20 YEARS IN A ROW | INDIA'S FIRST 5 YEAR WARRANTY *Conditions apply. | 7000+ SERVICE CENTRES

ಎಲ್ಲಾ ಸ್ಕೂಟರ್‌ಗಳ ಮೇಲೆ ಕ್ಯಾಶ್ ಬೆನಿಫಿಟ್ ₹4000* + DESTINI 125 ಮೇಲೆ ವಿನಿಮಯ/ಲಾಯಲ್ಟಿ ಬೋನಸ್ ₹2000*

Regd. Office: Hero MotoCorp Ltd., The Grand Plaza, Plot No.2, Nelson Mandela Road, Vasant Kunj - Phase -II, New Delhi - 110070, India. CIN: L35911DL1984PLC017354. It is our endeavour to improve our product. This could lead to changes in product specifications without notice. Accessories and features shown may not be a part of the standard fitment. Always wear a helmet while riding a two-wheeler. **As per the cumulative global production volume till 21st January 2021. ***Largest two-wheeler selling company in the world for any particular country for the year 2020. #Price is subject to change without any prior notice. *The offer is valid on select models in select cities only and is subject to change without any prior notice. T&C apply. For further information, contact nearest Hero MotoCorp authorised outlet (s) or call Toll Free No. 1800-266-0018 or visit website www.heromotocorp.com

Authorised Dealers: Bengaluru: Magadi Road: Poorna Hero, Ph: 9289524171, Marathalli: Vaayuratha Hero, Ph: 9964400041, Banashankari: Sai Hero, Ph: 9513353864, Banaswadi: Bhagath Hero, Ph: 9513353807, Byatarayanapura: Bimal Hero, Ph: 9513353838, Hosur Road: Rt Krishna Hero, Ph: 7428893265, Lalbagh Road: Prakash Hero, Ph: 9513353827, Peenya: Sai Hero, Ph: 9513353853, Rajaji Nagar: Max Hero, Ph: 9513353808, Hoskote: Bhagath Hero, Ph: 8884600051, K R Puram: Bhagath Hero, Ph: 9513353807, Tumkur: Sai Hero, Ph: 9513353908, Tiptur: Sai Hero, Ph: 9164840456, Kunigal: Sai Hero, Ph: 7022752858, Hubli: Chadha Hero, Ph: 9513353842, Bellad Hero, Ph: 9513353841, Gadag: Chadha Hero, Ph: 8050041033, Dharwad: Bellad Hero, Ph: 9686204480, Haveri: Bahaddur Desai Hero, Ph: 9513353869, Sirsi: Shakti Hero, Ph: 07947044457, Ballari: Annapoorna Hero, Ph: 9513353843, Hospet: Annapoorna Automotives, Ph: 9606214399, Koppal: Vijaya Hero, Ph: 9513353855, Sindhanoor: Anand Hero, Ph: 9513353907, Raichur: Sri Venkkateshwara Hero, Ph: 9513353896, Mysore: Dyuthi Hero, Ph: 9513353875, Shah Hero, Ph: 9513353904, Bannimantap: Dyuthi Hero, Ph: 9916993000, Mandya: Dayanand Hero, Ph: 9513353874, Chamarajnagar: Yepiyes Hero, Ph: 9513353868, Hassan: Sree Venkateshwara Hero, Ph: 9513353901, Chikmagalur: Nayana Hero, Ph: 9513353804, Kalaburagi: Sri Venkatesh Hero, Ph: 9513353872, Jewargi Road: Venkatesh Hero, Ph: 9900997558, Bidar: Kailash Hero, Ph: 9513353863, Yadgir: Sri Venkatesh Hero, Ph: 9513353828, Chitradurga: Mahesh Hero, Ph: 9513353805, Davanagere: Rutvi Hero, Ph: 9513353837, Prakasha Hero, Ph: 9513353836, Shivamogga: Sree Karthik Hero, Ph: 9513353806, Mythri Hero, Ph: 9513353866, Sagar: Prajwal Hero, Ph: 9513353889, Mangaluru: West Coast Hero, Ph: 9513353898, Tribhuvan Hero, Ph: 9513353862, Belagavi: Nagshanti Hero, Ph: 9513353821, Nagshanti - 2 Unit, Ph. 9741888201, Chikodi: Shree Renuka Hero, Ph: 9513353812, Gokak: Chinmay Hero, Ph: 9513353848, Bagalkote: Chinmay Hero, Ph: 9513353829, Vijayapur: Vijay Hero, Ph: 9513353886. Sindagi: Jogur Hero, Ph: 9513353883, Mudhol: Kumar Hero, Ph: 9513353876.

ಟ್ರಸ್ಟ್‌ಗೆ ಮೈಸೂರು ಲ್ಯಾಂಪ್ಸ್ ವರ್ಕ್ಸ್ ಸಂಸ್ಥೆ ಆಸ್ತಿ ವರ್ಗಾವಣೆ ವಿಚಾರ: ಪರಿಷತ್‌ನಲ್ಲಿ ಬಿಸಿ ಚರ್ಚೆ

‘ಸಿಎಂ, ಸಿಎಸ್ ಜೊತೆ ಚರ್ಚಿಸಿ ತೀರ್ಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಲ್ಲೇಶ್ವರದಲ್ಲಿರುವ ಮೈಸೂರು ಲ್ಯಾಂಪ್ಸ್ ವರ್ಕ್ಸ್ ಸಂಸ್ಥೆಯ ಆಸ್ತಿಗಳನ್ನು ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಟ್ರಸ್ಟ್‌ಗೆ ವರ್ಗಾಯಿಸುವ ಕುರಿತಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಮುಖ್ಯ ಕಾರ್ಯದರ್ಶಿ ಜೊತೆ ಚರ್ಚಿಸಿದ ಬಳಿಕ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರಗೇಶ್ ನಿರಾಣಿ ತಿಳಿಸಿದರು.

ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಇರುವ ಸ್ಥಳದಲ್ಲಿ ‘ಎಕ್ಸ್‌ಪೀರಿಯನ್ಸ್ ಬೆಂಗಳೂರು’ ಯೋಜನೆ ಅನುಷ್ಠಾನಗೊಳಿಸಲು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಏಳು ಮಂದಿ ಐಎಎಸ್ ಅಧಿಕಾರಿಗಳು ಮತ್ತು ಐವರು ಖಾಸಗಿ ವ್ಯಕ್ತಿಗಳನ್ನು ಒಳಗೊಂಡ ಟ್ರಸ್ಟ್‌ಗೆ ವರ್ಗಾಯಿಸುವ ಕುರಿತ ವಿಷಯ ವಿಧಾನ ಪರಿಷತ್‌ನಲ್ಲಿ ಬಿಸಿಯೇರಿದ ಚರ್ಚೆಗೆ ವಸ್ತುವಾಯಿತು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಜೆಡಿಎಸ್‌ನ ಶ್ರೀಕಂಠೇಗೌಡ ಮತ್ತು ಭೋಜೇಗೌಡ ಮತ್ತು ಬಿಜೆಪಿಯ ತೇಜಸ್ವಿನಿಗೌಡ, ಮೈಸೂರು ಲ್ಯಾಂಪ್ಸ್ ವರ್ಕ್ಸ್ ಸಂಸ್ಥೆಯ ಆಸ್ತಿಯನ್ನು ಟ್ರಸ್ಟ್‌ಗೆ ನೀಡುವ ಸರ್ಕಾರದ ನಿಲುವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಅದಕ್ಕೆ ನಿರಾಣಿ, ‘ಈ ಯೋಜನೆ ಮಾಡುವ ವಿಚಾರದಲ್ಲಿ ನನಗೆ ಸ್ವಾರ್ಥವೂ ಇಲ್ಲ. ಪ್ರತಿಷ್ಠೆಯೂ ಇಲ್ಲ. ವೀರಾವೇಷದಿಂದ, ಭಾವನಾತ್ಮಕವಾಗಿ ಯಾರೂ ಮಾತನಾಡುವ ಅಗತ್ಯವೂ ಇಲ್ಲ’ ಎಂದರು.

‘ಎನ್‌ಜಿಇಎಫ್‌ನಲ್ಲಿರುವ ಸ್ಥಳದಲ್ಲಿ 105 ಎಕರೆ ಜಮೀನಿನಲ್ಲಿ ಸಿಂಗಪುರ ಮಾದರಿಯಲ್ಲಿ ಗ್ರೀನ್ ಎಕ್ಸ್‌ಪೋ ನಿರ್ಮಿಸಲಾಗುವುದು. ಆ ಮೂಲಕ, ಪರಿಸರಸ್ನೇಹಿ ತಂತ್ರಜ್ಞಾನ, ಸಾರಿಗೆ ಹಸಿರು ಮೂಲಸೌಕರ್ಯ ಮತ್ತು ಹಸಿರು ನವೋದ್ಯಮಗಳ ಪ್ರಾತ್ಯಕ್ಷಿಕೆ ನೀಡಲು ಬಳಕೆ ಮಾಡಿಕೊಳ್ಳಲಾಗುವುದು’ ಎಂದು ವಿವರಿಸಿದರು.

ಶ್ರೀಕಂಠೇಗೌಡ ಮಾತನಾಡಿ, ‘ಮೈಸೂರು ಲ್ಯಾಂಪ್ಸ್‌ಗೆ ಸೇರಿದ ಸುಮಾರು ನೂರಾರು ಕೋಟಿ ಮೌಲ್ಯದ 21 ಎಕರೆ ಜಮೀನು ಮತ್ತು ಕಟ್ಟಡಗಳನ್ನು ಎಕ್ಸ್‌ಪೀರಿಯನ್ಸ್ ಬೆಂಗಳೂರು ಯೋಜನೆಗಾಗಿ ಟ್ರಸ್ಟ್‌ಗೆ ನೀಡಲು ಸರ್ಕಾರ ಮುಂದಾಗಿದೆ. ಅಲ್ಲದೆ, ಈ ಆಸ್ತಿಗಳನ್ನು ಅಡವಿಟ್ಟು ಸಾಲ ಪಡೆಯುವುದು, ಮಾರಾಟ ಮಾಡುವುದಕ್ಕೆ ಟ್ರಸ್ಟ್‌ಗೆ ಅವಕಾಶ ನೀಡಲಾಗಿದೆ. ಜತೆಗೆ, ಟ್ರಸ್ಟ್‌ಗೆ ಮುಖ್ಯ ಕಾರ್ಯದರ್ಶಿ ಸೇರಿದಂತೆ ಏಳು ಮಂದಿ ಐಎಎಸ್ ಅಧಿಕಾರಿಗಳು ಮತ್ತು ಐದು ಮಂದಿ ಖಾಸಗಿ ವ್ಯಕ್ತಿಗಳನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ. ಈ ಅಂಶ ಜಮೀನನ್ನು ಕಬಳಿಸುವ ಹುನ್ನಾರ. ಆದ್ದರಿಂದ ಸರ್ಕಾರದ ಬಳಿಯಲ್ಲೇ ಜಮೀನು ಉಳಿಸಿಕೊಂಡು ವೈದ್ಯಕೀಯ ಕಾಲೇಜು ನಿರ್ಮಿಸಬೇಕು’ ಎಂದು ಆಗ್ರಹಿಸಿದರು.

ಅದಕ್ಕೆ ಧ್ವನಿಗೂಡಿಸಿದ ಬಿ.ಕೆ. ಹರಿಪ್ರಸಾದ್, ‘ಸರ್ಕಾರದ ಈ ನಿರ್ಧಾರದ ಹಿಂದೆ ದುರುದ್ದೇಶ ಅಡಗಿದೆ. ಮೈಸೂರು ಮಹಾರಾಜರಿಂದ ಬಂದಿರುವ ಈ ಆಸ್ತಿಯನ್ನು ಟ್ರಸ್ಟ್‌ಗೆ ನೀಡುವುದು ಸೂಕ್ತವಲ್ಲ. ಸರ್ಕಾರದಿಂದ ಟ್ರಸ್ಟ್‌ಗಳಿಗೆ ಈಗಾಗಲೇ ಹೋಗಿರುವ ಜಮೀನುಗಳನ್ನು ಮರಳಿ ಪಡೆಯಲು ಸಾಧ್ಯವಾಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಈ ಸ್ಥಳವನ್ನು ಟಾಟಾ ಇನ್‌ಸ್ಟಿಟ್ಯೂಟ್‌ಗೆ ವಹಿಸಬಹುದು ಅಥವಾ ಆ ಸ್ಥಳದಲ್ಲಿ ಏಮ್ಸ್ ಮಾದರಿಯಲ್ಲಿ ಆಸ್ಪತ್ರೆ ನಿರ್ಮಿಸುವುದು ಸೂಕ್ತ’ ಎಂದು ಸಲಹೆ ನೀಡಿದರು.

ನಿರಾಣಿ– ತೇಜಸ್ವಿನಿ ಗೌಡ ವಾಗ್ವಾದ

‘ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಸ್ಥಳವನ್ನು ಟ್ರಸ್ಟ್‌ಗೆ ವರ್ಗಾಯಿಸುವ ವಿಚಾರದಲ್ಲಿ ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಸೂಕ್ತ ಅಧ್ಯಯನ ನಡೆಸದೆ ವೀರಾವೇಷದಿಂದ ಮಾತನಾಡುವ ಅಗತ್ಯ ಇಲ್ಲ’ ಎಂದು ಸಚಿವ ಮುರಗೇಶ್ ನಿರಾಣಿ ಅವರು ಬಿಜೆಪಿಯ ತೇಜಸ್ವಿನಿಗೌಡ ಅವರನ್ನು ಉದ್ದೇಶಿಸಿ ಹೇಳಿದರು. ಇದರಿಂದ ತೀವ್ರ ಆಕ್ರೋಶಗೊಂಡ ತೇಜಸ್ವಿನಿ ಗೌಡ, ‘ವೀರಾವೇಷದಿಂದ ಮಾತನಾಡಲು ನಾನೇನು ರಾಣಿ ಚೆನ್ನಮ್ಮನೂ ಅಲ್ಲ. ಒನಕೆ ಓಬವ್ವನೂ ಅಲ್ಲ. ಸುತ್ತಿ ಬಳಸಿ ಮಾತನಾಡುವುದು ನನಗೂ ಬರುತ್ತದೆ. ಶಾಸಕರು ಮತ್ತು ಸರ್ಕಾರ ನನ್ನನ್ನು ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿದೆ. ಇಲ್ಲಿ ಮಾತನಾಡುವುದು ನನ್ನ ಹಕ್ಕು. ಅದನ್ನು ಕಿತ್ತುಕೊಳ್ಳುವುದಕ್ಕೆ ಯಾರಿಗೂ ಸಾಧ್ಯ ಇಲ್ಲ. ಇದೊಂದು ಕೆಟ್ಟ ಚಿಂತನೆಯಿಂದ ಕೂಡಿದ ಮನಸ್ಥಿತಿ’ ಎಂದರು. ಆಗ ಮಧ್ಯಪ್ರವೇಶಿದ ಸಭಾಪತಿ ಬಸವರಾಜ ಹೊರಟ್ಟಿ, ಇಬ್ಬರನ್ನೂ ಸಮಾಧಾನಪಡಿಸಿದರು.

ವಿಧಾನ ಮಂಡಲದಲ್ಲಿ

ಸಾರಿಗೆ ನಿಗಮ: ಕನಿಷ್ಠ ₹ 7,500 ಪಿಂಚಣಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನಿವೃತ್ತ ಪಿಂಚಣಿದಾರರಿಗೆ ಕನಿಷ್ಠ ₹ 7,500 ಪಿಂಚಣಿ ಹಾಗೂ ತುಟ್ಟಿಭತ್ಯೆ ನಿಗದಿಪಡಿಸಬೇಕು’ ಎಂದು ಆಗ್ರಹಿಸಿ ‘ಬೆಂಗಳೂರು ಮಹಾನಗರ ಸಾರಿಗೆ ಮತ್ತು ಕರ್ನಾಟಕ ರಾಜ್ಯ ಸಾರಿಗೆ ನಿವೃತ್ತ ನೌಕರರ ಸಂಘ’ ನೇತೃತ್ವದಲ್ಲಿ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯಲ್ಲಿ ನಿವೃತ್ತ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿಭಟನೆ ಬಳಿಕ ಕೇಂದ್ರೀಯ ಭವಿಷ್ಯನಿಧಿ ಮಂಡಳಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿದ ಸಂಘದ ಪದಾಧಿಕಾರಿಗಳು, ‘ಮಾ. 11ರಂದು ಗುವಾಹಟಿಯಲ್ಲಿ ಜರುಗುವ ಸಿಬಿಟಿ ಸಭೆಯಲ್ಲಿ ಕನಿಷ್ಠ ಪಿಂಚಣಿ ನಿಗದಿ ವಿಚಾರ ಪ್ರಸ್ತಾಪಿಸಬೇಕು. ನಿವೃತ್ತರಿಗೆ ನ್ಯಾಯ ಒದಗಿಸಬೇಕು’ ಎಂದು ಕೋರಿದ್ದಾರೆ.

‘ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ವಾಯುವ್ಯ ಹಾಗೂ ಈಶಾನ್ಯ ಕರ್ನಾಟಕ ಸಾರಿಗೆ ನಿಗಮಗಳಲ್ಲಿ ಕೆಲಸ ಮಾಡಿ ನಿವೃತ್ತರಾದ 60 ಸಾವಿರ ಪಿಂಚಣಿದಾರರು ರಾಜ್ಯದಲ್ಲಿದ್ದಾರೆ. ಇವರೆಲ್ಲ ಸದ್ಯ ₹ 1,000ರಿಂದ ₹ 3,000 ಪಿಂಚಣಿ ಮಾತ್ರ ಪಡೆಯುತ್ತಿದ್ದಾರೆ. ಕಡಿಮೆ ಪಿಂಚಣಿಯಿಂದಾಗಿ ಜೀವನ ನಡೆಸುವುದು ಕಷ್ಟವಾಗಿದೆ. ಮುಪ್ಪಿನ ಕಾಲದಲ್ಲಿ ಆರೋಗ್ಯ ಸಮಸ್ಯೆಗಳು ಎದುರಾಗುತ್ತಿದ್ದು, ಅದರ ಚಿಕಿತ್ಸೆಗೂ ನಿವೃತ್ತರು ಪರದಾಡುವಂತಾಗಿದೆ’ ಎಂದು ಮನವಿಯಲ್ಲಿ ತಿಳಿಸಲಾಗಿದೆ.

‘ನಿವೃತ್ತರಿಗೆ ಹೆಚ್ಚುವರಿ ಪಿಂಚಣಿ ನೀಡುವಂತೆ ಸುಪ್ರೀಂಕೋರ್ಟ್ ಸಹ ಹೇಳಿದೆ. ಅದರನ್ವಯ ನಿವೃತ್ತರಿಗೆ ಕನಿಷ್ಠ ₹ 7,500 ಪಿಂಚಣಿ ಹಾಗೂ ತುಟ್ಟಿಭತ್ಯೆ ನೀಡಬೇಕು. ವೈದ್ಯಕೀಯ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಬೇಕು’ ಎಂದೂ ಮನವಿಯಲ್ಲಿ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

‘ಸಾರಿಗೆ ನಿಗಮಗಳ ನಿವೃತ್ತ ಪಿಂಚಣಿದಾರರಿಗೆ ಕನಿಷ್ಠ 7,500 ಪಿಂಚಣಿ ನಿಗದಿಪಡಿಸಬೇಕು’ ಎಂದು ಒತ್ತಾಯಿಸಿ ‘ಬೆಂಗಳೂರು ಮಹಾನಗರ ಸಾರಿಗೆ ಮತ್ತು ಕರ್ನಾಟಕ ರಾಜ್ಯ ಸಾರಿಗೆ ನಿವೃತ್ತ ನೌಕರರ ಸಂಘ’ದ ಪದಾಧಿಕಾರಿಗಳು ಕೇಂದ್ರೀಯ ಭವಿಷ್ಯನಿಧಿ ಮಂಡಳಿ ಅಧ್ಯಕ್ಷರಿಗೆ ಮನವಿ ಪತ್ರ ಸಲ್ಲಿಸಿದರು

₹ 40 ಸಾವಿರಕ್ಕೆ ನಕಲಿ ಅಂಕಪಟ್ಟಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಅಂಕಪಟ್ಟಿ ತಯಾರಿಸಿ ಮಾರುತ್ತಿದ್ದ ಜಾಲವನ್ನು ಜಯನಗರ ಪೊಲೀಸರು ಭೇದಿಸಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಜೆ. ರಘು (34), ಜಿ. ಧರ್ಮಕುಮಾರ್ (39), ಜೆ. ದೀಪಕ್ (32) ಹಾಗೂ ಸಿ. ನರೇಶ್ ರೆಡ್ಡಿ (37) ಬಂಧಿತರು. ಇವರಿಂದ 200 ನಕಲಿ ಅಂಕಪಟ್ಟಿಗಳು ಹಾಗೂ ₹ 4.60 ಲಕ್ಷ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೇಶದ ವಿವಿಧ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ನಕಲಿ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು ಆರೋಪಿಗಳು ತಯಾರಿಸುತ್ತಿದ್ದರು. ಜಯನಗರದ ಮೂರನೇ ಹಂತದ ಕಾಲೇಜೊಂದರ ಬಳಿ ನಿಂತಿದ್ದ ಆರೋಪಿಯೊಬ್ಬ, ರಸ್ತೆಯಲ್ಲಿ ಓಡಾಡುವ ವಿದ್ಯಾರ್ಥಿಗಳನ್ನು ತಡೆದು ಮಾತನಾಡಿಸುತ್ತಿದ್ದ.’

‘ಕಾಲೇಜಿಗೆ ಹೋಗದೇ ಅಂಕಪಟ್ಟಿ ನೀಡುವುದಾಗಿ ಆರೋಪಿ ಆಮಿಷವೊಡ್ಡುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಯಿತು’ ಎಂದರು.

₹ 40 ಸಾವಿರಕ್ಕೆ ಮಾರಾಟ: ‘ಕಂಪ್ಯೂಟರ್, ಪ್ರಿಂಟರ್ ಹಾಗೂ ಇತರೆ ತಾಂತ್ರಿಕ ಸಾಧನಗಳನ್ನು ಹೊಂದಿದ್ದ ಆರೋಪಿಗಳು, ಅದರ ಮೂಲಕ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರ ತಯಾರಿಸುತ್ತಿದ್ದರು. ಒಂದು ಅಂಕಪಟ್ಟಿ ಅಥವಾ ಪ್ರಮಾಣಪತ್ರವನ್ನು ₹ 20 ಸಾವಿರದಿಂದ ₹ 40 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು’ ಎಂದರು.

‘ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಕಲ್ ಸೈನ್ಸ್, ಡಾ. ಸಿ.ವಿ.ರಾಮನ್ ವಿಶ್ವವಿದ್ಯಾಲಯ, ರವೀಂದ್ರನಾಥ್ ಠಾಗೂರ್ ವಿಶ್ವವಿದ್ಯಾಲಯದ ಎಲ್ಲ ಕೋರ್ಸ್‌ಗಳ ಅಂಕಪಟ್ಟಿಗಳು ಆರೋಪಿಗಳ ಬಳಿ ಸಿಕ್ಕಿವೆ. ಇವುಗಳನ್ನು ಬಳಸಿ ಕೆಲ ಅಭ್ಯರ್ಥಿಗಳು, ಕೆಲಸ ಗಿಟ್ಟಿಸಿಕೊಂಡಿರುವುದು ಗೊತ್ತಾಗಿದೆ’ ಎಂದರು.

ಹಣ ನೀಡದಿದ್ದಕ್ಕೆ ಮಗನ ಅಪಹರಣ

ಬೆಂಗಳೂರು: ತಾವು ಕೇಳಿದಾಗಲೆಲ್ಲ ಹಣ ನೀಡಲಿಲ್ಲವೆಂಬ ಕಾರಣಕ್ಕೆ ವ್ಯಕ್ತಿಯೊಬ್ಬರ ಮಗನನ್ನು ಅಪಹರಿಸಿ ಕೊಲೆ ಬೆದರಿಕೆಯೊಡ್ಡಿದ್ದ ಮೂವರು ಆರೋಪಿಗಳನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

ಸ್ಥಳೀಯ ನಿವಾಸಿಗಳಾದ ಜಿ. ರವಿ (46), ಆರ್. ಮಾದೇಶ್ (24) ಹಾಗೂ ಆರ್. ಶ್ರೀನಿವಾಸ್ (20) ಬಂಧಿತರು. ‘ಆರೋಪಿ ಜಿ. ರವಿ, ವಿದ್ಯಾರಣ್ಯಪುರದಲ್ಲಿ ವಾಸವಿರುವ ಪರಿಚಯಸ್ಥ ವ್ಯಕ್ತಿಯೊಬ್ಬರ ಬಳಿ ಆಗಾಗ ಹಣ ಕೇಳುತ್ತಿದ್ದ. ಹಣ ನೀಡಲು ವ್ಯಕ್ತಿ ನಿರಾಕರಿಸುತ್ತಿದ್ದರು. ಇದರಿಂದ ಸಿಟ್ಟಾದ ರವಿ, ಸಹಚರರ ಜೊತೆ ಸೇರಿ ವ್ಯಕ್ತಿಯ ಮಗನನ್ನು ಮಾ. 6ರಂದು ಅಪಹರಣ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

‘ಬಾಲಕನನ್ನು ಅಕ್ರಮ ಬಂಧನದಲ್ಲಿಟ್ಟು ಪೋಷಕರಿಗೆ ಕರೆ ಮಾಡಿದ್ದ ಆರೋಪಿಗಳು, ₹ 7 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದರು. ಹಣ ಕೊಡದಿದ್ದರೆ ಮಗನನ್ನು ಕೊಲ್ಲುವುದಾಗಿ ಬೆದರಿಸಿದ್ದರು. ಗಾಬರಿಗೊಂಡ ಪೋಷಕರು, ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಾದ 12 ಗಂಟೆಯೊಳಗೆ ಆರೋಪಿಗಳನ್ನು ಪತ್ತೆ ಮಾಡಿ, ಬಾಲಕನನ್ನು ರಕ್ಷಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಗಾಂಜಾ: ‘ಟೈಗರ್’ ಸೇರಿ ಇಬ್ಬರ ಬಂಧನ

ಬೆಂಗಳೂರು: ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಶೇಖ್ ಸಲ್ಮಾನ್ ಅಲಿಯಾಸ್ ಟೈಗರ್ (29) ಹಾಗೂ ಶೇಖ್ ಅಲಿ (47) ಬಂಧಿತರು. ಅವರಿಂದ 850 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ಸಿಂಗಾಪುರ ಕೆರೆ ಬಳಿಯ ಸ್ಮಶಾನದ ಬಳಿ ನಿಂತಿದ್ದ ಆರೋಪಿಗಳು, ಗಾಂಜಾ ಪೊಟ್ಟಣಗಳನ್ನು ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಅವರಿಬ್ಬರನ್ನು ಬಂಧಿಸಲಾಯಿತು.’ ಎಂದರು.

‘ಅಬು ಸಲೇಮ್ ಹಸ್ತಾಂತರ: ಭರವಸೆಯ ಬದ್ಧತೆ– ಸ್ಪಷ್ಟನೆ ನೀಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭೂಗತ ಪಾತಕಿ ಅಬು ಸಲೇಮ್ ಹಸ್ತಾಂತರದ ಸಂದರ್ಭ ಪೋರ್ಚುಗಲ್ ಸರ್ಕಾರಕ್ಕೆ ನೀಡಿರುವ ಭರವಸೆಗೆ ಬದ್ಧವಾಗಿರುವ ಬಗ್ಗೆ ಏಪ್ರಿಲ್ 12ರೊಳಗೆ ಹೇಳಿಕೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಅಬು ಸಲೇಮ್‌ನನ್ನು 25 ವರ್ಷಕ್ಕಿಂತ ಹೆಚ್ಚು ಅವಧಿಗೆ ಕಾರಾಗೃಹದಲ್ಲಿ ಇರಿಸುವುದಿಲ್ಲ ಎಂದು ಪೋರ್ಚುಗಲ್ ಸರ್ಕಾರಕ್ಕೆ ನೀಡಿರುವ ಭರವಸೆಯನ್ನು ಈಡೇರಿಸದೇ ಇರುವುದು ಗಂಭೀರ ಪರಿಣಾಮಕ್ಕೆ ದಾರಿ ಮಾಡಿಕೊಡುವ ಸಾಧ್ಯತೆ ಇದೆ. ಅಲ್ಲದೆ, ಇತರ ದೇಶಗಳಿಗೆ ಪರಾರಿಯಾಗಿರುವ ಪಾತಕಿಗಳ ಹಸ್ತಾಂತರಕ್ಕೂ ಸಮಸ್ಯೆ ಆಗಬಹುದು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಎಂ.ಎಂ. ಸುಂದರೇಶ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿದೆ.

‘ಈ ಬಗ್ಗೆ ಸಿಬಿಐ ಸಲ್ಲಿಸಿರುವ ಪ್ರತಿಕ್ರಿಯೆ ಸೂಕ್ತವಾಗಿಲ್ಲ. ಈ ಸಂಬಂಧ ಕೇಂದ್ರ ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳಲು ಕಾಯುತ್ತಿರುವಂತೆ ತೋರುತ್ತಿದೆ’ ಎಂದ ಪೀಠ, ‘ನೀವು ಅಂತರರಾಷ್ಟ್ರೀಯ ಒಪ್ಪಂದಕ್ಕೆ ಬದ್ಧವಾಗಿಲ್ಲ ಎಂದು ಹೇಳಲು ಬಯಸುವಿರಾ’ ಎಂದು ಕೇಂದ್ರದ ಗೃಹ ಕಾರ್ಯದರ್ಶಿಯವರನ್ನು ಪ್ರಶ್ನಿಸಿತು.

ಆರೋಪಿಯನ್ನು 25 ವರ್ಷಗಳ ನಂತರ ಜೈಲಿನಲ್ಲಿ ಇರಿಸುವುದಿಲ್ಲ ಹಾಗೂ ಗಲ್ಲು ಶಿಕ್ಷೆಗೆ ಗುರಿಪಡಿಸುವುದಿಲ್ಲ ಎಂದು 2002ರಲ್ಲಿ ಹಸ್ತಾಂತರ ಪ್ರಕ್ರಿಯೆ ನಡೆದಾಗ ಗೃಹ ಸಚಿವರಾಗಿದ್ದ ಎಲ್.ಕೆ. ಅಡ್ವಾಣಿ ಅವರು ಪೋರ್ಚುಗಲ್ ಸರ್ಕಾರಕ್ಕೆ ಭರವಸೆ ನೀಡಿದ್ದರು.

1993ರ ಮುಂಬೈ ಸ್ಫೋಟ ಪ್ರಕರಣದಲ್ಲಿ ಆರೋಪಿಯಾಗಿದ್ದ ಅಬು ಸಲೇಮ್, ಪೋರ್ಚುಗಲ್‌ಗೆ ಪರಾರಿಯಾಗಿದ್ದ. 2005ರ ನವೆಂಬರ್‌ನಲ್ಲಿ ಆತನನ್ನು ಅಲ್ಲಿನ ಸರ್ಕಾರ ಭಾರತಕ್ಕೆ ಹಸ್ತಾಂತರಿಸಿತ್ತು. ನಂತರ ವಿಚಾರಣೆಗೆ ಒಳಪಡಿಸಿರುವ ನ್ಯಾಯಾಲಯ ಜೀವಾವಧಿ ಶಿಕ್ಷೆಗೆ ಒಳಪಡಿಸಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಹಣಕಾಸಿನ ವಿಚಾರ: ವ್ಯಕ್ತಿಗೆ ಇರಿತ

ಶಿವಮೊಗ್ಗ: ಹಣಕಾಸಿನ ವಿಚಾರಕ್ಕೆ ಮಂಗಳವಾರ ರಾತ್ರಿ ಮುಸ್ಲಿಂ ಸಮುದಾಯದ ಇಬ್ಬರ ಮಧ್ಯೆ ನಡೆದ ಜಗಳ ತಾರಕ್ಕೇರಿ ಒಬ್ಬರಿಗೆ ಚಾಕುವಿನಿಂದ ಇರಿಯಲಾಗಿದೆ.

ಶಂಕರ್ ಮಠ ರಸ್ತೆಯ ಟಾಟಾ ಶೋ ರೂಂ ಹತ್ತಿರ ಬಾಪೂಜಿನಗರದ ಪಾಚಾ ಖಾನ್ ಮತ್ತು ಆರ್.ಎಂ.ಎಲ್. ನಗರದ ದಸ್ತಗಿರ್ ಮಧ್ಯೆ ಹಣಕಾಸಿನ ವಿಚಾರಕ್ಕೆ ಜಗಳ ನಡೆದಿದೆ. ಪಾಚಾ ಖಾನ್‌ಗೆ ದಸ್ತಗಿರ್ ಚಾಕುವಿನಿಂದ ಇರಿದಿದ್ದಾನೆ. ತಕ್ಷಣ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

KEA

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.
ದೂರವಾಣಿ: 080–23460460 । ಫ್ಯಾಕ್ಸ್: 080–23461576
ಇ–ಮೇಲ್: keauthority-ka@nic.in | ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2021 ದಿನಾಂಕ: 07.03.2022

ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇರ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು **ದಿನಾಂಕ: 12.03.2022 ರಿಂದ 16.03.2022ರ ವರೆಗೆ ಬೆಂಗಳೂರು ನಗರ, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಬೆಳಗಾವಿ ಮತ್ತು ಕಲಬುರ್ಗಿ** ಜಿಲ್ಲೆಗಳಲ್ಲಿ ಈಗಾಗಲೇ ಪ್ರಕಟಿಸಿರುವ ವೇಳಾಪಟ್ಟಿಯಂತೆ ನಡೆಸಲಾಗುವುದು. ಸದರಿ ಪರೀಕ್ಷೆಯನ್ನು ನ್ಯಾಯೋಚಿತವಾಗಿ ಹಾಗೂ ಪಾರದರ್ಶಕವಾಗಿ ನಡೆಸಲಾಗುವುದು. ಅಭ್ಯರ್ಥಿಗಳು ಯಾವುದೇ ವದಂತಿಗಳಿಗೆ ಕಿವಿ ಕೊಡಬಾರದು. ಸದರಿ ಪರೀಕ್ಷೆಯ ಬಗ್ಗೆ ಯಾವುದಾದರು ದೂರುಗಳಿದ್ದಲ್ಲಿ, ದೂರವಾಣಿ **ಸಂಖ್ಯೆ: 99015 81708** ಗೆ ಕರೆ ಮಾಡಿ ಅಥವಾ Whatsapp ಮೂಲಕ ತಿಳಿಸಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು.

ವಾಸಾಸಂಇ/ಬೆಂ.ನ/3670/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

₹ 500 ಕಸಿದುಕೊಳ್ಳಲು ಯತ್ನಿಸಿ ಕೊಂದ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸತೀಶ್ (42) ಎಂಬುವರ ಕೊಲೆ ಪ್ರಕರಣ ಸಂಬಂಧ, ಆರೋಪಿ ಪ್ರಭ ಅಲಿಯಾಸ್ ಸೆಬಾಸ್ಟಿನ್ (19) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಮದ್ದೂರು ತಾಲ್ಲೂಕಿನ ಕೊಪ್ಪದ ಸತೀಶ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಅವರನ್ನು ತಲೆ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿ ಫೆ. 24ರಂದು ರಾತ್ರಿ ಕೊಲೆ ಮಾಡಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಬಂಧಿತ ಆರೋಪಿ ಪ್ರಭ, ಪಾನಿಪುರಿ ಅಂಗಡಿಯೊಂದರಲ್ಲಿ ಪಾತ್ರೆ ತೊಳೆಯುವ ಕೆಲಸ ಮಾಡಿಕೊಂಡಿದ್ದ. ರಾತ್ರಿ ಕೆಲಸ ಮುಗಿಸಿಕೊಂಡು ಮನೆಯತ್ತ ಹೊರಟಿದ್ದಾಗ ಕೊಲೆ ಮಾಡಿ ಪರಾರಿಯಾಗಿದ್ದ. ಸ್ಥಳದಲ್ಲಿ ಸಿಕ್ಕ ಪುರಾವೆಗಳನ್ನು ಆಧರಿಸಿ ಆತನನ್ನು ಸೆರೆಹಿಡಿಯಲಾಗಿದೆ’ ಎಂದೂ ತಿಳಿಸಿದರು.

‘ಬಾರ್ ಆ್ಯಂಡ್ ರೆಸ್ಟೋರೆಂಟ್‌ವೊಂದರಲ್ಲಿ ಮದ್ಯ ಕುಡಿದಿದ್ದ ಸತೀಶ್. ಮದ್ಯದ ಅಮಲು ಹೆಚ್ಚಾಗಿದ್ದರಿಂದ ಬಾರ್ ಸಮೀಪದ ರಸ್ತೆಯಲ್ಲಿ ಕುಸಿದು ಬಿದ್ದಿದ್ದರು. ಅದೇ ಸ್ಥಳಕ್ಕೆ ಬಂದಿದ್ದ ಪ್ರಭ, ಸತೀಶ್ ಜೇಬಿನೊಳಗೆ ₹ 500 ನೋಟು ಹಾಗೂ ಕೀ ಪ್ಯಾಡ್ ಮೊಬೈಲ್ ನೋಡಿದ್ದ. ಅದನ್ನು ಕಿತ್ತುಕೊಳ್ಳಲು ಆರೋಪಿ ಯತ್ನಿಸಿದ್ದ. ಅದಕ್ಕೆ ಸತೀಶ್ ವಿರೋಧ ವ್ಯಕ್ತಪಡಿಸಿದ್ದರು.’

‘₹ 500 ನೋಟು ಹಾಗೂ ಮೊಬೈಲ್ ಕಸಿದುಕೊಳ್ಳಲು ಯತ್ನಿಸಿದ್ದ ಆರೋಪಿ, ಸಿಮೆಂಟ್ ಇಟ್ಟಿಗೆಯನ್ನು ಸತೀಶ್ ತಲೆ ಮೇಲೆ ಎತ್ತಿ ಹಾಕಿದ್ದ. ತೀವ್ರ ಪೆಟ್ಟು ಬಿದ್ದು ಸತೀಶ್ ಮೃತಪಟ್ಟಿದ್ದರು. ಹಣ ಹಾಗೂ ಮೊಬೈಲ್ ಸಮೇತ ಆರೋಪಿ ಪರಾರಿಯಾಗಿದ್ದ’ ಎಂದೂ ತಿಳಿಸಿದರು.



40 ಸಾವಿರ ದಾಟಿದ ಕೋವಿಡ್ ಮರಣ

ಬೆಂಗಳೂರು: ರಾಜ್ಯದಲ್ಲಿನ ಕೊರೊನಾ ಸೋಂಕಿತರಲ್ಲಿ 8 ಮಂದಿ ಸಾವಿಗೀಡಾಗಿರುವುದು ಮಂಗಳವಾರ ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 40 ಸಾವಿರದ (40,004) ದಾಟಿದೆ.

ಒಂದು ದಿನದ ಅವಧಿಯಲ್ಲಿ 41 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 197 ಹೊಸ ಪ್ರಕರಣಗಳು ಪತ್ತೆಯಾಗಿವೆ. ಸೋಂಕು ದೃಢ ಪ್ರಮಾಣ ಶೇ 0.47 ರಷ್ಟಿದೆ. ಬೆಂಗಳೂರಿನಲ್ಲಿ 130 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ ಒಂದಂಕಿಯಲ್ಲಿವೆ.

ಬೆಂಗಳೂರು ನಗರ ಜಿಲ್ಲಾ

ಕೋವಿಡ್ ಅಂಕಿ–ಅಂಶ

17,79,735	ಒಟ್ಟು ಸೋಂಕಿತರು (17,79,605 ನಿನ್ನೆಯ ವಿವರ)
2,308	ಸಕ್ರಿಯ ಪ್ರಕರಣಗಳು
17,60,489	ಗುಣಮುಖ ಆದವರು
16,937	ಒಟ್ಟು ಸಾವು

ದಿನದ ಮಾಹಿತಿ

ಹೊಸ ಪ್ರಕರಣ	130
ಗುಣಮುಖ	171
ಸಾವು	01

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಉದ್ಯೋಗ ವಾಣಿ

SJM VIDYAPEETHA (R)
BASAVESHWARA COLLEGE OF ALLIED HEALTH SCIENCES, CHITRADURGA
2021-22
RECRUITMENT NOTIFICATION FOR LECTURERS

Sl. No.	Qualification	Work Experience
1	B.Sc./M.Sc - Medical Laboratory Technology	0-5 Years
2	B.Sc./M.Sc - Imaging Technology	0-5 Years
3	B.Sc. Respiratory Care Technology	0-5 Years
4	B.Sc. Emergency Care Medicine	0-5 Years
5	B.Sc. Anaesthesiology / OT Technology	0-5 Years

- Apply within 7 days of this advertisements with relevant documents.
- Salary commensurate with qualification and years of experience.
- Need additional information following on www.bmch.edu.in
- Eligible candidates are requested to e-mail their CV and testimonials to secretarysjm@gmail.com / vidyapeetha.sjm@gmail.com / Contact: 7975952037 / 9740112011

B.M.S. EDUCATIONAL TRUST
Late Shri B. M. Sreenivasaiah Founder | Late Shri B. S. Narayan Donor Trustee
Applications are invited for the Post of
DIRECTOR (Administration)

BMS Educational Trust manages several highly reputed and accredited colleges in Bangalore. The Director(Admin) is a high level management post in the Trust. The responsibilities include management of the Trust matters, monitoring the implementation of the policies and programmes of the Trust by the constituent colleges, advice the colleges in administrative and governance functions, co-ordinate with statutory and official authorities.

The candidate should be in the age group of 45 to 55 years with outstanding leadership qualities & having minimum 15 years of work experience in a similar assignment. Knowledge of Kannada is essential. Remuneration and perks will be of high order.

Candidates may send their applications along with a detailed Bio-data and a list of three references Either by post or email

Donor Trustee & Member Secretary
BMS Educational Trust
Bull Temple Road, Bengaluru - 560019
by 25th March 2022

Ph : 080-26611636 email id: admin.bmset@bmsce.ac.in

ಪ್ರಜಾವಾಣಿ
ಉದ್ಯೋಗ ವಾಣಿ
ಉದ್ಯೋಗಾವಕಾಶ ಜಾಹೀರಾತಿಗಾಗಿ ಸಂಪರ್ಕಿಸಿ: Mob : 96069 12220

IKEA Bengaluru is now hiring.

© Inter IKEA Systems B.V. 2021

We're IKEA, the world's most loved home furnishing brand, and we are as passionate about our co-workers as we are about our customers. With a range of full-time positions, part-time options, and equal opportunities, you're all welcome here.
Hej Bengaluru, welcome to the IKEA way of working.

Apply now

Scan the QR code to know more

IKEA
Make Everyday Brighter

ಶೃಂಗೇರಿ, ನಾಪೋಕ್ಲುವಿನಲ್ಲಿ ಮಳೆ

ಶೃಂಗೇರಿ: ತಾಲ್ಲೂಕಿನಲ್ಲಿ ಮಂಗಳವಾರ ಸಂಜೆ 20 ನಿಮಿಷ ಸುರಿದ ಮಳೆಯಿಂದಾಗಿ ತಾಪಗೊಂಡಿದ್ದ ಇಳೆ ತಂಪಾಗಿದೆ. ತಾಲ್ಲೂಕಿನ ಕುಂಚೇಬೈಲ್, ಮೆಣಸೆ, ಶೃಂಗೇರಿ ಪಟ್ಟಣ, ತೆಕ್ಕೂರು, ಬೆಟ್ಟಗೆರೆ, ವೈಕುಂಠಪುರ ಮೊದಲಾದ ಕಡೆ ಉತ್ತಮ ಮಳೆಯಾಗಿದೆ.

ನಾಪೋಕ್ಲು ವರದಿ: ಪಟ್ಟಣ ವ್ಯಾಪ್ತಿಯಲ್ಲಿ ಸಂಜೆ ಸಾಧಾರಣ ಮಳೆ ಸುರಿದಿದೆ. ಮೊದಲ ಮಳೆಯ ನಿರೀಕ್ಷೆಯಲ್ಲಿದ್ದ ಕಾಫಿ ಬೆಳೆಗಾರರು ಸಂತಸಗೊಂಡಿದ್ದಾರೆ.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ : 5ನೇ ಮಹಡಿ, ಟಿಟಿಎಂಸಿ ಎ ಬ್ಲಾಕ್, ಬಿಎಂಟಿಸಿ ಬಿಲ್ಡಿಂಗ್, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಫೋನ್ : 080 – 22278813/14/15/16,
ಫ್ಯಾಕ್ಸ್ : 080–22213172 Website: www.ksmc.karnataka.gov.in

No. KSMCL\1167\Sand\Stock Yard Fencing\2021-22 Date: 07.03.2022

ಇ–ಟೆಂಡರ್ ಆಹ್ವಾನ

ಕೆಎಸ್‌ಎಂಸಿಎಲ್ ಇವರು ಕರ್ನಾಟಕ ರಾಜ್ಯದ ವಿವಿಧ ಸ್ಥಳಗಳಲ್ಲಿರುವ ಸ್ಯಾಂಡ್ ಸ್ಟಾಕ್ ಯಾರ್ಡ್‌ಗಳಿಗೆ ಫ್ಯಾಕ್ಟರ್ ಗಳನ್ನು ಒದಗಿಸಲು ಗುತ್ತಿಗೆದಾರರು/ಏಜೆನ್ಸಿಯ ಆಯ್ಕೆಗೆ ಇ–ಟೆಂಡರ್ ಅಧಿಸೂಚನೆ ನಂ. KSMCL/1167/Sand/Stock Yard Fencing/2021-22, ದಿನಾಂಕ 07.03.2022 ಪ್ರಕಾರ ಇ–ಟೆಂಡರ್‌ನ್ನು ಆಹ್ವಾನಿಸುತ್ತದೆ.

ವೇಳಾಪಟ್ಟಿ

(ಎ)	ಪ್ರಿ–ಬಿಡ್ ಮೀಟಿಂಗ್	14.03.2022, ಬೆಳಿಗ್ಗೆ 11.00 ಗಂಟೆಗೆ
(ಬಿ)	ಟೆಂಡರ್ ದಸ್ತಾವೇಜು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	23.03.2022, ಸಂಜೆ 5.00 ಗಂಟೆವರೆಗೆ
(ಸಿ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	25.03.2022, ಬೆಳಿಗ್ಗೆ 11.00 ಗಂಟೆಗೆ
(ಡಿ)	ಇ.ಎಂ.ಡಿ	ರೂ 1,81,000 (ರೂ. ಒಂದು ಲಕ್ಷದ ಎಂಬತ್ತೊಂದು ಸಾವಿರ ಮಾತ್ರ)

ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡುವುದು. ಹೆಚ್ಚಿನ ಸಹಾಯ ಮತ್ತು ನೋಂದಣಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–46010000/68948777, ಇ–ಮೇಲ್: support@eprochelpdesk.com ನ್ನು ಸಂಪರ್ಕಿಸಬಹುದು.
ಸಹಿ/–
ಪ್ರಧಾನ ವ್ಯವಸ್ಥಾಪಕರು (ಮರಳು)
DIPR/DDU/Zen/RO-3668/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ಕ್ರೀಚಪ್ರೋ/2021–22 ದಿನಾಂಕ: 07–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ – (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ಉಡುಪಿ ಜಿಲ್ಲಾ ವಿಜ್ಞಾನ ಕೇಂದ್ರಕ್ಕೆ ಉಪಕರಣಗಳನ್ನು ಸರಬರಾಜು ಮಾಡಲು.	ರೂ. 200.00 ಲಕ್ಷ	ರೂ. 3,00,000/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: http://eproc.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 14–03–2022ರಂದು ಸಮಯ: 16.30 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15–03–2022ರಂದು ಸಮಯ: 16.30 ಗಂಟೆಗೆ.
3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ಬೆಂ.ನ/ಅಡ್ವಟೋರ್/3664/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಎನ್.ಸಿ.ಡಿ ಘಟಕ
ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ ಮೆಗ್ಗಾನ್ ಆಸ್ಪತ್ರೆ ಆವರಣ, ತುಂಗಾ ವಿದ್ಯಾರ್ಥಿನಿ ವಸತಿ ನಿಲಯದ ಎದುರು, ಶಿವಮೊಗ್ಗ
ದೂರವಾಣಿ: 08182–220685
E-mail Id: ncdshivamogga1@gmail.com
ಜಿ.ಸ.ಕ.ಶಿ/ಸಂಖ್ಯೆ//2021–22 ದಿನಾಂಕ: 05–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಜಿಲ್ಲಾ ಆರೋಗ್ಯ ಸಂಘ 2021–22 ನೇ ಸಾಲಿಗೆ ಔಷಧೋಪಕರಣಗಳನ್ನು ಖರೀದಿಸುವ ಸಂಬಂಧ ಅಲ್ಪಾವಧಿ ಮರು E-Tender ಮುಖಾಂತರ ದ್ವಿಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ E-Tender ಆಹ್ವಾನಿಸಲಾಗಿದೆ.
1. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 06–03–2022 ರಿಂದ 2. ಟೆಂಡರ್ ಫಾರಂ ಅಪ್ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ:–15–03–2022 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ :– as on e-portal 4. ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ:– as on e-portal 5. ಟೆಂಡರ್ ಅಂದಾಜು ಮೊತ್ತ 58.45 ಲಕ್ಷ (ಜಿಎಸ್‌ಟಿ ಅಂದಾಜು ಸೇರಿದಂತೆ) ಟೆಂಡರ್ ಮೊತ್ತವನ್ನು ಹೆಚ್ಚಿಸುವ ಮತ್ತು ಕಡಿಮೆ ಮಾಡುವ ಹಾಗೂ ಟೆಂಡರ್ ಸ್ವೀಕರಿಸುವ & ತಿರಸ್ಕರಿಸುವ ಅಧಿಕಾರ ಜಿಲ್ಲಾ ಆರೋಗ್ಯ ಸಂಘದ ತೀರ್ಮಾನವಾಗಿರುತ್ತದೆ) ಇ.ಎಂ.ಡಿ. ರೂ. 1,75,000/– ಡಿ.ಡಿ. ಮೂಲಕ ಪಾವತಿಸುವುದು.
ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಶಿವಮೊಗ್ಗ ಇಲ್ಲಿಗೆ ಕಛೇರಿ ವೇಳೆ (08182–271282) ಸಂಪರ್ಕಿಸತಕ್ಕದ್ದು.
ಸಹಿ/– ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಜಿಲ್ಲಾ ಸಾಂಕ್ರಾಮಿಕ ರೋಗಗಳ ಕಣ್ಗಾವಲು ಘಟಕ, ಶಿವಮೊಗ್ಗ
ವಾ.ಸಾ.ಸಂ.ಇ/ಶಿ/ಸಂ–56/02/ಎಂಎಎ/21–22/1359

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.
ದೂರವಾಣಿ ಸಂಖ್ಯೆ: 080–22133370 ಫ್ಯಾಕ್ಸ್ ಸಂಖ್ಯೆ: 080–22133365
Email ID: eepwdbngdn@yahoo.com E-Portal : https://eproc.karnataka.gov.in
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 29/2021–22
ದಿನಾಂಕ: 07.03.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.1 ಉಪ ವಿಭಾಗ ತಾಲ್ಲೂಕಿಗೆ ಸಂಬಂಧಿಸಿದ 1 ಸಂಖ್ಯೆಯ (ರೂ. 172.00 ಲಕ್ಷಗಳ) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.
ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
1) ಟೆಂಡರ್ ದಾಖಲಾತಿಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸುವ ದಿನಾಂಕ: 07.03.2022 ರಿಂದ
2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿ: 14.03.2022 ಸಂಜೆ 4.00 ಗಂಟೆಯವರೆಗೆ.
3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 15.03.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.
DIPR/DDU/Zen/R.O:3654/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಂತರರಾಷ್ಟ್ರೀಯ ಚಲನಚಿತ್ರೋತ್ಸವ: 'ಸಿನಿಮಾದಲ್ಲಿ ಮಹಿಳೆಯರು' ಗೋಷ್ಠಿಯಲ್ಲಿ ನಟಿ ಸುಮನ್ ನಗರಕರ್ ಅಭಿಮತ

'ಸಮಾನ ಪ್ರಾಮುಖ್ಯ, ಸಂಭಾವನೆ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿನಿಮಾ ಕ್ಷೇತ್ರದಲ್ಲಿ ಮಧ್ಯವಯಸ್ಸಿನ ಮಹಿಳೆಯರು ಒಂದು ಬಿಡುವು ತೆಗೆದುಕೊಂಡು ಮತ್ತೆ ನಟನೆಗೆ ಮರಳಿದಾಗ, 'ಆಕೆ ತಾಯಿಯ ಪಾತ್ರಕ್ಕೆ ಸೀಮಿತ' ಎಂದು ಹಣೆಪಟ್ಟಿ ಕಟ್ಟುತ್ತಾರೆ. ಆದರೆ ನಾಯಕನಿಗೆ 60–70 ವರ್ಷವಾಗುವವರೆಗೂ ನಾಯಕನ ಪಾತ್ರವೇ ಸಿಗುತ್ತದೆ. ಇದು ಬದಲಾಗಬೇಕು. ಮಹಿಳೆಗೂ, ಆಕೆಯ ಪಾತ್ರಕ್ಕೂ ಅಷ್ಟೇ ಪ್ರಾಮುಖ್ಯ ಇರಬೇಕು. ಜೊತೆಗೆ ಸಮಾನ ವೇತನವೂ ಸಿಗಬೇಕು...'

ಹೀಗೆಂದು ಹೇಳಿದ್ದು ನಟಿ ಸುಮನ್ ನಗರಕರ್. 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಮಂಗಳವಾರ 'ಸಿನಿಮಾದಲ್ಲಿ ಮಹಿಳೆಯರು' ಎನ್ನುವ ಚರ್ಚಾಗೋಷ್ಠಿ ಏರ್ಪಡಿಸಲಾಗಿತ್ತು.

ಚರ್ಚೆಯಲ್ಲಿ ಮಾತನಾಡಿದ ನಟಿ ಸುಮನ್ ನಗರಕರ್, 'ಮಹಿಳೆಯರು ಐಟಂ ಸಾಂಗ್‌ಗೆ ಸೀಮಿತ ಎನ್ನುವ ಕಾಲ ಬಂದಿದೆ. ಮಹಿಳೆಯರು ವಸ್ತುವಲ್ಲ, ಅವರೂ ಮನುಷ್ಯರು. ಮಹಿಳೆಯರು ಇಂಥ ಕೆಲಸವನ್ನು ಮಾಡಲಾರರು ಎನ್ನುವ ಹಲವರು ಇನ್ನೂ ಚಿತ್ರರಂಗದಲ್ಲಿದ್ದಾರೆ. ಚಂದನವನದಲ್ಲಿ ಮೇಕಪ್ ಸಂಘದ ಗುರುತಿನ ಚೀಟಿಯು ಮಹಿಳೆಯರಿಗೆ ಸಿಗುತ್ತಿಲ್ಲ ಎನ್ನುವುದನ್ನೂ ಕೇಳಿದ್ದೇನೆ' ಎಂದರು.

ಛಾಯಾಗ್ರಾಹಕಿ ಪ್ರೀತಾ ಮಾತನಾಡಿ, 'ಪ್ರತಿಭೆ ವಿಚಾರದಲ್ಲಿ ಲಿಂಗ ತಾರತಮ್ಯ ಬದಲಾಗಬೇಕು. ನಿರ್ದೇಶಕರಾಗಲಿ ಅಥವಾ ನಿರ್ಮಾಪಕರು ಒಬ್ಬರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಪ್ರತಿಭೆಯನ್ನಷ್ಟೇ ನೋಡಬೇಕು. ಹೀಗಾಗದೇ ಇರುವುದು ಚಿತ್ರರಂಗದ ಹಲವು ವಿಭಾಗಗಳಲ್ಲಿ ಮಹಿಳೆಯ ಸಂಖ್ಯೆ ಕಡಿಮೆ ಇರುವುದಕ್ಕೆ ಕಾರಣ. ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರು ಇನ್ನಷ್ಟು ಮುಂದುವರಿಯಲು ಪುರುಷರ ಯೋಚನಾ ಕ್ರಮ ಬದಲಾಗಬೇಕು' ಎಂದು ಹೇಳಿದರು.

'ಸಿನಿಮಾದಲ್ಲಿ ಮಹಿಳೆಯರು' ಗೋಷ್ಠಿಯಲ್ಲಿ ವಸ್ತ್ರವಿನ್ಯಾಸಕಿ ಹಾಗೂ ನಿರ್ದೇಶಕಿ ರೋಹಿಣಿ, ಸಂಕಲನಕಾರ್ತಿ ಪ್ರೀತಿ ಮೋಹನ್, ನಟಿ ಹಾಗೂ ನಿರ್ಮಾಪಕಿ ಸುಮನ್ ನಗರಕರ್, ನಟಿ ಐಮಿ ಬರು, ಸೌಂಡ್ ಎಂಜಿನಿಯರ್ ಗೀತಾ ಮತ್ತು ಛಾಯಾಗ್ರಾಹಕಿ ಪ್ರೀತಾ –ಪ್ರಜಾವಾಣಿ ಚಿತ್ರ

ಸೌಂಡ್ ಎಂಜಿನಿಯರ್ ಗೀತಾ ಮಾತನಾಡಿ, 'ಇಂಥ ಚಿತ್ರೋತ್ಸವಗಳು ನಡೆದಾಗ ಚಿತ್ರರಂಗದಲ್ಲಿರುವ ಮಹಿಳೆಯರು ಒಂದೆಡೆ ಸೇರುತ್ತಾರೆ. ನಾವೇ ಜೊತೆಗೂಡಿ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಪುರುಷರು ಈ ಕೆಲಸವನ್ನು ಮಾಡುತ್ತಾರೆ. ಕಳೆದ 15 ವರ್ಷದಿಂದ ಸಿನಿಮಾ ಕ್ಷೇತ್ರದ ಎಲ್ಲ ವಿಭಾಗಗಳಲ್ಲೂ ಹೆಣ್ಣುಮಕ್ಕಳು ಬರುತ್ತಿದ್ದಾರೆ. ಆದರೆ ಮದುವೆಯಾದ ಮೇಲೆ ಈ ಕೆಲಸವನ್ನು ತೊರೆಯುತ್ತಿರುವುದು ಸರಿಯಲ್ಲ. ಈಗಿನ ಯುವಜನತೆಗೆ ತಾಳ್ಮೆ ಎಂಬುವುದೇ ಇಲ್ಲ' ಎಂದರು.

ಸಮಾನ ವೇತನದ ಕೂಗೂ ಚರ್ಚೆಯ ವೇಳೆ ಕೇಳಿಬಂತು. 'ಸಮಾನ ವೇತನಕ್ಕಾಗಿ ಏಕೆ ಹೋರಾಟ ಮಾಡಬೇಕು? ಸಮಾನ ಕೆಲಸ ಮಾಡಿ, ಮಹಿಳೆ ಎನ್ನುವ ಕಾರಣಕ್ಕಷ್ಟೇ ಕಡಿಮೆ ವೇತನ ಏಕೆ ಪಡೆಯಬೇಕು' ಎಂದು ಗೀತಾ ಪ್ರಶ್ನಿಸಿದರು. ಕೆಲವು ಪದಗಳ ಬಗ್ಗೆಯೂ ಗೋಷ್ಠಿಯಲ್ಲಿ ಚರ್ಚೆಯಾಯಿತು. 'ವುಮನ್ ಫಿಲ್ಮ್‌ಮೇಕರ್', 'ಕ್ಯಾಮೆರಾ ವುಮನ್ ಮೇಡಂ', 'ಆಕ್ಟ್ರೆಸ್', 'ಸಂಕಲನಕಾರ್ತಿ' ಹೀಗೇಕೆ ಕರೆಯಬೇಕು ಎನ್ನುವ ಪ್ರಶ್ನೆಗಳು ಎದ್ದವು.

ಸಂಕಲನಕಾರ್ತಿ ಪ್ರೀತಿ ಮೋಹನ್, ನಿರ್ದೇಶಕಿ ರೋಹಿಣಿ ದಿನಕರ್, ನಟಿಯರಾದ ಮಯೂರಿ ನಟರಾಜ್, ಸೀನ್ ಗುಪ್ತಾ ಹಾಗೂ ಐಮಿ ಬರು ಗೋಷ್ಠಿಯಲ್ಲಿದ್ದರು.

ಕೋರ್ಟ್ ಮೆಟ್ಟಿಲೇರಿದ ಕುಲಸಚಿವ

ಶಿವಮೊಗ್ಗ: ಪರೀಕ್ಷೆ ನಡೆಸದೇ ದೂರ ಶಿಕ್ಷಣ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಿದ್ದು, ನಂತರ ವರ್ಗಾವಣೆ ಆಗಿದ್ದ ಕುವೆಂಪು ವಿ.ವಿ ಪರೀಕ್ಷಾಂಗ ಕುಲಸಚಿವ ಸಿ.ಎಂ.ತ್ಯಾಗರಾಜ್ ಅವರು ಹೈಕೋರ್ಟ್ ಮೊರೆಹೋಗಿದ್ದಾರೆ. ಅವಧಿಗೆ ಮುನ್ನವೇ ವರ್ಗಾವಣೆ ಮಾಡಿರುವ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದಾರೆ. ಸರ್ಕಾರ, ವಿಶ್ವವಿದ್ಯಾಲಯದ ಆಡಳಿತ ಕುಲಸಚಿವೆ ಜಿ.ಅನುರಾಧಾ, ನೂತನ ಪರೀಕ್ಷಾಂಗ ಕುಲಸಚಿವ ಎಸ್.ಕೆ.ನವೀನ್‌ಕುಮಾರ್ ಅವರನ್ನು ಪ್ರತಿವಾದಿಯಾಗಿಸಿದ್ದಾರೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು–560 001. ದೂರವಾಣಿ ಸಂಖ್ಯೆ: +91–80–29619801
ಮಿಂಚ್ ಅಂಚೆ: md.ksmscl@gmail.com
No: HFW/KSMSCL/EQPT/CHEMI/26/21-22 (IND-826 Call-2) Date: 08/03/2022

ಟೆಂಡರ್ ಪ್ರಕಟಣೆ

ಉಲ್ಲೇಖ: 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/CHEMI/26/21-22 Dated: 08-03-2022 (IND-826 Call-2)
2. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/NPCB/EQPT/TND/44/21-22 Dated: 08-03-2022 (IND-859 Call-2)
ಇ–ಟೆಂಡರಿಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್‌ಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
1. NFDS ಕಾರ್ಯಕ್ರಮದ ಅಡಿಯಲ್ಲಿ Fully Automated Chemiluminesence Immuno Assay Analyzer ಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಕರೆಯುವ ಬಗ್ಗೆ. (IND-826 Call-2)
2. NPCB&VI ಕಾರ್ಯಕ್ರಮದ ಅಡಿಯಲ್ಲಿ Ophthalmic Equipments ಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಕರೆಯುವ ಬಗ್ಗೆ. (IND-859 Call-2)
ತಾಂತ್ರಿಕ ವಿವರಣೆ, ಇ.ಎಮ್.ಡಿ ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರಿಗ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ https://eproc.karnataka.gov.in ದಿನಾಂಕ: 08–03–2022 ರಿಂದ ಟೆಂಡರ್‌ಗಳ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.
DIPR/DDU/AAPL/RO3660/21-22

ಕೋವಿಡ್-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2021–22/7147 ದಿನಾಂಕ:07/03/2022

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಎಸ್.ಸಿ.ಪಿ ಅಡಿ 5 ಕಾಮಗಾರಿಗಳು ಲೆಕ್ಕ ಶೀರ್ಷಿಕೆ 3054–ರಾಜ್ಯ ಹೆದ್ದಾರಿ ನಿರ್ವಹಣೆ ಅಡಿ 1 ಕಾಮಗಾರಿ, ಲೆಕ್ಕ ಶೀರ್ಷಿಕೆ 3054–ಜಿ.ಮು.ರ. ನಿರ್ವಹಣೆ (ಅತಿವೃಷ್ಟಿ) ಅಡಿ 2 ಕಾಮಗಾರಿಗಳು ಹಾಗೂ ಲೆಕ್ಕ ಶೀರ್ಷಿಕೆ 3054–ಜಿ.ಮು.ರ. ನಿರ್ವಹಣೆ ಅಡಿ 1 ಕಾಮಗಾರಿ. ಹೀಗೆ ಒಟ್ಟು 9 ಕಾಮಗಾರಿಗಳನ್ನು ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 8.77 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 87.72 ಲಕ್ಷ ಇರುತ್ತದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:14–03–2022(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:16–03–2022 (ಸಾಯಂಕಾಲ 5.00 ಗಂಟೆಯವರೆಗೆ), 3)ಹಣಕಾಸು ಬಿಡ್ಡನ್ನು ತೆರೆಯುವ ದಿನಾಂಕ (Single Cover System):18–03–2022 (ಸಾಯಂಕಾಲ 4.30 ಗಂಟೆಗೆ), 4)ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (Two Cover System): 18–03–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್ಡನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳನ್ನು ಗುತ್ತಿಗೆದಾರರು ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಳನ್ನು www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯದನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ
DIPR/BGM/RO-NO-1739/MCA/2021-22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋ.ಇ ವಿಭಾಗ, ಶಿವಮೊಗ್ಗ.
ಸಂಖ್ಯೆ :ಕಾಪಾಅ/ಶಿವಿ/ಜೇ–1/ಐಎಫ್‌ಬಿ–53/2021–22
ದಿನಾಂಕ: 03.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಪರಿಶಿಷ್ಟಪಂಗಡ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು
8443 ಠೇವಣಿವಂತಿಕೆ: 1. ಸೊರಬ 1 ಕಾಮಗಾರಿ
5054–04–337–0–01–136: 2. ಸೊರಬ 1 ಕಾಮಗಾರಿ
ಪರಿಶಿಷ್ಟಜಾತಿ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು
3054–03–102–0–01–200: 3. ಸೊರಬ 1 ಕಾಮಗಾರಿ
ಎಲ್ಲಾ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು
8443 ಠೇವಣಿವಂತಿಕೆ: 4. ಸೊರಬ 1 ಕಾಮಗಾರಿ
3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ: 5. ಸೊರಬ 3 ಕಾಮಗಾರಿ
3054–ರಾಜ್ಯ ಹೆದ್ದಾರಿ ನಿರ್ವಹಣೆ: 6. ಸೊರಬ 2 ಕಾಮಗಾರಿ
5054–04–337–0–01–135: 7. ಸೊರಬ 1 ಕಾಮಗಾರಿ
ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ಎಲ್ಲಾ ಕಾಮಗಾರಿಗಳಿಗೆ ದಿನಾಂಕ:05–03–2022 ರಿಂದ 14–03–2022 ರವರೆಗೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : ಕ್ರ.ಸಂ. 1 ಮತ್ತು 5 ಕ್ಕೆ 3 ತಿಂಗಳು ಉಳಿದ ಎಲ್ಲಾ ಕಾಮಗಾರಿಗಳಿಗೆ 3 ತಿಂಗಳು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ಸಂ–30/03/ಎಂಎ/21–22/1351

ಲೈಂಗಿಕ ದೌರ್ಜನ್ಯ, ನಾಲ್ವರ ಬಂಧನ

ಮಂಗಳೂರು: ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿಯರನ್ನು ಬ್ಲ್ಯಾಕ್‌ಮೇಲ್ ಮಾಡಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಪೊಲೀಸರು, ಮತ್ತೆ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಇದರಿಂದ ಬಂಧಿತರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ.

ನಗರದ ಮಹಿಳಾ ಪೊಲೀಸ್ ಠಾಣೆಗೆ ಬಾಲಕಿಯೊಬ್ಬಳು ನೀಡಿದ್ದ ದೂರಿನ ಮೇಲೆ ವೇಶ್ಯಾವಾಟಿಕೆ ಜಾಲವನ್ನು ಭೇದಿಸಿದ್ದ ಪೊಲೀಸರು, ವೇಶ್ಯಾವಾಟಿಕೆ ನಡೆಸುತ್ತಿದ್ದ ಏಳು ಮಂದಿ ಹಾಗೂ ಗ್ರಾಹಕರ ರೀತಿಯಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ 10 ಮಂದಿಯನ್ನು ಬಂಧಿಸಿದ್ದರು.

ಇದೀಗ ಇನ್ನೊಬ್ಬ ಬಾಲಕಿ ಪ್ರತ್ಯೇಕ ದೂರು ನೀಡಿದ್ದು, ಮತ್ತೆ 5 ಪ್ರಕರಣಗಳಡಿ ನಾಲ್ವರನ್ನು ಬಂಧಿಸಲಾಗಿದೆ. ರಶೀದ್ ಸಾಹೇಬ್ (73), ಮೊಹಮ್ಮದ್ ಆಲಿ (74), ಗ್ರೆಗರಿ ಲಿಯೋನಾರ್ಡ್ ಸಿಕ್ವೇರಾ (62) ಹಾಗೂ ಇಸ್ಮಾಯಿಲ್ (41) ಬಂಧಿತರು. ಇವರು, ಗ್ರಾಹಕರ ರೀತಿ ಲೈಂಗಿಕ ಕಿರುಕುಳ ನೀಡಿದ್ದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಬಾಲಕಿಯರ ದೂರಿನ ಮೇರೆಗೆ 10 ಪ್ರಕರಣಗಳು ದಾಖಲಾಗಿವೆ. ಎಸಿಪಿ ಮಹೇಶ್ ಪ್ರಸಾದ್ ನೇತೃತ್ವದಲ್ಲಿ ತನಿಖೆ ನಡೆದಿದೆ. ಆರೋಪಿಗಳ ಮೊಬೈಲ್, ಗ್ಯಾಜೆಟ್‌ಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ಪ್ರಜಾವಾಣಿ ಕನ್ನಡ ಧ್ವನಿ
ನಾಳೆ
ಐದು ರಾಜ್ಯಗಳ ಚುನಾವಣಾ ಫಲಿತಾಂಶ ಪರಿಣಾಮ
ಭಾಗವಹಿಸುವವರು:
ಡಿ.ಉಮಾಪತಿ, ಪತ್ರಕರ್ತರು, ರಾಜಕೀಯ ವಿಶ್ಲೇಷಕರು,
ರಾಮಕೃಷ್ಣ ಉಪಾಧ್ಯ, ಪತ್ರಕರ್ತರು, ರಾಜಕೀಯ ವಿಶ್ಲೇಷಕರು,
ಆಶಾ ಕೃಷ್ಣಸ್ವಾಮಿ, ಪತ್ರಕರ್ತೆ, ರಾಜಕೀಯ ವಿಶ್ಲೇಷಕರು.
ಸಂವಾದ
ಸಂಜೆ 4 ರಿಂದ

ಪದವಿ ಹಂತದಲ್ಲಿ ಕನ್ನಡ ಭಾಷೆ ಕಲಿಕೆ ಕಡ್ಡಾಯ ಪ್ರಕರಣ

'ಎನ್‌ಇಪಿ: ಭಾಷೆಯ ಕಡ್ಡಾಯ ವಿವರ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಗ್ರ ಶಿಕ್ಷಣ ಪದ್ಧತಿಯು ಸ್ಥಳೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಾಗರಿಕರಿಗೆ ಸುಲಭವಾಗಿ ಎಟಕುವಂತೆ ಮಾಡುವುದೇ 2020ರ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಉದ್ದೇಶವಾಗಿದೆ. ಎನ್‌ಇಪಿಯನ್ನು ಸಂವಿಧಾನದ ವಿಶಾಲ ಉದ್ದೇಶಗಳನ್ನು ಇರಿಸಿಕೊಂಡೇ ಪ್ರತಿಷ್ಠಾಪಿಸಲಾಗಿದೆ. ಇದರಲ್ಲಿ, ಯಾವುದೇ ಭಾಷೆಯ ಕಡ್ಡಾಯದ ಬಗ್ಗೆ ವಿವರಿಸಿಲ್ಲ' ಎಂದು ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಸ್ಪಷ್ಟಪಡಿಸಿದೆ.

ಪದವಿ ಹಂತದಲ್ಲಿ ಭಾಷೆಯಾಗಿ ಕನ್ನಡ ಕಡ್ಡಾಯ ಕಲಿಕೆ ಮಾಡಿರುವ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಕೇಂದ್ರ ಸರ್ಕಾರ ಈ ಪ್ರಮಾಣ ಪತ್ರ ಸಲ್ಲಿಸಿದ್ದು, 'ಎನ್‌ಇಪಿ ಮತ್ತದರ ನಿಬಂಧನೆಗಳಲ್ಲಿ ಯಾವುದೇ ಭಾಷೆಯನ್ನು ಕಡ್ಡಾಯಗೊಳಿಸುವ ಸಂಬಂಧದ ಉಲ್ಲೇಖಗಳಿಲ್ಲ. ಹೀಗಾಗಿ, ಎನ್‌ಇಪಿ ನಿಬಂಧನೆಗಳನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯ ಉದ್ಭವಿಸುವುದಿಲ್ಲ' ಎಂದು ವಿವರಿಸಿದೆ.

ಈ ಕುರಿತು 'ಸಂಸ್ಕೃತ ಭಾರತಿ ಟ್ರಸ್ಟ್', 'ಮಹಾವಿದ್ಯಾಲಯ ಸಂಸ್ಕೃತ ಪ್ರಾಧ್ಯಾಪಕರ ಸಂಘ', 'ಶ್ರೀ ಹಯಗ್ರೀವ ಟ್ರಸ್ಟ್', 'ವ್ಯೋಮ ಲಿಂಗ್ವಿಸ್ಟಿಕ್ ಲ್ಯಾಬ್ಸ್ ಫೌಂಡೇಶನ್' ಹಾಗೂ ಕೆ.ಜಿ. ಶಿವಕುಮಾರ್ ಮತ್ತು ಐವರು ವಿದ್ಯಾರ್ಥಿಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಶಿವಕುಮಾರ್ ಮತ್ತು ಇತರರ ಪರ ವಕೀಲ ಶ್ರೀಧರ ಪ್ರಭು, 'ಸೆಮಿಸ್ಟರ್ ಪರೀಕ್ಷೆ ಸಮೀಪಿಸಿರುವುದರಿಂದ ಅರ್ಜಿದಾರರು ಗೊಂದಲದಲ್ಲಿ ಸಿಲುಕದಂತೆ ಆದಷ್ಟು ಶೀಘ್ರ ಅರ್ಜಿ ವಿಲೇವಾರಿ ಮಾಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಏಪ್ರಿಲ್ 4ಕ್ಕೆ ವಿಚಾರಣೆ ಮುಂದೂಡಿದೆ.

ವಾಟ್ಸ್‌ಆ್ಯಪ್‌ನಲ್ಲಿ ಪಾಕ್ ಧ್ವಜ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಹ್ಯಾದ್ರಿ ಕಾಲೇಜಿನ ಬಿಸಿಎ ವಿದ್ಯಾರ್ಥಿನಿಯೊಬ್ಬರು ಕಾಲೇಜಿನ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಪಾಕ್ ಧ್ವಜದ ಸ್ಟಿಕರ್ ಹಾಕಿದ್ದು, ಅವರನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿ ಎಬಿವಿಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ಈ ವಿದ್ಯಾರ್ಥಿನಿ ಹಿಜಾಬ್ ವಿಚಾರವಾಗಿ ಹಿಂದೆ ಕಾಲೇಜಿನಲ್ಲಿ ಗಲಾಟೆಗಳು ನಡೆದಾಗ, ಆನ್‌ಲೈನ್ ತರಗತಿಗಾಗಿ ರಚಿಸಿದ್ದ ಗ್ರೂಪ್‌ನಲ್ಲಿ 'ಹಿಜಾಬ್ ನಮ್ಮ ಹಕ್ಕು' ಎಂದು ಸಂದೇಶ ಹಾಕಿದ್ದರು. ಆಗ ಒಂದಷ್ಟು ಚರ್ಚೆ ನಡೆದು ಗ್ರೂಪ್‌ನ ಸದಸ್ಯರೊಬ್ಬರು ಭಾರತ ಧ್ವಜದ ಸ್ಟಿಕ್ಕರ್ ಹಾಕಿದಾಗ, ಈ ವಿದ್ಯಾರ್ಥಿನಿ ಪಾಕ್ ಧ್ವಜದ ಸ್ಟಿಕ್ಕರ್ ಹಾಕಿದ್ದರು. ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನನಿರತರು ಆಗ್ರಹಿಸಿದರು.

ವಿದ್ಯಾರ್ಥಿನಿ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಬೇಕು. ಕಾಲೇಜಿನಿಂದ ಅಮಾನತು ಮಾಡಬೇಕು. ಎರಡು ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ ತರಗತಿ ಬಹಿಷ್ಕಾರ ಚಳವಳಿ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕುವೆಂಪು ವಿಶ್ವವಿದ್ಯಾಲಯದ ಡೀನ್ ಬಿ.ಎಸ್. ಬಿರಾದಾರ್ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದರು. ಪ್ರಕರಣ ಪರಿಶೀಲಿಸಿ, ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಹಿಜಾಬ್‌ಗೆ ಅವಕಾಶ: ಡಿ.ಸಿಗೆ ಮನವಿ

ಶಿವಮೊಗ್ಗ: ತರಗತಿಯ ಒಳಗೆ ಹಿಜಾಬ್ ಧರಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಮುಸ್ಲಿಂ ವಿದ್ಯಾರ್ಥಿನಿಯರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

'ಹಿಜಾಬ್ ನಮ್ಮ ಹಕ್ಕು. ತರಗತಿಯಲ್ಲಿ ಧರಿಸಲು ಅವಕಾಶ ನೀಡಲು ಕಾಲೇಜು ಆಡಳಿತ ಮಂಡಳಿಗೆ ಸೂಚಿಸಬೇಕು' ಎಂದು ಅವರು ಕೋರಿದರು.

ಸುಧಾಮಂಗಳ ಮಹೋತ್ಸವ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಕಲಬುರಗಿ: ಸೇಡಂ ತಾಲ್ಲೂಕಿನ ಮಳಖೇಡದಲ್ಲಿರುವ ಜಯತೀರ್ಥರ ಮೂಲವೃಂದಾವನ ಸನ್ನಿಧಾನದಲ್ಲಿ ಜಯತೀರ್ಥ ವಿದ್ಯಾಪೀಠದಿಂದ ಮಾರ್ಚ್ 10ರಿಂದ 12ರ ವರೆಗೆ ಶ್ರೀಮನ್ನ್ಯಾಯ ಸುಧಾಮಂಗಳ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಮೂರು ದಿನಗಳ ಈ ಉತ್ಸವದಲ್ಲಿ 50 ಸಾವಿರಕ್ಕೂ ಅಧಿಕ ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರತಿ ದಿನ ಬೆಳಿಗ್ಗೆ 6ರಿಂದ 8ರವರೆಗೆ ಸಂಸ್ಥಾನ ಮಹಾಪೂಜೆ, ಬೆಳಿಗ್ಗೆ 8ರಿಂದ ಮಧ್ಯಾಹ್ನ 2.30 ಹಾಗೂ ಮಧ್ಯಾಹ್ನ 2.30ರಿಂದ ಸಂಜೆ 5.30ರವರೆಗೆ ವಿದ್ಯಾರ್ಥಿಗಳಿಂದ ಸುಧಾನುವಾದ, ಸಂಜೆ 6.30 ರಿಂದ ಉಪನ್ಯಾಸ, ಅಮೃತ ಸಂದೇಶ ಸಭೆಗಳು ನಡೆಯಲಿವೆ. ಸತ್ಯಾತ್ಮತೀರ್ಥ ಶ್ರೀಪಾದರಿಂದ ಅನುಗ್ರಹ ಸಂದೇಶ, ಗುರುಪೂಜೆ, ವ್ಯಾಸಪೂಜೆಗಳೂ ನೆರವೇರಲಿವೆ.

ಕುಂದಾಪುರ ವ್ಯಾಸರಾಜ ಮಠದ ಲಕ್ಷ್ಮೀಂದ್ರ ತೀರ್ಥರು, ಕೂಡಲೀ ಆರ್ಯ ಅಕ್ಷೋಭ್ಯತೀರ್ಥಮಠದ ರಘುವಿಜಯತೀರ್ಥರು, ಸೋಸಲೆ ವ್ಯಾಸರಾಜ ಮಠ ವಿದ್ಯಾಶ್ರೀಶ ತೀರ್ಥರು, ಶ್ರೀಪಾದರಾಜಮಠದ ಸುಜಯನಿಧಿ ತೀರ್ಥರು, ಭಂಡಾರಕೇರಿ ಮಠದ ವಿದ್ಯೇಶ ತೀರ್ಥರು, ಬಾಳಗಾರು ಮಠದ ರಘುಭೂಷಣ ತೀರ್ಥರು, ರಾಘವೇಂದ್ರ ಸ್ವಾಮಿಗಳ ಮಠದ ಸುವಿದ್ಯೇಂದ್ರ ತೀರ್ಥರು, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು, ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನ ತೀರ್ಥರು, ಅದಮಾರು ಮಠದ ಈಶಪ್ರಿಯ ತೀರ್ಥರು, ಪಲಿಮಾರು ಮಠದ ವಿದ್ಯಾರಾಜೇಶ್ವರ ತೀರ್ಥರು, ಚಿತ್ತಾಪುರ ಮಠದ ವಿದ್ಯೇಂದ್ರ ತೀರ್ಥರು ಸಾನ್ನಿಧ್ಯ ವಹಿಸುವರು.

ಮುಖ್ಯಾಂಶಗಳು
- 10ರಿಂದ ಸೇಡಂ ತಾಲ್ಲೂಕು ಮಳಖೇಡದಲ್ಲಿ ಆಯೋಜನೆ
- ವಿವಿಧ ಮಠಗಳ ಸ್ವಾಮೀಜಿಗಳು ಭಾಗಿ

ಕ್ಲೋರಿನ್ ಅನಿಲ ಸಿಲಿಂಡರ್ ವಿಲೇವಾರಿ

ಮೈಸೂರು: ಇಲ್ಲಿನ ಕೆಆರ್‌ಎಸ್ ರಸ್ತೆಯ ರೈಲ್ವೆ ವಸತಿ ಗೃಹದ ಆವರಣದಲ್ಲಿ ಸೋರಿಕೆಯಾಗಿದ್ದ ಕ್ಲೋರಿನ್ ಅನಿಲ ಸಿಲಿಂಡರ್ ಅನ್ನು ಮಂಗಳವಾರ ನೊರೊನಾ ಏಜೆನ್ಸಿಯ ಲಾರಿಯಲ್ಲಿ ಚಿಕ್ಕಮಗಳೂರಿಗೆ ಸಾಗಿಸಲಾಯಿತು.

'ಸಿಲಿಂಡರ್ ಅನ್ನು ಏಜೆನ್ಸಿಯು ಕೊಳವೆ ಬಾವಿ ನೀರಿನ ಶುದ್ಧೀಕರಣಕ್ಕೆಂದು 2015ರಲ್ಲಿ ಅಳವಡಿಸಿತ್ತು ಎಂದು ರೈಲ್ವೆ ಇಲಾಖೆಯ ಮೂಲಗಳು ತಿಳಿಸಿವೆ.

'ಸೋಮವಾರ ಅನಿಲ ಸೋರಿಕೆಯಿಂದ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದವರು ಚೇತರಿಸಿಕೊಳ್ಳುತ್ತಿದ್ದಾರೆ. ತೀವ್ರ ನಿಗಾ ಘಟಕದಲ್ಲಿರುವ ಮೂವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ' ಎಂದು ಕೆ.ಆರ್.ಆಸ್ಪತ್ರೆಯ ಮೂಲಗಳು ತಿಳಿಸಿವೆ.

ವಿಟಿಯು ಘಟಿಕೋತ್ಸವ: 16 ಚಿನ್ನದ ಪದಕ ಪಡೆದ ಬುಶ್ರಾ ಮತೀನ್ ಮನದಾಳ

'ವಿದ್ಯಾಭ್ಯಾಸಕ್ಕೆ ಧರ್ಮ ಅಡ್ಡಿ ಸಲ್ಲ'

• ನಾಗರಾಜ ಚಿನಗುಂಡಿ

ರಾಯಚೂರು: 'ನಮ್ಮದು ಪ್ರಜಾಪ್ರಭುತ್ವ ದೇಶ. ವಿದ್ಯಾಭ್ಯಾಸ ಮಾಡುವುದಕ್ಕೆ ಧರ್ಮದ ವಿಷಯಗಳು ಅಡ್ಡಿ ಆಗಬಾರದು. ವಿದ್ಯಾಭ್ಯಾಸದಲ್ಲಿ ತಾರತಮ್ಯ ಇರಬಾರದು. ಶಿಕ್ಷಣಕ್ಕೆ ಎಲ್ಲರೂ ಮಹತ್ವ ಕೊಡಬೇಕು'.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ 16 ಚಿನ್ನದ ಪದಕ ಪಡೆದಿರುವ ಇಲ್ಲಿನ ಎಸ್‌ಎಲ್‌ಎನ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿನಿ ಬುಶ್ರಾ ಮತೀನ್ ಅವರ ಮನದಾಳ ಇದು.

ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಈವರೆಗೆ ಗರಿಷ್ಠ 13 ಚಿನ್ನದ ಪದಕ ಪಡೆದಿರುವ ದಾಖಲೆ ಇತ್ತು. ಇದೀಗ ಬುಶ್ರಾ ಮತೀನ್ ಆ ದಾಖಲೆ ಮುರಿದಿದ್ದಾರೆ. ಇದೇ 10ರಂದು ಬೆಳಗಾವಿಯಲ್ಲಿ ನಡೆಯುವ ಘಟಿಕೋತ್ಸವದಲ್ಲಿ ಬುಶ್ರಾ ಅವರಿಗೆ ಚಿನ್ನದ ಪದಕಗಳ ಪ್ರದಾನವಾಗಲಿದೆ.

ಬುಶ್ರಾ ಮತೀನ್

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು 'ಚಿನ್ನದ ಪದಕಗಳ ಸಾಧನೆ ಹೆಮ್ಮೆ ಮೂಡಿಸಿದೆ. ಹಿಂದುಳಿದ ರಾಯಚೂರು ಜಿಲ್ಲೆಗೂ ಇದು ಹೆಮ್ಮೆಯ ವಿಷಯ. ಈ ಸಾಧನೆಗೆ ಸ್ನೇಹಿತೆಯರು, ಬೋಧಕರು, ಕುಟುಂಬದ ಸದಸ್ಯರೆಲ್ಲರೂ ನನಗೆ ಬೆಂಬಲ ನೀಡಿದ್ದಾರೆ' ಎಂದರು.

'ಆರಂಭದಿಂದಲೂ ರಾಯಚೂರಿನಲ್ಲೇ ವಿದ್ಯಾಭ್ಯಾಸ ಮಾಡಿಕೊಂಡು ಬಂದಿದ್ದೇನೆ. ಪ್ರಮಾಣ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ ಪಿಯುಸಿ ಪೂರ್ಣಗೊಳಿಸಿದ್ದೇನೆ. ನನ್ನ ತಂದೆ ಶೇಖ್ ಜಹಿರುದ್ದೀನ್ ಲಿಂಗಸುಗೂರಿನಲ್ಲಿ ಪಿಎಂಜಿಎಸ್‌ವೈ ಇಲಾಖೆಯಲ್ಲಿ ಕಿರಿಯ ಎಂಜಿನಿಯರ್ ಹುದ್ದೆಯಲ್ಲಿದ್ದಾರೆ. ತಂದೆಯ ಮಾರ್ಗದಲ್ಲೇ ನಡೆಯಬೇಕು ಎನ್ನುವ ಗುರಿಯೊಂದಿಗೆ ಸಿವಿಲ್ ಎಂಜಿನಿಯರಿಂಗ್ ಓದುತ್ತಿದ್ದೇನೆ' ಎಂದರು.

'ಕೇಳಿದ ಪಾಠಗಳನ್ನು ಸರಿಯಾಗಿ ಅರ್ಥೈಸಿಕೊಳ್ಳುತ್ತಿದ್ದೆ. ಅಂದಿನ ಪಾಠಗಳನ್ನು ಅದೇ ದಿನ ಓದಿಕೊಳ್ಳುತ್ತಿದ್ದೆ. ಬರೀ ಕಣ್ಣುಹಾಯಿಸಿದರೆ ಸಾಕಾಗುವುದಿಲ್ಲ. ಮನನ ಮಾಡಿಕೊಳ್ಳುವುದು ತುಂಬಾ ಮುಖ್ಯ. ಇದರಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲವಾಗಿದೆ' ಎಂದರು.

'ಪಾಲಕರು ನನಗೆ ಸ್ವತಂತ್ರವಾಗಿ ಓದುವುದಕ್ಕೆ ಅವಕಾಶ ಮಾಡಿದ್ದಾರೆ. ಶಿಕ್ಷಣದಲ್ಲಿ ಮನಸ್ಸನ್ನು ಸಂಪೂರ್ಣವಾಗಿ ಕೇಂದ್ರಿಕೃತ ಮಾಡಿದ್ದರಿಂದ ಈ ಸಾಧನೆ ಸಾಧ್ಯವಾಗಿದೆ. ವಿದ್ಯಾರ್ಥಿನಿಯರು ಶಿಕ್ಷಣದ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

> ವಿದ್ಯಾರ್ಥಿಗಳಿಗೆ ಬುಶ್ರಾ ಸಾಧನೆ ಮಾದರಿಯಾಗಿದೆ. ಮಹಾನಗರಗಳಲ್ಲಿ ಮಾತ್ರ ಉತ್ತಮವಾಗಿ ಓದಬಹುದೆಂಬ ಕಲ್ಪನೆಯನ್ನು ಈ ವಿದ್ಯಾರ್ಥಿನಿ ದೂರ ಮಾಡಿದ್ದಾರೆ
> **ಡಾ.ಆರ್. ಬಸವರಾಜ,** ಎಸ್‌ಎಲ್‌ಎನ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ

ಮುಖ್ಯಾಂಶಗಳು
- ಇದೇ 10 ರಂದು ನಡೆಯುವ ಘಟಿಕೋತ್ಸವದಲ್ಲಿ ಪದಕ ಪ್ರದಾನ
- 13 ಚಿನ್ನದ ಪದಕ ಈ ಹಿಂದಿನ ಗರಿಷ್ಠ ದಾಖಲೆ

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

‘ದೇಶದ ಬಡತನಕ್ಕೆ ಕಾಂಗ್ರೆಸ್ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್‌ನ ಸುದೀರ್ಘ ಆಡಳಿತವೇ ದೇಶದಲ್ಲಿ ಇನ್ನೂ ಬಡತನ ತಾಂಡವವಾಡಲು ಕಾರಣ. ಗರೀಬಿ ಹಠಾವೋ ಎಂದು ಹೇಳಿಕೊಂಡು ದೇಶಾದ್ಯಂತ ಬಡತನವನ್ನು ಹಬ್ಬಿಸಿದರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹರಿಹಾಯ್ದರು.

ವಿಧಾನಸಭೆಯಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ,‘ ಸಬ್ ಕಾ ಸಾಥ್ ವಿಕಾಸ್ ಅಲ್ಲ ಸಬ್ ಕಾ ಸರ್ವನಾಶ್ ಹೋಗಯಾ’. ‘ವಾಜಪೇಯಿ ಅವರು ಶೈನಿಂಗ್ ಇಂಡಿಯಾ ಎಂದರು ಬಡತನ ಹೆಚ್ಚಾಯಿತು’ ಎಂದು ಲೇವಡಿ ಮಾಡಿದರು. ಈ ಮಾತುಗಳಿಂದ ಕೆರಳಿದ ಬೊಮ್ಮಾಯಿ ಅವರು ಕಾಂಗ್ರೆಸ್ ವಿರುದ್ಧ ಮುಗಿಬಿದ್ದರು.

‘ಹೌದು, ಶೈನಿಂಗ್ ಇಂಡಿಯಾ ಎಂದು ವಾಜಪೇಯಿ ಅವರು ವಿಶ್ವ ದರ್ಜೆಯ ಸುವರ್ಣ ಚತುಷ್ಪಥ ರಸ್ತೆ ಮಾಡಿಸಿದರು. ಆ ವಿಶಾಲ ರಸ್ತೆಯ ಮೇಲೆಯೇ ನಾವು– ನೀವು ಓಡಾಡುತ್ತಿದ್ದೇವೆ’ ಎಂದು ಬೊಮ್ಮಾಯಿ ಹೇಳಿದರು.‘ಕಾಂಗ್ರೆಸ್ ಅವಧಿಯಲ್ಲಿ ಅಣೆಕಟ್ಟೆಗಳನ್ನು ನಿರ್ಮಿಸಲಾಯಿತು’ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದಾಗ, ‘ಅದನ್ನು ಪೂರ್ಣಗೊಳಿಸಲು 40–50 ವರ್ಷಗಳು ಬೇಕಾಯಿತು. ಇದು ನಿಮ್ಮ ಆಡಳಿತಕ್ಕೆ ಕೈಗನ್ನಡಿ’ ಎಂದು ಬೊಮ್ಮಾಯಿ ಕುಟುಕಿದರು.

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು

ಭಿಕ್ಷೆ ಬೇಡುವಂತೆ ಮಾಡಿದಿರಿ: ‘ಕಾಂಗ್ರೆಸ್ ಅವಧಿಯಲ್ಲೇ ಆಹಾರಕ್ಕಾಗಿ ಅಮೆರಿಕ ಸೇರಿ ವಿವಿಧ ದೇಶಗಳ ಮುಂದೆ ಭಿಕ್ಷೆ ಬೇಡುವಂತಾಗಿತ್ತು. ಸಾಲ ಮಾಡಬೇಕಾಗಿ ಬಂತು. ಇದಕ್ಕೆ ಕಾಂಗ್ರೆಸ್ ಪಕ್ಷದ ನೀತಿಗಳೇ ಕಾರಣ. ಜಾಗತೀಕರಣ, ಖಾಸಗೀಕರಣವನ್ನು ಆರಂಭಿಸಿದ್ದು ಮನಮೋಹನ್ ಸಿಂಗ್ ಅವರೇ. ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಅಡಿಪಾಯ ಹಾಕಿದವರೂ ಅವರೇ’ ಎಂದು ಬೊಮ್ಮಾಯಿ ಟೀಕಿಸಿದರು.

‘ನವರತ್ನ ಕಂಪನಿಗಳ ಮಾರಾಟಕ್ಕೆ ನಾಂದಿ ಹಾಡಿದವರೂ ನೀವೇ. ಗಣಿಗಳನ್ನು ಕೆಲವೇ ಶ್ರೀಮಂತರಿಗೆ ಕೊಟ್ಟಿದ್ದೂ ನೀವೇ. ಈ ಮೂಲಕ ಸಂಪತ್ತು ಕೆಲವೇ ಜನರ ಕೈಯಲ್ಲಿ ಸೇರುವಂತೆ ಮಾಡಿದಿರಿ’ ಎಂದು ಬೊಮ್ಮಾಯಿ ತಿವಿದರು.

ಸರ್ಕಾರದಿಂದಲೇ ನೀಟ್ ಕೋಚಿಂಗ್: ಸುಧಾಕರ್

ಡಾ.ಸುಧಾಕರ

ಬೆಂಗಳೂರು: ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರದ ವತಿಯಿಂದ ನೀಟ್ ಕೋಚಿಂಗ್ ಕೇಂದ್ರಗಳನ್ನು ಆರಂಭಿಸಲು ಚಿಂತನೆ ನಡೆಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್ ಅವರ ಪ್ರಶ್ನೆಗೆ ಉತ್ತರಿಸಿ, ನೀಟ್ ಕೋಚಿಂಗ್ ಕೇಂದ್ರ ತೆರೆಯುವುದರಿಂದ ಬಡ ಮಕ್ಕಳಿಗೆ ಅನುಕೂಲವಾಗಲಿದೆ ಎಂದು ಸಚಿವರು ಹೇಳಿದರು.

ನೀಟ್‌ಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಹೊಸ ನೀತಿ ಮಾಡಲು ಸಾಧ್ಯವಿಲ್ಲ. ನೀಟ್ ಪರೀಕ್ಷಾ ವ್ಯವಸ್ಥೆ ನ್ಯಾಷನಲ್ ಮೆಡಿಕಲ್ ಕೌನ್ಸಿಲ್ ಅಧೀನದಲ್ಲಿ ಬರುತ್ತದೆ. ಈಗಿರುವ ನೀತಿಯ ಪ್ರಕಾರ, ಶೇ 85 ರಷ್ಟು ಸೀಟ್‌ಗಳನ್ನು ರಾಜ್ಯದ ವಿದ್ಯಾರ್ಥಿಗಳಿಗೆ ಮತ್ತು ಶೇ 15 ರಷ್ಟು ಸೀಟ್‌ಗಳನ್ನು ಅಖಿಲ ಭಾರತ ಕೋಟಾದಡಿ ಹಂಚಿಕೆ ಮಾಡಲಾಗುತ್ತದೆ ಎಂದು ಅವರು ಹೇಳಿದರು.

ಯುದ್ಧ ಪೀಡಿತ ಉಕ್ರೇನ್‌ನಿಂದ ಬಂದಿರುವ ವಿದ್ಯಾರ್ಥಿಗಳಿಗೆ ಇಲ್ಲಿಯೇ ವೈದ್ಯಕೀಯ ಶಿಕ್ಷಣ ಮುಂದುವರೆಸುವ ಸಾಧ್ಯತೆಗಳ ವಿಚಾರವಾಗಿ ಮುಖ್ಯಮಂತ್ರಿಯವರು ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಕುಲಪತಿ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜತೆ ಚರ್ಚೆ ನಡೆಸಿದ್ದಾರೆ ಎಂದೂ ಸುಧಾಕರ್ ತಿಳಿಸಿದರು.

ವಿಷಯ ಪ್ರಸ್ತಾಪಿಸಿದ ಖಾದರ್, ನೀಟ್‌ನಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ವೈದ್ಯಕೀಯ ಪ್ರವೇಶಕ್ಕೆ ನೀಟ್‌ನಿಂದ ಶೇ 50 ಮತ್ತು ಪಿಯುಸಿಯ ಶೇ 50 ರಷ್ಟು ಅಂಕವನ್ನು ಪರಿಗಣಿಸಬೇಕು. ಉಕ್ರೇನ್‌ನಿಂದ ಬಂದಿರುವ ವಿದ್ಯಾರ್ಥಿಗಳಿಗೆ ಇಲ್ಲೇ ವೈದ್ಯಕೀಯ ಶಿಕ್ಷಣ ಮುಂದುವರೆಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

‘ಬಿಇಎಂಎಲ್ ಖಾಸಗೀಕರಣವಿಲ್ಲ’

ಬೆಂಗಳೂರು: ಕೋಲಾರದಲ್ಲಿರುವ ಬಿಇಎಂಎಲ್ ಕಾರ್ಖಾನೆಯನ್ನು ಕೇಂದ್ರ ಸರ್ಕಾರ ಖಾಸಗೀಕರಣ ಮಾಡುತ್ತಿಲ್ಲ. ಬಳಕೆಯಾಗದ ಆಸ್ತಿಗಳನ್ನು ಮಾತ್ರ ವಿಲೇವಾರಿ ಮಾಡುತ್ತಿದೆ ಎಂದು ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಗೋವಿಂದರಾಜು ಪ್ರಶ್ನೆಗೆ ಮಂಗಳವಾರ ಉತ್ತರ ನೀಡಿದ ಅವರು, ‘ಬಿಇಎಂಎಲ್ ಬಳಿ ರಾಜ್ಯ ಸರ್ಕಾರ ಒದಗಿಸಿದ್ದ ಸುಮಾರು 12,500 ಎಕರೆ ಜಮೀನು ಬಳಕೆಯಾಗುತ್ತಿಲ್ಲ. ಈ ಜಮೀನು ಸೇರಿದಂತೆ ಕೆಲವು ಆಸ್ತಿಗಳನ್ನು ನಗದೀಕರಣ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಆದರೆ, ಕಾರ್ಖಾನೆಯನ್ನು ಪೂರ್ಣವಾಗಿ ಖಾಸಗೀಕರಣ ಮಾಡುತ್ತಿಲ್ಲ’ ಎಂದರು.

ಮೊದಲ ಹಂತದಲ್ಲಿ 3,500 ಎಕರೆ ಜಮೀನನ್ನು ರಾಜ್ಯ ಸರ್ಕಾರ ಮರಳಿ ಪಡೆಯಲಿದೆ. ಉಳಿದ ಜಮೀನುಗಳ ವಾಸ್ತವಿಕ ಸ್ಥಿತಿ ಕುರಿತು ಭೂಮಾಪನ ಮಾಡಲಾಗುತ್ತಿದೆ. ಇದು ಕೇಂದ್ರ ಸರ್ಕಾರದ ಉದ್ಯಮ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ ಎಂದರು.

‘ಕೇಂದ್ರ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆ ಖಾಸಗೀಕರಣ ಆಗಬಾರದು’ ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮತ್ತು ಗೋವಿಂದರಾಜು ಆಗ್ರಹಿಸಿದರು.

‘ಕೈಗಾರಿಕೆಗಳನ್ನು ನಡೆಸುವುದು ಸರ್ಕಾರದ ಕೆಲಸವಲ್ಲ. ಅಗತ್ಯ ಮೂಲ ಸೌಕರ್ಯ ಮಾತ್ರ ಒದಗಿಸಬಹುದು. ಲಭ್ಯವಿರುವ ಜಮೀನುಗಳಲ್ಲಿ ಖಾಸಗಿಯವರು ಹೊಸ ಕೈಗಾರಿಕೆಗಳನ್ನು ಆರಂಭಿಸಲು ಅನುಕೂಲ ಕಲ್ಪಿಸಲಾಗುವುದು’ ಎಂದು ನಿರಾಣಿ ಉತ್ತರಿಸಿದರು.

ವಿಧಾನ ಪರಿಷತ್ ಕಲಾಪದಲ್ಲಿ ಸಚಿವರಾದ ಎಸ್‌.ಟಿ.ಸೋಮಶೇಖರ್, ಭೈರತಿ ಬಸವರಾಜ್, ಮುನಿರತ್ನ ಹಾಗೂ ಆರ್‌. ಅಶೋಕ ಮಂಗಳವಾರ ಚರ್ಚೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

52 ಘೋಷಣೆಗಳಿಗೆ ಆದೇಶ ಹೊರಡಿಸಿಲ್ಲ: ಸಿದ್ದರಾಮಯ್ಯ

‘ಜನರಿಗೆ ಮಾಡಿದ ದ್ರೋಹ, ಅಕ್ಷಮ್ಯ ಅಪರಾಧ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಣೆ ಮಾಡಿದ 52 ಕ್ಕೂ ಹೆಚ್ಚು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆದೇಶವನ್ನೇ ಹೊರಡಿಸಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಬಜೆಟ್ ಮೇಲಿನ ಚರ್ಚೆಯನ್ನು ಮಂಗಳವಾರ ಮುಂದುವರಿಸಿದ ಅವರು, ‘52 ಘೋಷಣೆಗಳಲ್ಲಿ ಕೆಲವನ್ನು ಕೈಬಿಟ್ಟಿದ್ದಾರೆ. ಉದಾಹರಣೆಗೆ ಚಾಮರಾಜನಗರದಲ್ಲಿ ಅರಿಶಿನ ಮಾರುಕಟ್ಟೆ ಮಾಡುವುದಾಗಿ ಪ್ರಕಟಿಸಿದ್ದರು. ಈಗ ಕೈಬಿಡಲಾಗಿದೆ. ಇದಕ್ಕೆ ಕಾರಣವೇನು? ಸರ್ಕಾರವನ್ನು ನಡೆಸುವ ರೀತಿ ಇದಾ’ ಎಂದು ಪ್ರಶ್ನಿಸಿದರು.

‘ಘೋಷಣೆ ಮಾಡಿದ ಕಾರ್ಯಕ್ರಮಗಳಿಗೆ ಹಣ ಒದಗಿಸದೇ ಸುಮ್ಮನೆ ಆದೇಶ ಹೊರಡಿಸುವುದು ಜನರಿಗೆ ಮಾಡಿದ ದ್ರೋಹ ಮತ್ತು ಅಕ್ಷಮ್ಯ ಅಪರಾಧ. ಆದೇಶ ಹೊರಡಿಸದೇ ಇರಲು ಸಕಾರಣ ನೀಡಬೇಕು’ ಎಂದೂ ಒತ್ತಾಯಿಸಿದರು.

‘ನಮ್ಮ ಸರ್ಕಾರದ ಅವಧಿಯಲ್ಲಿ ಇಲಾಖಾವಾರು ಮಾಹಿತಿ ಇತ್ತು. ಯಡಿಯೂರಪ್ಪ ಮುಖ್ಯಮಂತ್ರಿ ಆದ ಮೇಲೆ ಬಜೆಟ್ ಪಾರದರ್ಶಕವಾಗಿರಬಾರದು ಎಂಬ ಕಾರಣಕ್ಕೆ ವಲಯವಾರು ಬಜೆಟ್ ಶುರು ಮಾಡಿದರು. ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಈ ಬಜೆಟ್‌ನಲ್ಲಿ ₹33,700 ಕೋಟಿ ಇಟ್ಟಿದ್ದಾರೆ. ಕಳೆದ ಸಾಲಿನಲ್ಲಿ ಯಡಿಯೂರಪ್ಪ ಅವರು ಇಟ್ಟಿದ್ದು ₹32,259 ಕೋಟಿ’ ಎಂದು ಹೇಳಿದರು.

ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ವಲಯಕ್ಕೆ ಈ ಬಾರಿಯ ಬಜೆಟ್‌ನಲ್ಲಿ ₹68,479 ಕೋಟಿ ಇಟ್ಟಿದ್ದಾರೆ. ಆದರೆ ಕಳೆದ ಬಜೆಟ್‌ನಲ್ಲಿ ₹72,095 ಹಣ ನೀಡಲಾಗಿತ್ತು. ಅಂದರೆ ಈ ಬಾರಿ ₹3,614 ಕೋಟಿ ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣ ಯೋಜನೆಗಳಿಗೆ ಕಡಿತ ಮಾಡಲಾಗಿದೆ ಎಂದರು.

ಆರ್ಥಿಕ ಅಭಿವೃದ್ಧಿ ಉತ್ತೇಜನ ವಲಯಕ್ಕೆ ಈ ಬಾರಿಯ ಬಜೆಟ್‌ನಲ್ಲಿ ₹55,657 ಕೋಟಿ ಇಟ್ಟಿದ್ದಾರೆ. ಕಳೆದ ಬಜೆಟ್‌ನಲ್ಲಿ ₹55,732 ಕೋಟಿ ಇಟ್ಟಿದ್ದರು. ಕಳೆದ ಬಾರಿಗಿಂತ ಈ ಬಾರಿ ₹75 ಕೋಟಿ ಕಡಿಮೆ ಆಗಿದೆ ಎಂದು ಅವರು ಹೇಳಿದರು.

ಬೆಂಗಳೂರು ಸಮಗ್ರ ಅಭಿವೃದ್ಧಿ ವಲಯಕ್ಕೆ ಈ ಬಜೆಟ್‌ನಲ್ಲಿ ₹8,409 ಕೋಟಿ ಇಡಲಾಗಿದೆ. ಕಳೆದ ಬಜೆಟ್‌ನಲ್ಲಿ ₹8,772 ಇಟ್ಟಿದ್ದರು. ಕಳೆದ ಬಾರಿಗಿಂತ ₹363 ಕೋಟಿ ಕಡಿಮೆ ಆಗಿದೆ. ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆ ವಲಯಕ್ಕೆ ಈ ಬಜೆಟ್‌ನಲ್ಲಿ ₹3,012 ಕೋಟಿ ಇಟ್ಟಿದ್ದಾರೆ. ಕಳೆದ ಬಜೆಟ್‌ನಲ್ಲಿ ₹4,552 ಕೋಟಿ ಇಟ್ಟಿದ್ದರು. ಈ ಬಾರಿ ₹1,540 ಕೋಟಿ ಅನುದಾನ ಕಡಿಮೆ ಆಗಿದೆ. ಸಂಸ್ಕೃತಿ–ಪರಂಪರೆಯ ಬಗ್ಗೆ ಮಾತನಾಡುವವರು ನೀಡಿರುವ ಅನುದಾನವೇ ಅವರಿಗೆ ಸಂಸ್ಕೃತಿ ಬಗ್ಗೆ ಇರುವ ಕಾಳಜಿ ತೋರಿಸುತ್ತದೆ ಎಂದು ಹೇಳಿದರು.

‘ಕರ್ನಾಟಕ ಭವನದಲ್ಲಿ ಐವರು ಐಎಎಸ್‌ಗಳು ಏಕೆ?’

‘ಕರ್ನಾಟಕ ಭವನದಲ್ಲಿ ಐವರು ಐಎಎಸ್/ಐಎಫ್‌ಎಸ್ ಅಧಿಕಾರಿಗಳು ಇದ್ದಾರೆ. ಅಷ್ಟೊಂದು ಮಂದಿ ಅಲ್ಲೇನು ಕೆಲಸ ಮಾಡುತ್ತಿದ್ದಾರೆ. ಇದು ಅನಗತ್ಯ ವೆಚ್ಚಕ್ಕೆ ಸಾಕ್ಷಿ’ ಎಂದು ಸಿದ್ದರಾಮಯ್ಯ ಟೀಕಿಸಿದರು.

‘ನಮ್ಮ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಭವನದಲ್ಲಿ ಒಬ್ಬರೇ ಐಎಎಸ್ ಅಧಿಕಾರಿ ಇದ್ದರು. ಈಗ ಇರುವ ಐಎಎಸ್ ಅಧಿಕಾರಿಯೊಬ್ಬರನ್ನು ಯಾಕಪ್ಪ ಇಲ್ಲಿದ್ದೀಯಾ ಎಂದು ಪ್ರಶ್ನಿಸಿದೆ. ಮಕ್ಕಳ ವಿದ್ಯಾಭ್ಯಾಸದ ಕಾರಣಕ್ಕೆ ಇಲ್ಲಿದ್ದೇನೆ ಎಂಬ ಉತ್ತರ ನೀಡಿದರು’ ಎಂದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಕೆಲವು ಸಮಯದ ಹಿಂದೆ ಮುಖ್ಯ ಕಾರ್ಯದರ್ಶಿಗಳ ಜತೆಗೆ ಸಭೆ ನಡೆಸುತ್ತಿದ್ದೆ. ಒಂದೊಂದು ಇಲಾಖೆಗಳಲ್ಲಿ ಇಷ್ಟೊಂದು ಹಿರಿಯ ಅಧಿಕಾರಿಗಳು ಏಕೆ ಎಂದು ಪ್ರಶ್ನಿಸಿದೆ. ಸರ್ಕಾರದಲ್ಲಿ ನಿಗಮ ಮಂಡಳಿ ಮಾಡುವ ರೀತಿಯಲ್ಲೇ ಇಲಾಖೆಗಳಲ್ಲೂ ಹಿರಿಯ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಪ್ರಾಸಂಗಿಕವಾಗಿ ಹೇಳಿದರು’ ಎಂದು ನೆನಪಿಸಿದರು.

ಸೋಮಣ್ಣ ಮೇಲೆ ಸಿದ್ದರಾಮಯ್ಯ ಕೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆಯ ವೇಳೆ ವಸತಿ ಸಚಿವ ವಿ.ಸೋಮಣ್ಣ ಮೇಲೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೂಗಾಡಿದರು.

ಮಧ್ಯಾಹ್ನದ ಕಲಾಪ ಆರಂಭವಾಗುತ್ತಿದ್ದಂತೆ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ಮುಖ್ಯಮಂತ್ರಿ ಹುದ್ದೆ ಬಗ್ಗೆ ಲಘು ಧಾಟಿಯ ಮಾತು ನಡೆಯುತ್ತಿತ್ತು. ‘ನನ್ನ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ಯಾವುದೇ ಭಿನ್ನಮತ ಇಲ್ಲ. ನಮ್ಮ ವಿರುದ್ಧ ಮಾಧ್ಯಮಗಳಲ್ಲಿ ಸಚಿವ ಆರ್.ಅಶೋಕ ಸುದ್ದಿ ಬರೆಸುತ್ತಿದ್ದಾನೆ ಎಂಬ ಅನುಮಾನ ಇದೆ’ ಎಂದು ಸಿದ್ದರಾಮಯ್ಯ ತಮಾಷೆಯಾಗಿ ಹೇಳಿದರು.

ಆಗ ಎದ್ದು ನಿಂತ ವಿ.ಸೋಮಣ್ಣ, ‘ವಿರೋಧ ಪಕ್ಷದ ನಾಯಕರಾಗಿ ಬಜೆಟ್ ಬಗ್ಗೆ ಟೀಕೆ ಮಾಡಿ. ಕೇಂದ್ರ ಸರ್ಕಾರದ ಬಗ್ಗೆಯೂ ಹೇಳಿಕೆ ನೀಡಿ. ಆದರೆ, ನೀವು ಶಾಂತವೇರಿ ಗೋಪಾಲ ಗೌಡ, ಕಾಗೋಡು ತಿಮ್ಮಪ್ಪ, ದೇವರಾಜ ಅರಸು ಅವರಂತಹ ಸಂಸದೀಯ ಪಟುಗಳಂತೆ ಆಗಬೇಕು. ಈಗ ಮುಂದಕ್ಕೆ ಹೋದರೆ ಅನುಕೂಲ’ ಎಂದು ವ್ಯಂಗ್ಯವಾಗಿ ಹೇಳಿದರು.

ಸಿದ್ದರಾಮಯ್ಯ, ‘ಸಿದ್ದರಾಮಯ್ಯ ಯಾವಾಗಲೂ ಸಿದ್ದರಾಮಯ್ಯನೇ. ನಾನು ಗಾಂಧಿ, ನೆಹರು ಆಗಲು ಸಾಧ್ಯವಿಲ್ಲ’ ಎಂದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, ‘ಆಗಿನ ಕಾಲ ಬೇರೆ, ಈಗಿನ ಕಾಲ ಬೇರೆ. ವೈಕುಂಠ ಬಾಳಿಗರು ಸಭಾಧ್ಯಕ್ಷರಾಗಿ ಮಾದರಿಯಾಗಿ ಕಾರ್ಯನಿರ್ವಹಿಸಿದವರು. ಪಂಪಾವತಿಯವರು ಎದ್ದು ನಿಂತರೆ ಸದನ ನಡುಗುತ್ತಿತ್ತು. ಈಗ ನಮ್ಮ ವ್ಯವಸ್ಥೆ ಚದರ ಮೀಟರ್ ಲೆಕ್ಕದಲ್ಲಿ ಅಲ್ಲವೇ’ ಎಂದರು.

ಅವರ ದಾರಿಯಲ್ಲಿ ಹೋಗಿ ಎಂದಷ್ಟೇ ಹೇಳಿದೆ ಎಂದು ಸೋಮಣ್ಣ ಸಮಜಾಯಿಷಿ ನೀಡಿದರು. ಆಗ ಸಿಟ್ಟಿಗೆದ್ದ ಸಿದ್ದರಾಮಯ್ಯ, ‘70ರ ದಶಕದ ರಾಜಕಾರಣ ಬೇರೆ. ಈಗಿನ ರಾಜಕಾರಣ ಬೇರೆ. ರಾಜಕೀಯದಲ್ಲಿ ಆಗ ಪ್ರಾಮಾಣಿಕರು ಇದ್ದರು. ಈಗ ಎಷ್ಟು ಮಂದಿ ಪ್ರಾಮಾಣಿಕರು ಇದ್ದಾರೆ ಎಂಬುದನ್ನು ಪ್ರಶ್ನೆ ಮಾಡಿಕೊಳ್ಳಬೇಕಿದೆ. ಸದನದಲ್ಲಿ ಹೇಗೆ ವರ್ತಿಸಬೇಕು ಎಂಬುದು ನನಗೆ ಗೊತ್ತಿದೆ. 13 ಬಜೆಟ್‌ಗಳನ್ನು ಮಂಡಿಸಿದ್ದೇನೆ. ಸೋಮಣ್ಣ ಈ ರೀತಿ ವರ್ತಿಸುವುದು ಮೊದಲ ಸಲವೇನೂ ಅಲ್ಲ’ ಎಂದರು.

ಕಂದಾಯ ಸಚಿವ ಆರ್.ಅಶೋಕ, ‘ಆ ವಿಚಾರ ಬಿಟ್ಟು ಬಿಡಿ. ಕೂಲ್ ಆಗಿ’ ಎಂದು ಸಮಾಧಾನಪಡಿಸಿದರು. ಈ ವಿಚಾರ ಬಿಟ್ಟು ಬಿಡಿ ಎಂದು ರಮೇಶ್ ಕುಮಾರ್ ಸಹ ಹೇಳಿದರು. ‘ಈ ವಿಚಾರದ ಬಗ್ಗೆ ಮಾತನಾಡಲು ಬರಬೇಡ. ಸೋಮಣ್ಣ ನೀನು ಕುಳಿತುಕೋ’ ಎಂದು ಸಿದ್ದರಾಮಯ್ಯ ಅಬ್ಬರಿಸಿದರು. ‘ಏಕವಚನದಿಂದ ಮಾತನಾಡಬೇಡಿ’ ಎಂದು ಸೋಮಣ್ಣ ಆಕ್ಷೇಪಿಸಿದರು. ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈಗಿನ ಚುನಾವಣೆ ವ್ಯವಸ್ಥೆ ಬಗ್ಗೆ ಮಾತನಾಡಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಗೊಂದಲ

‘ಜಾತಿ ಗಣತಿ ದತ್ತಾಂಶ ಬಳಕೆ: ತಜ್ಞರ ಜೊತೆ ಚರ್ಚೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು (ಜಾತಿ ಗಣತಿ) ರಾಜ್ಯ ಸರ್ಕಾರ ಇನ್ನೂ ಒಪ್ಪಿಕೊಂಡಿಲ್ಲ. ಆದರೆ, ಆ ವರದಿಯಲ್ಲಿರುವ ದತ್ತಾಂಶಗಳನ್ನು ಬಳಸಿಕೊಂಡು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಹೋಗಬಹುದೇ ಎಂಬ ಬಗ್ಗೆ ಕಾನೂನು ತಜ್ಞರ ಜೊತೆ ಚರ್ಚಿಸಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.



ಕೆ.ಎಸ್‌. ಈಶ್ವರಪ್ಪ

ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿಗೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲ ಬಗ್ಗೆ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಆರ್.ಬಿ. ತಿಮ್ಮಾಪುರ ವಿಷಯ ಪ್ರಸ್ತಾಪಿಸಿದರು.

ಅದಕ್ಕೆ ಉತ್ತರಿಸಿದ ಈಶ್ವರಪ್ಪ, ‘ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಸಲು ರಾಜ್ಯ ಸರ್ಕಾರ ತಯಾರಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಇದೇ 9ರಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿ ಚುನಾವಣೆ ನಡೆಸುವ ಬಗ್ಗೆ 2–3 ದಿನಗಳಲ್ಲಿ ಕಾನೂನು ತಜ್ಞರ ಜೊತೆ ಮಾತುಕತೆ ನಡೆಸಲಾಗುವುದು’ ಎಂದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ನೇತೃತ್ವದಲ್ಲಿ ₹ 160 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿನ ಎಲ್ಲ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ. ಆ ವರದಿಯನ್ನು ಸರ್ಕಾರ ಒಪ್ಪಿಕೊಂಡು, ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಬೇಕು. ಸುಪ್ರೀಂ ಕೋರ್ಟ್ ಒಪ್ಪಿಕೊಳ್ಳಬಹುದು’ ಎಂದು ಅಭಿಪ್ರಾಯಪಟ್ಟರು.

ಆಗ ತಿಮ್ಮಾಪುರ, ‘ಸುಪ್ರೀಂ ಕೋರ್ಟ್‌ನ ಇತ್ತೀಚಿನ ಆದೇಶದಿಂದ ಮೀಸಲಾತಿ ಕೈತಪ್ಪಬಹುದೆಂಬ ಆತಂಕ ಹಿಂದುಳಿದ ವರ್ಗದ ಜನರಲ್ಲಿದೆ. ರಾಜ್ಯ ಸರ್ಕಾರ ತಕ್ಷಣ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿ ಮೀಸಲಾತಿ ಉಳಿಸಬೇಕು’ ಎಂದು ಆಗ್ರಹಿಸಿದರು.

‘ಅರಿವು’ ಯೋಜನೆ ಮಾರ್ಪಾಡು: ಮುಖ್ಯಮಂತ್ರಿ ಭರವಸೆ

ಬೆಂಗಳೂರು: ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ‘ಅರಿವು’ ಯೋಜನೆಯಡಿ ನೀಡುವ ಶೈಕ್ಷಣಿಕ ಸಾಲ ಯೋಜನೆಯನ್ನು ಮಾರ್ಪಾಡು ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ಪ್ರಶ್ನೆಗೆ ಉತ್ತರಿಸಿದ ಅವರು, ‘ಈಗ ಕೇವಲ ಸಿಇಟಿ ಮತ್ತು ನೀಟ್ ಮಾಡಿದ ವಿದ್ಯಾರ್ಥಿಗಳಿಗೆ ಮಾತ್ರ ಸಾಲ ಸೌಲಭ್ಯ ನೀಡಲಾಗುತ್ತಿದೆ. ಮುಂದೆ ಬಿಎ, ಬಿಕಾಂ, ಬಿಎಸ್ಸಿ ಮುಂತಾದ ಕೋರ್ಸ್‌ಗಳಿಗೂ ವಿಸ್ತರಿಸುವ ಬಗ್ಗೆ ಪರಿಶೀಲನೆ ನಡೆಸುತ್ತೇವೆ’ ಎಂದರು.

ಈ ಯೋಜನೆಯಡಿ 2019 ರಿಂದ ಈವರೆಗೆ ಒಟ್ಟು 46,955 ವಿದ್ಯಾರ್ಥಿಗಳಿಗೆ ₹191,07,29,969 ಸಾಲ ಮಂಜೂರು ಮಾಡಲಾಗಿದೆ. ಈ ಯೋಜನೆ ಸ್ಥಗಿತಗೊಳಿಸುವುದಿಲ್ಲ ಎಂದೂ ಹೇಳಿದರು.

ಸರ್ವರ್ ಸಮಸ್ಯೆ ಶಾಸಕರ ಆಕ್ರೋಶ: ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆ ಸಮಸ್ಯೆ ಆಗಿದೆ ಎಂದು ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ ಅವರು ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು.

‘ತಗ್ಗಿನ ಪ್ರದೇಶಗಳಲ್ಲೇ ಸರ್ವರ್ ಸಮಸ್ಯೆಗಳು ಹೆಚ್ಚು. ಬಿಎಸ್‌ಎನ್‌ಎಲ್ ಅನ್ನು ಖಾಸಗೀಕರಣ ಮಾಡಲು ಹೊರಟಿರುವುದೇ ಸರ್ವರ್ ಸಮಸ್ಯೆಗೆ ಕಾರಣ’ ಎಂದು ಹೇಳಿದಾಗ, ಹಲವು ಶಾಸಕರು ಇದಕ್ಕೆ ಧ್ವನಿಗೂಡಿಸಿದರು.

‘ಈ ಬಗ್ಗೆ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ’ ಎಂದು ಆಹಾರ ಸಚಿವ ಉಮೇಶ ಕತ್ತಿ ಹೇಳಿದರು.

ಮೇಕೆದಾಟು: ಮುಂದಿನ ವಾರ ಸರ್ವಪಕ್ಷ ಸಭೆ

ಒಂದನೇ ಪುಟದಿಂದ

‘ಯೋಜನೆ ಬಗ್ಗೆ ಕೇಂದ್ರ ಸಚಿವರಿಗೆ ಮನವರಿಕೆ ಮಾಡಿ ಡಿಪಿಆರ್‌ಗೆ ಒಪ್ಪಿಗೆ ಪಡೆಯಲಾಗುವುದು. ಬಳಿಕ ತ್ವರಿತಗತಿಯಲ್ಲಿ ಯೋಜನೆಯ ಕೆಲಸಗಳನ್ನು ಮಾಡುತ್ತೇವೆ’ ಎಂದು ಹೇಳಿದರು.

ಕಾಂಗ್ರೆಸ್‌ನ ಎಚ್.ಕೆ.ಪಾಟೀಲ, ‘ಕೇಂದ್ರ ಸಚಿವರ ಹೇಳಿಕೆ ಬಗ್ಗೆ ನೀವು ಪತ್ರ ಬರೆಯಬೇಕಿತ್ತು. ನಾವು ಬರೆಯುವ ಪತ್ರಗಳು ಎಲ್ಲ ಸುಪ್ರೀಂ ಕೋರ್ಟ್‌ಗೆ ಹೋಗುತ್ತವೆ. ಈಗಲೂ ಕಾಲ ಮಿಂಚಿಲ್ಲ. ಪತ್ರ ಬರೆದು ನಮ್ಮ ಅಸಮಾಧಾನ ವ್ಯಕ್ತಪಡಿಸಬೇಕು’ ಎಂದು ಸಲಹೆ ನೀಡಿದರು. ಬಸವರಾಜ ಬೊಮ್ಮಾಯಿ, ‘ಯೋಜನೆಯ ಅನುಷ್ಠಾನದ ಬಗ್ಗೆ ನಾವು ಮುಖ್ಯಮಂತ್ರಿಯಾದ ಬಳಿಕ ಕೇಂದ್ರ ಸಚಿವರಿಗೆ ಮೂರು ಪತ್ರಗಳನ್ನು ಬರೆದಿದ್ದೇನೆ’ ಎಂದು ಸ್ಪಷ್ಟಪಡಿಸಿದರು. ‘ಮಾತುಕತೆಯ ಬಗ್ಗೆ ಕೇಂದ್ರ ಸಚಿವರು ಹೇಳಿಕೆ ನೀಡುವಾಗ ನಾನು ವೇದಿಕೆಯಲ್ಲಿ ಇರಲಿಲ್ಲ’ ಎಂದೂ ಸ್ಪಷ್ಟನೆ ನೀಡಿದರು.

ಸಿದ್ದರಾಮಯ್ಯ, ‘ಯೋಜನೆಗೆ ಪರಿಸರ ಅನುಮತಿ ನೀಡುವುದಿಲ್ಲ ಎಂಬುದು ಕೇಂದ್ರ ಸಚಿವರ ಹೇಳಿಕೆಯ ತಾತ್ಪರ್ಯ’ ಎಂದರು.

‘ರಾಜಕೀಯಕ್ಕಾಗಿ ತಮಿಳುನಾಡು ತಕರಾರು’

‘ಮೇಕೆದಾಟು ಯೋಜನೆಯ ಬಗ್ಗೆ ತಮಿಳುನಾಡು ಸರ್ಕಾರ ರಾಜಕೀಯಕ್ಕಾಗಿ, ಮತ ಬ್ಯಾಂಕ್‌ಗಾಗಿ ತಕರಾರು ಎತ್ತುತ್ತಿದೆ’ ಎಂದು ಸಿದ್ದರಾಮಯ್ಯ ಆರೋಪಿಸಿದರು.

‘ಕಾವೇರಿ ನೀರು ಹಂಚಿಕೆ ವಿವಾದ ಇತ್ಯರ್ಥ ಆಗಿದೆ. ತಮಿಳುನಾಡಿಗೆ ಪ್ರತಿವರ್ಷ 177 ಟಿಎಂಸಿ ಅಡಿ ನೀರು ಬಿಡಬೇಕಿದೆ. ಅದಕ್ಕಿಂತಲೂ ಹೆಚ್ಚು ನೀರು ಬಿಡುತ್ತಿದ್ದೇವೆ. ನಮ್ಮ ಪಾಲಿನ ನೀರನ್ನು ಮೇಕೆದಾಟು ಯೋಜನೆಗೆ ಬಳಸಿಕೊಳ್ಳುತ್ತಿದ್ದೇವೆ’ ಎಂದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಹಂಚಿಕೆಯಾಗಿದ್ದಕ್ಕಿಂತ ಹೆಚ್ಚು ನೀರು ಬಳಸಬಾರದು ಎಂಬುದು ತಮಿಳುನಾಡಿನ ಆಕ್ಷೇಪ. ಕೋಲಾರ, ಚಿಕ್ಕಬಳ್ಳಾಪುರಕ್ಕೆ ಸಂಸ್ಕರಿಸಿದ ನೀರನ್ನು ಪೂರೈಕೆ ಮಾಡುವ ಯೋಜನೆಗೂ ತಮಿಳುನಾಡು ಸರ್ಕಾರ ತಕರಾರು ಎತ್ತಿದೆ’ ಎಂದರು.

ಕಾಂಗ್ರೆಸ್‌ನ ಎಚ್.ಕೆ.ಪಾಟೀಲ, ‘ಕಾವೇರಿ ನೀರಿನ ವಿವಾದ ಇತ್ಯರ್ಥಗೊಂಡಿದೆ. ಈ ವಿಚಾರದಲ್ಲಿ ಸರ್ಕಾರ ದ್ವಂದ್ವ ನಿಲುವು ತಾಳಬಾರದು’ ಎಂದು ಕಿವಿಮಾತು ಹೇಳಿದರು.

ಗೃಹ ರಕ್ಷಕರ ಭತ್ಯೆ ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಪೊಲೀಸ್ ಇಲಾಖೆಯನ್ನು ಹೊರತುಪಡಿಸಿ ಕರ್ತವ್ಯ ನಿರ್ವಹಿಸುತ್ತಿರುವ ಸುಮಾರು 3,025 ಗೃಹ ರಕ್ಷಕರ ಭತ್ಯೆಯನ್ನು ₹600 ಕ್ಕೆ ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಬೆಂಗಳೂರು ನಗರದಲ್ಲಿ ₹455 ರಿಂದ ₹600, ಇತರ ಭಾಗಗಳಲ್ಲಿ ₹380 ರಿಂದ ₹600 ಕ್ಕೆ ಹೆಚ್ಚಳ ಮಾಡಬಹುದೆಂದು ಪ್ರಸ್ತಾವನೆ ಮಾಡಲಾಗಿದೆ. ಸರ್ಕಾರದ ಈ ನಿರ್ಧಾರದಿಂದ ರಾಜ್ಯ ವಿವಿಧ ಇಲಾಖೆಯಲ್ಲಿ ಗೃಹ ರಕ್ಷಕ ಸ್ವಯಂ ಸೇವಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಬಹಳ ದಿನಗಳ ಬೇಡಿಕೆ ಈಡೇರಿಸಿದಂತೆ ಆಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ರೈತರ ಸಾಲ ಮನ್ನಾಕ್ಕೆ ಆದೇಶ ಹೊರಡಿಸಿಲ್ಲ: ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ರೈತರು ಸಹಕಾರ ಸಂಸ್ಥೆಗಳಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡಲು ಯಾವುದೇ ಆದೇಶ ಹೊರಡಿಸಿಲ್ಲ. ನಿರ್ಧಾರ ಕೈಗೊಳ್ಳುವ ಅವಕಾಶವನ್ನು ಆಯಾ ಸಹಕಾರ ಸಂಸ್ಥೆಗಳಿಗೆ ನೀಡಲಾಗಿದೆ ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಮುನಿರಾಜು ಗೌಡ ಪಿ.ಎಂ. ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, ‘ಕೋವಿಡ್‌ನಿಂದ ಮೃತಪಟ್ಟ ರೈತರಲ್ಲಿ 10,437 ಮಂದಿ ವಿವಿಧ ಸಹಕಾರ ಸಂಸ್ಥೆಗಳಿಂದ ₹ 91.97 ಕೋಟಿ ಸಾಲ ಪಡೆದಿದ್ದಾರೆ. ಲಾಭದಲ್ಲಿರುವ ಸಹಕಾರ ಸಂಸ್ಥೆಗಳು ತಮ್ಮ ಲಾಭಾಂಶವನ್ನು ಬಳಸಿಕೊಂಡು, ಅವರ ಸಾಲ ಮನ್ನಾ ಮಾಡಬಹುದು ಎಂಬ ಸೂಚನೆ ನೀಡಲಾಗಿದೆ. ಕೆಲವು ಸಹಕಾರ ಸಂಸ್ಥೆಗಳು ತಮ್ಮ ಆರ್ಥಿಕ ಶಕ್ತಿಗೆ ಅನುಸಾರವಾಗಿ ನಿರ್ಧಾರ ಕೈಗೊಂಡಿವೆ’ ಎಂದರು.

ರೈತರು ಸಹಕಾರ ಸಂಸ್ಥೆಗಳಿಂದ ಪಡೆದಿರುವ ಬೆಳೆ ಸಾಲದ ಮರುಪಾವತಿ ಅವಧಿಯನ್ನು ಜೂನ್ 1ರವರೆಗೂ ವಿಸ್ತರಿಸಲಾಗಿದೆ. ಈ ಅವಧಿಯ ₹ 131 ಕೋಟಿ ಬಡ್ಡಿಯನ್ನು ರಾಜ್ಯ ಸರ್ಕಾರ ಭರಿಸಲಿದೆ ಎಂದು ಅವರು ತಿಳಿಸಿದರು.

‘ನಿಯೋಗದಲ್ಲಿ ತೆರಳಿ ಮುಖ್ಯಮಂತ್ರಿ ಜೊತೆ ಚರ್ಚಿಸೋಣ’

ಗ್ರಾ.ಪಂ ಸದಸ್ಯರಿಗೆ ಗೌರವಧನ ಹೆಚ್ಚಳ: 14ರಂದು ಸಭೆ– ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮ ಪಂಚಾಯಿತಿ ಸದಸ್ಯರಿಗೆ ಗೌರವಧನ, ಭತ್ಯೆ ಹೆಚ್ಚಿಸುವುದು ಸೇರಿದಂತೆ ಏನೇನು ಸೌಲಭ್ಯಗಳನ್ನು ಕಲ್ಪಿಸಬಹುದೆಂಬ ಬಗ್ಗೆ ಇದೇ 14ರಂದು ಅಧಿಕಾರಿಗಳ ಜೊತೆ ಚರ್ಚಿಸಲು ನಿರ್ಧರಿಸಿದ್ದೇನೆ. ಆ ಸಭೆಗೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ 25 ಸದಸ್ಯರೂ ಭಾಗವಹಿಸಿ ಸಲಹೆ, ಸೂಚನೆ ನೀಡಬೇಕು’ ಎಂದು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಚನ್ನರಾಜ ಹಟ್ಟಿಹೊಳಿ, ಸುನೀಲ್‌ಗೌಡ ಪಾಟೀಲ, ಸಲೀಂ ಅಹ್ಮದ್ ಮತ್ತು ಬಿಜೆಪಿಯ ಡಿ.ಎಸ್. ಅರುಣ್ ಅವರ ಗಮನಸೆಳೆಯುವ ಸೂಚನೆಯ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಅವರು, ‘ಸಭೆಯ ಬಳಿಕ ನಿಯೋಗವಾಗಿ ಮುಖ್ಯಮಂತ್ರಿ ಜೊತೆ ಚರ್ಚಿಸೋಣ’ ಎಂದೂ ಹೇಳಿದರು.

‘ಅಷ್ಟೇ ಅಲ್ಲ, ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿನ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅಧ್ಯಯನ ನಡೆಸಲು ಸ್ಥಳೀಯ ಸಂಸ್ಥೆಗಳಿಂದ ಪರಿಷತ್ತಿಗೆ ಆಯ್ಕೆಯಾದ ಎಲ್ಲ 25 ಸದಸ್ಯರನ್ನು ಕಳುಹಿಸಲಾಗುವುದು’ ಎಂದೂ ಹೇಳಿದರು.

‘ಗ್ರಾಮ ಪಂಚಾಯಿತಿ ಸದಸ್ಯರಿಗೆ ಆರೋಗ್ಯ, ಬಸ್ ಪಾಸ್ ಸೇರಿದಂತೆ ಕೆಲವು ಸೌಲಭ್ಯಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದಲೇ ಕೊಡಲು ಅವಕಾಶವಿದೆ. ಈ ಬಗ್ಗೆಯೂ ಚರ್ಚೆ ನಡೆಸೋಣ. ಗ್ರಾಮ ಪಂಚಾಯಿತಿ ಸದಸ್ಯರಿಗೆ ನ್ಯಾಯ ಕೊಡಲು ಎಲ್ಲ ಸದಸ್ಯರು ಸೇರಿ ಪ್ರಾಮಾಣಿಕ ಪ್ರಯತ್ನ ಮಾಡೋಣ’ ಎಂದರು.

ಅದಕ್ಕೂ ಮೊದಲು ಸಚಿವರು ಸದನಕ್ಕೆ, ‘ಗೌರವಧನ ಹೆಚ್ಚಿಸುವ ಕುರಿತು ಆರ್ಥಿಕ ಇಲಾಖೆಗೆ 2021ರ ನ. 15ರಂದು ಪ್ರಸ್ತಾವನೆ ಸಲ್ಲಿಸಿದ್ದು, ಆರ್ಥಿಕ ಇಲಾಖೆಯು ಹೆಚ್ಚುವರಿ ಹಣಕಾಸು ಕಾರ್ಯಭಾರ ಭರಿಸಲು ಸಾಧ್ಯ ಇಲ್ಲವೆಂದು ನ. 29ರಂದು ಸ್ಪಷ್ಟಪಡಿಸಿದೆ. ಅಲ್ಲದೆ, ವಿಮಾ ಸೌಲಭ್ಯ, ಆರೋಗ್ಯ ಕಾರ್ಡ್ ಮತ್ತು ಕೇರಳ ಮಾದರಿಯಲ್ಲಿ ಸೌಲಭ್ಯ ಕೊಡುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ’ ಎಂದು ಲಿಖಿತ ಉತ್ತರ ನೀಡಿದರು. ಆ ಉತ್ತರವನ್ನು ವಾಪಸು ಪಡೆಯುವಂತೆ ಸದಸ್ಯರು ಆಗ್ರಹಿಸಿದ್ದರಿಂದ ವಾಪಸು ಪಡೆಯುವುದಾಗಿ ಈಶ್ವರಪ್ಪ ಘೋಷಿಸಿದರು.

ನಿಯಮ 330ರ ಅಡಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಸಲೀಂ ಅಹ್ಮದ್, ‘ಕೇರಳದ ಮಾದರಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ₹ 8,000, ಅಧ್ಯಕ್ಷರಿಗೆ ₹ 14,000 ಮತ್ತು ಉಪಾಧ್ಯಕ್ಷರಿಗೆ ₹ 11,000 ಗೌರವಧನ ನೀಡಬೇಕು’ ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನ ಚನ್ನರಾಜ ಹಟ್ಟಿಹೊಳಿ, ರಾಜೇಂದ್ರ ರಾಜಣ್ಣ, ಸುನೀಲಗೌಡ ಪಾಟೀಲ, ಮಂಜುನಾಥ ಭಂಡಾರಿ, ದಿನೇಶ್ ಗೂಳಿಗೌಡ, ಬಿಜೆಪಿಯ ಎಂ.ಕೆ. ಪ್ರಾಣೇಶ್, ಡಿ.ಎಸ್. ಅರುಣ್, ಪಿ.ಎಚ್. ಪೂಜಾರ್ ಸೇರಿದಂತೆ ಹಲವರು ಈ ಬೇಡಿಕೆಯನ್ನು ಬೆಂಬಲಿಸಿ ಮಾತನಾಡಿದರು.

‘ಪ್ರಜಾವಾಣಿ’ ವರದಿ ಪ್ರಸ್ತಾಪ

ಪೊಲೀಸ್ ಭ್ರಷ್ಟಾಚಾರ ನಿಯಂತ್ರಣಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ವರ್ಗಾವಣೆಯಲ್ಲಿನ ಭ್ರಷ್ಟಾಚಾರ ಮತ್ತು ಪೊಲೀಸರು ರಿಯಲ್ ಎಸ್ಟೇಟ್ ಹಾಗೂ ಮಾಫಿಯಾಗಳ ಜತೆ ನಂಟು ಇರಿಸಿಕೊಂಡಿರುವುದರ ವಿರುದ್ಧ ಕ್ರಮ ಜರುಗಿಸಬೇಕು ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಮುನಿರಾಜು ಗೌಡ ಪಿ.ಎಂ. ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರದ ಕುರಿತು ‘ಪ್ರಜಾವಾಣಿ’ಯ ಸೋಮವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿಯಲ್ಲಿನ ಅಂಶಗಳನ್ನು ಮಂಗಳವಾರ ವಿಧಾನ ಪರಿಷತ್ ಕಲಾಪದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಅವರು, ‘ಪೊಲೀಸರು ಮಾಮೂಲಿ ವಸೂಲಿಗೆ ಸೀಮಿತವಾಗಿದ್ದಾರೆ. ಅಕ್ರಮ ಚಟುವಟಿಕೆ ನಡೆಸುವ ಮಾಫಿಯಾಗಳ ಜತೆ ಶಾಮೀಲಾಗಿದ್ದಾರೆ ಎಂಬ ವರದಿಗಳು ಪ್ರಕಟವಾಗಿವೆ. ಕಠಿಣ ಕ್ರಮ ಕೈಗೊಂಡು, ಪೊಲೀಸ್ ಇಲಾಖೆಯನ್ನು ಸರಿದಾರಿಗೆ ತರಬೇಕು’ ಎಂದು ಆಗ್ರಹಿಸಿದರು.

‘ಪೊಲೀಸರ ವರ್ಗಾವಣೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವ ಆರೋಪವಿದೆ. ₹ 1 ಕೋಟಿಯಿಂದ ₹ 5 ಕೋಟಿಯವರೆಗೂ ಲಂಚ ಕೊಟ್ಟು ಆಯಕಟ್ಟಿನ ಹುದ್ದೆಗಳನ್ನು ಪಡೆಯುತ್ತಿರುವ ದೂರುಗಳಿವೆ. ಈ ಬಗ್ಗೆಯೂ ತನಿಖೆ ನಡೆಸಬೇಕು’ ಎಂದರು.

ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನಿಡಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

‘ಕೃಷಿ ಸಂಜೀವಿನಿ 164 ವಾಹನ ಶೀಘ್ರ ಸೇವೆಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಹೊಲಕ್ಕೆ ಹೋಗಿ ನೀರು, ಮಣ್ಣು ಮತ್ತು ಬೆಳೆಯನ್ನು ಪರೀಕ್ಷಿಸುವ ಸಂಚಾರಿ ಪ್ರಯೋಗಾಲಯದ ಸೌಲಭ್ಯ ಹೊಂದಿರುವ 164 ‘ಕೃಷಿ ಸಂಜೀವಿನಿ’ ವಾಹನಗಳನ್ನು ಶೀಘ್ರದಲ್ಲಿ ಸೇವೆಗೆ ಒದಗಿಸಲಾಗುವುದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಗೋವಿಂದರಾಜು ಅವರು ಮಂಗಳವಾರ ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, ‘ಕೊಪ್ಪಳದಲ್ಲಿ ಜಿಲ್ಲಾ ಖನಿಜ ನಿಧಿ ಹಣವನ್ನು ಬಳಸಿಕೊಂಡು ಪ್ರಾಯೋಗಿಕವಾಗಿ 20 ಕೃಷಿ ಸಂಜೀವಿನಿ ವಾಹನಗಳನ್ನು ಸೇವೆಗೆ ಒದಗಿಸಲಾಗಿತ್ತು. ಈಗ ಅದನ್ನು ರಾಜ್ಯದಾದ್ಯಂತ ವಿಸ್ತರಿಸಲಾಗುವುದು’ ಎಂದರು.

ಮಾರ್ಚ್ ಅಂತ್ಯದೊಳಗೆ 100 ವಾಹನಗಳನ್ನು ಖರೀದಿಸಿ, ಸೇವೆಗೆ ಒದಗಿಸಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ. ನಂತರ 64 ವಾಹನ ಖರೀದಿಸಲಾಗುವುದು. ಎರಡನೇ ಹಂತದಲ್ಲಿ ಎಲ್ಲ ರೈತ ಸೇವಾ ಕೇಂದ್ರಗಳಿಗೂ ತಲಾ ಒಂದು ವಾಹನ ಒದಗಿಸಲಾಗುವುದು. ಸಹಾಯವಾಣಿ ಸಂಖ್ಯೆ 155313 ಜತೆ ಅವುಗಳನ್ನು ಜೋಡಿಸಲಾಗುವುದು ಎಂದು ತಿಳಿಸಿದರು.

‘ರಾಜ್ಯದಲ್ಲಿ ನಕಲಿ ಕೀಟನಾಶಕಗಳ ಹಾವಳಿ ಹೆಚ್ಚಾಗಿದೆ. ರೈತರು ಸರಿಯಾದ ಮಾಹಿತಿ ಇಲ್ಲದೇ ಕೀಟನಾಶಕ ಬಳಸಿ ಅಪಾಯಕ್ಕೆ ಸಿಲುಕುತ್ತಿದ್ದಾರೆ. ಕೃಷಿ ಇಲಾಖೆ ಮೂಲಕ ಕೀಟನಾಶಕ ಮಾರಾಟಕ್ಕೆ ವ್ಯವಸ್ಥೆ ಮಾಡಬೇಕು’ ಎಂದು ಗೋವಿಂದರಾಜು ಆಗ್ರಹಿಸಿದರು.

‘ಖಾಸಗಿ ಸಹಭಾಗಿತ್ವದಿಂದ ದೊಡ್ಡ ಹಗರಣ’

ಬೆಂಗಳೂರು: ‘ಜಕ್ಕೂರು ವೈಮಾನಿಕ ತರಬೇತಿ ಶಾಲೆಯನ್ನು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ ಮಾದರಿ) ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಗಿದೆ. ಇದು ದೊಡ್ಡ ಹಗರಣ ಆಗಲಿದೆ’ ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಎಚ್ಚರಿಸಿದರು.



ಕೃಷ್ಣ ಬೈರೇಗೌಡ

ವಿಧಾನಸಭೆಯಲ್ಲಿ ಮಂಗಳವಾರ ನಿಯಮ 73ರಡಿ ಗಮನ ಸೆಳೆದ ಅವರು, ‘ತರಬೇತಿ ಶಾಲೆಯಲ್ಲಿ 200 ಎಕರೆ ಜಾಗ ಇದೆ. ಇಲ್ಲಿ ಎಕರೆಗೆ ₹25 ಕೋಟಿ ಬೆಲೆ ಇದೆ. ನಮ್ಮ ಸರ್ಕಾರದ ಅವಧಿಯಲ್ಲೂ ಸಾಹಸ ಸೊಸೈಟಿಯೊಂದಕ್ಕೆ 25 ಎಕರೆ ಜಾಗ ನೀಡಲು ಒಪ್ಪಿಗೆ ನೀಡಲಾಗಿತ್ತು. ಅಲ್ಲಿ 100 ಶಾಸಕರಿಗೆ, 100 ಐಎಎಸ್ ಅಧಿಕಾರಿಗಳಿಗೆ, 50 ನ್ಯಾಯಮೂರ್ತಿಗಳಿಗಾಗಿ ಕ್ಲಬ್ ಸ್ಥಾಪಿಸಲು ಒಪ್ಪಿಗೆ ನೀಡಲಾಗಿತ್ತು. ಬೆಂಗಳೂರಿನಲ್ಲಿ ಟರ್ಫ್ ಕ್ಲಬ್ ಇದೆ. ಇನ್ನೊಂದು ಕ್ಲಬ್ ಸ್ಥಾಪಿಸುವ ಅಗತ್ಯ ಏನಿತ್ತು’ ಎಂದು ಪ್ರಶ್ನಿಸಿದರು.

‘ಈ ಸೊಸೈಟಿಗೆ ಜಾಗ ನೀಡುವ ಪ್ರಸ್ತಾಪವನ್ನು ಬಿಜೆಪಿ ಸರ್ಕಾರ ಹಿಂಪಡೆದಿದೆ. ಇದು ಸ್ವಾಗತಾರ್ಹ. ಆದರೆ, 200 ಎಕರೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಿದೆ. ₹50 ಲಕ್ಷ ಉಳಿಸಲು ಸರ್ಕಾರ ಇಂತಹ ತೀರ್ಮಾನ ಕೈಗೊಳ್ಳುವುದು ಸರಿಯಲ್ಲ. ಯಾರದ್ದೋ ಹಿತಾಸಕ್ತಿ ಕಾಪಾಡಲು ನೂರಾರು ಕೋಟಿ ಬೆಲೆಬಾಳುವ ಜಾಗವನ್ನು ಕಬಳಿಸಲು ಬಿಡುವುದು ಸರಿಯಲ್ಲ’ ಎಂದು ಕಿವಿಮಾತು ಹೇಳಿದರು.

ಕ್ರೀಡಾ ಸಚಿವ ನಾರಾಯಣ ಗೌಡ ಉತ್ತರಿಸಿ, ‘ವೈಮಾನಿಕ ಶಾಲೆಯನ್ನು ನಿರ್ವಹಣೆ ಮಾಡಲು ಖಾಸಗಿ ಸಹಭಾಗಿತ್ವ ಮಾಡಿಕೊಳ್ಳಲಾಗುತ್ತಿದೆ. ಉಳಿದಂತೆ ಯಾವುದೇ ತೀರ್ಮಾನ ಆಗಿಲ್ಲ. ಸ್ಥಳೀಯ ಶಾಸಕರ ಜತೆಗೆ ಚರ್ಚಿಸಿಯೇ ಈ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಸ್ಪಷ್ಟಪಡಿಸಿದರು.

ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಆಕ್ರೋಶ

ರಷ್ಯಾ ದಾಳಿಯಿಂದ ರಕ್ಷಿಸದ ಪಾಶ್ಚಾತ್ಯ ರಾಷ್ಟ್ರಗಳ 'ಈಡೇರದ ಭರವಸೆ'ಗಳ ವಿರುದ್ಧ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಂಗಳವಾರ ಕಿಡಿಕಾರಿದ್ದಾರೆ.

ಟೆಲಿಗ್ರಾಂನಲ್ಲಿ ವಿಡಿಯೊ ಬಿಡುಗಡೆ ಮಾಡಿರುವ ಅವರು- ಪಾಶ್ಚಾತ್ಯ ರಾಷ್ಟ್ರಗಳ ನಡೆಯನ್ನು ತೀವ್ರವಾಗಿ ಟೀಕಿಸಿದ್ದಾರೆ.

'ರಷ್ಯಾದ ಆಕ್ರಮಣ ಆರಂಭವಾಗಿ 13 ದಿನಗಳು ಕಳೆದವು. ಭರವಸೆಗಳನ್ನು ಕೇಳುತ್ತಲೇ ಇದ್ದೇವೆ. ನಮ್ಮ ವಾಯುಪ್ರದೇಶವನ್ನು ರಕ್ಷಿಸಲಾಗುತ್ತದೆ, ವಿಮಾನಗಳು ಬರಲಿವೆ, ಅವುಗಳನ್ನು ನಮಗೆ ತಲುಪಿಸಲಾಗುತ್ತದೆ ಎಂದು 13 ದಿನಗಳಿಂದ ಹೇಳುತ್ತಲೇ ಬರಲಾಗುತ್ತಿದೆ' ಎಂದು ಪಾಶ್ಚಾತ್ಯ ರಾಷ್ಟ್ರಗಳ ಭರವಸೆಯನ್ನು ಖಂಡಿಸಿದ್ದಾರೆ.

ರಷ್ಯಾದ ಯುದ್ಧ ವಿಮಾನಗಳನ್ನು ತಡೆಯಲು ಉಕ್ರೇನ್‌ನಲ್ಲಿ 'ಹಾರಾಟ ನಿಷೇಧ ವಲಯ' (ನೋ ಫ್ಲೈ ಜೋನ್) ರಚಿಸುವಂತೆ ಝೆಲೆನ್‌ಸ್ಕಿ ನ್ಯಾಟೊವನ್ನು ಕೇಳುತ್ತಲೇ ಬಂದಿದ್ದಾರೆ. ಆದರೆ, ಹಾಗೆ ಹಾರಾಟ ನಿಷೇಧ ವಲಯ ರಚಿಸಿದರೆ ಅದು ಯುದ್ಧದಲ್ಲಿ ಪಾಲ್ಗೊಂಡಂತೆ ಆಗುತ್ತದೆ ಎಂದು ಹೇಳಿರುವ ನ್ಯಾಟೊ, ಝೆಲೆನ್‌ಸ್ಕಿ ಪ್ರಸ್ತಾವವನ್ನು ತಿರಸ್ಕರಿಸುತ್ತಲೇ ಬಂದಿದೆ.

2ನೇ ಮಹಾಯುದ್ಧದ ಬಳಿಕ ಅತಿ ಹೆಚ್ಚಿನ ಜನರ ವಲಸೆ– ವಿಶ್ವಸಂಸ್ಥೆ ಆತಂಕ

20 ಲಕ್ಷ ದಾಟಿದ ನಿರಾಶ್ರಿತರ ಸಂಖ್ಯೆ

ಕೀವ್(ಎಪಿ, ಪಿಟಿಐ): ರಷ್ಯಾ ಸಾರಿದ ಯುದ್ಧದಿಂದ ಭಯ ಭೀತರಾಗಿರುವ ಉಕ್ರೇನ್‌ನ ಲಕ್ಷಾಂತರ ಮಂದಿ ನಿರಾಶ್ರಿತರು ಆಶ್ರಯ ಅರಸಿ ಇತರೆ ದೇಶಗಳಿಗೆ ಹೋಗುತ್ತಿದ್ದಾರೆ. ಹೀಗೆ ಉಕ್ರೇನ್‌ನಿಂದ ಈವರೆಗೆ 20 ಲಕ್ಷಕ್ಕೂ ಹೆಚ್ಚು ಮಂದಿ ನಿರಾಶ್ರಿತರು ಇತರೆ ದೇಶಗಳಿಗೆ ಹೋಗಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ.

ಅಲ್ಲದೆ 2ನೇ ಮಹಾಯುದ್ಧದ ಬಳಿಕ ಯುರೋಪ್ ರಾಷ್ಟ್ರಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನಿರಾಶ್ರಿತರ ಸಂಖ್ಯೆ ಹೆಚ್ಚಳವಾಗಿರುವುದು ಇದೇ ಮೊದಲು ಎಂದು ವಿಶ್ವಸಂಸ್ಥೆ ಆತಂಕ ವ್ಯಕ್ತಪಡಿಸಿದೆ.

ಈ ಬಗ್ಗೆ ಮಂಗಳವಾರ ಟ್ವೀಟ್ ಮಾಡಿದ ವಿಶ್ವಸಂಸ್ಥೆಯ ನಿರಾಶ್ರಿತರ ಹೈಕಮಿಷನರ್ ಫಿಲಿಪ್ಪೊ ಗ್ರಾಂಡಿ ಅವರು, 'ಯುದ್ಧಪೀಡಿತ ಉಕ್ರೇನ್‌ನಿಂದ ಇತರೆ ದೇಶಗಳಿಗೆ ಆಶ್ರಯ ಬಯಸಿ ತೆರಳುತ್ತಿರುವ ನಿರಾಶ್ರಿತರ ಸಂಖ್ಯೆ 20 ಲಕ್ಷಕ್ಕೆ ಏರಿಕೆಯಾಗಿದೆ. ಉಕ್ರೇನಿಗಳು ಬಯಸುವ ದೇಶಗಳಿಗೆ ತೆರಳಲು ಅವರಿಗೆ ಅವಕಾಶ ಕಲ್ಪಿಸಬೇಕು' ಎಂದು ತಿಳಿಸಿದ್ದಾರೆ.

ಕಾರಿಡಾರ್‌ಗೆ ಒಪ್ಪಿಗೆ

ಪೂರ್ವ ಉಕ್ರೇನ್‌ನ ಸುಮಿ ನಗರದಲ್ಲಿ ನಾಗರಿಕರನ್ನು ಸ್ಥಳಾಂತರಿಸುವ ಸಲುವಾಗಿ ಉದ್ದೇಶಿಸಿರುವ ಸುರಕ್ಷಿತ ಮಾನವೀಯ ಕಾರಿಡಾರ್‌ಗಳಿಗೆ ಉಕ್ರೇನ್ ಮತ್ತು ರಷ್ಯಾದ ಅಧಿಕಾರಿಗಳು ಮಂಗಳವಾರ ಒಪ್ಪಿಗೆ ಸೂಚಿಸಿದ್ದಾರೆ.

ಉಕ್ರೇನ್‌ನ ಇರ್ಪಿನ್ ನಗರದಲ್ಲಿ ಮಂಗಳವಾರ ಸೈನಿಕರು ವೃದ್ಧೆಯನ್ನು ಸುರಕ್ಷಿತ ಸ್ಥಳಕ್ಕೆ ಕರೆತಂದರು —ಎಎಫ್‌ಪಿ ಚಿತ್ರ

ನಾಗರಿಕರನ್ನು ಸ್ಥಳಾಂತರಿಸಲು ಸ್ಥಳೀಯ ಕಾಲಮಾನ ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ಕದನ ವಿರಾಮಕ್ಕೆ ಎರಡೂ ಕಡೆಯವರು ಒಪ್ಪಿದ್ದಾರೆ ಎಂದು ಉಕ್ರೇನ್‌ನ ಉಪ ಪ್ರಧಾನಿ ಐರಿನಾ ವೆರೆಶ್‌ಚುಕ್ ತಿಳಿಸಿದ್ದಾರೆ.

ಸುಮಿಯಿಂದ ಸ್ಥಳಾಂತರಿಸಲ್ಪಟ್ಟವರಲ್ಲಿ ಭಾರತ ಮತ್ತು ಚೀನಾದ ವಿದ್ಯಾರ್ಥಿಗಳು ಸೇರಿದ್ದಾರೆ ಎಂದು ಅವರು ಹೇಳಿದ್ದಾರೆ.

ನಾಗರಿಕರು ಮತ್ತು ವಿದೇಶಿಯರ ಸುರಕ್ಷಿತ ಹಾದಿಗೆ ಅನುವು ಮಾಡಿಕೊಡುವ ಮಾನವೀಯ ಕಾರಿಡಾರ್‌ಗಳಿಗೆ ಅಡ್ಡಿಪಡಿಸಲಾಗುತ್ತಿದೆ ಎಂದು ರಷ್ಯಾ ಮತ್ತು ಉಕ್ರೇನ್ ವಿಶ್ವಸಂಸ್ಥೆಯಲ್ಲಿ ಪರಸ್ಪರ ದೂಷಿಸಿದ್ದವು. ಇದೇ ಸಂದರ್ಭದಲ್ಲಿ ಉಕ್ರೇನ್‌ನಲ್ಲಿರುವ ತನ್ನೆಲ್ಲ ನಾಗರಿಕರಿಗೆ ಅಡೆತಡೆಯಿಲ್ಲದ ಹಾದಿಯನ್ನು ಸುಗಮಗೊಳಿಸುವಂತೆ ಎರಡೂ ಕಡೆಯವರನ್ನು ಭಾರತವು ಒತ್ತಾಯಿಸಿತ್ತು.

ರಷ್ಯಾದ ತೈಲ ಉತ್ಪನ್ನಗಳ ಆಮದು ಮೇಲೆ ಅಮೆರಿಕ ನಿಷೇಧ

ಜೋ ಬೈಡನ್

ವಾಷಿಂಗ್ಟನ್ (ಎಎಫ್‌ಪಿ): ಉಕ್ರೇನ್ ಮೇಲೆ ಯುದ್ಧ ಸಾರಿದ ರಷ್ಯಾದ ಮೇಲೆ ಹಲವು ನಿರ್ಬಂಧ ಕ್ರಮಗಳನ್ನು ಹೇರಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಇದೀಗ ರಷ್ಯಾದ ತೈಲೋತ್ಪನ್ನಗಳ ಆಮದು ಮೇಲೆಯೂ ನಿಷೇಧ ಹೇರಿದ್ದಾರೆ.

ಶ್ವೇತಭವನದಲ್ಲಿ ಮಂಗಳವಾರ ರಾತ್ರಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೈಡನ್ ಅವರು, 'ರಷ್ಯಾದ ತೈಲ ಮತ್ತು ನೈಸರ್ಗಿಕ ಅನಿಲ ಸೇರಿದಂತೆ ಎಲ್ಲಾ ಇಂಧನಗಳ ಆಮದು ಮೇಲೆ ನಾವು ನಿಷೇಧ ಹೇರುತ್ತಿದ್ದೇವೆ. ಇದರನ್ವಯ ರಷ್ಯಾದಿಂದ ಆಮದು ಆಗುವ ಯಾವುದೇ ತೈಲೋತ್ಪನ್ನಗಳು ಅಮೆರಿಕದ ಬಂದರುಗಳಲ್ಲಿ ಸ್ವೀಕಾರಾರ್ಹವಲ್ಲ. ಈ ಮೂಲಕ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಮೇಲೆ ಅಮೆರಿಕದ ಜನತೆ ಪ್ರಬಲ ಹೊಡೆತ ನೀಡಲಿದ್ದಾರೆ' ಎಂದು ಹೇಳಿದರು.

ತನ್ನ ಮಿತ್ರ ರಾಷ್ಟ್ರಗಳ ಜತೆಗೆ ಚರ್ಚಿಸಿದ ಬಳಿಕ ರಷ್ಯಾ ವಿರುದ್ಧ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಅವರು ಇದೇ ವೇಳೆ ತಿಳಿಸಿದ್ದಾರೆ.

ತಮ್ಮ ಮೇಲೆ ಯುದ್ಧ ಸಾರಿರುವ ರಷ್ಯಾದ ವಿರುದ್ಧ ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳು ಮತ್ತಷ್ಟು ಕಠಿಣ ನಿರ್ಬಂಧಗಳನ್ನು ಕೈಗೊಳ್ಳಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಇತ್ತೀಚೆಗೆ ಒತ್ತಾಯಿಸಿದ್ದರು. ಇದರ ಬೆನ್ನಲ್ಲೇ, ಅಮೆರಿಕದಿಂದ ಈ ನಿರ್ಣಯ ಹೊರಬಿದ್ದಿದೆ.

ತೈಲ ಬೆಲೆ 200 ಡಾಲರ್‌ಗೆ ಏರಿಕೆ ಸಾಧ್ಯತೆ

ಒಸ್ಲೊ (ರಾಯಿಟರ್ಸ್): ರಷ್ಯಾದ ತೈಲ ಉತ್ಪನ್ನಗಳ ಮೇಲೆ ಅಮೆರಿಕ ನಿಷೇಧ ಹೇರಿರುವ ಬೆನ್ನಲ್ಲೇ, ಯರೋಪ್ ರಾಷ್ಟ್ರಗಳು ರಷ್ಯಾದ ತೈಲ ಉತ್ಪನ್ನಗಳ ಮೇಲೆ ನಿರ್ಬಂಧ ಹೇರಿದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ಬ್ಯಾರೆಲ್ ತೈಲ ಬೆಲೆಯು 200 ಡಾಲರ್‌ಗೆ (₹ 15,400) ಏರಿಕೆಯಾಗುವ ಸಾಧ್ಯತೆಯಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

ವೈದ್ಯಕೀಯ ಸೌಲಭ್ಯ ಪೂರೈಕೆ ಕೊರತೆ: ವಿಶ್ವಸಂಸ್ಥೆ ಕಳವಳ

ಕೀವ್ (ರಾಯಿಟರ್ಸ್): ಇತ್ತೀಚಿನ ದಿನಗಳಲ್ಲಿ ಉಕ್ರೇನ್‌ನಲ್ಲಿ ಆಸ್ಪತ್ರೆಗಳು, ಆಂಬುಲೆನ್ಸ್ ಸೇವೆ ಹಾಗೂ ಇತರ ವೈದ್ಯಕೀಯ ಸೌಲಭ್ಯಗಳ ಮೇಲಿನ ದಾಳಿಗಳು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ ಎಂದು ವಿಶ್ವಸಂಸ್ಥೆಯು ಮಂಗಳವಾರ ಕಳವಳ ವ್ಯಕ್ತಪಡಿಸಿದೆ.

ಇದರಿಂದ ದೇಶವು ಪ್ರಮುಖ ವೈದ್ಯಕೀಯ ಸೌಲಭ್ಯಗಳ ಪೂರೈಕೆಯ ಕೊರತೆ ಎದುರಿಸುತ್ತಿದೆ ಎಂದೂ ಹೇಳಿದೆ. ಫೆಬ್ರುವರಿ 24ರಿಂದ ರಷ್ಯಾ ಇದುವರೆಗೆ ಉಕ್ರೇನ್‌ನ ವೈದ್ಯಕೀಯ ಸೌಲಭ್ಯಗಳ ಮೇಲೆ ನಡೆಸಿದ 16 ದಾಳಿಗಳಲ್ಲಿ ಕನಿಷ್ಠ 9 ಜನರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆ ಸೋಮವಾರ ದೃಢಪಡಿಸಿದೆ.

ಉಕ್ರೇನ್‌ನಲ್ಲಿ ಆಮ್ಲಜನಕ, ಇನ್ಸುಲಿನ್, ವೈಯಕ್ತಿಕ ರಕ್ಷಣಾ ಸಲಕರಣೆಗಳು, ರಕ್ತದ ಮಾದರಿಗಳ ಅಭಾವ ಉಂಟಾಗಿದೆ. ಈ ನಿಟ್ಟಿನಲ್ಲಿ ವೈದ್ಯಕೀಯ ಸೇವೆ ಪೂರೈಸಲು ವಿಶ್ವಸಂಸ್ಥೆಯು ವೇಗವಾಗಿ ಕೆಲಸ ಮಾಡುತ್ತಿದೆ ಎಂದು ಯುರೋಪ್‌ನ ಪ್ರಾದೇಶಿಕ ನಿರ್ದೇಶಕ ಹ್ಯಾನ್ಸ್ ಕ್ಲೂಗೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಷ್ಯಾದ ಜನರಲ್ ಸಾವು: ಉಕ್ರೇನ್

ಎಲ್ವಿವ್ (ಎಪಿ): ಆಕ್ರಮಣ ಪ್ರಾರಂಭವಾದಾಗಿನಿಂದಲೂ ರಷ್ಯಾದ ಪಡೆಗಳು ವಶಪಡಿಸಿಕೊಳ್ಳಲು ಯತ್ನಿಸುತ್ತಿರುವ ಉಕ್ರೇನ್‌ನ ಅತಿ ದೊಡ್ಡ ನಗರ ಹಾರ್ಕಿವ್ ಸುತ್ತಮುತ್ತ ನಡೆದ ಹೋರಾಟದಲ್ಲಿ ರಷ್ಯಾದ ಜನರಲ್ ಒಬ್ಬರು ಸಾವಿಗೀಡಾಗಿದ್ದಾರೆ ಎಂದು ಉಕ್ರೇನ್‌ನ ಮಿಲಿಟರಿ ಗುಪ್ತಚರ ಸಂಸ್ಥೆ ತಿಳಿಸಿದೆ.

ಸಾವಿಗೀಡಾದ ಅಧಿಕಾರಿಯನ್ನು ಮೇಜರ್ ಜನರಲ್ ವಿಟಾಲಿ ಗೆರಾಸಿಮೊವ್ (45) ಎಂದು ಗುರುತಿಸಲಾಗಿದೆ. ಸಿರಿಯಾ ಮತ್ತು ಚೆಚೆನ್ಯಾದಲ್ಲಿ ನಡೆದ ಹೋರಾಟ ಮತ್ತು 2014ರಲ್ಲಿ ಕ್ರಿಮಿಯಾವನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ವಿಟಾಲಿ ಪಾಲ್ಗೊಂಡಿದ್ದರು ಎಂದು ಗುಪ್ತಚರ ಸಂಸ್ಥೆ ಮಾಹಿತಿ ನೀಡಿದೆ. ಆದರೆ, ವಿಟಾಲಿ ಅವರ ಸಾವನ್ನು ರಷ್ಯಾ ಇನ್ನೂ ದೃಢಪಡಿಸಿಲ್ಲ ಹಾಗೂ ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮತ್ತೊಬ್ಬ ಜನರಲ್ ಸಾವು: ಹಾರ್ಕಿವ್ ಸುತ್ತಮುತ್ತ ನಡೆದ ಹೋರಾಟಕ್ಕೂ ಮುನ್ನ ಮತ್ತೊಬ್ಬ ಜನರಲ್ ಸಾವಿಗೀಡಾಗಿದ್ದರು ಎಂದು ಮೂಲಗಳು ತಿಳಿಸಿವೆ.

ರಷ್ಯಾದ 7ನೇ ವಾಯುಸೇನೆಯ ಕಮಾಂಡಿಂಗ್ ಜನರಲ್ ಮೇಜರ್ ಜನರಲ್ ಆಂಡ್ರೆ ಸುಖೋವೆಟ್‌ಸ್ಕೈ ಅವರು ಉಕ್ರೇನ್‌ನಲ್ಲಿ ಸಾವಿಗೀಡಾಗಿದ್ದರು ಎಂದು ರಷ್ಯಾದ ಸ್ಥಳೀಯ ಅಧಿಕಾರಿಗಳ ಸಂಘಟನೆಯು ದೃಢಪಡಿಸಿದೆ.

ಅಣಕು ರಕ್ಷಣಾ ಕಾರ್ಯಾಚರಣೆ

ಬೆಳಗಾವಿಯಲ್ಲಿ ನಡೆಯುತ್ತಿರುವ ಭಾರತ–ಜಪಾನ್ ಜಂಟಿ ಸಮರಾಭ್ಯಾಸದ ಭಾಗವಾಗಿ ಮಂಗಳವಾರ ತಾಲ್ಲೂಕಿನ ಹಾಲಭಾವಿ ಹೊರವಲಯದಲ್ಲಿ ಸೈನಿಕರಿಂದ ಅಣಕು ರಕ್ಷಣಾ ಕಾರ್ಯಾಚರಣೆ ನಡೆಯಿತು

ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

'ಸುರಕ್ಷಿತ ಕಾರಿಡಾರ್' ಕಾರ್ಯರೂಪಕ್ಕೆ ಬಂದಿಲ್ಲ: ಭಾರತ ಕಳವಳ

ವಿಶ್ವಸಂಸ್ಥೆ (ಪಿಟಿಐ): 'ಯುದ್ಧ ಪೀಡಿತ ಉಕ್ರೇನ್‌ನ ಸುಮಿ ನಗರದಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ಕರೆತರಲು ಅನುಕೂಲವಾಗುವಂತೆ ಸುರಕ್ಷಿತ ಕಾರಿಡಾರ್ ಒದಗಿಸುವಂತೆ ಹಲವು ಬಾರಿ ಒತ್ತಾಯಿಸಲಾಗಿದ್ದರೂ, ಫಲಪ್ರದವಾಗಿಲ್ಲ' ಎಂದು ವಿಶ್ವಸಂಸ್ಥೆಯ ಭದ್ರತಾಮಂಡಳಿ ಸಭೆಯಲ್ಲಿ ಭಾರತ ಕಳವಳ ವ್ಯಕ್ತಪಡಿಸಿದೆ.

'ಈ ವರೆಗೆ 20 ಸಾವಿರಕ್ಕೂ ಹೆಚ್ಚು ಭಾರತೀಯರನ್ನು ತಾಯ್ನಾಡಿಗೆ ಕರೆತರಲಾಗಿದೆ. ಉಳಿದವರ ತೆರವಿಗಾಗಿ

ಟಿ.ಎಸ್. ತಿರುಮೂರ್ತಿ

ರಷ್ಯಾ ಹಾಗೂ ಉಕ್ರೇನ್‌ಗೆ ಪದೇಪದೇ ಮನವಿ ಮಾಡಲಾಗಿದ್ದರೂ, ಸುರಕ್ಷಿತ ಕಾರಿಡಾರ್ ಕಾರ್ಯರೂಪಕ್ಕೆ ಬಂದಿಲ್ಲ' ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ ಹೇಳಿದ್ದಾರೆ.

'ಮಾನವೀಯ ಕಾರಿಡಾರ್ ಒದಗಿಸುವ ವಿಷಯವನ್ನು ಯಾವುದೇ ಕಾರಣಕ್ಕೂ ರಾಜಕೀಯಗೊಳಿಸಬಾರದು. ಮಾನವೀಯ ನೆರವು, ತಟಸ್ಥ ಧೋರಣೆ, ನಿಷ್ಪಕ್ಷಪಾತ ಹಾಗೂ ಸ್ವಾತಂತ್ರ್ಯದಂತಹ ತತ್ವಗಳೇ ಈ ಕಾರ್ಯಕ್ಕೆ ಮಾರ್ಗದರ್ಶಿ ಸೂತ್ರಗಳಾಗಬೇಕು' ಎಂದೂ ಅವರು ಪ್ರತಿಪಾದಿಸಿದರು.

'ಕೇವಲ ಭಾರತೀಯರಷ್ಟೇ ಅಲ್ಲ, ಸಹಾಯ ಯಾಚಿಸಿದ ಬೇರೆ ದೇಶಗಳ ಪ್ರಜೆಗಳಿಗೂ ಸಹ ಭಾರತ ಸ್ಪಂದಿಸಿದೆ. ಬರುವ ದಿನಗಳಲ್ಲಿ ಇಂಥ ಸ್ಪಂದನೆ ಮುಂದುವರಿಯುವುದು' ಎಂದು ಹೇಳಿದರು.

ಉಕ್ರೇನ್ ಸೇನೆ ಸೇರಿದ ತಮಿಳುನಾಡು ವಿದ್ಯಾರ್ಥಿ

ಚೆನ್ನೈ: ಭಾರತೀಯ ಸೇನೆ ಸೇರ್ಪಡೆಯಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ ತಮಿಳುನಾಡು ಯುವಕ ಇದೀಗ ರಷ್ಯಾದ ವಿರುದ್ಧ ಹೋರಾಡಲು ಉಕ್ರೇನ್ ಪ್ಯಾರಾಮಿಲಿಟರಿ ಪಡೆಗೆ ಸೇರ್ಪಡೆಯಾಗಿದ್ದಾರೆ.

ಭಾರತೀಯ ಸೇನೆ ಸೇರ್ಪಡೆಗಾಗಿ ಭಾರಿ ಕಸರತ್ತು ನಡೆಸಿದ್ದ ಏರೊಸ್ಪೇಸ್ ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ ಕೊಯಮತ್ತೂರಿನ ಸೈನಿಕೇಶ್ ರವಿಚಂದ್ರನ್ ಅವರು ಸೇನೆಗೆ ಸೇರಲು ಅಗತ್ಯವಿರುವಷ್ಟು ಎತ್ತರ ಇರಲಿಲ್ಲ. ಹೀಗಾಗಿ ಭಾರತೀಯ ಸೇನೆ ಸೇರುವ ಅವಕಾಶದಿಂದ 2 ಬಾರಿ ವಂಚಿತರಾಗಿದ್ದರು. ಇದೀಗ ಉಕ್ರೇನ್ ಸೇನೆ ಸೇರಿದ್ದಾರೆ ಎಂದು ಕೇಂದ್ರ ಗುಪ್ತಚರ ಇಲಾಖೆ ತಿಳಿಸಿದೆ.

ಈ ಹಿಂದೆ ಅಮೆರಿಕದ ಸೇನೆ ಸೇರಲು ಚೆನ್ನೈನಲ್ಲಿರುವ ಅಮೆರಿಕದ ದೂತವಾಸ ಕಚೇರಿಯನ್ನೂ ಸಂಪರ್ಕಿಸಿದ್ದರು. ಆದರೆ ಅದು ಸಾಧ್ಯವಾಗಿರಲಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು. ಇದೀಗ ಯುವಕ ಉಕ್ರೇನ್ ಸೇನೆ ಸೇರಿದ್ದಾರೆ ಎಂಬ ಮಾಹಿತಿಯನ್ನು ಗುಪ್ತಚರ ಇಲಾಖೆ ಅಧಿಕಾರಿಗಳು, ರವಿ ಚಂದ್ರನ್ ಅವರ ಕುಟುಂಬಕ್ಕೆ ತಿಳಿಸಿದ್ದಾರೆ.

ಕೀವ್ ರಾಯಭಾರ ಕಚೇರಿಯಿಂದ ಸಲಹೆ

ಕೀವ್: ಉಕ್ರೇನ್ ಕೀವ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಮಂಗಳವಾರ ಮತ್ತೊಂದು ಪ್ರಕಟಣೆ ಹೊರಡಿಸಿದೆ. 'ವಿದ್ಯಾರ್ಥಿಗಳ ತೆರವು ಕಾರ್ಯಾಚರಣೆಗೆ ನೆರವಾಗುವ ಉದ್ದೇಶದಿಂದ ಸುರಕ್ಷಿತ ಕಾರಿಡಾರ್ ರಚಿಸಲಾಗಿದ್ದು, ಸ್ಥಳೀಯ ಕಾಲಮಾನ ಬೆಳಿಗ್ಗೆ 10 ಗಂಟೆಯಿಂದ ದೇಶದ ವಿವಿಧ ಭಾಗಗಳಲ್ಲಿ ಜಾರಿಯಲ್ಲಿದೆ' ಎಂದು ಮಾಹಿತಿ ನೀಡಿದೆ. 'ಈ ಅವಕಾಶ ಬಳಸಿಕೊಂಡು ಭಾರತೀಯರು ಉಕ್ರೇನ್ ತೊರೆಯಬೇಕು. ಬಸ್, ರೈಲು ಅಥವಾ ಲಭ್ಯವಿರುವ ಯಾವುದಾದರೂ ಸುರಕ್ಷಿತ ಪ್ರಯಾಣದ ಮಾರ್ಗಗಳನ್ನು ಬಳಸಿಕೊಳ್ಳಬೇಕು' ಎಂದು ಹೇಳಿದೆ.

ಒಂದೇ ದಿನ ಕ್ಲಾಸ್‌ಗೆ ಹಾಜರಾಗಿದ್ದೆ, ಯುದ್ಧ ಶುರು ಆಯ್ತು...

'ಉಕ್ರೇನ್‌ನಲ್ಲಿ ನೋಡಿದ್ದು ಬಂಕರ್ ಮಾತ್ರ'

• ಸಿದ್ದಯ್ಯ ಹಿರೇಮಠ

ಹರ್ಷ ನ್ಯಾಮಗೊಂಡ

ನವದೆಹಲಿ: 'ವೈದ್ಯಕೀಯ ವ್ಯಾಸಂಗಕ್ಕಾಗಿ ಫೆಬ್ರುವರಿ 10ರಂದು ಭಾರತದಿಂದ ಉಕ್ರೇನ್‌ಗೆ ಹೋಗಿದ್ದೆ. ಅಲ್ಲಿ ಯಾವ ಸ್ಥಳಗಳನ್ನೂ ನೋಡಲಾಗಲಿಲ್ಲ. ನೋಡಿದ್ದು ಬರೀ ಬಂಕರ್ ಮಾತ್ರ'

ಉಕ್ರೇನ್‌ನ ಹಾರ್ಕಿವ್‌ನಿಂದ ಮಂಗಳವಾರ ನವದೆಹಲಿಗೆ ವಾಪಸಾದ ಕರ್ನಾಟಕದ ವಿಜಯಪುರದ ಯುವಕ, ಮೊದಲ ವರ್ಷಕ್ಕೆ ಪ್ರವೇಶ ಪಡೆದಿದ್ದ ಹರ್ಷ ನ್ಯಾಮಗೊಂಡ ಯುದ್ಧಪೀಡಿತ ನಗರದಲ್ಲಿ ಕಳೆದ ಆತಂಕದ ದಿನಗಳ ಅನುಭವವನ್ನು 'ಪ್ರಜಾವಾಣಿ' ಜೊತೆ ಹಂಚಿಕೊಂಡರು.

'ಹಾರ್ಕಿವ್‌ಗೆ ತೆರಳಿ, ಕಾಲೇಜು ಮತ್ತು ಹಾಸ್ಟೆಲ್ ಪ್ರವೇಶದ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸುತ್ತಲೇ ವಾರ ಕಳೆಯಿತು. ನಂತರ ಒಂದೇ ದಿನ, ಅದೂ ಒಂದೇ ಒಂದು ಕ್ಲಾಸ್ (ತರಗತಿ)ಗೆ ಹಾಜರಾಗಿದ್ದೆ. ಮಾರನೇ ದಿನದಿಂದಲೇ ಯುದ್ಧ. ಹೊರಗೆ ಎಲ್ಲೂ ಸುತ್ತಿರಲಿಲ್ಲ. ಯಾರ ಪರಿಚಯವೂ ಆಗಲಿಲ್ಲ. ಸುರಕ್ಷತೆಯ ಕಾರಣದಿಂದ ನಮ್ಮನ್ನು ಹಾಸ್ಟೆಲ್‌ನಿಂದ ಬಂಕರ್‌ಗೆ ಕಳುಹಿಸಲಾಯಿತು. ಹಾಗಾಗಿ ಹಲವು ಬಂಕರ್‌ಗಳನ್ನು ಮಾತ್ರ ನೋಡಿದ್ದಾಯಿತು' ಎಂದರು.

'ಸತತವಾಗಿ ಬಂಕರ್‌ಗಳಲ್ಲೇ ಇದ್ದೆವು. ಹೊಟ್ಟೆತುಂಬ ಊಟ– ತಿಂಡಿ, ಕುಡಿಯುವ ನೀರು ಸಿಗಲೇ ಇಲ್ಲ. ಪ್ರತಿ ಕ್ಷಣವೂ ಆತಂಕ, ಕ್ಷಿಪಣಿ, ಶೆಲ್, ಬಾಂಬ್ ದಾಳಿಯ ಸದ್ದು, ಗುಂಡಿನ ಮೊರೆತ ಕೇಳುತ್ತಿದ್ದುದರಿಂದ ಜೀವಂತ ವಾಪಸ್ ಬರುತ್ತೇವೆ ಎಂಬ ನಂಬಿಕೆ ಇರಲಿಲ್ಲ' ಎಂದು ಅವರು ಹೇಳಿದರು.

'ಸಂಜೆ 6ರೊಳಗೆ ಹಾರ್ಕಿವ್ ನಗರ ತೊರೆಯುವಂತೆ ಕಳೆದ ವಾರ ಸರ್ಕಾರದಿಂದ ಸೂಚನೆ ದೊರೆತಿದ್ದೇ ತಡ, ಬ್ಯಾಗ್ ಹೊತ್ತುಕೊಂಡು ರೈಲು ನಿಲ್ದಾಣದತ್ತ ತೆರಳಿದೆವು. 15 ಕಿಲೋ ಮೀಟರ್ ನಡೆದು ಹೋದರೂ ರೈಲುಗಳಲ್ಲಿ ಜಾಗ ಸಿಗಲಿಲ್ಲ. ಅಲ್ಲಿಂದ ಮತ್ತೆ 10ರಿಂದ 15 ಕಿಲೋ ಮೀಟರ್ ನಡೆದು ಹಾರ್ಕಿವ್ ಹೊರವಲಯದ ಪಿಸೋಚಿನ್ ತಲುಪಿದೆವು. ಅಲ್ಲಿ ಮತ್ತೆ ನಮ್ಮನ್ನು ಸುರಕ್ಷಿತ ತಾಣದಲ್ಲಿ 4 ದಿನ ಇರಿಸಲಾಯಿತು' ಎಂದು ಅನುಭವ ಹಂಚಿಕೊಂಡರು.

'ಮೊದಲ ಒಂದು ವಾರ ಹಾರ್ಕಿವ್‌ನ ಬಂಕರ್‌ಗಳಲ್ಲಿ ನರಕಯಾತನೆ. ನಂತರದ ನಾಲ್ಕು ದಿನವೂ ಅದೇ ಅನುಭವ. ಕುಡಿಯಲು ನೀರು, ಊಟ ಸಿಗಲಿಲ್ಲ. ಅಲ್ಲೂ ಪ್ರಾಣಭೀತಿ. ಕೊನೆಗೆ ರೊಮೇನಿಯಾ ಗಡಿ ತಲುಪಿದೆವು. ಅಲ್ಲಿಂದ ಸಾಲ್ಸಿಯಾ ನಗರದ ವಿಮಾನ ನಿಲ್ದಾಣದಲ್ಲಿ ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಿದ್ದ ವಿಮಾನದಲ್ಲಿ ಮರಳಿದೆವು' ಎಂದು ಅವರು ಹೇಳಿದರು.

ಸೂಪ್ ಕುಡಿದು ಕಾಲ ತಳ್ಳಿದೆವು: ಮೊದಲ ವರ್ಷದ ವೈದ್ಯಕೀಯ ವ್ಯಾಸಂಗಕ್ಕೆಂದು ಒಂದು ತಿಂಗಳ ಹಿಂದಷ್ಟೇ ನಾನು ಹಾರ್ಕಿವ್‌ಗೆ ತೆರಳಿದ್ದೆ. ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವಷ್ಟರಲ್ಲೇ ಯುದ್ಧ ಶುರುವಾಯಿತು. ನಮ್ಮ ಕಾಲೇಜಿನ ನೆಲಮಾಳಿಗೆ, ಮೆಟ್ರೋ ನಿಲ್ದಾಣ ಮತ್ತು ಬಂಕರ್‌ಗಳು ನಂತರ ಪಿಸೋಚಿನ್‌ನಲ್ಲಿನ ಬಂಕರ್‌ಗಳಲ್ಲಿ ಕಾಲ ಕಳೆದೆವು' ಎಂದು ಬೆಂಗಳೂರಿನ ಎಂ.ಕೆ. ತೇಜಸ್ವಿನಿ ಕರಾಳ ಅನುಭವ ಹಂಚಿಕೊಂಡರು.

ಎಂ.ಕೆ. ತೇಜಸ್ವಿನಿ

ಪಿಸೋಚಿನ್‌ನಲ್ಲಿ ಮೊದಲ ದಿನ ತಿನ್ನಲು ಸಿಕ್ಕಿದ್ದು ಬರೀ ಚಿಕನ್ ಸೂಪ್. ಶಾಖಾಹಾರಿಯಾದ ನಾನು ಕುಡಿಯಲಿಲ್ಲ. ಮಾರನೇ ದಿನದಿಂದ ವೆಜ್ ಸೂಪ್ ದೊರೆಯಿತು. ನಾಲ್ಕನೇ ದಿನ ಅನ್ನ ಮತ್ತು ಸ್ವಲ್ಪ ತರಕಾರಿ ನೀಡಿದರು. ಹೇಗೋ ಉಪವಾಸ ಇರಬಹುದು. ಆದರೆ, ಜೀವ ಉಳಿಸಿಕೊಳ್ಳೋದೇ ದೊಡ್ಡ ಸವಾಲಾಗಿತ್ತು. ಸ್ನೇಹಿತರು ಮತ್ತು ಸರ್ಕಾರದ ನೆರವಿನಿಂದ ತಾಯ್ನಾಡಿಗೆ ಮರಳಿದೆವು' ಎಂದು ತಿಳಿಸಿದರು.

ಉಕ್ರೇನ್‌ನ ವಿವಿಧ ಭಾಗಗಳಿಂದ ಇದುವರೆಗೆ ಒಟ್ಟು 506 ಜನ ಕನ್ನಡಿಗರು ವಾಪಸಾಗಿದ್ದು, ಹಾರ್ಕಿವ್ ಮತ್ತು ಕೀವ್‌ನಲ್ಲಿ ಸಿಲುಕಿದ್ದ ಎಲ್ಲರೂ ಮರಳಿದಂತಾಗಿದೆ. ಸುಮಿಯಲ್ಲಿ ಸಿಲುಕಿರುವ ಕೆಲವರು ಬುಧವಾರ ಮರಳುವ ಸಾಧ್ಯತೆ ಇದೆ.

'ಸ್ವಾಗತ ಕೋರಿದ್ದ ನವೀನ್'

ನವದೆಹಲಿ: 'ರಷ್ಯಾ ಪಡೆಗಳ ದಾಳಿಯಲ್ಲಿ ಮೃತಪಟ್ಟ ನವೀನ್ ನಮ್ಮನ್ನು ಉತ್ಸಾಹದಿಂದ ಸ್ವಾಗತಿಸಿ ಸಿಹಿ ನೀಡಿದ್ದರು. ಮಾರ್ಚ್ 1ರಂದು ಬೆಳಿಗ್ಗೆ ಆಹಾರ ತರಲು ಹೋದವರು ವಾಪಸ್ ಬರಲಿಲ್ಲ' ಎಂದು ಹರ್ಷ ದುಃಖಿಸಿದರು.

'ಅವರು ಬಹಳ ಹೊತ್ತಾದರೂ ವಾಪಸಾಗದಿದ್ದಾಗ ಸ್ನೇಹಿತರು ಕರೆ ಮಾಡಿದ್ದರು. ಕರೆ ಸ್ವೀಕರಿಸದ್ದರಿಂದ ಗಾಬರಿಯಾಗಿತ್ತು. ಕೊನೆಗೆ ಮಹಿಳೆಯೊಬ್ಬರು ಕರೆ ಸ್ವೀಕರಿಸಿ ನವೀನ್ ಸಾವಿಗೀಡಾಗಿದ್ದಾಗಿ ವಿಷಾದದಿಂದಲೇ ಹೇಳಿದರು. ವಿಡಿಯೋ ಕಾಲ್ ಮಾಡಿ ಖಚಿತಪಡಿಸಿದರು. ಶೆಲ್ ದಾಳಿಯಲ್ಲಿ ಮೃತಪಟ್ಟ ನವೀನ್ ಶರೀರಕ್ಕೆ ಹೆಚ್ಚು ಧಕ್ಕೆ ಆಗಿಲ್ಲ ಎಂಬುದೂ ಆಗಲೇ ತಿಳಿಯಿತು. ಅವರ ಪಾರ್ಥಿವ ಶರೀರವನ್ನು ಇಲ್ಲಿಗೆ ತರಲು ಸರ್ಕಾರ ಯತ್ನಿಸಬೇಕು ಎಂದು ಕೋರಿದರು.

ಪ್ರತಿಭಟನಕಾರರ ಮನವೊಲಿಸಲು ಜಿಲ್ಲಾಡಳಿತ ಶ್ರಮ: ದಿನವಿಡೀ ಉದ್ವಿಗ್ನ ಪರಿಸ್ಥಿತಿ

ಬಗರ್‌ಹುಕುಂ: ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಗದಗ: ಬಗರ್ ಹುಕುಂ ಸಾಗುವಳಿದಾರರ ತೆರವು ಸಂದರ್ಭದಲ್ಲಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದ ನಿರ್ಮಲಾ ಪಾಟೀಲ ಅವರ ಶವವನ್ನು ಜಿಲ್ಲಾಡಳಿತ ಕಚೇರಿ ಮುಂದೆ ಇಟ್ಟು ಗ್ರಾಮಸ್ಥರು ಪ್ರತಿಭಟಿಸಿದರು. ತಪ್ಪಿತಸ್ಥರ ವಿರುದ್ಧ ಕ್ರಮಜರುಗಿಸಬೇಕು ಎಂದು ಆಗ್ರಹ ಪಡಿಸಿದರು.

ಗ್ರಾಮಸ್ಥರ ಬೇಡಿಕೆಗಳನ್ನು ಈಡೇರಿಸುವುದಾಗಿ ಜಿಲ್ಲಾಧಿಕಾರಿ ಎಂ.ಸುಂದರೇಶ್ ಭರವಸೆ ನೀಡಿದ ನಂತರ ಗ್ರಾಮಸ್ಥರು ನಿರ್ಮಲಾ ಅವರ ಶವವನ್ನು ಗ್ರಾಮಕ್ಕೆ ತಗೆದುಕೊಂಡು ಹೋಗಲು ಒಪ್ಪಿದರು. ಇದಕ್ಕೂ ಮೊದಲು ಪ್ರತಿಭಟನೆಯಿಂದಾಗಿ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸುವ ಕುರಿತಂತೆ ಕೇಲೂರ ಗ್ರಾಮದ ಎಂಟು ಜನರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಕೈಬಿಡಬೇಕು, ನಿರ್ಮಲಾ ಪಾಟೀಲ ಸಾವಿಗೆ ಕಾರಣವಾಗಿರುವ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆಗಳನ್ನು ಈಡೇರಿಸುವಂತೆ ಗ್ರಾಮಸ್ಥರು ಅಗ್ರಹಿಸಿದರು.

ಬಗರ್ ಹುಕುಂ ಸಾಗುವಳಿದಾರರ ತೆರವು ವಿಷಯ ಸೋಮವಾರ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಮುಂಡರಗಿ ತಾಲ್ಲೂಕಿನ ಕೇಲೂರ ಗ್ರಾಮದ ರೈತರ ಮಧ್ಯೆ ಜಟಾಪಟಿ ನಡೆದಿತ್ತು.

ಆಗ ರೈತ ಮಹಿಳೆಯರಾದ ನಿರ್ಮಲಾ ಪಾಟೀಲ, ಸರೋಜಮ್ಮ ಪಾಟೀಲ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆಗೆ ಸ್ಪಂದಿಸದೇ ನಿರ್ಮಲಾ ಪಾಟೀಲ ಮೃತರಾಗಿದ್ದರು.

ಕರ್ನಾಟಕ ಸರ್ಕಾರ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

(ಸರ್ಕಾರದ ಸ್ವಾಯತ್ತ ಸಂಸ್ಥೆ)

ಹೈದ್ರಾಬಾದ ರೋಡ, ರಾಯಚೂರು – 584102. Ph/Fax : 08532-238488/89

Web: www.rims-raichur.com Email : info@rims-raichur.com

ಸಂ:ರಿಮ್ಸ್/ಸರಬರಾಜು/ಟೆಂಡರ್/2021–22 ದಿನಾಂಕ: 05.03.2022

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಔಷಧಿಗಳು, ಸರ್ಜಿಕಲ್ಸ್ ಹಾಗೂ ಇನ್ನಿತರ ಐಟಂಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)
1.	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಸರ್ಜಿಕಲ್ಸ್, ಡಿಸ್ಪೋಸಬಲ್ಸ್ ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಸರ್ಜಿಕಲ್ಸ್/87/2021–22	91.82
2.	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಇಂಜಕ್ಷನ್ಸ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಇಂಜಕ್ಷನ್ಸ್/88/2021–22	96.48
3.	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಸರ್ಜಿಕಲ್ ಗ್ಲೌಸ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಗ್ಲೌಸ್/89/2021–22	87.13
4.	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಐ.ವಿ.ಪ್ಲೂಯಿಡ್ಸ್, ವ್ಯಾಕ್ಸಿನ್ಸ್ & ಆಂಟಿಡೋಟಿಸ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಐ.ವಿ.ಪ್ಲೂಯಿಡ್ಸ್/90/2021–22	94.90
5.	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಲಿಕ್ವಿಡ್, ಆಯಿಂಟ್‌ಮೆಂಟ್, ಪೌಡರ್ & ಎಕ್ಸ್‌ರೇ ಫೀಲಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಲಿಕ್ವಿಡ್/91/2021–22	87.59
6.	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಮಾತ್ರೆಗಳು ಮತ್ತು ಮಿಸ್ಲೇನಿಯಸ್ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಮಾತ್ರೆ–ಮಿಸ್ಲೇನಿಯಸ್ /92/2021–22	85.88

(1) ಟೆಂಡರ್‌ಗಳನ್ನು **ದಿನಾಂಕ:07.03.2022 ರಿಂದ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪ್ರಶ್ನೆಗಳಿಗೆ ಕೊನೆಯ **ದಿನಾಂಕ:14.03.2022 ರ ಸಾಯಂಕಾಲ 5.00 ಗಂಟೆಯವರೆಗೆ** (3) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ **ದಿನಾಂಕ:21.03.2022ರ ಸಾಯಂಕಾಲ 5.00 ಗಂಟೆವರೆಗೆ** (4) ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ **ದಿನಾಂಕ:23.03.2022 ಬೆಳಿಗ್ಗೆ 11.30 ಗಂಟೆಗೆ.** ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್: **http://eproc.karnataka.gov.in** ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್: **www.rims-raichur.com** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು,

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/691/ಎಂ.ಸಿ.&ಎ/2021–22

ರೊಮೇನಿಯಾದ ಸುಚಾವಾ ನಿಲ್ದಾಣದಿಂದ ದೆಹಲಿಗೆ ಪ್ರಯಾಣ

36 ವಿದ್ಯಾರ್ಥಿಗಳಿಗಾಗಿ 3 ಗಂಟೆ ಕಾದ ವಿಮಾನ

ನವದೆಹಲಿ (ಪಿಟಿಐ): ರೊಮೇನಿಯಾದಿಂದ ದೆಹಲಿಗೆ ಹೊರಡಬೇಕಿದ್ದ ಸ್ಪೈಸ್ ಜೆಟ್ ವಿಮಾನವು 36 ವಿದ್ಯಾರ್ಥಿಗಳ ಮತ್ತೊಂದು ತಂಡದ ಬರುವಿಕೆಗಾಗಿ ಸುಮಾರು 3 ಗಂಟೆ ಕಾದ ಘಟನೆ ಸೋಮವಾರ ರಾತ್ರಿ ನಡೆದಿದೆ.

ಉಕ್ರೇನ್ ಗಡಿ ದಾಟಿ, ರೊಮೇನಿಯಾದ ಸುಚಾವಾ ಎಂಬಲ್ಲಿಗೆ ತಲುಪಿದ್ದ 152 ಭಾರತೀಯರನ್ನು ದೆಹಲಿಗೆ ಕರೆದೊಯ್ಯಲು ಸ್ಪೈಸ್‌ಜೆಟ್ ಕಂಪನಿಯ ವಿಮಾನವು (ಎಸ್‌ಜಿ 9547) ಸಿದ್ಧವಾಗಿತ್ತು. ಸೋಮವಾರ ರಾತ್ರಿ 7.20ಕ್ಕೆ (ರೊಮೇನಿಯಾದ ಸ್ಥಳೀಯ ಕಾಲಮಾನ) ಹೊರಡಲು ಸಮಯ ನಿಗದಿಯಾಗಿತ್ತು. ಆದರೆ 36 ಭಾರತೀಯ ವಿದ್ಯಾರ್ಥಿಗಳ ಮತ್ತೊಂದು ತಂಡವು ಗಡಿ ದಾಟಿ ಸುಚಾವಾಕ್ಕೆ ಬರುತ್ತಿದೆ ಎಂಬ ಮಾಹಿತಿ ಸಿಕ್ಕಿತು ಎಂದು ಕಂಪನಿಯ ಅಧಿಕಾರಿಗಳು ತಿಳಿಸಿದ್ದಾರೆ.

ಗಡಿಯಿಂದ ರಸ್ತೆ ಮಾರ್ಗವಾಗಿ ಸುಚಾವಾ ವಿಮಾನ ನಿಲ್ದಾಣಕ್ಕೆ ಬರಲಿರುವ ವಿದ್ಯಾರ್ಥಿಗಳಿಗಾಗಿ ಕಾಯಲು ನಿರ್ಧರಿಸಲಾತು. ಇದಕ್ಕಾಗಿ ವಿಮಾನ ಹೊರಡುವ ಸಮಯವನ್ನು ಮೂರು ಬಾರಿ ಮುಂದೂಡಲಾಯಿತು ಎಂದು ಸಂಸ್ಥೆ ತಿಳಿಸಿದೆ.

ಉಕ್ರೇನ್‌ನಿಂದ ತೆರವು ಮಾಡಲಾದ ಭಾರತೀಯ ವಿದ್ಯಾರ್ಥಿಗಳನ್ನು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ಮಂಗಳವಾರ ಧರ್ಮಶಾಲಾದ ಕಂಗ್ರಾ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು. ನಂತರ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು –ಪಿಟಿಐ ಚಿತ್ರ

152 ಜನರ ಜೊತೆ 36 ವಿದ್ಯಾರ್ಥಿಗಳು ಸೇರಿಕೊಂಡರು. ಒಟ್ಟು 188 ಪ್ರಯಾಣಿಕರನ್ನು ಹೊತ್ತ ವಿಮಾನವು ಅಂತಿಮವಾಗಿ ರಾತ್ರಿ 10.05ಕ್ಕೆ (ರೊಮೇನಿಯಾದ ಸ್ಥಳೀಯ ಕಾಲಮಾನ) ಸುಚಾವಾ ವಿಮಾನ ನಿಲ್ದಾಣದಿಂದ ಹೊರಟು ಮಂಗಳವಾರ ಬೆಳಿಗ್ಗೆ 8.30ಕ್ಕೆ (ಭಾರತದ ಕಾಲಮಾನ) ದೆಹಲಿಯನ್ನು ತಲುಪಿತು.

ಸ್ಪೈಸ್‌ಜೆಟ್ ವಿಮಾನಯಾನ ಸಂಸ್ಥೆಯು ಈವರೆಗೆ 1,600 ಭಾರತೀಯರನ್ನು ದೇಶಕ್ಕೆ ಕರೆತರಲು ನೆರವಾಗಿದೆ. ಆಪರೇಷನ್ ಗಂಗಾ ಅಡಿಯಲ್ಲಿ ಬುಡಾಪೆಸ್ಟ್, ಸುಚಾವಾ ನಗರಗಳಿಂದ ವಿಶೇಷ ವಿಮಾನಗಳನ್ನು ನಿಯೋಜಿಸಿತ್ತು.

ರೊಮೇನಿಯಾದಿಂದ 410 ಭಾರತೀಯರು ವಾಪಸ್: ಉಕ್ರೇನ್‌ನಲ್ಲಿ ಸಿಲುಕಿದ್ದ 410 ಭಾರತೀಯರನ್ನು ಮಂಗಳವಾರ ಭಾರತಕ್ಕೆ ಕರೆ ತರಲಾಯಿತು. ರೊಮೇನಿಯಾದ ಸುಚಾವಾ ವಿಮಾನ ನಿಲ್ದಾಣದಿಂದ ಹೊರಟ ಎರಡು ವಿಮಾನಗಳು ಮಂಗಳವಾರ ಬೆಳಿಗ್ಗೆ ದೆಹಲಿ ತಲುಪಿದವು ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯ ತಿಳಿಸಿದೆ.

52 ಭಾರತೀಯ ನಾವಿಕರ ರಕ್ಷಣೆ

ಉಕ್ರೇನ್ ಬಂದರು ಪಟ್ಟಣ ಮೆಕೊಲೈವ್‌ನಲ್ಲಿ ಸಿಲುಕಿದ್ದ ಭಾರತದ 75 ನಾವಿಕರ ಪೈಕಿ 52 ಜನರನ್ನು ತೆರವು ಮಾಡಲಾಗಿದೆ ಎಂದು ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮಂಗಳವಾರ ತಿಳಿಸಿದೆ.

ಉಳಿದಿರುವ 23 ಭಾರತೀಯ ನಾವಿಕರ ತೆರವಿಗೆ ಯತ್ನಿಸಲಾಗುತ್ತಿದೆ. ಈಗ ತೆರವು ಮಾಡಲಾದ ನಾವಿಕರ ತಂಡದ ಜೊತೆ ಇಬ್ಬರು ಲೆಬನಾನಿಗಳು ಹಾಗೂ ಮೂವರು ಸಿರಿಯನ್ನರನ್ನೂ ಅಲ್ಲಿಂದ ಕರೆತರಲಾಗಿದೆ.

'52 ಭಾರತೀಯರು, ಲೆಬನಾನ್ ಹಾಗೂ ಸಿರಿಯಾ ಪ್ರಜೆಗಳನ್ನು ಬಸ್‌ಗಳ ಮೂಲಕ ತೆರವು ಮಾಡಲಾಗಿದೆ' ಎಂದು ರಾಯಭಾರ ಕಚೇರಿ ಟ್ವೀಟ್ ಮಾಡಿದೆ.

ಅಂಕಿ-ಅಂಶಗಳು

17,100 ಆಪರೇಷನ್‌ಗಂಗಾ ಅಡಿಯಲ್ಲಿ ಉಕ್ರೇನ್‌ನಿಂದ ಈವರೆಗೆ ತೆರವು ಮಾಡಲಾದ ಭಾರತೀಯರ ಸಂಖ್ಯೆ

83 ಈವರೆಗೆ ಕಾರ್ಯಾಚರಣೆಯಲ್ಲಿ ಭಾಗಿಯಾದ ವಿಮಾನಗಳು





ಆಪ್ತಸಮಾಲೋಚನೆಯ 'ಅವತಾರ್'

ಕ್ಷಮಾ ವಿ. ಭಾನುಪ್ರಕಾಶ್

'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ಎಂಬ ದಾಸವಾಣಿ ದಿನನಿತ್ಯವೂ ನೆನಪಾಗುವಂತಹ ಪರಿಸ್ಥಿತಿ ಇಂದು ನಮ್ಮೆದುರಿಗಿದೆ.

ಕಂಡುಕೇಳರಿಯದವರೆಲ್ಲ ಸಾಮಾಜಿಕ ಜಾಲತಾಣಗಳ ಮೂಲಕ, ಕೇವಲ ಇಂಟರ್ನೆಟ್ ಕೊಂಡಿಗಳಿಂದ ಸ್ನೇಹಿತರಾದರು. ಎದುರು ಬದುರು ಕೂರದೆಯೆ, ಹೊರಗೆಲ್ಲೂ ಒಟ್ಟಿಗೆ ಸುತ್ತಾಡದೆಯೂ ಕೇವಲ ಮೆಸೇಜ್‌ಗಳ ಮೂಲಕ ಚಾಟ್ ಮಾಡುತ್ತಾ ಪರಿಚಯ ಸ್ನೇಹವಾಗಿ, ಸ್ನೇಹ ಪ್ರೀತಿಯಾಗಿ, ಕೊನೆಗೆ ಮದುವೆಯಲ್ಲಿ ಕೊನೆಗೊಂಡಿರುವ ಉದಾಹರಣೆಗಳೂ ಬೇಕಾದಷ್ಟು ಕಾಣಸಿಗುತ್ತವೆ. ಎಂದಿಗೂ ನಾವು ನೋಡಿರದ ರೆಸ್ಟೊರೆಂಟ್ ಒಂದರಿಂದ ನಮಗೆ ಬೇಕಾದ ತಿನಿಸನ್ನು ನಾವು ಇಂಟರ್ನೆಟ್‌ನ ಸಹಾಯದಿಂದ, ಮೊಬೈಲ್ ಆ್ಯಪ್ ಬಳಸಿ, ಆರ್ಡರ್ ಮಾಡುತ್ತೇವೆ; ನಮಗೆ ಪರಿಚಯವೇ ಇರದ ಒಬ್ಬರು ಅದನ್ನು ಅಲ್ಲಿಂದ ಮನೆಬಾಗಿಲಿಗೆ ತಲುಪಿಸುತ್ತಾರೆ. ದಿನಸಿ, ಜವಳಿ, ಹಾಲು, ತರಕಾರಿ – ಹೀಗೆ ಏನು ಬೇಕಾದರೂ ಜಗತ್ತಿನ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ದಿನಗಳಲ್ಲೇ ಸಲೀಸಾಗಿ ತಲುಪುತ್ತವೆ, ಇಂಟರ್ನೆಟ್‌ನ ಸಹಾಯದಿಂದ. ಈ ಅಂತರ್ಜಾಲದ ಒಳಹೊಕ್ಕು ಕೂತರೆ ಸಮಯ ಸರಿದದ್ದೂ ತಿಳಿಯುವುದಿಲ್ಲ; ಅಂಗೈಯಲ್ಲೇ ಇಡಿಯ ಜಗತ್ತು ಸಿಕ್ಕ ಅನುಭವ ನಮ್ಮದು.

ಈಗ ಕೆಲವು ವರ್ಷಗಳಿಂದ, ತಂತ್ರಜ್ಞಾನವು ಮುಂದುವರೆದು, ನಮಗೆ 'ವರ್ಚುವಲ್ ರಿಯಾಲಿಟಿ' ಎಂಬ ಮಾಯಾಲೋಕವನ್ನು ತೆರೆದಿಟ್ಟಿದೆ. ವಿಡಿಯೋಗೇಮ್‌ಗಳಲ್ಲಿ ಮೊದಲು ಪ್ರಾರಂಭವಾದ ಇದು, ನಾವು ಆಟದ ಒಳಗೆ ಕಂಡುಬರುತ್ತಿರುವ ಯಾವುದೋ ನಿರ್ದಿಷ್ಟ ಸ್ಥಳದಲ್ಲಿ ನಿಜವಾಗಿಯೂ ಇದ್ದೇವೆ ಎಂದು ನಮಗೆ ಎನಿಸುವಂತೆ ಮಾಡುತ್ತದೆ. ಅದಕ್ಕೆ ತಕ್ಕಂತಹ ದೃಶ್ಯಾವಳಿಗಳು, ಹಿನ್ನೆಲೆಸಂಗೀತ, ನಮ್ಮೊಂದಿಗೆ ಸಂವಹನ ನಡೆಸುವ ಪಾತ್ರಗಳು – ಹೀಗೆ ನಾವು ಅಲ್ಲಿಯೇ ಇದ್ದೇವೆ, ಆ ಆಟದ ಭಾಗವಾಗಿ, ಎನಿಸುವಂತೆ ಮಾಡಲಾಗುತ್ತದೆ. ಅದರಲ್ಲೂ ವರ್ಚುವಲ್ ರಿಯಾಲಿಟಿಯನ್ನು 'ನಿಜಸ್ಥಿತಿ' ಎಂದು ನಂಬಿಸಲು ಬೇಕಿರುವ ವಿಶೇಷ ಕನ್ನಡಕಗಳು ಹಾಗೂ ಇಯರ್‌ಫೋನುಗಳು ನಮ್ಮನ್ನು ಮಾಯಾಲೋಕಕ್ಕೆ ಕರೆದೊಯ್ಯುತ್ತವೆ. ಜೊತೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸುಧಾರಣೆಯೊಂದಿಗೆ ದಿನದಿನಕ್ಕೂ ಸುಧಾರಣೆ ಕಾಣುತ್ತಿರುವ ಪಾತ್ರಗಳು, ನಮ್ಮೊಂದಿಗೆ ನಿಜವಾದ ಮನುಷ್ಯರಂತೆಯೇ ವ್ಯವಹರಿಸುತ್ತಾ, ನಮ್ಮನ್ನು ಮೈಮರೆವಂತೆ ಮಾಡುತ್ತವೆ. ಹೀಗಿರುವಾಗ ಮೆಟಾವರ್ಸ್‌ನಂತಹ ಕಲ್ಪನೆಯು ವಾಸ್ತವವಾಗುವುದು ಸಹಜವಲ್ಲವೇ?

'ಮೆಟಾವರ್ಸ್' ಎಂಬುದು ಅಂತರ್ಜಾಲದ ಒಳಗಿನ ಜಗತ್ತಿಗೂ, ಹೊರಗಿನ ಭೌತಿಕ ಜಗತ್ತಿಗೂ ಬೆಸೆಯಲಾದ ಅತ್ಯಂತ ಸುಧಾರಿತ ಕೊಂಡಿ. ಇಲ್ಲಿ ಅನೇಕ ಮೂರು ಆಯಾಮಗಳ (3ಡಿ) ವಸ್ತುಗಳನ್ನೂ ಸ್ಥಳಗಳನ್ನೂ ಮನುಷ್ಯರನ್ನೂ ಪ್ರಾಣಿಗಳನ್ನೂ ನಾವು ಎದುರುಗೊಳ್ಳಬಹುದು. ಆನ್‌ಲೈನ್ ಪ್ರಪಂಚದಲ್ಲೇ ನಾವು ಪಾರ್ಕಿಗೆ, ಥಿಯೇಟರ್‌ಗೆ, ಹೊಟೇಲಿಗೆ ಹೋಗಬಹುದು, ಗೆಳೆಯರನ್ನು ಭೇಟಿ ಮಾಡಬಹುದು, ಹರಟೆ ಕೊಚ್ಚಿ, ಒಬ್ಬರಿಗೊಬ್ಬರು ಉಡುಗೊರೆಗಳನ್ನು ಕೊಟ್ಟುಕೊಳ್ಳಬಹುದು. ಇಲ್ಲಿ ಕ್ರಿಪ್ಟೋಕರೆನ್ಸಿಯಂತಹ ಬ್ಲಾಕ್‌ಚೈನ್ ಆಧಾರಿತ ಆರ್ಥಿಕ ಜಗತ್ತು ಕೂಡ ಬೆಸೆದುಕೊಂಡಿದ್ದು, ಇಲ್ಲಿನ ಸಾಧ್ಯತೆಗಳಿಗೆ ಕೊನೆಮೊದಲಿಲ್ಲ ಎಂಬಂತಾಗಿದೆ. ಈ ವರ್ಚುವಲ್ ಮಾಯಾಲೋಕದಲ್ಲೇ ಈಗಾಗಲೇ ಸಂಗೀತಕಚೇರಿ, ಫೋರ್ಟ್‌ನೈಟ್‌ನಂತಹ ಆಟಗಳು, ಅಷ್ಟೇ ಏಕೆ, ಮೆಟಾವರ್ಸ್‌ನಲ್ಲೇ ಮದುವೆ ಕೂಡ ಆಗಿಹೋಗಿದೆ. ಇಂತಹದ್ದನ್ನು ಕಂಡು ಇದೇನು ವಿಚಿತ್ರ ಎಂದು ಮೂಗುಮುರಿಯುವವರಿಗೆ, ವರ್ಚುವಲ್ ರಿಯಾಲಿಟಿಯ ಮತ್ತೊಂದು ಮುಖವನ್ನು ಮನೋವಿಜ್ಞಾನಿಗಳು ತೆರೆದಿಟ್ಟಿದ್ದಾರೆ.

ವಿದ್ಯಾಭ್ಯಾಸಕ್ಕೋ ವೃತ್ತಿಬದುಕಿಗಾಗಿಯೋ ಪ್ರೀತಿಪಾತ್ರರನ್ನು ಕಳೆದುಕೊಂಡ ಕಾರಣಕ್ಕೋ, ದಿನೇದಿನೇ ಕಿರಿದಾಗುತ್ತಿರುವ ಕುಟುಂಬದಿಂದಾಗಿಯೋ ಒಬ್ಬೊಬ್ಬರೇ ಜೀವಿಸುವ ಅವಶ್ಯಕತೆಯಿರುವ ಸಂದರ್ಭಗಳು ಹೆಚ್ಚುತ್ತಿವೆ. ಎಲ್ಲರ ಒಟ್ಟಿಗಿದ್ದರೂ ತಾವು ಒಬ್ಬಂಟಿ ಎನಿಸುವಂತಹ ಸಂದರ್ಭಗಳು ಕೂಡ ಎದುರಿಗೆ ಬರುತ್ತವೆ. ಇಂತಹ ಮನಃಸ್ಥಿತಿಯು ಪರಾಕಾಷ್ಠೆಗೆ ತಲುಪಿ ತೀವ್ರತರನಾದ ಖಿನ್ನತೆ, ಆತ್ಮಹತ್ಯೆಗೆ ಕಾರಣವಾಗುವ ಅಪಾಯ ಕೂಡ ಇರುತ್ತದೆ. ಇಂತಹದ್ದನ್ನು ಸರಿಪಡಿಸಲು ವರ್ಚುವಲ್ ರಿಯಾಲಿಟಿಯೆಂಬ ಕಾಲ್ಪನಿಕ ನಿಜಸ್ಥಿತಿಯು ಸಹಾಯಕ ಎನ್ನುತ್ತಾರೆ ಮನೋವಿಜ್ಞಾನಿಗಳು. ಅದರ ಮೂಲಕ ಮಾನವರಂತಹ 'ಅವತಾರ್'ಗಳ ಜೊತೆಗೆ ಸಂವಹನ ನಡೆಸುತ್ತಾ, ಮನಸ್ಸಿನ ಒತ್ತಡ ನಿವಾರಿಸಿಕೊಳ್ಳಬಹುದು; ಇದರ ಮೂಲಕ, ನಂತರದ ಸ್ಥಿತಿಯಲ್ಲಿ, ಹೊರಜಗತ್ತಿಗೆ ತೆರೆದುಕೊಳ್ಳುವುದು ಸಹಜ ಹಾಗೂ ಸರಳ ಎನಿಸುತ್ತದೆ ಎಂದು ಸಂಶೋಧನೆಗಳು ಸಾಬೀತು ಪಡಿಸಿವೆ.

ಡಾ. ಶೇನ್ ರೋಜರ್ಸ್ ಎಂಬ ಮನೋವಿಜ್ಞಾನಿಯು ತಮ್ಮ ಪ್ರಯೋಗಗಳ ಮೂಲಕ ಕಂಡುಕೊಂಡದ್ದೆಂದರೆ, ಎದುರುಬದುರು ಕುಳಿತು ಆಪ್ತಸಮಾಲೋಚಕರ ಬಳಿ ತಮ್ಮ ಮನಃಸ್ಥಿತಿಯ ಬಗ್ಗೆ ಹೇಳಿಕೊಳ್ಳುವವರಿಗಿಂತಲೂ ಕಂಪ್ಯೂಟರ್ ಪರದೆ ಮೇಲೆ ಬರುವ ಆಪ್ತಸಮಾಲೋಚಕ 'ಅವತಾರ್'ನೊಂದಿಗೆ ಜನರು ಹೆಚ್ಚು ಮುಕ್ತವಾಗಿ ಮಾತಾಡುತ್ತಾರೆ. ಅದರಲ್ಲೂ, ತಮ್ಮ ಜೀವನದಲ್ಲಿ ಆದ ಕಹಿ ಘಟನೆಗಳನ್ನು, ಯಾರಲ್ಲೂ ಹೇಳಿಕೊಳ್ಳಲಾಗದ ಮುಜುಗರದ ಸನ್ನಿವೇಶಗಳನ್ನು ಜನರು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವ ಬದಲು, ಕಾಲ್ಪನಿಕ ನಿಜಸ್ಥಿತಿಯ ಪಾತ್ರಗಳೊಂದಿಗೆ ಹಂಚಿಕೊಳ್ಳುವುದನ್ನೇ ಹೆಚ್ಚು ಸಹ್ಯ ಎಂದುಕೊಳ್ಳುತ್ತಾರೆ. ಹೀಗಾಗಿ, ಆ ವರ್ಚುವಲ್ ರಿಯಾಲಿಟಿಯ ಪಾತ್ರಗಳನ್ನು ಕೃತಕಬುದ್ಧಿಮತ್ತೆಯ ಸಹಾಯದಿಂದ ಮತ್ತಷ್ಟು 'ಮಾನವರೂಪಿ'ಯಾಗಿಸುವ ಪ್ರಯತ್ನ ದಿನೇದಿನೇ ನಡೆಯುತ್ತಿದೆ ಮತ್ತು ತಂತ್ರಜ್ಞಾನಿಗಳು ಅದರಲ್ಲಿ ಸಫಲರಾಗುತ್ತಿದ್ದಾರೆ ಕೂಡ. ಅಂತರ್ಜಾಲವೇ ಆಗಲಿ, ವರ್ಚುವಲ್ ರಿಯಾಲಿಟಿಯೇ ಆಗಲಿ, ಸರಿಯಾಗಿ ಬಳಸಿಕೊಂಡರೆ ಅದರಿಂದ ದೊರೆಯಬಹುದಾದ ಅನುಕೂಲಗಳಿಗೆ ಪಾರವೇ ಇಲ್ಲ ಎಂಬುದು ಇದರ ಮೂಲಕ ಮತ್ತೊಮ್ಮೆ ಸಾಬೀತಾಗಿದೆ. ❖

ಭಾಷಾಕೋವಿದ ಗೂಗಲ್ಲು!

ಶರತ್ ಭಟ್ ಸೇರಾಜೆ

ಅಂತರ್ಜಾಲದಲ್ಲಿ ಇನ್ನೊಬ್ಬರ ಪೋಸ್ಟಿನ ತಪ್ಪುಗಳನ್ನು ತಿದ್ದುವುದರಷ್ಟು ಖುಷಿ ಕೊಡುವ ಸಂಗತಿಗಳು ಹೆಚ್ಚಿಲ್ಲ ಅನ್ನಬೇಕು. ಹಾಗಾಗಿಯೇ ಚತುರಮತಿಯೊಬ್ಬರು, 'I hope you appreciate the effort I put into not correcting your grammar' ಅಂತ ಹೇಳಿದ್ದಾರೆ! ಈಗಂತೂ ನೀವು 'ನಾನೊಬ್ಬ ಗೆದ್ದ' ಅಂತ ಟೈಪಿಸಿದರೆ ಗೂಗಲ್ಲು ಕೂಡ 'Did you mean: ನಾನೊಬ್ಬ ಪೆದ್ದ' ಅಂತ ಕೇಳಿ ಹಲ್ಲು ಕಿರಿಯುತ್ತದೆ. ನಮ್ಮ ಕಾಗುಣಿತ ತಿದ್ದುವಷ್ಟು ಜಾಣ್ಮೆ ಗೂಗಲ್ಲಿಗೆ ಎಲ್ಲಿಂದ ಬರುತ್ತದೆ ಅನ್ನುವುದು ಕೌತುಕದ ವಿಷಯ.

ಪದಕೋಶವನ್ನು ನೋಡಿದರೆ ಗೂಗಲ್ಲಿಗೆ ತಪ್ಪಾಗಿ ಟೈಪಿಸಲ್ಪಟ್ಟ ಪದದ ಕಾಗುಣಿತ ಗೊತ್ತಾಗುವುದಿಲ್ಲವೇ ಎಂದು ಯಾರಾದರೂ ಕೇಳಬಹುದು. ಅದಾಗುವುದಿಲ್ಲ. ಆ್ಯಪಲ್ ಅಂತಂದರೆ ಒಂದು ಹಣ್ಣೋ, ಒಂದು ಕಂಪನಿಯೋ ಎಂದು ಹೇಳುವುದಕ್ಕೆ ನಿಘಂಟುವಿನ ಜ್ಞಾನ ಸಾಕಾಗುವುದಿಲ್ಲ. 'ರನ್ನ' ಅಂತ ಟೈಪು ಮಾಡಿದವರು ಕವಿ ರನ್ನನ ಅಭಿಮಾನಿಯೋ, ಸುದೀಪ್ ನಟಿಸಿದ ಚಿತ್ರವೊಂದರ ವಿವರ ತಿಳಿಯ ಹೊರಟವರೋ ಇದ್ದಾರು. ಈಗೊಬ್ಬರು 'ಕಮಾಲ' ಎಂದು ತಪ್ಪಾಗಿ ಟೈಪು ಮಾಡಿದರು ಅಂತಿಟ್ಟುಕೊಳ್ಳೋಣ. ಕಮಲ, ಕಮರು, ಕಮಟು, ಕಮಾನು, ಕಮಾಯಿ, ಕಮಾಲು – ಇವುಗಳಲ್ಲಿ ಯಾವುದಾದರೂ ಟೈಪು ಮಾಡಿದವರ ಮನಸ್ಸಿನಲ್ಲಿದ್ದಿರಬಹುದು. ಅವರು ನಿಜವಾಗಿಯೂ ಟೈಪು ಮಾಡಬಯಸಿದ್ದು ಏನನ್ನು ಅಂತ ಗೂಗಲ್ಲಿಗೆ ಹೇಗೆ ಗೊತ್ತಾಗಬೇಕು?

ಇಂಥದ್ದೇ ಸಂದರ್ಭಗಳು ಗ್ರಂಥಸಂಪಾದನೆ ಮಾಡುವ ವಿದ್ವಾಂಸರಿಗೂ ಬಂದಾಗ ಅವರೇನು ಮಾಡುತ್ತಿದ್ದರು ಎಂದು ತಲೆಗೆ ತಂದುಕೊಳ್ಳಬಹುದು. ಈಗ ಹತ್ತನೆಯ ಶತಮಾನದ ಕಾವ್ಯವೊಂದು ತಾಳೆಗರಿಯೊಂದರಲ್ಲಿ ಸಿಕ್ಕಿತು ಅಂತ ಭಾವಿಸಿಕೊಳ್ಳೋಣ. ಅದರಲ್ಲಿ ಹಲವು ಶಬ್ದಗಳು ಮಾಸಿರಬಹುದು, ಹುಳುತಿಂದು ಹೋಗಿರಬಹುದು, ಅಕ್ಷರಗಳು ಅಳಿಸಿಹೋಗಿರಬಹುದು. ಹಸ್ತಪ್ರತಿಯನ್ನು ರಾ. ನರಸಿಂಹಾಚಾರ್ಯರೋ ಡಿ. ಎಲ್. ನರಸಿಂಹಾಚಾರ್ಯರೋ ತೀನಂಶ್ರೀಯವರೋ ನೋಡಿದರೆ, ಆ ಅಳಿಸಿಹೋಗಿರುವ ಪದ ಬಂದಿರುವ ಪ್ರಸಂಗ, ಸಂದರ್ಭ ಯಾವುದು, ಅದರ ಹಿಂದೆ ಮುಂದೆ ಇರುವ ಪದಗಳು, ಸಾಲುಗಳು ಯಾವುವು ಎಂದೆಲ್ಲ ನೋಡಿ, ಪಾಂಡಿತ್ಯದ ಬಲದಿಂದ ಊಹಾಪಾಠವೊಂದನ್ನು ಕಲ್ಪಿಸಿಕೊಂಡು, ಅಲ್ಲಿ ಯಾವ ಶಬ್ದವನ್ನು ಕವಿ ಬಳಸಿದ್ದಿರಬೇಕು ಎಂಬ ನಿರ್ಣಯಕ್ಕೆ ಬರುತ್ತಿದ್ದರು. ಒಂದು ಪದಪ್ರಯೋಗದ ಪೂರ್ವಾಪರ ಸಂದರ್ಭವು ಗೂಗಲಂಕಲ್ಲಿಗೆ ತಿಳಿಯುವುದೂ ಹೆಚ್ಚು ಕಡಿಮೆ ಇದೇ ರೀತಿಯಲ್ಲಿ.

ಈಗೊಬ್ಬರು 'ವಿನಾಡಕ' ಅಂತ ತಪ್ಪಾಗಿ ಟೈಪು ಮಾಡಿದರು ಅಂತಿಟ್ಟುಕೊಳ್ಳೋಣ. ವಿತಾನಕ, ವಿಧಾಯಕ, ವಿನಾಯಿತಿ, ವಿನಾಶಕ, ವಿನಾಯಕ – ಇವುಗಳಲ್ಲಿ ಯಾವುದಾದರೂ ಟೈಪು ಮಾಡಿದವರ ಮನಸ್ಸಿನಲ್ಲಿದ್ದಿರಬಹುದು. ಅವರ ಟೈಪು ಮಾಡಹೊರಟದ್ದು ಏನನ್ನು ಅಂತ ಗೊತ್ತಾಗಲಿಕ್ಕೆ ಗೂಗಲ್ಲು ಆ ಪದದ ಆಸುಪಾಸಿನಲ್ಲಿ ಯಾವ ಪದಗಳು ಕಾಣಿಸಿಕೊಳ್ಳುತ್ತವೆ ಅಂತಲೂ ಅಂದಾಜು ಮಾಡುತ್ತದೆ. ಅದೇ ವಾಕ್ಯದಲ್ಲಿ ಚೌತಿಯ ಪ್ರಸ್ತಾವವೂ ಇದ್ದರೆ, 'ವಿನಾಯಕ'ವೇ ಸರಿಯಿರಬಹುದು, 'ವಿಘ್ನ' ಎಂಬ ಪದದ ಮುಂದಾದರೆ 'ವಿನಾಶಕ'ವು ಹೊಂದಿಕೆಯಾದೀತು, ಹೀಗೆ. ಇಷ್ಟು ತರ್ಕಿಸುವ ಶಕ್ತಿ ಅದಕ್ಕೆ ಸುಮ್ಮನೆ ಬರಲಿಲ್ಲ. 2011ರಲ್ಲೇ ಗೂಗಲ್ಲು ಸುಮಾರು 95 ಸಾವಿರ ಕೋಟಿ ವಾಕ್ಯಗಳನ್ನು ಸಂಗ್ರಹಿಸಿ ಇಟ್ಟುಕೊಂಡಿತ್ತು! 'ನಾನು ನಾಳೆ ಊರಿಗೆ ಹೋಗಿ ಮುಟ್ಟುವೆ' ಎಂಬ ವಾಕ್ಯ ಸಿಕ್ಕಿದರೆ, ಅದನ್ನು ಬಿಡಿಸಿ ಐದು ಬಿಡಿ ಪದಗಳನ್ನು ಗೂಗಲ್ಲು ಮೊದಲು ಸಂಗ್ರಹಿಸುತ್ತದೆ. ಆಮೇಲೆ, 'ನಾನು ನಾಳೆ', 'ನಾಳೆ ಊರಿಗೆ', 'ಊರಿಗೆ ಹೋಗಿ', 'ಹೋಗಿ ಮುಟ್ಟುವೆ' – ಹೀಗೆ ಜೊತೆಜೊತೆಗೆ ಬರುವ ಎರಡೆರಡು ಪದಗಳ ಪಟ್ಟಿ ಮಾಡುತ್ತದೆ (ಬಿಡಿಪದಗಳಿಗೆ unigrams ಎಂದೂ, ಎರಡರ ಪಟ್ಟಿಗೆ bigrams ಎಂದೂ ಹೆಸರು). 'ನಾನು ನಾಳೆ ಊರಿಗೆ', 'ನಾಳೆ ಊರಿಗೆ ಹೋಗಿ', 'ಊರಿಗೆ ಹೋಗಿ ಮುಟ್ಟುವೆ' – ಹೀಗೆ ವಿಂಗಡಿಸಿಕೊಂಡರೆ ಒಟ್ಟೊಟ್ಟಿಗೆ ಬರುವ ಮೂರು ಪದಗಳ ಪಟ್ಟಿ(trigrams) ಕೂಡ ತಯಾರಾಗುತ್ತದೆ. ಒಂದು ಪದವು ವಾಕ್ಯದ ಮಿಕ್ಕ ಭಾಗದ ಜೊತೆ ಹೇಗೆ ಹೊಂದಿಕೊಳ್ಳುತ್ತದೆ, ಒಂದು ಪದದ ಹಿಂದೆ ಮುಂದೆ ಸಾಧಾರಣವಾಗಿ ಏನಿರುತ್ತದೆ ಎಂದು ಗೊತ್ತಾಗಲು ಇದು ಸಹಕಾರಿ.

ಇನ್ನು ಒಬ್ಬರು 'ನಂಗಳೂರು' ಎಂದು ಟೈಪು ಮಾಡಿ ಯಾವ ಲಿಂಕನ್ನೂ ಕ್ಲಿಕ್ ಮಾಡದೆ, ಅದನ್ನು ತಿದ್ದಿ 'ಮಂಗಳೂರು' ಎಂದು ಹುಡುಕಿದಾಗ ಬಂದ ಕೊಂಡಿಗಳನ್ನು ಕ್ಲಿಕ್ ಮಾಡಿದರೆ, ಅದನ್ನೂ ಗೂಗಲ್ಲು ಟಿಪ್ಪಣಿ ಮಾಡಿ ಇಟ್ಟುಕೊಳ್ಳುತ್ತದೆ. ಮತ್ತು 'serve as the' ಎಂಬ ಉದಾಹರಣೆಯನ್ನು ತೆಗೆದುಕೊಂಡರೆ, ಅದರ ಮುಂದೆ ಬರಬಹುದಾದ ಪದಗಳ ಸಂಭವನೀಯತೆಯ ಪಟ್ಟಿಯೂ ಇರುತ್ತದೆ. 'serve as the inspiration' ಎಂದು ಬರುವ ವಾಕ್ಯಗಳು 1390 ಇವೆ, 'serve as the instrument' ಅನ್ನುವುದು 614 ವಾಕ್ಯಗಳಲ್ಲಿ ಇದೆ, 838 'serve as the information'ಗಳಿವೆ, ಹೀಗೆ. 'serve as the' ಎಂಬ ಪದಗಳಾದ ಮೇಲೆ ಬರುವ ಪದ ಇವುಗಳಲ್ಲೇ ಒಂದಾಗಿರಬಹುದು ಎಂದು ಗೂಗಲ್ಲು ಊಹಿಸುತ್ತದೆ, ಯಾವುದು ಎಷ್ಟು ಸಂಭವನೀಯ ಎಂದು ಗಣಿತಶಾಸ್ತ್ರದ ಬೇಯೆಸ್ ಪ್ರಮೇಯವನ್ನು ಬಳಸಿ ಲೆಕ್ಕವನ್ನೂ ಹಾಕಲಾಗುತ್ತದೆ. ಒಂದು ತಪ್ಪು ಪದಕ್ಕೆ ಎಷ್ಟು ಸಲ ಬದಲಾವಣೆ ಮಾಡಿದರೆ ಸರಿಯಾದ ಪದ ಸಿದ್ಧಿಸುತ್ತದೆ ಎಂಬುದರ ಅಳತೆಗೆ 'Edit Distance' ಅನ್ನುತ್ತಾರೆ. 'ಕಮಾಲ'ವು ಕಮಲವಾಗಲು ಒಂದೇ ಬದಲಾವಣೆ ಸಾಕು, 'ಕಮಾಲ'ವನ್ನು 'ಗಮಾರ' ಎಂದು ಮಾಡಬೇಕಾದರೆ ಎರಡು ಅಕ್ಷರಗಳು ಬದಲಾಗಬೇಕು, ಅಂದರೆ ಎಡಿಟ್ ಡಿಸ್ಟೆನ್ಸ್ ಹೆಚ್ಚು. ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದೂ ಮುಖ್ಯ.

ಗೂಗಲ್ಲು ಭಾಷಾಕೋವಿದನಾಗುವ ಹಾದಿಯಲ್ಲಿ ಇಡುವ ಹೆಜ್ಜೆಗಳು ಇರುವುದು ಹೀಗೆಯೇ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 11 & 12: ತ್ರಿಕೋನಮಿತಿಯ ಪ್ರಸ್ತಾವನೆ & ತ್ರಿಕೋನಮಿತಿಯ ಕೆಲವು ಅನ್ವಯಗಳು

ಗಣಿತ ಶಾಸ್ತ್ರ ಪ್ರಮುಖಾಂಶಗಳು

ಎಸ್ಸೆಸ್ಸೆಲ್ಸಿ



- ತ್ರಿಭುಜ ABC ಯಲ್ಲಿ $\angle A$ ಯು ಲಘುಕೋನ.
- $\angle A$ ಗೆ ಎದುರಿಗಿರುವ ಬಾಹು BCಯನ್ನು ಅಭಿಮುಖ ಬಾಹು ಎನ್ನುತ್ತೇವೆ.
- AC ಯನ್ನು ವಿಕರ್ಣ ಎನ್ನುತ್ತೇವೆ.
- $\angle A$ ಮತ್ತು ಅಭಿಮುಖ ಬಾಹುವನ್ನು (BC) ಪಾರ್ಶ್ವ ಬಾಹು (AB) ಎನ್ನುತ್ತೇವೆ.

ತ್ರಿಕೋನಮಿತಿಯ ಅನುಪಾತಗಳು

SinA	ಅಭಿಮುಖ ಬಾಹು / ವಿಕರ್ಣ	CosecA	ವಿಕರ್ಣ / ಅಭಿಮುಖ ಬಾಹು
CosA	ಪಾರ್ಶ್ವ ಬಾಹು / ವಿಕರ್ಣ	SecA	ವಿಕರ್ಣ / ಪಾರ್ಶ್ವ ಬಾಹು
Tan A	ಅಭಿಮುಖ ಬಾಹು / ಪಾರ್ಶ್ವ ಬಾಹು	CotA	ಪಾರ್ಶ್ವ ಬಾಹು / ಅಭಿಮುಖ ಬಾಹು

$\frac{\sin A}{\cos A} = \tan A$ $\qquad \frac{\cos A}{\sin A} = \cot A$

- ಒಂದು ತ್ರಿಕೋನಮಿತಿಯ ಅನುಪಾತಗಳ ಬೆಲೆಗಳು ಅವುಗಳ ಬಾಹುಗಳ ಅಳತೆಯೊಂದಿಗೆ ಬದಲಾವಣೆಯಾಗುವುದಿಲ್ಲ.
- ಕೆಲವು ಬಾರಿ ಕೋನವನ್ನು ಪ್ರತಿನಿಧಿಸಲು ಗ್ರೀಕ್ ಅಕ್ಷರ θ (ಥೀಟಾ) ಬಳಕೆ ಮಾಡುತ್ತೇವೆ.
- ಲಂಬಕೋನ ತ್ರಿಭುಜದಲ್ಲಿ ವಿಕರ್ಣವು ಅತ್ಯಂತ ದೊಡ್ಡ ಬಾಹುವಾಗಿರುವುದರಿಂದ SinA ಮತ್ತು CosA ಗಳ ಬೆಲೆಯು ಯಾವಾಗಲೂ 1 ಕ್ಕಿಂತ ಕಡಿಮೆಯಾಗಿರುತ್ತದೆ. (ಅಥವಾ 1ಕ್ಕೆ ಸಮ)

ಕೆಲವು ನಿರ್ದಿಷ್ಟ ಕೋನಗಳಿಗೆ ತ್ರಿಕೋನಮಿತಿ ಅನುಪಾತಗಳು

$\angle A$	0°	30°	45°	60°	90°
$\sin A$	0	$\frac{1}{2}$	$\frac{1}{\sqrt{2}}$	$\frac{\sqrt{3}}{2}$	1
$\cos A$	1	$\frac{\sqrt{3}}{2}$	$\frac{1}{\sqrt{2}}$	$\frac{1}{2}$	0
$\tan A$	0	$\frac{1}{\sqrt{3}}$	1	$\sqrt{3}$	N.D.
$\operatorname{cosec} A$	N.D.	2	$\sqrt{2}$	$\frac{2}{\sqrt{3}}$	1
$\sec A$	1	$\frac{2}{\sqrt{3}}$	$\sqrt{2}$	2	N.D.
$\cot A$	N.D.	$\sqrt{3}$	1	$\frac{1}{\sqrt{3}}$	0

ಪೂರಕ ಕೋನಗಳ ತ್ರಿಕೋನಮಿತಿ ಅನುಪಾತಗಳು

$\sin(90^\circ - A) = \cos A$ $\qquad \cos(90^\circ - A) = \sin A$

$\tan(90^\circ - A) = \cot A$ $\qquad \cot(90^\circ - A) = \tan A$

$\sec(90^\circ - A) = \operatorname{cosec} A$ $\qquad \operatorname{cosec}(90^\circ - A) = \sec A$

ತ್ರಿಕೋನಮಿತಿಯ ನಿತ್ಯಸಮೀಕರಣಗಳು

$\cos^2 A + \sin^2 A = 1$

$1 + \tan^2 A = \sec^2 A, \ 0^\circ \le A < 90^\circ$

$\cot^2 A + 1 = \operatorname{cosec}^2 A, \ 0^\circ \le A < 90^\circ$

- ವೀಕ್ಷಕನ ಕಣ್ಣಿನಿಂದ ಅವನು ನೋಡುತ್ತಿರುವ ವಸ್ತುವಿನ ಒಂದು ಬಿಂದುವಿಗೆ ಎಳೆದ ರೇಖೆಯನ್ನು ದೃಷ್ಟಿ ರೇಖೆ ಎನ್ನುತ್ತೇವೆ.
- ಒಂದು ವಸ್ತುವನ್ನು ನೋಡಲು ನಮ್ಮ ತಲೆಯನ್ನು *ಮೇಲೆತ್ತಿದ* ಸಂದರ್ಭದಲ್ಲಿ, ದೃಷ್ಟಿರೇಖೆ ಮತ್ತು ಕ್ಷಿತಿಜ ರೇಖೆಯೊಡನೆ ಉಂಟಾದ ಕೋನವನ್ನು **ಉನ್ನತ ಕೋನ** ಎನ್ನುತ್ತೇವೆ.
- ಒಂದು ವಸ್ತುವನ್ನು ನೋಡಲು ನಮ್ಮ ತಲೆಯನ್ನು *ಕೆಳಗಿಳಿಸಿದ* ಸಂದರ್ಭದಲ್ಲಿ, ದೃಷ್ಟಿರೇಖೆ ಮತ್ತು ಕ್ಷಿತಿಜ ರೇಖೆಯೊಡನೆ ಉಂಟಾದ ಕೋನವನ್ನು **ಅವನತ ಕೋನ** ಎನ್ನುತ್ತೇವೆ.

ಪ್ರಶ್ನೋತ್ತರಗಳು

1. $\sin 30^\circ + \cos 60^\circ$ ಯ ಬೆಲೆಯು ಎ. $\frac{1}{2}$ ಬಿ. $\frac{3}{2}$ ಸಿ. $\frac{1}{4}$ ಡಿ. 1

ಉತ್ತರ: ಡಿ.1

2. $(\operatorname{cosec} A - \sin A)(\sec A - \cos A)\sec^2 A = \tan A$ ಎಂದು ಸಾಧಿಸಿ.

ಪರಿಹಾರ: $LHS = (\operatorname{cosec} A - \sin A)(\sec A - \cos A)\sec^2 A$

$= \left(\frac{1}{\sin A} - \frac{\sin^2 A}{\sin A}\right)\left(\frac{1}{\cos A} - \frac{\cos^2 A}{\cos A}\right)\frac{1}{\cos^2 A}$

$= \left(\frac{1-\sin^2 A}{\sin A}\right)\left(\frac{1-\cos^2 A}{\cos A}\right)\frac{1}{\cos^2 A}$

$= \left(\frac{\cos^2 A}{\sin A}\right)\left(\frac{\sin^2 A}{\cos A}\right)\frac{1}{\cos^2 A} = \left(\frac{\cos^2 A}{\sin A}\right)\left(\frac{\sin^2 A}{\cos A}\right)\frac{1}{\cos^2 A}$

$= \frac{\sin A}{\cos A} = \tan A = RHS$

3. 1.6m ಎತ್ತರದ ಪ್ರತಿಮೆಯೊಂದನ್ನು ಒಂದು ಪೀಠದ ಮೇಲ್ಭಾಗದಲ್ಲಿ ಇರಿಸಲಾಗಿದೆ. ನೆಲದ ಮೇಲಿನ ಒಂದು ಬಿಂದುವಿನಿಂದ ಪ್ರತಿಮೆಯ ಮೇಲ್ತುದಿಯ ಉನ್ನತ ಕೋನವು 60^0 ಮತ್ತು ಅದೇ ಬಿಂದುವಿನಿಂದ ಪೀಠದ ಮೇಲ್ತುದಿಯ ಉನ್ನತ ಕೋನವು 45^0 ಆಗಿದೆ. ಪೀಠದ ಎತ್ತರವನ್ನು ಕಂಡುಹಿಡಿಯಿರಿ.



ಪರಿಹಾರ: ΔABD ಯಲ್ಲಿ, $\tan 45^\circ = \frac{BD}{AB}$

$1 = \frac{BD}{AB} \Rightarrow BD = AB$

ΔABC ಯಲ್ಲಿ, $\tan 60^\circ = \frac{BC}{AB}$

$\sqrt{3} = \frac{BD+DC}{AB} \Rightarrow \sqrt{3} = \frac{BD+1.6m}{BD}$

$\sqrt{3}BD = BD + 1.6m \Rightarrow BD(\sqrt{3}-1) = 1.6m$

$BD = \frac{1.6m}{\sqrt{3}-1}$

$BD = 0.8(\sqrt{3}+1)m$

ಪೀಠದ ಎತ್ತರ $= 0.8(\sqrt{3}+1)m$

ಶ್ರೀನಿವಾಸ ಡಿ. ಶೆಟ್ಟಿ
ಶಿಕ್ಷಣ ಸಂಯೋಜಕರು, ಬಿಇಒ ಕಚೇರಿ, ಅರಕಲಗೂಡು

ಹತ್ತನೇ ತರಗತಿ ಗಣಿತಶಾಸ್ತ್ರದ 'ಇಂಟ್ರಡಕ್ಷನ್ ಟು ಟ್ರಿಗ್ನೊಮೆಟ್ರಿ ಅಂಡ್ ಸಮ್ ಅಪ್ಲಿಕೇಷನ್ಸ್ ಆಫ್ ಟ್ರಿಗ್ನೊಮೆಟ್ರಿ' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾದರಿ ಪ್ರಶ್ನೆಗಳು ಆಯತ ಮತ್ತು ಉದ್ದ

ಗಣಿತ ಶಾಸ್ತ್ರ

ಪಿಯುಸಿ

13) $f(x) = \sin(x^2)$ ಉತ್ಪನ್ನದ ನಿಷ್ಪನ್ನವನ್ನು ಕಂಡುಹಿಡಿಯಿರಿ.

ಪರಿಹಾರ: ಕೊಟ್ಟಿರುವ ಉತ್ಪನ್ನವನ್ನು ಗಮನಿಸಿದಾಗ ಇದು ಎರಡು ಉತ್ಪನ್ನದ ಸಂಯುಕ್ತವಾಗಿದೆ.

ಈಗ $t = u(x) = x^2$ ಮತ್ತು $v(t) = \sin t$, ಆದಾಗ

$f(x) = (v \circ u)(x) = v(u(x)) = v(x^2) = \sin x^2 \ t = u(x)$ $= x^2$ ಎಂದು ತೆಗೆದುಕೊಂಡಾಗ

$\frac{dv}{dt} = \cos t$ ಮತ್ತು $\frac{dt}{dx} = 2x$ ಆಗಿದ್ದು ಇದು ಅಸ್ತಿತ್ವದಲ್ಲಿರುತ್ತದೆ. ಈಗ ಸರಣಿ ನಿಯಮದಿಂದ

$\frac{df}{dx} = \frac{dv}{dt}\cdot\frac{dt}{dx} = \cos t.2x = \cos x^2.\ 2x$

ಆದರೆ ಸಾಮಾನ್ಯವಾಗಿ ಅಂತಿಮ ಉತ್ತರವನ್ನು x ನಲ್ಲಿ ನಿರೂಪಿಸುವುದು ವಾಡಿಕೆಯಾಗಿದೆ.

14) **a ಎಂಬುದೊಂದು ಧನ ಸ್ಥಿರಾಂಕವಾದಾಗ a^x ನ್ನು x ಗೆ ಸಂಬಂಧಿಸಿದಂತೆ ನಿಷ್ಪನ್ನಿಸಿ.**

ಪರಿಹಾರ: $y = a^x$ ಆದರೆ $\log y = x \log a$

ಎರಡೂ ಬದಿಯನ್ನು x ಗೆ ಸಂಬಂಧಿಸಿ ನಿಷ್ಪನ್ನಿಸಿದಾಗ

$\frac{1}{y}\frac{dy}{dx} = \log a$ ಅಥವಾ $\frac{dy}{dx} = y \log a$

$\therefore \frac{d}{dx}(a^x) = a^x \log a$

15) ಒಂದು ಆಯತದ ಉದ್ದ x, ಪ್ರತಿ ನಿಮಿಷಕ್ಕೆ 3ಸೆಂ.ಮೀ ನಂತೆ ಕಡಿಮೆಯಾಗುತ್ತಿದೆ ಮತ್ತು ಅದರ ಅಗಲ y, ಪ್ರತಿ ನಿಮಿಷಕ್ಕೆ 2 ಸೆಂ.ಮೀ ನಂತೆ ಏರಿಕೆಯಾಗುತ್ತಿದೆ. x = 10ಸೆಂ.ಮೀ ಮತ್ತು y = 6 ಸೆಂ.ಮೀ ಆದಾಗ ಆಯತದ (i) ಸುತ್ತಳತೆ ಮತ್ತು (ii) ವಿಸ್ತೀರ್ಣದಲ್ಲಾಗುವ ಬದಲಾವಣೆಯ ದರವನ್ನು ಕಂಡುಹಿಡಿಯಿರಿ.

ಪರಿಹಾರ: ಆಯತದ ಉದ್ದ x, ಕಡಿಮೆಯಾಗುತ್ತಿರುವುದರಿಂದ

$\frac{dx}{dt} = -3$ ಸೆಂ/ಮಿ

ಅಗಲ y, ವೃದ್ಧಿಯಾಗುತ್ತಿರುವುದರಿಂದ,

$\frac{dy}{dt} = 2$ ಸೆಂ/ಮಿ

ಆಯತದ ಸುತ್ತಳತೆ P ಮತ್ತು ವಿಸ್ತೀರ್ಣ A ಆಗಿರಲಿ.

ಆಗ $\mathbf{P = 2(x+y)}$ ಮತ್ತು $\mathbf{A = xy}$ ಆಗುವುದು.

ಆದ್ದರಿಂದ $\frac{dp}{dt} = 2\left[\frac{dx}{dt} + \frac{dy}{dt}\right] = 2[-3+2] = -2$ ಸೆಂ/ನಿಮಿಷ.

ಅಂದರೆ ಸುತ್ತಳತೆ ಪ್ರತಿನಿಮಿಷಕ್ಕೆ 2ಸೆಂ. ನಂತೆ ಕಡಿಮೆಯಾಗುತ್ತಿದೆ. (ಋಣಾತ್ಮಕ ಚಿಹ್ನೆ ಕಡಿಮೆದರವನ್ನು ಸೂಚಿಸುವುದು.) $A = xy$ ಹಾಗಾಗಿ

$\frac{dA}{dt} = y\frac{dx}{dt} + x\frac{dy}{dt} = -3(6) + 10(2) \quad [\because x = 10, y = 6]$

$\frac{dA}{dt} = 2$ ಚ.ಸೆಂ./ನಿಮಿಷ

ವಿಸ್ತೀರ್ಣವು ಪ್ರತಿ ನಿಮಿಷಕ್ಕೆ 2ಚ.ಸೆಂ.ನಂತೆ ಹೆಚ್ಚುತ್ತಿದೆ.

16) $\frac{x^2}{4} + \frac{y^2}{25} = 1$ ವಕ್ರರೇಖೆಯ ಮೇಲಿನ ಯಾವ ಬಿಂದುಗಳಲ್ಲಿ ಸ್ಪರ್ಶಕಗಳು (i) x-ಅಕ್ಷಕ್ಕೆ ಸಮಾನಾಂತರವಾಗಿದೆ, (ii) y–ಅಕ್ಷಕ್ಕೆ ಸಮಾನಾಂತರವಾಗಿದೆ.

ಪರಿಹಾರ: x ಗೆ ಅನುಗುಣವಾಗಿ, $\frac{x^2}{4} + \frac{y^2}{25} = 1$ ಅನ್ನು ನಿಶ್ಪನ್ನಮಾಡಿದಾಗ,

$\frac{x}{2} + \frac{2y}{25}\frac{dy}{dx} = 0$ ಅಥವಾ $\frac{dy}{dx} = \frac{-25}{4}\frac{x}{y}$

(i) ಸ್ಪರ್ಶಕವು x–ಅಕ್ಷಕ್ಕೆ ಸಮಾನಾಂತರವಾಗಿದೆ ಓಟವು 0 ಆಗಿರುತ್ತದೆ.

ಅಂದರೆ $\frac{-25x}{4y} = 0$ ಅಥವಾ $x=0$

ಹಾಗೂ $x = 0$ ಆದಾಗ, $\frac{x^2}{4} + \frac{y^2}{25} = 1$ **ಇಂದ,** $y = \pm 5$

∴ ಸ್ಪರ್ಶಕವು x–ಅಕ್ಷಕ್ಕೆ ಸಮಾನಾಂತರವಾಗುವ ಬಿಂದುಗಳು, (0, 5) ಮತ್ತು (0, –5).

(ii) ಸ್ಪರ್ಶಕವು y–ಅಕ್ಷಕ್ಕೆ ಸಮಾನಾಂತರವಾದರೆ, ಲಂಬದ ಓಟವು O ಆಗಿರುತ್ತದೆ. ಅಂದರೆ $\frac{4y}{25} = 0$ ಅಥವಾ $y = 0$. ಆದ್ದರಿಂದ $y = 0$ ಆದಾಗ, $\frac{x^2}{4} + \frac{y^2}{25} = 1$ ಇಂದ, $x = \pm 2$. ಆದ್ದರಿಂದ ಸ್ಪರ್ಶಕವು y–ಅಕ್ಷಕ್ಕೆ ಸಮಾನಾಂತರವಾಗುವ ಬಿಂದುಗಳು, (2, 0), (–2, 0)

17) $f(x) = 3x^2 + 5x + 3$ ಆದಾಗ $f(3.02)$ನ ಸನ್ನಿಹಿತ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ: $x = 3$ ಮತ್ತು $\Delta x = 0.02$ ಎಂದಿರಲಿ

$f(3.02) = f(x + \Delta x) = 3(x + \Delta x)^2 + 5(x + \Delta x) + 3$

$\Delta y = f(x + \Delta x) - f(x)$ ಎಂಬುದನ್ನು ಗಮನಿಸಿ

ಇದರಿಂದಾಗಿ $f(x + \Delta x) = f(x) + \Delta y$

$\approx f(x) + f'(x)\Delta x$ (ಏಕೆಂದರೆ $dx = \Delta x$)

$\therefore f(3.02) \approx (3x^2 + 5x + 3) + (6x + 5)\Delta x$

$(3(3)^2 + 5(3) + 3) + (6(3) + 5)(0.02)$ (ಏಕೆಂದರೆ $x = 3$ ಮತ್ತು $\Delta x = 0.02$)

$= (27 + 15 + 3) + (18 + 5)(0.02)$

$= 45 + 0.46 = 45.46$

ಹಾಗಾಗಿ, $f(3.02)$ನ ಸನ್ನಿಹಿತ ಬೆಲೆಯು 45.46 ಆಗಿದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ಆಂಗ್ಲ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಸುಭಾಷಿತ

ಸಂತೋಷದಿಂದ ಇರುವುದು ಮತ್ತು ಸಂಕಟಪಡುವುದು ಬಡತನ ಅಥವಾ ಸಿರಿತನವನ್ನು ಅವಲಂಬಿಸಿರುವುದಿಲ್ಲ. ನಮ್ಮ ಸರಿ ಅಥವಾ ತಪ್ಪು ತಿಳಿವಳಿಕೆಯನ್ನು ಅವು ಅವಲಂಬಿಸಿರುತ್ತವೆ.

–ಅಜನ್ ಚಾ

ಅಡುಗೆ ಎಣ್ಣೆ ಬೆಲೆ ಏರಿಕೆಯ ಬಿಸಿ ಜನಸಾಮಾನ್ಯರಿಗೆ ಬೇಕಿದೆ ನೆರವು

ಕೋವಿಡ್ ಮತ್ತು ಲಾಕ್‌ಡೌನ್‌ಗಳಿಂದಾಗಿ ಬಸವಳಿದಿದ್ದ ಜನಸಮುದಾಯಗಳು ಮತ್ತೊಂದು ಪೆಟ್ಟು ತಿನ್ನಲು ಸಜ್ಜಾಗಬೇಕಾಗಿದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಪರಿಣಾಮವಾಗಿ ಸೂರ್ಯಕಾಂತಿ ಅಡುಗೆ ಎಣ್ಣೆ ಬೆಲೆಯು ಗಗನಮುಖಿಯಾಗಿ ನಿಂತಿದೆ. ಭಾರತ ತನ್ನ ಅಗತ್ಯದ ಸೂರ್ಯಕಾಂತಿ ಎಣ್ಣೆ ಪೈಕಿ ಸರಿಸುಮಾರು ಶೇಕಡ 80ರಷ್ಟನ್ನು ಉಕ್ರೇನ್‌ನಿಂದ ಆಮದು ಮಾಡಿಕೊಳ್ಳುತ್ತಿದೆ. ಅಲ್ಲಿ ಯುದ್ಧದ ಪರಿಣಾಮವಾಗಿ ಎಣ್ಣೆ ಗಿರಣಿಗಳ ಕೆಲಸ ಸ್ಥಗಿತ ಮಾಡಿದ್ದು, ಸೂರ್ಯಕಾಂತಿ ಎಣ್ಣೆಯನ್ನು ಹೊತ್ತ ಹಡಗುಗಳು ಅಲ್ಲಿಂದ ಹೊರಡುತ್ತಿಲ್ಲ. ಇದು ಭಾರತದಲ್ಲಿ ಪೂರೈಕೆ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಉಂಟು ಮಾಡಿದೆ. ಲೀಟರ್ ಸೂರ್ಯಕಾಂತಿ ಎಣ್ಣೆಯು ಈಗಾಗಲೇ ₹ 40ರವರೆಗೆ ಹೆಚ್ಚಳ ಆಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಅಂಗಡಿ ಎಣ್ಣೆಯನ್ನು ಗ್ರಾಹಕರಿಗೆ ಮಿತ ಪ್ರಮಾಣದಲ್ಲಿ ಮಾರಾಟ ಮಾಡುತ್ತಿರುವ ವರದಿಗಳು ಬಂದಿವೆ. ಯುದ್ಧ ಈಗಲೇ ನಿಂತರೂ, ಅಲ್ಲಿಂದ ಇಲ್ಲಿಗೆ ಸೂರ್ಯಕಾಂತಿ ಎಣ್ಣೆ ಬರಲು ಕನಿಷ್ಠ 45 ದಿನಗಳು ಬೇಕು ಎಂದು ಉದ್ಯಮದ ಮೂಲಗಳು ಹೇಳಿವೆ. ಸೂರ್ಯಕಾಂತಿ ಎಣ್ಣೆಯ ಬೆಲೆಯಲ್ಲಿ ಆಗುವ ಏರಿಕೆಯು ಇತರ ಅಡುಗೆ ಎಣ್ಣೆಗಳ ಬೆಲೆಯ ಮೇಲೆಯೂ ಪರಿಣಾಮ ಉಂಟುಮಾಡುವುದು ಖಂಡಿತ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಎಲ್ಲ ಬಗೆಯ ಅಡುಗೆ ಎಣ್ಣೆ ಬೆಲೆಯಲ್ಲಿಯೂ ಏರಿಕೆ ಆಗುತ್ತದೆ. ಜನಸಾಮಾನ್ಯರ ಬದುಕು ಅಸ್ತವ್ಯಸ್ತಕ್ಕೆ ತುತ್ತಾಗುತ್ತದೆ.



ಅಡುಗೆ ಎಣ್ಣೆಯಂತಹ ಅಗತ್ಯ ವಸ್ತುಗಳ ಕೃತಕ ಅಭಾವ ಸೃಷ್ಟಿಯಾಗದಂತೆ ನೋಡಿಕೊಳ್ಳಬೇಕಾದ ಹೊಣೆ ಸರ್ಕಾರಗಳ ಮೇಲಿದೆ

ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಇನ್ನೊಂದು ಪರಿಣಾಮವೆಂದರೆ, ಕಚ್ಚಾ ತೈಲದ ಬೆಲೆಯಲ್ಲಿ ಆಗಿರುವ ಭಾರಿ ಪ್ರಮಾಣದ ಏರಿಕೆ. ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಹತ್ತಿರವಾಗಿದ್ದಾಗ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯ ಏರಿಕೆಗೆ ತಡೆ ಹಾಕಲಾಗಿತ್ತು. ಇದು ಸಂಪೂರ್ಣವಾಗಿ ರಾಜಕೀಯ ತೀರ್ಮಾನ ಆಗಿತ್ತು. ಈಗ ಮತದಾನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯು ಬಹುತೇಕ ಖಚಿತ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಆಗಿರುವ ಹೆಚ್ಚಳವನ್ನು ಗಮನಿಸಿದರೆ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯು ಹಂತ ಹಂತವಾಗಿ ಲೀಟರಿಗೆ ₹ 12ರವರೆಗೆ ಹೆಚ್ಚಳ ಆಗಬಹುದು ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ. ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಆಗುವ ಏರಿಕೆಯು ದಿನನಿತ್ಯ ಬಳಸುವ ಎಲ್ಲ ವಸ್ತುಗಳ ಬೆಲೆಯಲ್ಲಿಯೂ ಪ್ರತಿಫಲನ ಆಗುವುದು ತೀರಾ ಸಹಜ. ಅಡುಗೆ ಎಣ್ಣೆಯ ಬೆಲೆಯಲ್ಲಿ ಈಗಾಗಲೇ ಆಗಿರುವ ಏರಿಕೆ, ಯುದ್ಧ ಮುಂದುವರಿದರೆ ಇನ್ನು ಮುಂದೆಯೂ ಆಗಬಹುದಾದ ಏರಿಕೆ, ಇಂಧನ ಬೆಲೆ ಏರಿಕೆ, ಅದರಿಂದ ಅಗತ್ಯ ವಸ್ತುಗಳ ಬೆಲೆಯಲ್ಲಿ ಆಗಲಿರುವ ಏರಿಕೆ ಜನಸಾಮಾನ್ಯರ ಸಂಕಷ್ಟವನ್ನು ಹೆಚ್ಚಿಸಲಿವೆ. ದೇಶದ ಚಿಲ್ಲರೆ ಹಣದುಬ್ಬರ ದರದ ಪ್ರಮಾಣವು ಜನವರಿಯಲ್ಲಿ ಶೇಕಡ 6ರ ಗಡಿಯನ್ನು ದಾಟಿದೆ. ಅಂದರೆ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಾನೇ ನಿಗದಿ ಮಾಡಿಕೊಂಡಿರುವ ಗರಿಷ್ಠ ಪ್ರಮಾಣಕ್ಕಿಂತ ಹಣದುಬ್ಬರ ದರ ಹೆಚ್ಚಳ ಕಂಡಿದೆ.

ಜನವರಿಯಲ್ಲಿ ಜಾಗತಿಕ ರಾಜಕೀಯ, ಆರ್ಥಿಕ ಪರಿಸ್ಥಿತಿ ಈಗಿನಂತೆ ಇರಲಿಲ್ಲ. ಆಗ ಕಚ್ಚಾ ತೈಲ ಬೆಲೆಯು ಈಗಿನ ಮಟ್ಟವನ್ನು ತಲುಪಿರಲಿಲ್ಲ. ಈಗಿನ ಸಂದರ್ಭವು ಬೇರೆಯದೇ ಆಗಿದೆ. ಅನಿರೀಕ್ಷಿತವಾಗಿ ಬಂದೆರಗಿರುವ ಯುದ್ಧದ ಪರಿಣಾಮಗಳನ್ನು ಆರ್‌ಬಿಐ ಹೇಗೆ ನಿಭಾಯಿಸುತ್ತದೆ, ಹಣದುಬ್ಬರದ ಏರಿಳಿತವನ್ನು ಹೇಗೆ ನಿಯಂತ್ರಿಸುತ್ತದೆ ಎಂಬುದನ್ನು ಅವಲಂಬಿಸಿದೆ ಜನಸಾಮಾನ್ಯರ ದಿನನಿತ್ಯದ ಬದುಕು. ಸೋಮವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ದಾಖಲಿಸುವುದರ ಹಿಂದೆ ಹಣದುಬ್ಬರದ ಪ್ರಮಾಣವು ವಿಪರೀತ ಅನ್ನಿಸುವ ಮಟ್ಟವನ್ನು ತಲುಪಬಹುದು ಎಂಬ ಒಂದು ಆತಂಕವೂ ಇತ್ತು. ಆ ಆತಂಕದಲ್ಲಿ ಹುರುಳಿದೆ. ವ್ಯವಸ್ಥೆಯಲ್ಲಿ ನಗದು ಹರಿವಿನ ಪ್ರಮಾಣವನ್ನು ನಿಯಂತ್ರಿಸಿ, ಆ ಮೂಲಕ ಹಣದುಬ್ಬರ ಪ್ರಮಾಣವನ್ನು ಆರ್‌ಬಿಐ ಹತೋಟಿಗೆ ತರುತ್ತದೆ ಎಂಬ ನಿರೀಕ್ಷೆ ಇತ್ತು. ಈಗಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಾಗುವುದು ಅನುಮಾನಕರ. ಈಗಿನ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಸರ್ಕಾರಗಳ ಮಧ್ಯಪ್ರವೇಶ ಅಗತ್ಯವಾಗುತ್ತದೆ. ಸಗಟು ವ್ಯಾಪಾರಿಗಳು ಅಡುಗೆ ಎಣ್ಣೆಯಂತಹ ಅಗತ್ಯ ವಸ್ತುಗಳನ್ನು ಅಕ್ರಮವಾಗಿ ದಾಸ್ತಾನು ಇರಿಸಿ, ಮಾರುಕಟ್ಟೆಯಲ್ಲಿ ಅವುಗಳ ಕೃತಕ ಅಭಾವ ಸೃಷ್ಟಿಸಿ, ಬೆಲೆಯನ್ನು ಹೆಚ್ಚಿಸುವ ತಂತ್ರದ ಮೊರೆಹೋಗುವ ಸಾಧ್ಯತೆ ಇರುತ್ತದೆ. ಇಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳುವ ಶಕ್ತಿ ಇರುವುದು ಸರ್ಕಾರಗಳಿಗೆ ಮಾತ್ರ. ಆ ಕೆಲಸ ಆಳುವವರಿಂದ ಈಗ ಆಗಬೇಕು. ಅಲ್ಲದೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯ ಮೇಲಿನ ಎಕ್ಸೈಸ್ ಸುಂಕ ಹಾಗೂ ಮೌಲ್ಯವರ್ಧಿತ ತೆರಿಗೆ ಪ್ರಮಾಣವನ್ನು ತಗ್ಗಿಸಿ ಅವುಗಳ ದೇಶಿ ಮಾರುಕಟ್ಟೆ ಬೆಲೆಯು ವಿಪರೀತದ ಮಟ್ಟ ತಲುಪದಂತೆ ನೋಡಿಕೊಳ್ಳಬೇಕಿದೆ.

ರಾಷ್ಟ್ರ ರಾಜಕಾರಣಕ್ಕೆ ಮುಂದಿನ ದಿಕ್ಕು ತೋರಲಿರುವ ಫಲಿತಾಂಶ

ಸಮೀಕ್ಷೆ ಮತ್ತು ರಾಜಕೀಯ ಗಾಳಿಯ ದಿಕ್ಕು

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಬಿರುಸಿನ ಚುನಾವಣಾ ಪ್ರಚಾರಗಳ ನಂತರ, ಈ ತಿಂಗಳ 7ರ ಸಂಜೆ, ಮತದಾನೋತ್ತರ ಸಮೀಕ್ಷೆಗಳ ಫಲಿತಾಂಶಗಳನ್ನು ಬಿತ್ತರಿಸುತ್ತಿದ್ದ ಟಿ.ವಿ. ಸುದ್ದಿವಾಹಿನಿಗಳ ಪರದೆಗಳ ಮೇಲೆ ಎಲ್ಲರ ಕಣ್ಣು ನೆಟ್ಟಿತ್ತು. ಬಹುತೇಕ ಎಲ್ಲ ಸಮೀಕ್ಷೆಗಳೂ ಒಂದೇ ನಮೂನೆ ಇರುವಂತಿದ್ದವು. ಆದರೆ ಅಧಿಕಾರ ಹಿಡಿಯಬಹುದಾದ ಪಕ್ಷ ಪಡೆಯಬಹುದೆಂದು ಬಿಂಬಿಸಲಾದ ಸ್ಥಾನಗಳ ಸಂಖ್ಯೆಯಲ್ಲಿ ಹೆಚ್ಚು ವ್ಯತ್ಯಾಸಗಳಿದ್ದವು.

ಈ ಅಂದಾಜುಗಳಲ್ಲಿ ಮೂರು ಅಂಶಗಳು ಎದ್ದು ಕಾಣಿಸುವಂತಿದ್ದವು. ಮೊದಲನೆಯದು, ಉತ್ತರಪ್ರದೇಶ ಹಾಗೂ ಉತ್ತರಾಖಂಡದಲ್ಲಿ ಬಿಜೆಪಿಯು ಅಧಿಕಾರ ಉಳಿಸಿಕೊಳ್ಳುವ ಸಾಧ್ಯತೆ ಇದೆ. ಮಣಿಪುರದಲ್ಲೂ ಅದಕ್ಕೆ ಸ್ಥಿತಿ ಅನುಕೂಲಕರವಾಗಿದೆ. ಗೋವಾದಲ್ಲಿ ಪೈಪೋಟಿ ತೀವ್ರತರವಾಗಿರುವಂತಿದೆ. ಎರಡನೆಯದು, ಪಂಜಾಬ್‌ನಲ್ಲಿ ಎಎಪಿ ಅಧಿಕಾರಕ್ಕೆ ಬರಲು ಸಜ್ಜಾದಂತಿದೆ. ಮೂರನೆಯದು, ಚುನಾವಣೆ ನಡೆದ ಎಲ್ಲ ರಾಜ್ಯಗಳಲ್ಲೂ ಕಾಂಗ್ರೆಸ್‌ಗೆ ಭಾರಿ ಸವಾಲುಗಳಿದ್ದವು.

ಮತದಾನೋತ್ತರ ಸಮೀಕ್ಷೆಗಳ ನಿಖರತೆ ಈ ತಿಂಗಳ 10ರಂದು ನಡೆಯುವ ಮತ ಎಣಿಕೆಯಲ್ಲಿ ಬಯಲಾಗಲಿದೆ. ಏನೇ ಆಗಲಿ, 2024ರ ಸಾರ್ವತ್ರಿಕ ಚುನಾವಣೆಗೆ ರಾಷ್ಟ್ರ ರಾಜಕಾರಣದ ಗತಿಯನ್ನು ಈ ಫಲಿತಾಂಶ ನಿರ್ಧರಿಸಲಿದೆ.

ಉತ್ತರಪ್ರದೇಶದಲ್ಲಿ ಬಿಜೆಪಿ ಗೆಲುವಿನ ಸೂಚನೆಯು ವ್ಯಾಪಕ ರಾಜಕೀಯ ಅಂತರಾರ್ಥಗಳನ್ನು ಹೊಂದಿದೆ. ದೀರ್ಘಕಾಲದ ನಂತರ, ಆಡಳಿತ ಪಕ್ಷವೇ ಅಧಿಕಾರಕ್ಕೆ ಮರಳಿ ಬರುವಂತಹದ್ದು ಇದು. ಬಿಜೆಪಿ ಪಡೆದುಕೊಳ್ಳಬಹುದಾದ ಬಹುಮತದ ಪ್ರಮಾಣದ ಬಗ್ಗೆ ಈ ಸಮೀಕ್ಷೆಗಳಲ್ಲಿ ವ್ಯತ್ಯಾಸಗಳಿದ್ದರೂ ಈ ಸಮೀಕ್ಷೆಗಳನ್ನು ನಂಬಬಹುದಾದಲ್ಲಿ ಅದು ಅಧಿಕಾರಕ್ಕೆ ಮರಳಿ ಬರುವುದು ಖಚಿತವೆಂದು ತೋರುತ್ತಿದೆ. ಬಿಜೆಪಿಗೆ ದೊರೆಯಬಹುದಾದ ಬಹುಮತವು ಕಡಿಮೆ ಪ್ರಮಾಣದ್ದಾಗಿರುತ್ತದೆ ಎಂದು ಬಿಂಬಿಸುತ್ತಿರುವವರು, ಬಿಜೆಪಿ ಹಾಗೂ ಸಮಾಜವಾದಿ ಪಕ್ಷದ ಮಧ್ಯೆ ತೀವ್ರ ಹಣಾಹಣಿ ಇದೆ ಎನ್ನುತ್ತಿದ್ದಾರೆ. ಆದರೆ ಬಿಜೆಪಿಗೆ ಹೆಚ್ಚಿನ ಬಹುಮತ ಸಿಗುತ್ತದೆ ಎಂದು ಬಿಂಬಿಸುತ್ತಿರುವವರು, ಎಲ್ಲ ಪ್ರದೇಶಗಳಲ್ಲೂ ತನ್ನ ಪ್ರತಿಸ್ಪರ್ಧಿಗಿಂತ ಬಿಜೆಪಿ ಬಹಳ ಮುಂದಿದೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಆಡಳಿತ ಹಾಗೂ ಕಾನೂನು ಸುವ್ಯವಸ್ಥೆ ಕುರಿತಂತೆ ಇರಬಹುದಾದ ಮೇಲ್ನೋಟದ ಗ್ರಹಿಕೆಯು ಬಿಜೆಪಿಗೆ ಅನುಕೂಲಕರವಾಗಿ ಪರಿಣಮಿಸಿರಬಹುದು. ತಮ್ಮ ಪಕ್ಷದ ಪರವಾಗಿ ಪ್ರಧಾನಿಯವರ ಪ್ರಚಾರಸಭೆಗಳ ಪರಿಣಾಮವನ್ನೂ ಕಡೆಗಣಿಸಲಾಗದು. ಚುನಾವಣೆಯ ಪ್ರತೀ ಹಂತದಲ್ಲೂ ಪ್ರಧಾನಿ ಹಾಜರಿ ಹಾಗೂ ಅಸಂಖ್ಯ ರೋಡ್ ಷೋಗಳಿರುವಂತೆ ಪ್ರಚಾರ ಸಭೆಗಳನ್ನು ಸಂಯೋಜಿಸಲಾಗಿತ್ತು.

ಲೋಕಸಭೆಗೆ ತಾವು ಆರಿಸಿಬಂದಿರುವಂತಹ ಈ ರಾಜ್ಯದ ಚುನಾವಣೆಯನ್ನು ಗೆಲ್ಲುವುದು ಪ್ರಧಾನಿಗೆ ಮುಖ್ಯವಾಗಿರುವಂತೆಯೇ ಮುಂದಿನ ಲೋಕಸಭೆ ಚುನಾವಣೆಯ ಎಲ್ಲ ಲೆಕ್ಕಾಚಾರಗಳಿಗೂ ಇದು ಬಿಜೆಪಿಗೆ ಮಹತ್ವದ್ದಾಗಿದೆ. ಈ ಚುನಾವಣೆಯು ಎರಡು ಪಕ್ಷಗಳ ನಡುವಿನ ಸ್ಪರ್ಧೆಯಾಗಿದ್ದು ಬಿಎಸ್‌ಪಿ ಹಾಗೂ ಕಾಂಗ್ರೆಸ್ ಅಂಚಿನಲ್ಲಿವೆ ಎಂಬ ವಿಚಾರವನ್ನು ಈ ಸಮೀಕ್ಷೆಗಳು ಒಪ್ಪಿಕೊಂಡಂತಿವೆ. ಈ ಎರಡೂ ಪಕ್ಷಗಳ ಗೆಲುವಿನ ಪ್ರಮಾಣ ಏಕಸಂಖ್ಯೆಯಲ್ಲಿರುತ್ತದೆ ಎಂಬುದಾಗಿ ಬಹುತೇಕ ಸಮೀಕ್ಷೆಗಳು ಹೇಳಿವೆ. ಬರಲಿರುವ ದಿನಗಳಲ್ಲಿ ಉತ್ತರಪ್ರದೇಶ ಹಾಗೂ ರಾಷ್ಟ್ರ ಮಟ್ಟದಲ್ಲಿ ಇದು ಮತ್ತೆ ಮುಖ್ಯ ಸೂಚ್ಯಾರ್ಥಗಳನ್ನು ಹೊಂದಿರಲಿದೆ.

ಪಂಜಾಬ್‌ನಲ್ಲಿ ಆಮ್ ಆದ್ಮಿ ಪಾರ್ಟಿ (ಎಎಪಿ) ಅನಾಯಾಸವಾಗಿ ಗೆಲುವು ಸಾಧಿಸುವಂತಿದೆ. ಇಲ್ಲೂ ಎಎಪಿ ಪಡೆದುಕೊಳ್ಳಬಹುದಾದ ಬಹುಮತದ ಪ್ರಮಾಣದ ಬಗ್ಗೆ ಸಮೀಕ್ಷೆಗಳಲ್ಲಿ ಭಿನ್ನತೆಗಳಿವೆ. ಆಡಳಿತ ಕಾಂಗ್ರೆಸ್ ಪಕ್ಷವು ನೆಲೆ ಕಳೆದುಕೊಂಡಂತಿದೆ. ಕಡೇ ಗಳಿಗೆಯಲ್ಲಿ ಮುಖ್ಯಮಂತ್ರಿಯನ್ನು ಬದಲಾವಣೆ ಮಾಡಿದ್ದು ಹಾಗೂ ಪಕ್ಷದೊಳಗೆ ಮುಂದುವರಿದ ಆಂತರಿಕ ಕಚ್ಚಾಟವು ಪಕ್ಷದ ವರ್ಚಸ್ಸನ್ನು ಖಂಡಿತವಾಗಿ ಕುಂದಿಸಿದೆ. ದಲಿತರೊಬ್ಬರನ್ನು ಮುಖ್ಯಮಂತ್ರಿಯಾಗಿ ನೇಮಿಸಿದ್ದು ಕಾಂಗ್ರೆಸ್‌ಗೆ ಒಂದಷ್ಟು ಅನುಕೂಲ ತಂದಿರಬಹುದಾದರೂ ಕಾಂಗ್ರೆಸ್ ಅನ್ನು ಮತ್ತೆ ಅಧಿಕಾರಕ್ಕೆ ತರುವಷ್ಟು ಸಾಮರ್ಥ್ಯ ಅದೊಂದೇ ಅಂಶಕ್ಕೆ ಇದ್ದಂತೆ ಕಾಣುತ್ತಿಲ್ಲ. ಕೃಷಿ ಕಾನೂನುಗಳ ಬಗ್ಗೆ ತ್ವರಿತವಾಗಿ ಸ್ಪಷ್ಟ ನಿಲುವು ತೆಗೆದುಕೊಳ್ಳಲು ಸಾಧ್ಯವಾಗದಿದ್ದಕ್ಕಾಗಿ ಶಿರೋಮಣಿ ಅಕಾಲಿ ದಳ ನೇತೃತ್ವದ ಮೈತ್ರಿಕೂಟವು ಬೆಲೆ ತೆರುವಂತಿದೆ. ಪ್ರಭಾವಿ ಜಾಟ್ ಸಿಖ್ಖರ ಬೆಂಬಲವು ಗಣನೀಯವಾಗಿ ಕಡಿಮೆಯಾಗಿರುವಂತೆ ಭಾಸವಾಗುತ್ತದೆ. ಬಿಜೆಪಿ ನೇತೃತ್ವದ ಮೈತ್ರಿಕೂಟಕ್ಕೂ ಹೆಚ್ಚಿನ ಬೆಂಬಲ ಸಿಕ್ಕಿದಂತಿಲ್ಲ. ಪಂಜಾಬ್‌ನಲ್ಲಿ ಬಿಜೆಪಿಯು ತನ್ನ ಸ್ಥಿತಿ ಸುಧಾರಿಸಿಕೊಳ್ಳಲಿದೆ ಮತ್ತು ಇತರ ರಾಜ್ಯಗಳಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ಅಮಿತ್ ಶಾ ಹೇಳಿಕೆ ನೀಡುವ ಮೂಲಕ ಬಿಜೆಪಿಯ ಉನ್ನತ ನಾಯಕತ್ವವೂ ಇದನ್ನು ಒಪ್ಪಿಕೊಂಡಂತಾಗಿದೆ.

ಪಂಜಾಬ್‌ಗೆ ಸಂಬಂಧಿಸಿದ ಮತದಾನೋತ್ತರ ಸಮೀಕ್ಷೆಯ ಈ ಅಂದಾಜುಗಳು ನಿಖರವಾಗಿದ್ದಲ್ಲಿ ಇಲ್ಲೂ ಹಲವು ಸೂಚ್ಯಾರ್ಥಗಳಿವೆ. ದೆಹಲಿ ಆಚೆಗೂ ತನ್ನ ರಾಜಕೀಯ ಹಾಜರಿಯನ್ನು ಪ್ರಸ್ತುತಪಡಿಸಿ ಲೋಕಸಭೆ ಚುನಾವಣೆಗೆ ಮುಂಚೆ ನಡೆಯುವಂತಹ ಇತರ ರಾಜ್ಯ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿಗೆ ಸವಾಲು ಹಾಕುವ ಪಕ್ಷವಾಗಿ ಉದಯವಾಗಲು ಎಎಪಿ ಸಜ್ಜಾಗಬಹುದು. ಎಎಪಿಯ ಯಾವುದೇ ಗಳಿಕೆಯು ಕಾಂಗ್ರೆಸ್‌ಗೆ ನಷ್ಟಕರವೆಂಬುದನ್ನು ಒತ್ತಿಹೇಳಬೇಕಾದುದು ಇಲ್ಲಿ ಮುಖ್ಯ.

ಉತ್ತರಾಖಂಡದಲ್ಲಿ ತೀವ್ರ ಪೈಪೋಟಿ ಇರುವಂತೆ ಕಂಡರೂ ಬಿಜೆಪಿಗೆ ಅನುಕೂಲ ಇರುವಂತೆ ಸಮೀಕ್ಷೆಗಳು ಬಿಂಬಿಸಿವೆ. ಇಲ್ಲಿ ಎರಡು ಅಂಶಗಳನ್ನು ಒತ್ತಿ ಹೇಳುವುದು ಅಗತ್ಯ. ಮೊದಲನೆಯದು, ಆಡಳಿತ ಪಕ್ಷವೇ ಅಧಿಕಾರಕ್ಕೆ ಮರಳುವಂತಹದ್ದು ಮೊದಲ ಬಾರಿಯದಾಗಿರುತ್ತದೆ. ಇಲ್ಲೂ ಪ್ರಧಾನಿ ನೇತೃತ್ವದ ಪ್ರಚಾರದ ಪರಿಣಾಮಗಳದ್ದು ಮಹತ್ವದ ಅಂಶ. ಕಳೆದ ಐದು ವರ್ಷಗಳಲ್ಲಿ ಮುಖ್ಯಮಂತ್ರಿಯನ್ನು ಆಡಳಿತ ಪಕ್ಷವು ಮೂರು ಬಾರಿ ಬದಲಾಯಿಸಿದಂತಹ ವಿದ್ಯಮಾನದ ಬೆಳಕಿನಲ್ಲಿ ಇದನ್ನು ವಿಶೇಷವಾಗಿ ಒತ್ತಿಹೇಳುವುದು ಅಗತ್ಯವಾಗುತ್ತದೆ. ಎರಡನೆಯದಾಗಿ, ಕಾಂಗ್ರೆಸ್‌ನ ಆಂತರಿಕ ಕಚ್ಚಾಟ ಹಾಗೂ ಹರೀಶ್ ರಾವತ್ ಅವರ ಕೈ ಬಲಪಡಿಸುವಲ್ಲಿ ಪಕ್ಷದ ಅಸಾಮರ್ಥ್ಯದ ಸ್ಪಷ್ಟ ಪರಿಣಾಮ ಇದು. ರಾವತ್ ಅವರು ತಮ್ಮದೇ ಪಕ್ಷದೊಳಗೆ ಹಾಗೂ ಹೊರಗೆ ಬಿಜೆಪಿಯ ವಿರುದ್ಧ ಹೋರಾಟ ನಡೆಸುತ್ತಿದ್ದಂತಿತ್ತು. ಈ ಸಮೀಕ್ಷೆಗಳು ನಿಖರವಾಗಿದ್ದಲ್ಲಿ, ರಾಜ್ಯ ಮಟ್ಟದ ಚುನಾವಣೆಗಳಲ್ಲಿ ಆಡಳಿತಾರೂಢ ಬಿಜೆಪಿಗೆ ಸವಾಲು ಹಾಕುವ ಅವಕಾಶವನ್ನು ಕಾಂಗ್ರೆಸ್ ಮತ್ತೊಂದು ಬಾರಿಗೆ ಕಳೆದುಕೊಂಡಂತಾಗುತ್ತದೆ.

ಮಣಿಪುರದಲ್ಲೂ ಬಿಜೆಪಿಯೇ ಅಧಿಕಾರಕ್ಕೆ ಮರಳುವಂತಿದೆ. ಫಲಿತಾಂಶ ಬಂದಾಗ ಇದು ನಿಜ ಎಂದಾದಲ್ಲಿ ಈಶಾನ್ಯ ಭಾಗದಲ್ಲಿ ಪಕ್ಷದ ದೃಢ ಉಪಸ್ಥಿತಿಗೆ ಸೂಚಕವಾಗುತ್ತದೆ. ಈ ಭಾಗದಲ್ಲಿ ರಾಜಕೀಯ ವಿಸ್ತರಣೆಗೆ ಚೆನ್ನಾಗಿ ಯೋಜಿಸಿದ ಕಾರ್ಯತಂತ್ರವೂ ಫಲ ನೀಡಿದಂತಾಗುತ್ತದೆ.

ಗೋವಾದಲ್ಲಿ ಅನಿಶ್ಚಯವೇ ಕಂಡುಬರುವಂತಿದ್ದು ಕಳೆದ ಬಾರಿಯಂತೆಯೇ ಸರ್ಕಾರವನ್ನು ರಾಜ್ಯದಲ್ಲಿ ಯಾರು ರಚಿಸುತ್ತಾರೆ ಎಂಬುದನ್ನು ಫಲಿತಾಂಶಗಳು ನಿರ್ಧರಿಸದೇ ಹೋಗಬಹುದು! ಬಿಜೆಪಿ ಹಾಗೂ ಕಾಂಗ್ರೆಸ್ ಮಧ್ಯೆ ನಿಕಟ ಸ್ಪರ್ಧೆ ಏರ್ಪಡುವುದನ್ನು ಸಮೀಕ್ಷೆಗಳು ಸೂಚಿಸಿದ್ದು ಎಂಜಿಪಿ, ಟಿಎಂಸಿ ಹಾಗೂ ಎಎಪಿಯಂತಹ ಪಕ್ಷಗಳು ಪ್ರಮುಖ ಪಾತ್ರಧಾರಿಗಳಾಗಿರಬಹುದು. ಬಿಜೆಪಿ ಹಾಗೂ ಕಾಂಗ್ರೆಸ್ ಎಷ್ಟರಮಟ್ಟಿಗೆ ಸಣ್ಣ ಪಕ್ಷಗಳೊಂದಿಗೆ ಹಾಗೂ ಆ ಪಕ್ಷಗಳ ಶಾಸಕರೊಂದಿಗೆ ಒಪ್ಪಂದ ಮಾಡಿಕೊಂಡು ಬಹುಮತ ಸಾಧಿಸಬಲ್ಲವು ಎಂಬುದನ್ನು ಗೋವಾದಲ್ಲಿ ನೋಡಬೇಕಾಗಿದೆ.

ಮತದಾನೋತ್ತರ ಸಮೀಕ್ಷೆಗಳ ಸಂದೇಶ ಸ್ಪಷ್ಟವಾಗಿದೆ. ಪಂಜಾಬ್‌ನಲ್ಲಿ ಹೊಸ ಪಕ್ಷವು ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆ ಇದೆ. ಉತ್ತರಪ್ರದೇಶ, ಉತ್ತರಾಖಂಡ ಹಾಗೂ ಮಣಿಪುರದಲ್ಲಿ ಯಥಾಸ್ಥಿತಿಯ ಮುಂದುವರಿಕೆ. ಚುನಾವಣಾ ಫಲಿತಾಂಶಗಳಲ್ಲಿ ಇವೇ ಪ್ರತಿಬಿಂಬಿತವಾದಲ್ಲಿ ಇದು ಸ್ಪಷ್ಟವಾಗಿ ಬಿಜೆಪಿಗೆ ಅನುಕೂಲಕರ ಹಾಗೂ ರಾಷ್ಟ್ರ ಮಟ್ಟದಲ್ಲಿ ಬಿಜೆಪಿಗೆ ಸವಾಲು ಹಾಕುವವರಲ್ಲಿ ಪ್ರಮುಖ ನೆಲೆ ಪ್ರತಿಪಾದಿಸಿಕೊಳ್ಳಲು ಎಎಪಿಗೊಂದು ವರದಾನ.

ಗಂಭೀರವಾದ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿರುವ ಪಕ್ಷವೆಂದರೆ ಕಾಂಗ್ರೆಸ್. ಒಂದಾದ ಮೇಲೆ ಒಂದು ರಾಜ್ಯವನ್ನು ಕಾಂಗ್ರೆಸ್ ಕಳೆದುಕೊಳ್ಳುವಂತಿದ್ದು, ಎಲ್ಲೆಲ್ಲಿ ಬಿಜೆಪಿ ಅಧಿಕಾರದ ಗದ್ದುಗೆಯಲ್ಲಿದೆಯೋ ಅಲ್ಲೆಲ್ಲಾ ಅದನ್ನು ಕೆಳಗಿಳಿಸುವ ಸವಾಲನ್ನೂ ಸೂಕ್ತವಾಗಿ ಕಾಂಗ್ರೆಸ್‌ಗೆ ಎದುರಿಸಲಾಗುತ್ತಿಲ್ಲ ಎನಿಸುತ್ತದೆ.

ಚುರುಮುರಿ

ಬಜೆಟ್ ಭಜನೆ

• ಮಣ್ಣೆರಾಜು

'ಸರ್ಕಾರದ ಬಜೆಟ್ ಮಂಡನೆ ಮುಗಿದು ಇಷ್ಟು ದಿನಾದರೂ ನಾಯಕರು ಅದರ ಭಜನೆ ನಿಲ್ಲಿಸಿಲ್ಲ... ಬಜೆಟ್ ಬಗ್ಗೆ ಆಳುವ ಪಕ್ಷದ ಕೇಕೆ, ಕೇಳುವ ಪಕ್ಷಗಳ ಟೀಕೆ ಚುನಾವಣೆವರೆಗೂ ಮುಂದುವರಿಯಬಹುದಾ?' ಸುಮಿ ಕೇಳಿದಳು.

'ಇದು ಚುನಾವಣೆ ಬಜೆಟ್ ಅಂತ ನಾಯಕರೇ ನಾಮಕರಣ ಮಾಡಿರುವುದರಿಂದ ಈ ಬಜೆಟ್ ವೋಟ್ ಮ್ಯಾಟರ್ ಆಗಬಹುದು' ಅಂದ ಶಂಕ್ರಿ.

'ಈ ಬಜೆಟ್ ಯುಗಾದಿಯ ಒಬ್ಬಟ್ಟು ಅಂತ ಆಡಳಿತ ಪಕ್ಷದ ನಾಯಕರು ಚಪ್ಪರಿಸುತ್ತಿದ್ದಾರೆ. ಹೂರಣ ಇಲ್ಲದ ಸಪ್ಪೆ ಹೋಳಿಗೆ ಅಂತ ಸಿದ್ದರಾಮಣ್ಣ ತೆಗಳಿದ್ದಾರೆ. ಉಪ್ಪು, ಹುಳಿ, ಖಾರ ಇಲ್ಲದ ಸತ್ವಹೀನ ಬಜೆಟ್ ಅಂತ ಕುಮಾರಣ್ಣ ಕೀಟಲೆ ಮಾಡಿದ್ದಾರೆ'.

'ಅವರವರ ಪಕ್ಷನಿಷ್ಠಾನುಸಾರ ಬಜೆಟ್ ವಿಶ್ಲೇಷಣೆ ಮಾಡ್ತಾರೆ. ಉದ್ಯೋಗ ಸೃಷ್ಟಿ, ಜನರ ಆರ್ಥಿಕ ಸ್ಥಿತಿ ಸುಧಾರಣೆಯಾಗುವ ಕಾರ್ಯಕ್ರಮಗಳಿಲ್ಲ ಅಂತನೂ ಟೀಕಿಸಿದ್ದಾರೆ'.

'ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿ ಬದುಕು ದುಬಾರಿಯಾಗಿದೆ. ಈ ಬಜೆಟ್‌ನಿಂದ ನಮ್ಮಂಥವರಿಗೆ ಏನೇನು ಪ್ರಯೋಜನ ಆಗಬಹುದು?'

'ಕಾಶಿ ಯಾತ್ರೆಗೆ ಹೋಗಲು ಧನಸಹಾಯ, ತೀರ್ಥಯಾತ್ರೆಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿರೋದು ನಮ್ಮಂಥವರಿಗಾಗಿ, ಜೊತೆಗೆ ಜಾತಿಗೊಂದು ನಿಗಮ ಮಾಡಿ ಕೋಟ್ಯಂತರ ರೂಪಾಯಿ ಕೊಟ್ಟಿದೆ, ಅದರ ಸೌಲಭ್ಯ ಪಡೆದು ಸರ್ವಜನರೂ ಸುಖವಾಗಿರಬಹುದಂತೆ'.

ಹಾಗಲ್ಲಾರೀ, ನಾವೂ ತೆರಿಗೆ ಕಟ್ಟುತ್ತೇವೆ, ಸರ್ಕಾರ ನಮ್ಮಂಥವರಿಗೆ ಮನೆ ಸಾಲ, ಒಡವೆ ಸಾಲ, ವಾಹನ ಸಾಲ ಕೊಟ್ಟು ಆಮೇಲೆ ಮನ್ನಾ ಮಾಡಬೇಕು ಅಲ್ವಾ?'

'ನಮ್ಮ ಜುಜುಬಿ ತೆರಿಗೆ ಹಣದಿಂದ ಇಷ್ಟು ದೊಡ್ಡ ಬಜೆಟ್ ರೂಪಿಸಲು ಸಾಧ್ಯವಿಲ್ಲ. ಎಲ್ಲಾ ಸರ್ಕಾರಗಳು ಸಾಲ ನಂಬಿಕೊಂಡೇ ಬಜೆಟ್ ಸಿದ್ಧ ಮಾಡುತ್ತವೆ. ಬಜೆಟ್ ಸೌಲಭ್ಯ ಸಿಗದಿದ್ದರೂ ಸಾಲದ ಪಾಲು ಮಾತ್ರ ನಮಗೆ ಸಿಗುತ್ತೆಬಿಡು...' ಎಂದ ಶಂಕ್ರಿ.

ಕಿಡಿನುಡಿ



ಇವಿಎಂಗಳನ್ನು ತೆರೆಯುವವರೆಗೂ ಯಾರಿಗೂ ಫಲಿತಾಂಶ ತಿಳಿಯುವುದಿಲ್ಲ. ಮತದಾನೋತ್ತರ ಸಮೀಕ್ಷೆಗೆ ಸಂಬಂಧಿಸಿದ ಯಾವ ವ್ಯಕ್ತಿಯೂ ಮತಗಟ್ಟೆಗಳ ಬಳಿ ಕಂಡುಬರುವುದಿಲ್ಲವಾದರೂ ಅವರು ಎಲ್ಲಿಂದ ಅಂಕಿಅಂಶ ಪಡೆಯುತ್ತಾರೋ ನನಗೆ ತಿಳಿಯದು. ಮಾನಸಿಕ ಒತ್ತಡ ಸೃಷ್ಟಿಸುವ ಇಂತಹ ಸಮೀಕ್ಷೆಗಳನ್ನು ನಾನು ಒಪ್ಪುವುದಿಲ್ಲ.

ಜಯಂತ್ ಚೌಧರಿ, ಅಧ್ಯಕ್ಷ, ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ)

ದಿನದ ಟ್ವೀಟ್

ನಾವು ಪಡೆದಿರುವುದೇನು?

ಸ್ನೇಹಪೂರ್ವಕವಾಗಿ ಈ ವಿಷಯವನ್ನು ನೆನಪಿಸುತ್ತಿದ್ದೇನೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮೂಲವು 20ನೇ ಶತಮಾನದ ಆರಂಭದ ಕಾರ್ಮಿಕ ಚಳವಳಿಯಲ್ಲಿದೆ. ಕೆಲಸದ ಅವಧಿಯ ಕಡಿತ, ಉತ್ತಮ ವೇತನ ಹಾಗೂ ಮತದಾನದ ಹಕ್ಕಿಗಾಗಿ ಆಗ ಮಹಿಳೆಯರು ಬೇಡಿಕೆ ಇಟ್ಟಿದ್ದರು. ಅದಾಗಿ ನೂರಕ್ಕಿಂತ ತುಸು ಹೆಚ್ಚು ವರ್ಷಗಳಾಗಿರುವ ಈ ಹೊತ್ತಿನಲ್ಲಿ, ನಾವು ಪಡೆದಿರುವುದು ಮತದಾನದ ಹಕ್ಕನ್ನು ಮಾತ್ರ.

ದೀಪಾಂಜನ, ಲೇಖಕಿ

25 ವರ್ಷಗಳ ಹಿಂದೆ

ಭಾನುವಾರ, 9-3-1997

• **ಮಹಿಳೆಯರ ಮೀಸಲಾತಿಗೆ ಶೀಘ್ರ ಒಪ್ಪಿಗೆ– ಪ್ರಧಾನಿ**

ನವದೆಹಲಿ, ಮಾ. 8 (ಯುಎನ್‌ಐ, ಪಿಟಿಐ)– ಸಂಸತ್ತು ಮತ್ತು ವಿಧಾನಮಂಡಲಗಳಲ್ಲಿ ಮಹಿಳೆಯರಿಗೆ ಶೇ 33 ಸ್ಥಾನಗಳನ್ನು ಮೀಸಲಿಡಲು ಅವಕಾಶ ನೀಡುವ ಮಸೂದೆಗೆ ಪ್ರಸಕ್ತ ಅಧಿವೇಶನದಲ್ಲೇ ಸಂಸತ್ ಸದಸ್ಯರ ಒಮ್ಮತದ ಅಂಗೀಕಾರ ಸಿಗುವುದೆಂದು ಪ್ರಧಾನಿ ಎಚ್.ಡಿ. ದೇವೇಗೌಡ ಆಶಿಸಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಿದ್ದ ಅವರು 'ಈ ಮಸೂದೆ ಅಂಗೀಕಾರ ಎಲ್ಲ ಸಂಸತ್ ಸದಸ್ಯರ ಒಮ್ಮತದಿಂದ ಆಗಬೇಕಾಗುತ್ತದೆ. ಲಿಂಗಭೇದ ತೊಡೆಯಲು ಕೇವಲ ಕಾನೂನಿಂದ ಸಾಧ್ಯವಿಲ್ಲ. ಜನರನ್ನು ಈ ಕುರಿತು ಸಂವೇದನಾಶೀಲರನ್ನಾಗಿ ಮಾಡಬೇಕು ಮತ್ತು ಸಾಮಾಜಿಕ ದೃಷ್ಟಿಕೋನ ಬದಲಾಗಬೇಕು' ಎಂದರು.

• **ಭಟ್ಕಳ ಗಲಭೆಗೆ ಪೊಲೀಸ್ ವೈಫಲ್ಯ ಕಾರಣ: ಆಯೋಗ**

ಬೆಂಗಳೂರು, ಮಾ. 8– 'ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಕಳೆದ ನಾಲ್ಕು ವರ್ಷಗಳ ಹಿಂದೆ ನಡೆದ ಮತೀಯ ಗಲಭೆಗಳಿಗೆ ಪೊಲೀಸರ ವೈಫಲ್ಯವೇ ಪ್ರಮುಖ ಕಾರಣ' ಎಂದು ನ್ಯಾಯಮೂರ್ತಿ ಕೆ.ಜಗನ್ನಾಥ ಶೆಟ್ಟಿ ಆಯೋಗ ಹೇಳಿದೆ.

'ಗಲಭೆಯ ಹಿನ್ನೆಲೆಯಲ್ಲಿ ಇಡೀ ಭಟ್ಕಳ ಪಟ್ಟಣವನ್ನು ಅತೀ ಸೂಕ್ಷ್ಮ ಮತೀಯ ಗಲಭೆಯ ಪ್ರದೇಶ ಎಂದು ಘೋಷಿಸಬೇಕು' ಎಂದು ಹಿಂಸಾಚಾರ ಕುರಿತು ವಿಚಾರಣೆ ನಡೆಸಿದ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಶಿಫಾರಸು ಮಾಡಿದೆ.

50 ವರ್ಷಗಳ ಹಿಂದೆ

ಗುರುವಾರ, 9-3-1972

• **ಕೋಮುಗಲಭೆ: ಸಂಸ್ಥೆಗಳ ಬಗ್ಗೆ ತನಿಖೆಗೆ ಶೀಘ್ರವೇ ವಿಚಾರಣಾ ಮಂಡಲಿ**

ನವದೆಹಲಿ, ಮಾ. 8– ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಕೋಮು ಗಲಭೆಗೆ ಕಾರಣವಾದ ಯುವಕ ಹಾಗೂ ಇನ್ನಿತರ ಸಂಘಗಳ ಕಾರ್ಯ ಚಟುವಟಿಕೆಗಳ ಬಗ್ಗೆ ತನಿಖೆ ನಡೆಸಲು ಶೀಘ್ರವೇ ವಿಚಾರಣಾ ಆಯೋಗವೊಂದನ್ನು ರಚಿಸಲು ಕೇಂದ್ರ ಸರ್ಕಾರವು ನಿರ್ಧರಿಸಿದೆಯೆಂದು ಕೇಂದ್ರ ಶಿಕ್ಷಣ ಸಚಿವ ಶಾಖೆ ವಲಯಗಳು ತಿಳಿಸಿವೆ.

ಈ ಸಂಸ್ಥೆಗಳಿಗೆ ಯಾವ ಮೂಲಗಳಿಂದ ಹಣ ಬರುತ್ತಿದೆ, ಈ ಸಂಸ್ಥೆಗಳ ಹೀನ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಹಾಗೂ ಉಪಾಧ್ಯಾಯರ ಪಾತ್ರಗಳೇನು ಇವೇ ಮೊದಲಾದ ವಿಷಯಗಳನ್ನು ವಿಚಾರಣಾ ಮಂಡಲಿ ಪರಿಶೀಲಿಸುವುದು.

• **ಪಾಕ್ ಯುದ್ಧಕೈದಿಗಳ ಪರಾರಿ ಯತ್ನ: ಭಾರತದ ಪಡೆಯಿಂದ ಗುಂಡೇಟು**

ನವದೆಹಲಿ, ಮಾ. 8– ಪಾಕಿಸ್ತಾನ ಯುದ್ಧ ಕೈದಿಗಳ ಶಿಬಿರವೊಂದರಿಂದ ಬಂದಿಗಳು ಪರಾರಿಯಾಗಲು ಯತ್ನಿಸಿದಾಗ ಭಾರತದ ಪಡೆ ಗುಂಡು ಹಾರಿಸಿತು. ಸಾವು ನೋವು ಸಂಭವಿಸಿದೆಯೆಂದು ತಿಳಿಸಿದ ರಕ್ಷಣಾ ಶಾಖೆ ವಕ್ತಾರರು, ವಿವರ ನೀಡಲು ನಿರಾಕರಿಸಿದರು. ಯಾರ ಶಿಬಿರದಲ್ಲಿ ಈ ಘಟನೆ ಸಂಭವಿಸಿತೆಂದೂ ಗೊತ್ತಾಗಿಲ್ಲ.

ಸಂಗತ

'ನ್ಯಾಯಯುತ ಯುದ್ಧ' ಎಂಬುದಿದೆಯೇ?

ಯುದ್ಧ ಸಾರುವ ನಾಯಕರಿಗೆ, ಯುದ್ಧದಿಂದಾಗುವ ಸಾವು ನೋವು, ಆರ್ಥಿಕ ನಷ್ಟ ಸ್ವಅನುಭವಕ್ಕೆ ಬರುವುದೇ?

• ಡಾ. ಜ್ಯೋತಿ

ಟರ್ಕಿಯ ಸಾಹಿತಿ ಮೆಹ್ಮತ್ ಮುರತ್ ಇಲ್ಡಾನ್ ಹೇಳಿದಂತೆ, 'ಹೂವುಗಳಿಗಿಂತ ಬಂದೂಕಿಗೆ ಹೆಚ್ಚಿನ ಆದ್ಯತೆ ನೀಡುವ ದೇಶ ತನ್ನ ಸ್ಮಶಾನಗಳಲ್ಲಿ ಮಾತ್ರ ಹೂವುಗಳ ಸುವಾಸನೆಯನ್ನು ಗ್ರಹಿಸಬಹುದು'. ಈ ಹಿನ್ನೆಲೆಯಲ್ಲಿ, 'ಯುದ್ಧ ಮತ್ತು ಶಾಂತಿ' ಎಂಬ ವೈರುಧ್ಯಗಳ ಮುಖಾಮುಖಿಯನ್ನು ಕಾದಂಬರಿಯ ರೂಪದಲ್ಲಿ ಜಾಗತಿಕ ಸಾಹಿತ್ಯಕ್ಕೆ ಕೊಡುಗೆ ನೀಡಿದ ತತ್ವಜ್ಞಾನಿ, ಸಾಹಿತಿ ಲಿಯೊ ಟಾಲ್‌ಸ್ಟಾಯ್ ಅವರ ನಾಡಿನ ನಾಯಕ ವ್ಲಾಡಿಮಿರ್ ಪುಟಿನ್, ಪ್ರಸಕ್ತ ಉಕ್ರೇನ್ ಮೇಲೆ ಯುದ್ಧ ಸಾರಿದ್ದಾರೆ.

ಈ ಸಂದರ್ಭದ ಮುಖ್ಯ ಪ್ರಶ್ನೆಗಳೆಂದರೆ, ಯುದ್ಧದಿಂದ ಶಾಂತಿ ಸ್ಥಾಪನೆ ಸಾಧ್ಯವಿದೆಯೇ? ಯುದ್ಧ ಸಾರುವ ನಮ್ಮ ನಾಯಕರಿಗೆ, ಯುದ್ಧದಿಂದಾಗುವ ಸಾವು ನೋವು, ಆರ್ಥಿಕ ನಷ್ಟ ಸ್ವಅನುಭವಕ್ಕೆ ಬರುವುದೇ? ಯುದ್ಧದಿಂದಾಗಿ ಜನಸಾಮಾನ್ಯರ ಬದುಕಿನಲ್ಲಾಗುವ ಕಷ್ಟನಷ್ಟ, ಹಣದುಬ್ಬರಗಳಿಗೆ ಯಾರು ಹೊಣೆ? ಕೆಲವು ರಾಷ್ಟ್ರನಾಯಕರ ವರ್ಚಸ್ಸು ವೃದ್ಧಿಗಾಗಿ ನಡೆಯುವ ಯುದ್ಧವನ್ನು ತಡೆಯಲಾರದಷ್ಟು ನಿಸ್ಸಹಾಯಕತೆ ವಿಶ್ವಸಂಸ್ಥೆಗಿದೆಯೇ?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಜನಸಾಮಾನ್ಯರ ಅರಿವಿಗೆ ನಿಲುಕಿದ್ದರೂ ಲೋಕದ ವ್ಯವಹಾರ ತಮಗೇಕೆಂದು ಮೌನ ವಹಿಸಿರುವಾಗ ಅಥವಾ ಯುದ್ಧವನ್ನು ಕೂಡ ಮನರಂಜನೆಯಂತೆ ಟಿ.ವಿ. ಮುಂದೆ ಆಸ್ವಾದಿಸುವಾಗ, ಮಾನವೀಯ ಸ್ಪಂದನೆಗಾಗಿ ಸಾಹಿತ್ಯದ ಮೊರೆ ಹೋಗುವುದು ಅನಿವಾರ್ಯ ಎನಿಸುತ್ತಿದೆ. ಇದಕ್ಕಾಗಿ, ವಿಶ್ಲೇಷಣೆಗೆ ತೆಗೆದುಕೊಂಡ ಎರಡು ಸಾಹಿತ್ಯ ಕೃತಿಗಳೆಂದರೆ: ಯುದ್ಧದ ಅರ್ಥಹೀನತೆಯ ಕುರಿತು ಆಂಗ್ಲ ಕವಿ ರಾಬರ್ಟ್ ಸೌಥಿ 1796ರಲ್ಲಿ ಬರೆದ ಕವನ 'ಆಫ್ಟರ್ ಬ್ಲೆನ್‌ಹೈಮ್' ಹಾಗೂ ಯುದ್ಧದಲ್ಲಿ ಸಿಲುಕಿರುವ ಸೈನಿಕನೊಬ್ಬನ ಸಂದಿಗ್ಧ ಮನಃಸ್ಥಿತಿಯನ್ನು ಪ್ರತಿಬಿಂಬಿಸುವ, ಆಂಗ್ಲ ಕವಿ ಡಬ್ಲ್ಯು. ಬಿ. ಯೀಟ್ಸ್ 1918ರಲ್ಲಿ ಬರೆದ ಕವನ 'ಆ್ಯನ್ ಐರಿಶ್ ಏರ್‌ಮ್ಯಾನ್ ಫೋರ್‌ಸೀಸ್ ಹಿಸ್ ಡೆತ್'.

'ಆಫ್ಟರ್ ಬ್ಲೆನ್‌ಹೈಮ್'ನಲ್ಲಿ, ಪುಟ್ಟಮಕ್ಕಳಿಬ್ಬರು ಆಟವಾಡುವಾಗ ಸಿಕ್ಕ ತಲೆಬುರುಡೆಯನ್ನು ತಮ್ಮ ಅಜ್ಜನಲ್ಲಿಗೆ ತಂದು, ಅದೇನೆಂದು ಕೇಳುತ್ತಾರೆ. ಅದಕ್ಕವನು, 'ಇದು, 'ಪ್ರಸಿದ್ಧ' ಬ್ಲೆನ್‌ಹೈಮ್ ಯುದ್ಧದಲ್ಲಿ ಸತ್ತ ಸೈನಿಕನೊಬ್ಬನ ತಲೆಬುರುಡೆ' ಅನ್ನುತ್ತಾನೆ. ಆಗ ಮಕ್ಕಳು ಯುದ್ಧದ ಕತೆ ಹೇಳಲು ಒತ್ತಾಯಿಸಿದಾಗ ಅಜ್ಜ ಹೇಳುತ್ತಾನೆ, 'ಫ್ರಾನ್ಸ್ ಮತ್ತು ಇಂಗ್ಲೆಂಡ್ ನಡುವೆ ನಡೆದ ಆ ಪ್ರಸಿದ್ಧ ಯುದ್ಧ ಯಾವ ಕಾರಣಕ್ಕೆ ಸಂಭವಿಸಿತೆಂದು ಇಂದಿಗೂ ನನಗೆ ಸ್ಪಷ್ಟವಾಗಿಲ್ಲ'. ಇತಿಹಾಸದಲ್ಲಿ ಸಂಭವಿಸಿದ ಹೆಚ್ಚಿನ ಯುದ್ಧಗಳ ಮೂಲ ಹುಡುಕಹೋದರೆ, ನಾಯಕರ ಅಧಿಕಾರ ದಾಹವೊಂದನ್ನು ಬಿಟ್ಟರೆ, ಇನ್ನಾವುದೇ ಮಹತ್ತರ ಕಾರಣಗಳು ಕಂಡುಬರುವುದಿಲ್ಲ.

ಅಜ್ಜ ಯುದ್ಧದ ಭೀಕರ ದೃಶ್ಯಗಳನ್ನು ವಿವರಿಸುತ್ತಾ, 'ಸೂರ್ಯನ ಗಾಢ ಬಿಸಿಲಿನಲ್ಲಿ ಸಾವಿರಾರು ಹೆಣಗಳು ಕೊಳೆಯುತ್ತಾ ಬಿದ್ದಿದ್ದವು' ಎನ್ನುತ್ತಾನೆ. ಆಗ ಮಗು ವಿಷಾದದಿಂದ, 'ಅದೊಂದು ಘೋರ ದೃಶ್ಯ' ಎನ್ನುತ್ತದೆ. ಅದಕ್ಕೆ ಅಜ್ಜ ನಿರ್ಲಿಪ್ತನಾಗಿ ಹೇಳುತ್ತಾನೆ, 'ಒಂದು ಪ್ರಸಿದ್ಧ ಯುದ್ಧದಲ್ಲಿ ಇವೆಲ್ಲಾ ಸಾಮಾನ್ಯ ದೃಶ್ಯಗಳು. ಅಂತೂ ಯುದ್ಧ ಮುಗಿದ ಮೇಲೆ, ಗೆದ್ದ ಇಂಗ್ಲೆಂಡಿನ ಡ್ಯೂಕ್‌ನ ನಾಯಕತ್ವವನ್ನು ಜನರೆಲ್ಲಾ ಶ್ಲಾಘಿಸಿದರು'. ಅದಕ್ಕೆ ಮಗು ಮುಗ್ಧತೆಯಿಂದ ಕೇಳುತ್ತದೆ, 'ಈ ಯುದ್ಧದಿಂದಾದ ಒಳಿತೇನು?' ಅಜ್ಜ ಉತ್ತರಿಸಲು ತಡಕಾಡುತ್ತಾ, 'ಅದರ ಕುರಿತು ನನಗೇನೂ ತಿಳಿಯದು. ಆದರೆ, ಅದೊಂದು ಬಹಳ ಪ್ರಸಿದ್ಧ ಐತಿಹಾಸಿಕ ಯುದ್ಧವಾಗಿತ್ತು' ಎಂದಷ್ಟೇ ಹೇಳಿ ಮೌನವಾಗುತ್ತಾನೆ.

ಈ ಹಿನ್ನೆಲೆಯಲ್ಲಿ, ಯೀಟ್ಸ್ ಬರೆದ ಕವನ ಹೆಚ್ಚು ಪ್ರಸ್ತುತವೆನಿಸುತ್ತದೆ. ಇಲ್ಲಿ ಯುದ್ಧವನ್ನು ವಿಮರ್ಶಿಸುವವನು ಸ್ವತಃ ಸೈನಿಕನೇ. ಇದನ್ನು ಯೀಟ್ಸ್, ಮೊದಲ ಮಹಾಯುದ್ಧದಲ್ಲಿ ಸತ್ತ ಆಪ್ತಸ್ನೇಹಿತ, ಇಂಗ್ಲಿಷ್ ವಾಯುಪಡೆಯ ಪೈಲಟ್, ರಾಬರ್ಟ್ ಗ್ರೆಗೊರಿ ನೆನಪಿನಲ್ಲಿ ಬರೆದಿರುವುದು. ಯುದ್ಧರಂಗದ ಮಧ್ಯದಲ್ಲಿ, ಸದ್ಯದಲ್ಲಿಯೇ ತನ್ನ ಸಾವು ನಿಶ್ಚಿತವೆನ್ನುವ ವಾಸ್ತವವನ್ನು ಎದುರಿಸಲು ಮಾನಸಿಕವಾಗಿ ಸಿದ್ಧನಾಗುತ್ತಾನೆ. ಆಗ ಅವನಿಗೆ ಗೋಚರವಾಗುವ ಸತ್ಯವೆಂದರೆ- ತನ್ನ ಪಡೆಯ ನಾಯಕರು ಯಾರನ್ನು ಶತ್ರುಗಳೆಂದು ಬಿಂಬಿಸಿದ್ದಾರೋ ಅವರ ಮೇಲೆ ತನಗೆ ವೈಯಕ್ತಿಕ ದ್ವೇಷವಿಲ್ಲ. ಹಾಗೆಯೇ, ತಾನು ಯಾರ ರಕ್ಷಣೆಗೆಂದು ಯುದ್ಧರಂಗದಲ್ಲಿದ್ದೇನೋ ಅವರ ಮೇಲೆ ಯಾವುದೇ ಪ್ರೀತಿಯ ನಂಟೂ ಇಲ್ಲ. ಪೈಲಟ್ ಆಗಬೇಕೆಂಬ ತನ್ನ ಕನಸನ್ನು ನನಸು ಮಾಡಿಕೊಳ್ಳಲಷ್ಟೇ ವಾಯುಪಡೆ ಸೇರಿಕೊಂಡೆನೇ ವಿನಾ, ದೇಶಾಭಿಮಾನ ಅಥವಾ ಹೆಸರು ಗಳಿಸುವ ವ್ಯಾಮೋಹದಿಂದಲ್ಲ. ಜನರನ್ನು ಸಾಯಿಸುವುದು ತನ್ನ ಧ್ಯೇಯವಾಗಿರಲಿಲ್ಲ.

ತನ್ನ ಸಾವು ಸನ್ನಿಹಿತವಾಗುವಾಗ ಯೋಧನಿಗೆ ಅನ್ನಿಸುವುದಿಷ್ಟೇ- ಇಲ್ಲಿಯವರೆಗಿನ ತನ್ನ ಜೀವನ ಸಂಪೂರ್ಣವಾಗಿ ವ್ಯರ್ಥವಾಗಿದೆ, ಉಳಿದಿರುವ ದಿನಗಳೂ ಅಷ್ಟೇ ವ್ಯರ್ಥವೆನಿಸುತ್ತಿದೆ. ದೇಹ ಮಾತ್ರ ಉಸಿರಾಡುತ್ತಿದೆ, ಮನಸ್ಸು ಎಂದೋ ಸತ್ತುಹೋಗಿದೆ. ಈ ಕವನವು, ಯುದ್ಧ ಹಾಗೂ ಸೈನಿಕರ ಹುತಾತ್ಮಗಿರಿಯ ವೈಭವೀಕರಣವನ್ನು ಪ್ರಶ್ನಿಸುತ್ತದೆ.

ಕೊನೆಯದಾಗಿ, ಮೊದಲ ಮಹಾಯುದ್ಧದಲ್ಲಿ ಭಾಗವಹಿಸಿದ ಫ್ರಾನ್ಸಿನ ಯೋಧ ಹೆನ್ರಿ ಬಾರ್ಬುಸ್ಸೆ ತನ್ನ ಕಾದಂಬರಿಯಲ್ಲಿ ಹೇಳಿಕೊಂಡಂತೆ, 'ಯುದ್ಧದಲ್ಲಿ ಎರಡು ಸೈನ್ಯಗಳು ಪರಸ್ಪರ ವಿರುದ್ಧ ಹೋರಾಡುವಾಗ, ಅದೊಂದು ಸಾಮೂಹಿಕ ಆತ್ಮಹತ್ಯೆಯಂತೆ ನನಗೆ ಕಾಣಿಸುತ್ತದೆ'. ಗಾಂಧಿ ಅರಿತುಕೊಂಡಂತೆ, ಯುದ್ಧವನ್ನು ಯಾವುದೇ ಕಾರಣಕ್ಕೆ ಸಮ್ಮತಿಸಲಾಗದು, ಜಗತ್ತಿನಲ್ಲಿ ನ್ಯಾಯಯುತ ಯುದ್ಧವೆಂಬುದಿಲ್ಲ.

ವಾಚಕರ ವಾಣಿ

ಕೆರೆಗಳ ಸಂರಕ್ಷಣೆಗೆ ಬೇಕು ಅಭಿಯಾನ

ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇಂದಿಗೂ ಅನೇಕ ಹಳ್ಳಿಗಳು ಶುದ್ಧಜಲದಿಂದ ವಂಚಿತವಾಗಿರುವುದನ್ನು ನೋಡಬೇಕಾಗಿ ಬಂದಿರುವುದು ಶೋಚನೀಯ. ಸರ್ಕಾರದ ಕಾರ್ಯಕ್ರಮಗಳು ಬೇರುಮಟ್ಟದಲ್ಲಿ ಅನುಷ್ಠಾನಗೊಂಡಾಗ ಮಾತ್ರ ಇಂಥ ಜ್ವಲಂತ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ದೊರಕೀತು. ಇಲ್ಲವಾದರೆ ಅವು ಸರ್ಕಾರದ ಬಜೆಟ್‌ನ ಪ್ರತಿಗಳಲ್ಲಿಯೇ ಉಳಿಯುವುದರಲ್ಲಿ ಎರಡು ಮಾತಿಲ್ಲ.

ಮೂಲಸೌಕರ್ಯಗಳನ್ನು ಒದಗಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಜಾರಿಗೆ ತಂದ ಜಲಜೀವನ್ ಮಿಷನ್ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುವ 'ಮಳೆಹನಿಯನ್ನು ಹಿಡಿಯಿರಿ ಅಭಿಯಾನ'ವನ್ನು ಸಾಕಾರಗೊಳಿಸುವ ದಿಸೆಯಲ್ಲಿ ಸಂಬಂಧಪಟ್ಟ ಇಲಾಖೆಗಳು ಕಾರ್ಯ ನಿರ್ವಹಿಸಬೇಕು. ಪ್ರತೀ ಗ್ರಾಮದ ಗ್ರಾಮಸ್ಥರ ನೆರವಿನಿಂದ ಕೆರೆಗಳ ಸಂರಕ್ಷಣೆಯ ಅಭಿಯಾನ ಆರಂಭವಾಗಬೇಕು. ಜನಪ್ರತಿನಿಧಿಗಳು ಬೃಹತ್ ಯೋಜನೆಗಳ ಬಗೆಗಿನ ಮಾತುಕತೆಯಲ್ಲಿ ಕಾಲಹರಣ ಮಾಡದೆ ಇಂತಹ ನೈಜ ಜನಾನುಕೂಲದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಂದಾಗಬೇಕು.

ಆನಂದ ಕುಂಬಾರ, ಚಿಕ್ಕಸಿಂದಗಿ, ವಿಜಯಪುರ

ಜಡೇಜಾಗೆ ದ್ವಿಶತಕ ತಪ್ಪಿಸಿದರೇ?

ರವೀಂದ್ರ ಜಡೇಜಾ 175 ರನ್ ಮಾಡಿ ದ್ವಿಶತಕದ ಹೊಸ್ತಿಲಲ್ಲಿ ಇದ್ದಾಗ ಕ್ಯಾಪ್ಟನ್ ಇನಿಂಗ್ಸ್ ಡಿಕ್ಲೇರ್ ಮಾಡಿದ್ದು ಭಾರಿ ಆಕ್ರೋಶಕ್ಕೆ ಕಾರಣವಾಗಿದೆ. ಕ್ರಿಕೆಟ್‌ನಲ್ಲಿ ದ್ವಿಶತಕದ ಅವಕಾಶ ಯಾವಾಗಲೂ ಸಿಗುವುದಿಲ್ಲ ಮತ್ತು ಎಲ್ಲರಿಗೂ ನಿಲುಕುವುದಿಲ್ಲ. ಟೆಸ್ಟ್ ಕೊನೆಗಾಣಲು ಇನ್ನೂ ಎರಡು ದಿನಗಳ ಸಮಯವಿದ್ದು, ಗೆಲ್ಲುವ ಅವಕಾಶ ಬಹಳಷ್ಟು ಇತ್ತು. ಇನ್ನೊಂದು ಕಾಲುಗಂಟೆ ಬ್ಯಾಟಿಂಗ್ ಮುಂದುವರಿಸಿದ್ದರೆ ಅವರು ದ್ವಿಶತಕ ಪೂರೈಸುತ್ತಿದ್ದರೇನೊ?

2004ರಲ್ಲಿ ಪಾಕಿಸ್ತಾನದ ವಿರುದ್ಧ ಮುಲ್ತಾನ್‌ನಲ್ಲಿ ತೆಂಡೂಲ್ಕರ್ 194 ರನ್ ಹೊಡೆದು ದ್ವಿಶತಕದ ಹೊಸ್ತಿಲಲ್ಲಿ ಇದ್ದಾಗ, ನಾಯಕ ದ್ರಾವಿಡ್ ಇನಿಂಗ್ಸ್ ಕೊನೆಗೊಳಿಸಿ ವಿವಾದಕ್ಕೆ ಗುರಿಯಾಗಿದ್ದ ಪ್ರಕರಣವನ್ನು ಇದು ನೆನಪಿಸುತ್ತದೆ. ಈ ಘಟನೆಗಳು ಕ್ರಿಕೆಟ್‌ನಲ್ಲಿ ಎಲ್ಲವೂ ಸರಿಯಾಗಿಲ್ಲ ಎನ್ನುವ ಟೀಕೆಗೆ ಇಂಬು ನೀಡುತ್ತಿವೆ.

ರಮಾನಂದ ಶರ್ಮಾ, ಬೆಂಗಳೂರು

'ಮಹಿಳಾಸ್ನೇಹಿ' ಅಭಿಯಾನ: ಪಾಲ್ಗೊಳ್ಳುವಿಕೆ ಮುಖ್ಯ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯ ಸರ್ಕಾರವು 16 ವಾರಗಳ ಕಾಲ 'ಮಹಿಳಾಸ್ನೇಹಿ' ಗ್ರಾಮ ಪಂಚಾಯಿತಿ ಅಭಿಯಾನ ಮತ್ತು ಮಹಿಳಾ ಗ್ರಾಮ ಸಭೆಗಳನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲು ಮುಂದಾಗಿರುವುದು ಮೆಚ್ಚತಕ್ಕ ನಿರ್ಧಾರ. ಮಹಿಳಾ ಸಬಲೀಕರಣಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹಲವಾರು ಯೋಜನೆಗಳನ್ನು ರೂಪಿಸಿದರೂ ಅನುಷ್ಠಾನದಲ್ಲಿ ಹಿನ್ನಡೆ ಆಗುವುದು ಸಾಮಾನ್ಯ. ಇದನ್ನು ಮನಗಂಡು, ಮಹಿಳೆಯರಿಗೂ ಸಮಾನ ಅಧಿಕಾರ ಸೇರಿದಂತೆ ಅವರ ಆಶಯಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಮಹಿಳಾಸ್ನೇಹಿ ಗ್ರಾಮ ಸಭೆ, ವಾರ್ಡ್ ಸಭೆಗಳನ್ನು ಏರ್ಪಡಿಸಲಿರುವುದು ಪೂರಕವಾಗಲಿದೆ. ಆಡಳಿತದಲ್ಲಿ ಲಿಂಗ ಸಮಾನತೆ ತರಲು ಸಹ ಇದು ನೆರವಾಗಲಿದೆ.

ಈ ಹಿಂದೆ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆ, ವಾರ್ಡ್ ಸಭೆಗಳು ನಡೆದರೂ ಮಹಿಳೆಯರನ್ನು ಅಷ್ಟೊಂದು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಹೀಗಾಗಿ ಅವರು ಹಲವಾರು ವಿಷಯಗಳಲ್ಲಿ ವಂಚಿತರಾಗಬೇಕಾಗಿತ್ತು. ಸದ್ಯ ಮಹಿಳಾ ಸಬಲೀಕರಣಕ್ಕೆ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು- 2030 ಅನ್ನು ಯಶಸ್ವಿಗೊಳಿಸಿ ಆ ಮೂಲಕ ಸದೃಢರನ್ನಾಗಿಸಲು ಸರ್ಕಾರದ ಈ ಹೊಸ ಚಿಂತನೆಯು ಪೂರಕವಾಗಿ ಇರಲಿದೆ. ಇಂತಹ ವಿಧಾಯಕ ಕಾರ್ಯಗಳಲ್ಲಿ ಮಹಿಳೆಯರ ಪಾಲ್ಗೊಳುವಿಕೆಯೂ ಅತೀ ಮುಖ್ಯವಾಗಿರುತ್ತದೆ.

ಮಹಾಂತೇಶ ರಾಜಗೋಳಿ, ಬೈಲಹೊಂಗಲ, ಬೆಳಗಾವಿ

ಎಲ್ಲಕ್ಕೂ ಅದೇ ಕಾರಣ!

ಅನಿಷ್ಟಕ್ಕೆಲ್ಲಾ ಶನೀಶ್ವರ ಕಾರಣನಂತೆ,
ಅಂದಹಾಗೆ, ಈಗ ಕಬ್ಬಿಣ,
ಸಿಮೆಂಟ್, ಖಾದ್ಯತೈಲ,
ನಾಳೆ ನಾಡಿದ್ದರಲ್ಲಿ ಹೆಚ್ಚಾಗುವ
ಪೆಟ್ರೋಲ್, ಡೀಸೆಲ್ ದರಕ್ಕೆಲ್ಲಾ
ರಷ್ಯಾ– ಉಕ್ರೇನ್
ಯುದ್ಧ ಕಾರಣವಂತೆ!

ಜೆ.ಬಿ.ಮಂಜುನಾಥ, ಪಾಂಡವಪುರ

ಪುಣ್ಯಕೋಟಿ ದತ್ತು ಯೋಜನೆ: ಪುನರ್‌ಪರಿಶೀಲಿಸಿ

ರಾಜ್ಯ ಸರ್ಕಾರ ಗೋಹತ್ಯಾ ನಿಷೇಧ ಕಾನೂನಿನ ಮುಂದುವರಿದ ಭಾಗವಾಗಿ, ಹಸುಗಳನ್ನು ದತ್ತು ಪಡೆಯುವ ಯೋಜನೆಯನ್ನು ಜಾರಿಗೆ ತರಲು ಮುಂದಾಗಿದೆ. 'ಪುಣ್ಯಕೋಟಿ ದತ್ತು ಯೋಜನೆ' ಎಂಬ ಹೆಸರಿನ ಈ ಯೋಜನೆಗೆ 50 ಕೋಟಿ ರೂಪಾಯಿಯನ್ನು ಆಯವ್ಯಯದಲ್ಲಿ ಘೋಷಿಸಲಾಗಿದೆ. ಇದೊಂದು ಅವೈಜ್ಞಾನಿಕ ನಡೆಯಾಗಿದೆ. ಹಸುಗಳನ್ನು ಸಾಕಿ, ವ್ಯವಸಾಯಕ್ಕೆ ಬಳಸಿ ಜಾತ್ರೆಗಳಲ್ಲಿ ಮಾರಾಟ ಮಾಡಿ ಹೊಸ ಎತ್ತುಗಳನ್ನು ಕೊಂಡುಕೊಳ್ಳುವುದು ವ್ಯವಸಾಯದ ಅವಿಭಾಜ್ಯ ಅಂಗವಾಗಿತ್ತು. ಹಸು, ಎತ್ತುಗಳಿಗೆ ಉತ್ತಮವಾದ ಬೆಲೆಯೂ ಇತ್ತು. ಉಪಯೋಗಕ್ಕೆ ಬಾರದ ಹಸು, ಎತ್ತುಗಳನ್ನು ಮಾತ್ರ ದೇವಸ್ಥಾನಗಳ ಆವರಣದಲ್ಲಿ ಬಿಡಲಾಗುತ್ತಿತ್ತು. ಇದೊಂದು ಸಮಸ್ಯೆಯೇ ಆಗಿರಲಿಲ್ಲ. ಯಾವ ಹಸುವನ್ನು ಸಾಕಬೇಕು, ಯಾವುದನ್ನು ಮಾರಾಟ ಮಾಡಬೇಕು ಎಂಬುದನ್ನು ರೈತ ನಿರ್ಧಾರ ಮಾಡುತ್ತಿದ್ದ.

ವ್ಯವಸಾಯದಿಂದ ನಷ್ಟವನ್ನು ಅನುಭವಿಸಿದ ಕಾರಣ ವ್ಯವಸಾಯದಲ್ಲಿ ನಿರತರಾಗುವ ರೈತರ ಸಂಖ್ಯೆಯೂ ಕುಸಿಯುತ್ತಾ ಬಂದಿತು. ಈ ಸಂದರ್ಭದಲ್ಲಿ ರೈತರ ಬೆಳೆಗೆ ವೈಜ್ಞಾನಿಕವಾದ ಬೆಲೆ ನಿಗದಿಪಡಿಸಿ ಅವರ ನೆರವಿಗೆ ಬಾರದ ಸರ್ಕಾರ ಅನಗತ್ಯವಾದ ಗೋ ರಕ್ಷಣಾ ಕಾಯ್ದೆ ಹಾಗೂ ಪುಣ್ಯಕೋಟಿ ದತ್ತು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸಮಸ್ಯೆಯನ್ನು ಸೃಷ್ಟಿಸುತ್ತಾ ಸಾರ್ವಜನಿಕರ ಹಣವನ್ನು ಪೋಲು ಮಾಡುತ್ತಿದೆ. ಇದೊಂದು ಪ್ರಚಾರ ಗಿಟ್ಟಿಸುವ ಯೋಜನೆಯೆಂದರೆ ಅತಿಶಯೋಕ್ತಿಯಲ್ಲ. ಕೇವಲ ದತ್ತು ನೀಡುವ ಮೂಲಕ ಹಸುಗಳ ತಳಿ ರಕ್ಷಣೆ ಸಾಧ್ಯವಿಲ್ಲ. ಅವುಗಳನ್ನು ಉಳಿಸಿ ಬೆಳೆಸುವ ಕಾರ್ಯವನ್ನು ರೈತರು ಮಾತ್ರ ಮಾಡಲು ಸಾಧ್ಯ. ಈ ಬಗ್ಗೆ ಸರ್ಕಾರ ತನ್ನ ನಿರ್ಧಾರವನ್ನು ಪುನರ್‌ಪರಿಶೀಲಿಸುವುದು ಸೂಕ್ತ.

ಈ. ಬಸವರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಬಿಸಿ ರಾಜಕೀಯ ಮೀಸಲು ಕಗ್ಗಂಟಿನ ಹುರುಳೇನು?

ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ (ಒಬಿಸಿ) ರಾಜಕೀಯ ಮೀಸಲಾತಿ ನೀಡುವ ಮುನ್ನ ಮೂರು ಹಂತದ ಪರಿಶೀಲನೆ ನಡೆಸಿ, ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸುವುದು ಕಡ್ಡಾಯ ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಇದರಿಂದ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಯ ಅಳಿವು–ಉಳಿವಿನ ಪ್ರಶ್ನೆ ಎದುರಾಗಿದೆ. ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ಪ್ರಾತಿನಿಧ್ಯದ ಭವಿಷ್ಯ ನಿರ್ಧರಿಸಲಿರುವ ಈ ಕಗ್ಗಂಟಿನ ಮೂಲ, ಪರಿಹಾರಕ್ಕೆ ಇರುವ ಮಾರ್ಗ, ಪರಿಣಾಮಗಳ ಕುರಿತ ಚರ್ಚೆ 'ಪ್ರಜಾವಾಣಿ'ಯ 'ಅನುಭವ ಮಂಟಪ'ದಲ್ಲಿ ಇಂದಿನಿಂದ ಆರಂಭ.

• ವಿ.ಎಸ್. ಸುಬ್ರಹ್ಮಣ್ಯ

ಭಾರತದ ಜನಸಂಖ್ಯೆಯಲ್ಲಿ ಹಿಂದುಳಿದ ವರ್ಗಗಳ ಪಾಲು ದೊಡ್ಡದು. ಆದರೆ, ರಾಜಕೀಯ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳಿಗೆ ಈವರೆಗೂ ದಕ್ಕಿದ ಪಾಲು ಮಾತ್ರ ಕಡಿಮೆಯೇ. ಎಲ್ಲ ಹಂತದ ಚುನಾಯಿತ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ಜನಸಂಖ್ಯೆಗೆ ಸಮಾನದ ಪಾಲನ್ನು ನೀಡಬೇಕೆಂಬ ಕೂಗು ದಶಕಗಳ ಕಾಲದಿಂದಲೂ ಅನುರಣಿಸುತ್ತಲೇ ಇದೆ. ವಿಧಾನಮಂಡಲ ಮತ್ತು ಸಂಸತ್ತಿನಲ್ಲಿ ಹಿಂದುಳಿದ ವರ್ಗಗಳಿಗೆ ಈವರೆಗೂ ಮೀಸಲಾತಿ ದೊರಕಿಲ್ಲ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ಭಾಗವಾಗಿ ಅಸ್ತಿತ್ವಕ್ಕೆ ಬಂದ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲವು ದಶಕಗಳಿಂದ ಈಚೆಗೆ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ರಾಜಕೀಯ ಮೀಸಲಾತಿಯ ಅವಕಾಶ ಲಭಿಸಿದೆ. ಇದರಿಂದಾಗಿ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ತಮ್ಮ ಸಂಖ್ಯೆಗೆ ಸಮಾನಾದ ಅಲ್ಲದಿದ್ದರೂ, ಒಂದಷ್ಟು ಪ್ರಮಾಣದ ಮೀಸಲಾತಿ ಹಿಂದುಳಿದ ವರ್ಗಗಳಿಗೆ ದೊರಕಿದೆ. ರಾಜಕೀಯದ ವಿವಿಧ ಸ್ತರಗಳಲ್ಲಿ ಹಂತಹಂತವಾಗಿ ಮೇಲ್ಚಲನೆಯನ್ನು ಪಡೆಯಲು ಈ ಮೀಸಲಾತಿ ಮೆಟ್ಟಿಲಾಗಿತ್ತು. ಆದರೆ, ಸ್ಥಳೀಯ ಸಂಸ್ಥೆಗಳಿಗೆ ಸೀಮಿತವಾಗಿ ಹಿಂದುಳಿದ ವರ್ಗಗಳಿಗೆ ದಕ್ಕಿದ್ದ ಈ ಮೀಸಲಾತಿಯೂ ಈಗ ಅತಂತ್ರವಾಗಿ ನಿಂತಿದೆ.

'ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಮೂರು ಹಂತದ ಪರಿಶೀಲನೆ ಮೂಲಕ ಖಾತರಿಪಡಿಸಿಕೊಂಡ ಬಳಿಕವೇ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕು' ಎಂಬ ಸುಪ್ರೀಂಕೋರ್ಟ್ ನಿರ್ದೇಶನವು ದೇಶದಾದ್ಯಂತ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಪ್ರಾತಿನಿಧ್ಯದ ಅಳಿವು–ಉಳಿವಿನ ಪ್ರಶ್ನೆಯನ್ನು ಸೃಷ್ಟಿಸಿದೆ. 2.83 ಲಕ್ಷಕ್ಕೂ ಹೆಚ್ಚು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಮತ್ತು ರಾಜಕೀಯ ಪ್ರಾತಿನಿಧ್ಯದ ರಕ್ಷಣೆಯ ಸವಾಲು ಎಲ್ಲ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತ ವ್ಯವಸ್ಥೆಯ ಮುಂದೆ ಇದೆ. ಈ ಬೆಳವಣಿಗೆಯು ರಾಜಕೀಯ ಪಕ್ಷಗಳನ್ನೂ ಚಿಂತೆಗೆ ದೂಡಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಾಜಕೀಯ ಮೀಸಲಾತಿ ನೀಡುವ ಅಂಶ ಸಂವಿಧಾನದಲ್ಲಿ ಆರಂಭದಲ್ಲೇ ಅಡಕವಾಗಿತ್ತು. ಸ್ಥಳೀಯ ಸಂಸ್ಥೆಗಳಿಂದ ಸಂಸತ್ತಿನವರೆಗೆ ಎಲ್ಲ ಹಂತಗಳಲ್ಲೂ ಈ ಎರಡೂ ಸಮುದಾಯಗಳಿಗೆ ರಾಜಕೀಯ ಮೀಸಲಾತಿ ಇದೆ. ಆದರೆ, ಹಿಂದುಳಿದ ವರ್ಗಗಳಿಗೆ ಸ್ವಾತಂತ್ರ್ಯಾ ನಂತರದ ಹಲವು ದಶಕಗಳವರೆಗೂ ರಾಜಕೀಯ ಮೀಸಲಾತಿ ಸೌಲಭ್ಯ ಇರಲಿಲ್ಲ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯೊಂದಿಗೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ಜನರಿಗೆ ರಾಜಕೀಯ ಮೀಸಲಾತಿ ನೀಡಲಾಯಿತು. ಕ್ರಮೇಣ ಈ ಸೌಲಭ್ಯವು ನಗರ ಸ್ಥಳೀಯ ಸಂಸ್ಥೆಗಳಲ್ಲೂ ವಿಸ್ತರಣೆಯಾಯಿತು. ಕೆಲವೇ ದಶಕಗಳಲ್ಲಿ ಹಿಂದುಳಿದ ವರ್ಗಗಳ ಜನರು ರಾಜಕೀಯವಾಗಿ ಬಲಗೊಳ್ಳಲು ಮತ್ತು ಹೊಸ ತಲೆಮಾರಿನ ನಾಯಕತ್ವ ರೂಪುಗೊಳ್ಳಲು ಮೀಸಲಾತಿ ಕಾರಣವಾಯಿತು.

ದೀರ್ಘ ಕಾಲದ ವಿವಾದ: ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡುವುದನ್ನು ಹಿಂದೆಯೂ ಹಲವರು ಪ್ರಶ್ನಿಸಿದ್ದರು. ಕರ್ನಾಟಕದ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿ ನೀಡಿರುವುದನ್ನು ಪ್ರಶ್ನಿಸಿ ಕೆ. ಕೃಷ್ಣಮೂರ್ತಿ ಎಂಬುವವರು ಸುಪ್ರೀಂ ಕೋರ್ಟ್‌ವರೆಗೂ ಕಾನೂನು ಹೋರಾಟ ನಡೆಸಿದ್ದರು. ಆಗ, ಮೀಸಲಾತಿಯನ್ನು ಪುರಸ್ಕರಿಸಿ 2010ರ ಮೇ 11ರಂದು ತೀರ್ಪು ನೀಡಿದ್ದ ಸುಪ್ರೀಂಕೋರ್ಟ್ ಸಂವಿಧಾನ ಪೀಠ, 'ಹಿಂದುಳಿದ ವರ್ಗಗಳಲ್ಲಿರುವ ಜಾತಿಗಳ ಜನರ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ನಿಖರ ಅಂಕಿಅಂಶಗಳ ಆಧಾರದಲ್ಲಿ ತನಿಖೆ ನಡೆಸಿ, ನಿರ್ಧಾರಕ್ಕೆ ಬರುವ ಹೊಣೆಗಾರಿಕೆ ಕಾರ್ಯಾಂಗದ ಮೇಲಿದೆ' ಎಂದು ಹೇಳಿತ್ತು.

ಆ ಬಳಿಕ ಹಿಂದುಳಿದ ವರ್ಗಗಳ ಮೀಸಲಾತಿಯ ವಿಚಾರ ತಣ್ಣಗೆ ಇತ್ತು. ಮಹಾರಾಷ್ಟ್ರ ಚುನಾವಣಾ ಆಯೋಗವು ಅಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ 2018ರ ಜುಲೈ ಮತ್ತು 2020ರ ಫೆಬ್ರುವರಿಯಲ್ಲಿ ಹೊರಡಿಸಿದ್ದ ಅಧಿಸೂಚನೆಗಳಲ್ಲಿ ಕೆಲವು ಜಿಲ್ಲೆಗಳಲ್ಲಿ ಒಟ್ಟು ಮೀಸಲಾತಿಯ ಪ್ರಮಾಣ ಶೇಕಡ 50ರಷ್ಟನ್ನು ಮೀರಿತ್ತು. ಅದನ್ನು ಪ್ರಶ್ನಿಸಿ ವಿಕಾಸ್ ಕೃಷ್ಣರಾವ್ ಗಾವಳಿ ಎಂಬುವವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ಪೂರ್ಣಗೊಳಿಸಿ 2021ರ ಮಾರ್ಚ್ 4ರಂದು ತೀರ್ಪು ನೀಡಿದ್ದ ಸುಪ್ರೀಂಕೋರ್ಟ್‌ನ ತ್ರಿಸದಸ್ಯ ಪೀಠ, 'ಹಿಂದುಳಿದ ವರ್ಗಗಳಲ್ಲಿನ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಮೂರು ಹಂತದ ಪರಿಶೀಲನೆ ನಡೆಸಿದ ಬಳಿಕವೇ ಆ ಸಮುದಾಯಗಳಿಗೆ (ಒಬಿಸಿ) ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೀಸಲಾತಿ ಕಲ್ಪಿಸಬೇಕು' ಎಂಬ ತೀರ್ಮಾನ ನೀಡಿತ್ತು.

ಮಹಾರಾಷ್ಟ್ರದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಾದಾಗ ಪುನಃ ಒಬಿಸಿ ಮೀಸಲಾತಿಯ ವಿಷಯ ಮುನ್ನೆಲೆಗೆ ಬಂದಿತು. ಮೂರು ಹಂತದ ಪರಿಶೀಲನೆಯ ಮೂಲಕ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸದೇ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದನ್ನು ಪ್ರಶ್ನಿಸಿ ರಾಹುಲ್ ರಮೇಶ್ ವಾಘ್ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ 2021ರ ಅಕ್ಟೋಬರ್ 21ರಂದು ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಅರ್ಜಿದಾರರು ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ದಿನೇಶ್ ಮಾಹೇಶ್ವರಿ ಮತ್ತು ಸಿ.ಟಿ. ರವಿಕುಮಾರ್ ಅವರನ್ನೊಳಗೊಂಡ ಪೀಠ, 'ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶವು ಬಯಸಿದರೆ ಈ ವಿಚಾರದಲ್ಲಿ ಮೂರು ಹಂತದ ಪರಿಶೀಲನೆ ಪೂರ್ಣಗೊಳಿಸುವುದು ಕಡ್ಡಾಯ. ಒಂದು ವೇಳೆ ಮೂರು ಹಂತದ ಪರಿಶೀಲನೆಯ ಅಗತ್ಯಗಳನ್ನು ಪೂರೈಸಲು ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶವು ವಿಫಲವಾದರೆ, ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು 'ಸಾಮಾನ್ಯ' ಎಂದು ಘೋಷಿಸಿ ಚುನಾವಣೆ ನಡೆಸಬೇಕು. ಯಾವುದೇ ಕಾರಣಕ್ಕೂ ನಿಗದಿತ ಅವಧಿಯ ಬಳಿಕ ಚುನಾವಣೆ ಮುಂದೂಡುವಂತಿಲ್ಲ' ಎಂದು 2022ರ ಜನವರಿ 19ರಂದು ನಿರ್ದೇಶನ ನೀಡಿದೆ.

'ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿ ಮೀಸಲಾತಿ ನಿಗದಿಪಡಿಸುವಾಗ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಪ್ರತ್ಯೇಕ ಆಯೋಗವೊಂದನ್ನು ನೇಮಿಸಬೇಕು. ಈ ಆಯೋಗವು ವಿಸ್ತೃತವಾದ ಪರಿಶೀಲನೆ ನಡೆಸಿದ ಬಳಿಕ ನೀಡುವ ವರದಿ ಆಧರಿಸಿ, ಪ್ರತಿ ಸ್ಥಳೀಯ ಸಂಸ್ಥೆಯನ್ನು ಒಂದು ಘಟಕವಾಗಿ ಪರಿಗಣಿಸಿ ಮೀಸಲಾತಿ ನಿಗದಿಪಡಿಸಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ನೀಡುವ ಮೀಸಲಾತಿಯ ಒಟ್ಟು ಪ್ರಮಾಣವು ಶೇಕಡ 50 ರಷ್ಟನ್ನು ಮೀರುವಂತಿಲ್ಲ' ಎಂದು ವಿಕಾಸ್ ಕೃಷ್ಣರಾವ್ ಗಾವಳಿ ಪ್ರಕರಣದಲ್ಲಿ ನೀಡಿರುವ ಮೂರು ಹಂತದ ಪರಿಶೀಲನಾ ವಿಧಾನವನ್ನು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಕಡ್ಡಾಯವಾಗಿ ಪಾಲಿಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ರಾಜ್ಯದಲ್ಲೂ ಬಿಕ್ಕಟ್ಟು ಸೃಷ್ಟಿ: ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಂಡು ಹತ್ತು ತಿಂಗಳು ಕಳೆದಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಂಡು ಒಂದೂವರೆ ವರ್ಷ ಆಗಿದೆ. ಸರ್ಕಾರದ ನಿರಾಸಕ್ತಿ, ವಾರ್ಡ್‌ವಾರು ಮೀಸಲಾತಿ ನಿಗದಿಯಲ್ಲಿನ ಲೋಪ, ವಾರ್ಡ್‌ಗಳ ಮರು ವಿಂಗಡಣೆಯಲ್ಲಿನ ದೋಷಗಳ ಕಾರಣದಿಂದ ಈ ಎಲ್ಲ ಚುನಾವಣೆಗಳೂ ವಿಳಂಬವಾಗಿದ್ದವು. ಈಗ ಅವುಗಳ ಜತೆಗೆ ಚುನಾವಣೆ ವಿಳಂಬವಾಗಲು ಒಬಿಸಿ ಮೀಸಲಾತಿಯ ಬಿಕ್ಕಟ್ಟು ಸೇರಿಕೊಂಡಿದೆ.

ಸುಪ್ರೀಂಕೋರ್ಟ್ ನಿರ್ದೇಶನ ನೀಡಿ ಒಂದೂವರೆ ತಿಂಗಳು ಕಳೆದರೂ ಈ ವಿಚಾರದಲ್ಲಿ ರಾಜ್ಯ ಸರ್ಕಾರದ ಸ್ಪಷ್ಟವಾದ ಹೆಜ್ಜೆಗಳನ್ನು ಇಟ್ಟಿಲ್ಲ. ಚುನಾವಣೆ ಮುಂದೂಡುವ ಮಾತುಗಳಷ್ಟೇ ಇಲ್ಲಿಯವರೆಗೆ ಹೇಳಿದ್ದ ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಕರ್ನಾಟಕ ಸರ್ಕಾರ ನಡೆಸಿದ್ದ ಸಾಮಾಜಿಕ, ಶೈಕ್ಷಣಿಕ ಗಣತಿಯ ದತ್ತಾಂಶಗಳನ್ನು ಈ ಉದ್ದೇಶಕ್ಕೆ ಬಳಸಬಹುದೇ ಎಂಬ ಬಗ್ಗೆ ಕಾನೂನು ತಜ್ಞರ ಜತೆ ಚರ್ಚಿಸುವುದಾಗಿ ಮಾ.8ರಂದು ಹೇಳಿದ್ದಾರೆ. ಚುನಾವಣೆ ಮುಂದೂಡುವ ಪ್ರಯತ್ನವೂ ಸುಪ್ರೀಂಕೋರ್ಟ್‌ನಲ್ಲಿ ಹಿನ್ನಡೆ ಅನುಭವಿಸುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿಯೇ ತಮಿಳುನಾಡು ಸರ್ಕಾರವು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸದೇ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಪೂರ್ಣಗೊಳಿಸಿದೆ. ಅಲ್ಲಿ ಹಿಂದುಳಿದ ವರ್ಗಗಳ ಜನರೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಒಬಿಸಿ ಜನರಿಗೆ ರಾಜಕೀಯವಾಗಿ ಹೆಚ್ಚು ನಷ್ಟವಾಗಿಲ್ಲ ಎಂಬ ಅಭಿಪ್ರಾಯವಿದೆ.

ಸದ್ಯ ರಾಜ್ಯ ಸರ್ಕಾರದ ಮುಂದೆ ಇರುವುದು ಎರಡೇ ಆಯ್ಕೆ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಪ್ರತ್ಯೇಕ ಆಯೋಗವೊಂದನ್ನು ನೇಮಿಸಿ ಮೂರು ಹಂತದ ಪರಿಶೀಲನೆ ನಡೆಸಿ, ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಯನ್ನು ಖಾತರಿಪಡಿಸುವುದು ಮೊದಲ ಆಯ್ಕೆ. ಇದನ್ನು ಆಯ್ದುಕೊಂಡರೆ ಹೆಚ್ಚು ವಿಳಂಬ ಮಾಡದೇ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸದೇ ಚುನಾವಣೆ ನಡೆಸುವುದು ಎರಡನೇ ಆಯ್ಕೆ. ಆದರೆ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಷ್ಟೇ ಮೀಸಲಾತಿ ಕಲ್ಪಿಸಿ, ಉಳಿದ ಸ್ಥಾನಗಳನ್ನು 'ಸಾಮಾನ್ಯ' ಎಂದು ಘೋಷಿಸಿದರೆ ಹಿಂದುಳಿದ ವರ್ಗಗಳ ಜನರಿಗೆ ರಾಜಕೀಯವಾಗಿ ದೊಡ್ಡ ಪೆಟ್ಟು ಬೀಳುವುದು ನಿಶ್ಚಿತ.

ತ್ವರಿತ ಪರಿಹಾರ ಸಾಧ್ಯವೆ?

ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದ ಬಿಕ್ಕಟ್ಟು ಪರಿಹಾರಕ್ಕೆ ದೀರ್ಘ ಸಮಯವೇನೂ ಬೇಕಿಲ್ಲ ಎಂಬ ವಾದ ಕಾನೂನು ತಜ್ಞರ ವಲಯದಲ್ಲಿದೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಈಗಾಗಲೇ ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯಲ್ಲಿನ (ಜಾತಿ ಗಣತಿ) ರಾಜಕೀಯ ಪ್ರಾತಿನಿಧ್ಯದ ಕುರಿತ ಅಂಕಿಅಂಶಗಳೂ ಇವೆ. ಈ ಮಾಹಿತಿಯನ್ನೇ ಬಳಸಿಕೊಂಡು ಮೂರು ಹಂತದ ಪರಿಶೀಲನೆ ಪೂರ್ಣಗೊಳಿಸಬಹುದು ಎಂದು ವಿರೋಧ ಪಕ್ಷಗಳ ನಾಯಕರೂ ಸೇರಿದಂತೆ ಹಲವರು ಪ್ರತಿಪಾದಿಸಿದ್ದಾರೆ.

ರಾಜ್ಯಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯೂ ಸರ್ಕಾರದ ಬಳಿಯೇ ಇರುತ್ತದೆ. ಪ್ರತ್ಯೇಕ ಆಯೋಗವೊಂದನ್ನು ನೇಮಿಸಿ, ನಿರ್ದಿಷ್ಟ ಕಾಲಮಿತಿಯೊಳಗೆ ಪ್ರಕ್ರಿಯೆ ಪೂರ್ಣಗೊಳಿಸುವ ಅವಕಾಶ ಇದೆ. ಆದರೆ, ಸರ್ಕಾರ ಆ ದಿಸೆಯಲ್ಲಿ ಹೆಜ್ಜೆ ಇಟ್ಟೀತೆ ಎಂಬ ಪ್ರಶ್ನೆ ಬಹುತೇಕರದ್ದು.

ಆಡಳಿತ ವಿರೋಧಿ ಅಲೆಯ ಭಯ?

ರಾಜ್ಯದ ಬಿಜೆಪಿ ಸರ್ಕಾರಕ್ಕೆ ಆಡಳಿತ ವಿರೋಧಿ ಅಲೆಯ ಭಯವಿದೆ. ಕೆಲವು ತಿಂಗಳ ಹಿಂದಷ್ಟೇ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದೆ. ವಿಧಾನಸಭಾ ಚುನಾವಣೆ ಇನ್ನು ಒಂದು ವರ್ಷವಷ್ಟೇ ಬಾಕಿ ಇದೆ. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಬಿಬಿಎಂಪಿ ಚುನಾವಣೆ ನಡೆಸಿದರೆ ಪಕ್ಷಕ್ಕೆ ಹಿನ್ನಡೆಯಾಗಬಹುದು. ಅದರಿಂದ ವಿಧಾನಸಭಾ ಚುನಾವಣೆಯ ಮೇಲೆ ಪ್ರತಿಕೂಲ ಪರಿಣಾಮಗಳು ಆಗಬಹುದು ಎನ್ನುವ ಭಯ ಬಿಜೆಪಿ ನಾಯಕರನ್ನು ಕಾಡುತ್ತಿದೆ. ಇದೇ ಕಾರಣಕ್ಕಾಗಿ ಈ ಅಂಶವನ್ನು ಮುಂದಿಟ್ಟು, ಚುನಾವಣೆ ಮುಂದೂಡುವ ತಂತ್ರವನ್ನೇ ಅವರು ಆಯ್ದುಕೊಳ್ಳುವ ಸಾಧ್ಯತೆ ಹೆಚ್ಚು ಎಂಬ ಮಾತು ರಾಜಕೀಯ ವಲಯದಲ್ಲಿ ದಟ್ಟವಾಗಿದೆ.

ಮುಂದಿನ ದಾರಿ ಏನು?

ಈ ವಿಷಯದಲ್ಲಿ ಸರ್ಕಾರದ ಮುಂದೆ ಹೆಚ್ಚಿನ ಮಾರ್ಗೋಪಾಯಗಳು ಇಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಇರುವ ರಾಜಕೀಯ ಮೀಸಲಾತಿಯನ್ನು ರಕ್ಷಿಸುವುದು ಅಥವಾ ಈ ಸಮುದಾಯಗಳು ರಾಜಕೀಯ ಮೀಸಲಾತಿಯಿಂದ ವಂಚಿತವಾಗುವಂತೆ ಮಾಡುವುದು ಎರಡೂ ಸರ್ಕಾರದ ನಡೆಯನ್ನೇ ಆಧರಿಸಿವೆ.

ಮಧ್ಯಪ್ರದೇಶ ಸರ್ಕಾರವು, ಹಿಂದುಳಿದ ವರ್ಗಗಳ ಮೀಸಲಾತಿ ಬಿಕ್ಕಟ್ಟು ಇತ್ಯರ್ಥ ಆಗುವವರೆಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡುವುದಕ್ಕೆ ಅವಕಾಶ ಕಲ್ಪಿಸುವ ಮಸೂದೆಗಳನ್ನು ಮಂಡಿಸಿ ಒಪ್ಪಿಗೆ ಪಡೆದಿದೆ. ಮಹಾರಾಷ್ಟ್ರ ಸರ್ಕಾರ, ತನ್ನ ಬಳಿ ಲಭ್ಯವಿದ್ದ ಮಾಹಿತಿಗಳ ಆಧಾರದಲ್ಲಿ ವರದಿಯೊಂದನ್ನು ಸಿದ್ಧಪಡಿಸಿತ್ತು. ಅದನ್ನು ಬಳಸಿಕೊಂಡು ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಖಾತರಿಪಡಿಸಲು ನಡೆಸಿದ್ದ ಪ್ರಯತ್ನವನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಆ ಬಳಿಕ ಮಧ್ಯಪ್ರದೇಶದ ಹಾದಿಯನ್ನೇ ಅನುಸರಿಸಿದ ಮಹಾರಾಷ್ಟ್ರ ಸರ್ಕಾರ, ಮೀಸಲಾತಿ ಬಿಕ್ಕಟ್ಟು ಪರಿಹಾರವಾಗುವವರೆಗೂ ಚುನಾವಣೆ ಮುಂದೂಡಲು ಅವಕಾಶ ಕಲ್ಪಿಸುವ ಮಸೂದೆಯನ್ನು ವಿಧಾನಮಂಡಲದಲ್ಲಿ ಮಂಡಿಸಿ, 2022ರ ಮಾ.7ರಂದು ಅಂಗೀಕಾರ ಪಡೆದಿದೆ.

ಹಿಂದುಳಿದ ವರ್ಗಗಳು ಹೊಂದಿರುವ ರಾಜಕೀಯ ಮೀಸಲಾತಿಯನ್ನು ರಕ್ಷಿಸಲು ಈಗ ರಾಜ್ಯ ಸರ್ಕಾರ ಯಾವ ಹೆಜ್ಜೆ ಇಡುತ್ತದೆ ಎಂಬ ಕುತೂಹಲ ಮೂಡಿದೆ. ಅದರ ಜತೆಯಲ್ಲೇ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಬಿಬಿಎಂಪಿ ಚುನಾವಣೆಗಳನ್ನು ನಡೆಸಬಹುದೆ? ಇಲ್ಲವೆ? ಎಂಬ ಪ್ರಶ್ನೆಗಳೂ ಬಲವಾಗಿವೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸದೇ ಚುನಾವಣೆ ನಡೆಸುವುದಕ್ಕೆ ಸರ್ಕಾರ ಮುಂದಾದರೆ, ರಾಜ್ಯದಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ನಾಯಕತ್ವಕ್ಕೆ ಪ್ರಬಲ ಹೊಡೆತ ಬೀಳಲಿದೆ. ಅದು ಈ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯ ಮೇಲೂ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ.

ಚುನಾವಣೆಯನ್ನು ವಿಳಂಬ ಮಾಡುವುದು ಕೂಡ ಉತ್ತಮ ಆಯ್ಕೆಯಲ್ಲ. ಇದರಿಂದ ಅಧಿಕಾರ ವಿಕೇಂದ್ರೀಕರಣದ ಉದ್ದೇಶವೇ ಮಣ್ಣುಪಾಲಾಗುತ್ತದೆ. ಎಲ್ಲ ಅಧಿಕಾರವೂ ಶಾಸಕರ ಕೈಸೇರಿ ಸ್ಥಳೀಯ ಸಂಸ್ಥೆಗಳು ಬಲಹೀನವಾಗುತ್ತವೆ. ಹೊಸ ತಲೆಮಾರಿನ ನಾಯಕತ್ವ ಸೃಷ್ಟಿಗೆ ಅವಕಾಶವೇ ಇಲ್ಲದಂತಾಗುತ್ತದೆ. ಒಟ್ಟಿನಲ್ಲಿ ಸರ್ಕಾರದ ಪಾಲಿಗೆ ಈ ಬಿಕ್ಕಟ್ಟನ್ನು ಪರಿಹರಿಸುವುದು ತಂತಿಯ ಮೇಲಿನ ನಡಿಗೆ. ಹಿಂದುಳಿದ ವರ್ಗಗಳ ಜನರ ರಾಜಕೀಯ ಪ್ರಾತಿನಿಧ್ಯದ ಭವಿಷ್ಯದ ಮೇಲೂ ತೂಗುಗತ್ತಿ ನೇತಾಡುತ್ತಿದೆ.

ಎಲ್ಲೆಲ್ಲಿ ಒಬಿಸಿ ರಾಜಕೀಯ ಮೀಸಲಾತಿ?

ಗ್ರಾಮೀಣ ಸ್ಥಳೀಯ ಸಂಸ್ಥೆಗಳು

31 ಜಿಲ್ಲಾ ಪಂಚಾಯಿತಿಗಳು

229 ತಾಲ್ಲೂಕು ಪಂಚಾಯಿತಿಗಳು

5,964 ಗ್ರಾಮ ಪಂಚಾಯಿತಿಗಳು

ನಗರ ಸ್ಥಳೀಯ ಸಂಸ್ಥೆಗಳು

10 ಮಹಾನಗರ ಪಾಲಿಕೆಗಳು

61 ನಗರಸಭೆಗಳು

121 ಪುರಸಭೆಗಳು

118 ಪಟ್ಟಣ ಪಂಚಾಯಿತಿಗಳು

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 63

ಭಸ್ಮ ರುದ್ರಾಕ್ಷಿ ಶಿವನಾಮ ಮಹಿಮೆ

ಮುನಿಗಳು ಈಗ ಭಸ್ಮ, ರುದ್ರಾಕ್ಷಿ ಮತ್ತು ಶಿವನಾಮ ಮಹಿಮೆಯನ್ನ ಹೇಳುವಂತೆ ಪ್ರಾರ್ಥಿಸುತ್ತಾರೆ. ಆಗ ಸೂತಮುನಿ ಹೇಳುತ್ತಾನೆ – ಯಾರು ಶಿವಶಿವ ಅಂತ ಶಿವನಾಮವನ್ನು ಯಾವಾಗಲೂ ಉಚ್ಚರಿಸುತ್ತಾರೋ ಅವರನ್ನು ಪಾಪಗಳು ಸ್ಪರ್ಶಿಸುವುದಿಲ್ಲ. ಶ್ರೀಶಿವಾಯ ನಮಸ್ತುಭ್ಯಂ – ಎಂದು ಉಚ್ಚರಿಸುವ ಮುಖವು ಪವಿತ್ರವಾದ ತೀರ್ಥರೂಪು. ಅಂತಹ ಶಿವಭಕ್ತನ ತೀರ್ಥಮುಖವನ್ನು ಯಾರು ಪ್ರೀತಿಯಿಂದ ನೋಡುವರೋ, ಅವರಿಗೆ ತೀರ್ಥದರ್ಶನ ಮಾಡಿದ ಪುಣ್ಯ ಬರುವುದು. ಶಿವನಾಮ, ರುದ್ರಾಕ್ಷ, ವಿಭೂತಿ ಒಟ್ಟಿಗೆ ಇರುವುದನ್ನು ದರ್ಶನಮಾಡಿದರೆ ತ್ರಿವೇಣೀ ಸಂಗಮದಲ್ಲಿ ಸ್ನಾನಮಾಡಿದಷ್ಟೇ ಪುಣ್ಯಫಲ ಸಿಗುವುದು.

ಶಿವನಾಮ-ವಿಭೂತಿ-ರುದ್ರಾಕ್ಷ ಮಹಾಪುಣ್ಯಪ್ರದವಾದವು. ತ್ರಿವೇಣೀಗಳಂತೆ ಪವಿತ್ರವಾದವು. ಆದುದರಿಂದ ಶಿವನಾಮ-ವಿಭೂತಿ-ರುದ್ರಾಕ್ಷ ಮತ್ತು ತ್ರಿವೇಣಿಗೂ ವ್ಯತ್ಯಾಸವೇನೂ ಇಲ್ಲ. ಯಾರ ಹಣೆಯಲ್ಲಿ ವಿಭೂತಿಯಿಲ್ಲವೋ, ಯಾರ ಶರೀರದಲ್ಲಿ ರುದ್ರಾಕ್ಷಿ ಇಲ್ಲವೋ, ಯಾರ ಮುಖದಲ್ಲಿ ಶಿವನಾಮಸ್ಮರಣೆ ಇಲ್ಲವೋ, ಅವರನ್ನು ಪಾಪಿಗಳೆಂದು ಪರಿಗಣಿಸಬೇಕು. ಏಕೆಂದರೆ, ಶಿವನಾಮವು ಗಂಗೆಗೆ ಸಮಾನವಾದುದು. ವಿಭೂತಿಯು ಯಮುನೆಯಂತಹುದು. ರುದ್ರಾಕ್ಷಿಯು ಸರಸ್ವತೀನದಿಯಂತೆ ಸಕಲ ಪಾಪಗಳನ್ನು ನಾಶಮಾಡುವುದು. ಒಮ್ಮೆ ಬ್ರಹ್ಮನು ಶಿವನಾಮ-ವಿಭೂತಿ-ರುದ್ರಾಕ್ಷಿಗಳನ್ನು ಧರಿಸಿದ ಫಲವನ್ನೂ, ತ್ರಿವೇಣಿಸಂಗಮ ಸ್ನಾನದ ಫಲವನ್ನೂ ತಕ್ಕಡಿಯಲ್ಲಿಟ್ಟು ತೂಗಿದಾಗ, ಅವೆರಡು ಫಲಗಳು ಸಮವಾಗಿದ್ದವು. ಈ ರೀತಿ ಬ್ರಹ್ಮನು ತೂಗಿ ಪರೀಕ್ಷಿಸಿದ ದಿನದಿಂದ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಆ ಮೂರು ಶೈವಚಿಹ್ನೆಗಳನ್ನೂ ಧರಿಸುತ್ತಿದ್ದಾರೆ ಎನ್ನುತ್ತಾನೆ ಸೂತಮುನಿ.

ಈ ಶೈವಚಿಹ್ನೆಗಳ ಮಹಿಮೆಯನ್ನು ಜಗತ್ತಿನಲ್ಲಿ ಮಹೇಶ್ವರನೊಬ್ಬನ ಹೊರತು ಇನ್ನಾರೂ ತಿಳಿಯಲಾರರು. 'ಶಿವ' ಎಂಬ ನಾಮವೇ ಕಾಡ್ಗಿಚ್ಚು. ಆ ಕಾಡುಕಿಚ್ಚಿನಿಂದ ಮಹಾಪಾಪವೆಂಬ ಪರ್ವತಗಳು ಅನಾಯಾಸವಾಗಿ ಸುಟ್ಟುಹೋಗುತ್ತವೆ. ದುಃಖವು ಪಾಪದಿಂದ ಬರುವುದು. ಆ ಪಾಪಗಳು ಶಿವನಾಮವೊಂದರಿಂದಲೇ ನಾಶವಾಗುವುದು. ಯಾರು ನಿತ್ಯವೂ ಶಿವನಾಮವನ್ನು ಜಪಿಸುವರೋ, ಅವರು ವೈದಿಕರು, ಪುಣ್ಯವಂತರು ಮತ್ತು ಧನ್ಯರಾಗಿರುತ್ತಾರೆ. ಅವರೇ ಪಂಡಿತ–ವಿವೇಕಿಯೂ ಆಗಿರುತ್ತಾರೆ. ಮನುಷ್ಯರು ಮಾಡುವ ಪಾಪಗಳನ್ನೆಲ್ಲಾ ನಾಶಮಾಡುವ ಶಕ್ತಿ ಶಿವನಾಮಕ್ಕೆ ಇದೆ. ಶಿವನಾಮವೆಂಬ ನೌಕೆಯನ್ನು ಹತ್ತಿ ಸಂಸಾರಸಾಗರವನ್ನು ದಾಟಲು ಯಾರು ಪ್ರಯತ್ನಿಸುವರೋ ಅವರ ಸಂಸಾರದ ಪಾಪಗಳೆಲ್ಲವೂ ನಾಶವಾಗುವುದು.

ಪಾಪವೆಂಬ ಕಾಡುಕಿಚ್ಚಿನಿಂದ ಪೀಡಿಸಲ್ಪಟ್ಟವರು, ಶಿವನಾಮವೆಂಬ ಅಮೃತವನ್ನು ಕುಡಿಯಬೇಕು. ಪಾಪವೆಂಬ ಕಾಡುಕಿಚ್ಚಿನಿಂದ ತಾಪವನ್ನು ಹೊಂದಿದವರಿಗೆ ಶಾಂತಿಯಿಲ್ಲ. ಶಿವನಾಮವೆಂಬ ಅಮೃತಧಾರೆಗಳಿಂದ ಕೂಡಿದವರು, ಸಂಸಾರವೆಂಬ ದಾವಾಗ್ನಿಯ ಮಧ್ಯದಲ್ಲಿದ್ದರೂ ಶೋಕವನ್ನು ಹೊಂದುವುದಿಲ್ಲ. ಶಿವನಾಮದಲ್ಲಿ ಯಾರಿಗೆ ಭಕ್ತಿಯಿರುವುದೋ ಅವರಿಗೆ ಶೀಘ್ರದಲ್ಲಿಯೇ ಮುಕ್ತಿಯುಂಟಾಗುವುದು. ಯಾರಿಗೆ ಶಿವನಾಮದಲ್ಲಿ ಅಸಾಧಾರಣವಾದ ಮತ್ತು ಅವಿಚ್ಛಿನ್ನವಾದಂತಹ ಭಕ್ತಿ ಇರುವುದೋ ಅವರಿಗೆ ಮೋಕ್ಷವು ಸುಲಭವಾಗಿ ಲಭಿಸುವುದು. ಅನೇಕ ಮಹಾಪಾಪಗಳನ್ನು ಮಾಡಿರುವವರೂ ಶಿವನಾಮ ಜಪವನ್ನು ಭಕ್ತಿಯಿಂದ ಮಾಡಿದರೆ ಎಲ್ಲಾ ಪಾಪಗಳಿಂದಲೂ ಮುಕ್ತರಾಗುವರು.

ಅರಣ್ಯದಲ್ಲಿ ಕಾಡುಕಿಚ್ಚಿನಿಂದ ದಗ್ಧವಾದ ಮರಗಳು ಹೇಗೆ ಭಸ್ಮವಾಗುವುವೋ, ಅದರಂತೆ ಪಾಪಗಳೂ ಶಿವನಾಮದಿಂದ ದಹಿಸಲ್ಪಡುತ್ತವೆ. ಯಾರು ನಿತ್ಯವೂ ಪವಿತ್ರವಾದ ಭಸ್ಮವನ್ನು ಧರಿಸಿ, ಶಿವನಾಮವನ್ನು ಭಕ್ತಿಯಿಂದ ಜಪಿಸುವರೋ, ಅವರು ಘೋರವಾದಂತಹ ಸಂಸಾರಸಾಗರವನ್ನು ದಾಟುವರು. ವೇದಗಳನ್ನೆಲ್ಲಾ ಪರಿಶೀಲಿಸಿದ ಪಂಡಿತರು, ಶಿವನಾಮದಿಂದ ಮಾತ್ರ ಸಂಸಾರಸಾಗರವನ್ನು ದಾಟಲು ಸಾಧ್ಯ ಅನ್ನುವ ಸಿದ್ಧಾಂತವನ್ನ ಬರೆದಿದ್ದಾರೆ ಎಂದ ಸೂತಮುನಿ, 'ಮುನಿಶ್ರೇಷ್ಠರೇ! ಹೆಚ್ಚು ಹೇಳಿ ಪ್ರಯೋಜನವೇನು? ಸಕಲ ಪಾಪವನ್ನೂ ಹೋಗಲಾಡಿಸುವ ಶಿವನಾಮದ ಮಹಿಮೆಯನ್ನು ಸಂಗ್ರಹಿಸಿ ಒಂದು ಶ್ಲೋಕದಿಂದಲೇ ಹೇಳುವೆನು ಕೇಳಿ' ಅಂತ ಹಲವು ದೃಷ್ಟಾಂತಗಳನ್ನು ತಿಳಿಸುತ್ತಾನೆ.

ಹಿಂದೆ ಮಹಾಪಾಪಿಯಾದ ಇಂದ್ರದ್ಯುಮ್ನನೆಂಬ ರಾಜನು ಶಿವನಾಮದ ಪ್ರಭಾವದಿಂದ ಒಳ್ಳೆಯ ಗತಿಯನ್ನು ಪಡೆದನು. ಮಹಾಪಾಪಿಯಾದ ಓರ್ವ ಸ್ತ್ರೀ ಶಿವನಾಮ ಪ್ರಭಾವದಿಂದ ಉತ್ತಮವಾದ ಗತಿಯನ್ನು ಪಡೆದಳು. ಮುನಿಶ್ರೇಷ್ಠರೇ, ನಿಮಗೆ ಉತ್ತಮವಾದ ಶಿವನಾಮ ಮಹಿಮೆಯನ್ನು ಹೇಳಿದ್ದೇನೆ. ಈಗ ಪರಮಪವಿತ್ರವಾದ ಭಸ್ಮಮಹಾತ್ಮೆಯನ್ನು ಹೇಳುವೆನು ಕೇಳಿ ಎಂದು ಸೂತಮುನಿ ಹೇಳುವುದರೊಂದಿಗೆ ವಿದ್ಯೇಶ್ವರ ಸಂಹಿತೆಯ ಇಪ್ಪತ್ತಮೂರನೆ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮಾರ್ಚ್ 9, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 25 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ಸಪ್ತಮಿ ಗಂ. 26-57 ನಕ್ಷತ್ರ: ಕೃತ್ತಿಕಾ ಗಂ. 08-31 ಯೋಗ: ವಿಷ್ಕಂಭ ಗಂ. 25-15, ಕರಣ: ಗರಜೆ ಗಂ. 13-42. ರಾಹುಕಾಲ : ಮಧ್ಯಾಹ್ನ 12:00 - 01:30 ಸೂರ್ಯೋದಯ : 06-45 ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 05 ಶಬನ್ ಅದೃಷ್ಟ ಸಂಖ್ಯೆ: 3, 11

ಮೇಷ: ಸಣ್ಣ ಸಣ್ಣ ವಿಚಾರಗಳಿಗೆ ದೊಡ್ಡ ದೊಡ್ಡ ಸಮಸ್ಯೆ ಮಾಡುವ ಮನಸ್ಥಿತಿ ಬದಲಾಯಿಸಿಕೊಳ್ಳಿ. ಮರಗೆಲಸ ಮಾಡುವ ವಿಶ್ವಕರ್ಮರಿಗೆ ಉದ್ಯೋಗದಲ್ಲಿ ಕೀರ್ತಿ, ಲಾಭ, ಸಮಾಜದಲ್ಲಿ ಹೆಸರು ಸಂಪಾದನೆಯಾಗುವುದು.

ವೃಷಭ: ಕೆಲಸಗಳು ವಿಳಂಬವಾಗಬಹುದು. ಸ್ತ್ರೀಯರಿಗೆ ಉದ್ಯೋಗದಲ್ಲಿ ಅಭಿವೃದ್ಧಿಯಾಗಲಿದೆ. ಸಾಲದ ರೂಪದಲ್ಲಿ ಸ್ನೇಹಿತರಿಗೆ ನೀಡಿದ ನಿಮ್ಮ ಹಣ ಇನ್ನೊಬ್ಬ ಸ್ನೇಹಿತನ ನೆರವಿನಿಂದ ನಿಮ್ಮ ಕೈ ಸೇರಲಿದೆ. ಸಂತಾನದ ಶುಭಸುದ್ದಿ ಕೇಳುವಿರಿ.

ಮಿಥುನ: ಸಮೀಪವರ್ತಿಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳ ಆದಾಯದಲ್ಲಿ ಗಣನೀಯ ಏರಿಕೆ. ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅತೀವ ಆಸಕ್ತಿ ಇರುವುದು.

ಕರ್ಕಾಟಕ: ವ್ಯವಹಾರದಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಉತ್ತಮ ಆದಾಯ. ನಿಮ್ಮ ಮಾತಿನ ಚತುರತೆಯಿಂದ ನಡೆಯಬಹುದಾದ ವೃತ್ತಿ ವೈಷಮ್ಯದ ಕಲಹಗಳು ದೂರಾಗಲಿವೆ. ಆರೋಗ್ಯದಲ್ಲಿ ಚೇತರಿಕೆಯಾಗುತ್ತದೆ.

ಸಿಂಹ: ಈ ದಿನ ಎಂದಿನಂತಲ್ಲದೆ ಮನಸ್ಸು ಹೆಚ್ಚು ಉಲ್ಲಾಸದಿಂದ ಕೂಡಿರುವುದರಿಂದ ಕೆಲಸಗಳು ಸರಾಗವಾಗಿ ನಡೆಯುವುದು. ಮಗನಿಗೆ ವಿದೇಶದಲ್ಲಿ ಅಥವಾ ವಿದೇಶಿ ಕಂಪನಿಯಲ್ಲಿ ವೃತ್ತಿ ದೊರೆಯುವ ಸಂಭವವಿದೆ.

ಕನ್ಯಾ: ಚಿತ್ರಕಲಾ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸುವುದು. ಮನೆ ಬದಲಾವಣೆ ವಿಚಾರಗಳು ಚರ್ಚೆಗೆ ಬಂದು ಹಿರಿಯರ ಮಾತಿನಂತೆಯೇ ನಡೆಯುವಿರಿ. ಗೃಹೋಪಯೋಗಿ ವಸ್ತುಗಳ ಮಾರಾಟದಿಂದ ಲಾಭ.

ತುಲಾ: ಈ ದಿನ ನೀವು ಅರಿತುಕೊಳ್ಳುವ ಸತ್ಯ ಭವಿಷ್ಯದ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಕಾಂಟ್ರಾಕ್ಟ್ ವ್ಯವಹಾರಸ್ಥರಿಗೆ ಸರ್ಕಾರದಿಂದ ಹೆಚ್ಚಿನ ಗುತ್ತಿಗೆ ಕೆಲಸ ಲಭ್ಯ ಆಗುವುದು. ಅನ್ನದಾನ ಮಾಡುವುದರಿಂದ ಶುಭ.

ವೃಶ್ಚಿಕ: ಈ ದಿನದ ಸಕ್ರಿಯತೆ ಹಾಗೂ ಕಾರ್ಯಮಗ್ನತೆಯಿಂದ ಯೋಜನೆಗಳು ಮುಕ್ತಾಯ ಹಂತಕ್ಕೆ ತಲುಪುವವು. ರಿಯಲ್ ಎಸ್ಟೇಟ್ ಏಜೆಂಟ್‌ಗಳಿಗೆ ಹೆಚ್ಚಿನ ಲಾಭ ಇರಲಿದೆ. ತುರ್ತು ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗುತ್ತದೆ.

ಧನು: ಸ್ನೇಹಿತರಲ್ಲಿ ಸಣ್ಣಪುಟ್ಟ ಕಾರಣಗಳಿಗಾಗಿ ಅಥವಾ ವಿನಾಕಾರಣವಾಗಿ ದ್ವೇಷವನ್ನು ಬೆಳೆಸಿಕೊಳ್ಳಬೇಡಿ. ಎಂಜಿನಿಯರ್‌ಗಳ ಕೆಲಸದ ಸಮಯದಲ್ಲಿ ಬದಲಾವಣೆಯಾಗಬಹುದು. ಅನಾವಶ್ಯಕ ವಸ್ತುಗಳ ಖರೀದಿ ಕಡಿಮೆಮಾಡಿ.

ಮಕರ: ಹೊಸದನ್ನು ಸಾಧಿಸುವ ಪ್ರಚೋದನೆ ನಿಮ್ಮನ್ನು ಸೆಳೆಯಲಿದೆ. ಅದರಿಂದಾಗಿ ಈಗ ನಡೆಯುತ್ತಿರುವ ಕೆಲಸ ಕಾರ್ಯಗಳು ನಿಲ್ಲುವಂತಾಗಬಹುದು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಿನ ಪರಿಶ್ರಮದಿಂದ ಉತ್ತಮ ಫಲ.

ಕುಂಭ: ಯೋಜನೆಗಳಲ್ಲಿನ ಜಟಿಲ ವಿಷಯಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಮುಂದುವರೆದಲ್ಲಿ ಯಶಸ್ಸು. ಉತ್ತಮ ಕಡೆಯಿಂದ ವಿವಾಹ ಸಂಬಂಧ ಕೂಡಿ ಬರಲಿದೆ. ಭೂ ವ್ಯವಹಾರದಲ್ಲಿ ಹೆಚ್ಚಿನ ಆದಾಯ ಇರಲಿದೆ.

ಮೀನ: ಗಂಭೀರ ಹಾಗೂ ತಾಳ್ಮೆಯಿಂದ ಕಾರ್ಯ ನಿರ್ವಹಿಸಿದಲ್ಲಿ ಯಶಸ್ಸು ನಿಮ್ಮದಾಗಲಿದೆ. ಅನಿರೀಕ್ಷಿತ ಧನಲಾಭ. ವಾಹನಗಳ ರಿಪೇರಿಯಿಂದ ಖರ್ಚು. ದಾಯಾದಿಗಳು ನಿಮ್ಮ ಅಭಿವೃದ್ಧಿಗೆ ಅಡ್ಡಗಾಲು ಹಾಕಬಹುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸ್ಥಾನಗೌರವ

ದೊರೆಯ ವೇಷವ ಧರಿಸಿ ಮೆರೆಯುವೆಯ ಮೀಸೆಯನು? |
ತಿರುಕಹಾರುವನಾಗಿ ಮೀಸೆ ತಿರುಚುವೆಯ? ||
ಇರುವುದವನವನಿಗವನವನ ತಾಣದ ಧರ್ಮ |
ಅರಿವೆ ಋತುಗತಿಯಂತೆ – ಮಂಕುತಿಮ್ಮ || 580 ||

ಪದ-ಅರ್ಥ: ತಿರುಕಹಾರುವನಾಗಿ = ಭಿಕ್ಷೆಬೇಡುವ ಬ್ರಾಹ್ಮಣನಾಗಿ, ಇರುವುದವನವನಿಗವನವನ = ಇರುವುದು + ಅವನಿಗೆ + ಅವನವನ, ತಾಣದ = ಸ್ಥಳದ, ಋತುಗತಿಯಂತೆ = ಋತು ಬದಲಾವಣೆಯಾದಂತೆ

ವಾಚ್ಯಾರ್ಥ: ರಾಜನ ವೇಷವನ್ನು ಹಾಕಿಕೊಂಡು ಮೀಸೆಯನ್ನು ಮೆರೆಯುತ್ತೀಯಾ? ಬಡ ಬ್ರಾಹ್ಮಣನಾಗಿ ಮೀಸೆಯನ್ನು ತಿರುಚುತ್ತೀಯಾ? ಅವನಿಗೆ, ಅವನವನ ಸ್ಥಳದ ಧರ್ಮ ಇದೆ. ಋತು ಬದಲಾವಣೆಯಂತೆ ತನ್ನ ಸ್ಥಾನದ ಔಚಿತ್ಯವನ್ನು ಅರಿಯಬೇಕು.

ವಿವರಣೆ: ಬದುಕೊಂದು ರಂಗಭೂಮಿ. ಅಲ್ಲಿ ಒಬ್ಬೊಬ್ಬರಿಗೆ ಒಂದು ಪಾತ್ರವೆಂದಿಲ್ಲ. ಒಬ್ಬರಿಗೇ ನೂರಾರು ಪಾತ್ರಗಳು. ಬದುಕಿನ ವಿವಿಧ ಹಂತಗಳಲ್ಲಿ, ಒಂದೇ ಹಂತದ ಅನೇಕ ಸಂದರ್ಭಗಳಲ್ಲಿ ಪಾತ್ರಗಳು ಬೇರೆಯಾಗುತ್ತವೆ. ತನ್ನ ಕೆಳಗಿನವರ ಮೇಲೆ ದರ್ಪದ ಆವೇಶ ತಾಳುವವ, ತನ್ನ ಮೇಲಿನವರ ಮುಂದೆ ಮೊಳಕಾಲೂರಿ ವಿಧೇಯನಾಗುತ್ತಾನೆ. ಚುನಾವಣೆಯ ಮೊದಲು ದೈನ್ಯದಿಂದ ಮನೆಮನೆಗೆ ಅಲೆದು ಮತ ಕೇಳುವ ವ್ಯಕ್ತಿ ಆರಿಸಿ ಬಂದ ಮೇಲೆ ರಾಜನಂತೆ ಮೆರೆಯುತ್ತಾನೆ, ಜನರನ್ನು ಮರೆಯುತ್ತಾನೆ. ಇವೆಲ್ಲ ವೇಷಗಳು, ಕೃತ್ರಿಮವಾದ ಮುಖಗಳು. ತನಗೆ ಆ ಕ್ಷಣಕ್ಕೆ ದೊರಕಿದ ಭಾಗ್ಯವನ್ನೇ ಶಾಶ್ವತವೆಂದು ನಂಬಿ ಒರಟಾದ ಮನುಷ್ಯ ಮುಂದೆ ಯಾರಿಗೂ ತಿಳಿಯದಂತೆ ಮರೆಯಾಗಿ ಹೋಗುತ್ತಾನೆ. ತನ್ನನ್ನು ಅತ್ಯಂತ ಕನಿಷ್ಠ ಎಂದು ಭಾವಿಸಿ ಕೀಳರಿಮೆ ಹೊಂದಿದ್ದ ಮನುಷ್ಯ, ಪರಿಶ್ರಮದಿಂದ, ದೈವಕೃಪೆಯಿಂದ ಸಮಾಜದಲ್ಲಿ ಅತ್ಯಂತ ಸನ್ಮಾನಿತನಾಗುತ್ತಾನೆ.

ಅದನ್ನೇ ಕಗ್ಗ ಪ್ರಶ್ನಿಸುತ್ತದೆ. ದೊರೆಯ ವೇಷವನ್ನು ಧರಿಸಿದ ನೀನು ಅಹಂಕಾರದಿಂದ ಮೀಸೆ ತಿರುವಿ ಅಬ್ಬರಿಸುವೆಯಾ? ಭಿಕ್ಷೆ ಬೇಡುವ ಬಡಬ್ರಾಹ್ಮಣನಾಗಿ ದೈನ್ಯದಿಂದ ಮೀಸೆಯನ್ನು ಕೆಳಗೆ ಬಾಗಿಸುತ್ತೀಯಾ? ಕಗ್ಗ ತಿಳಿ ಹೇಳುತ್ತದೆ, ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಸ್ಥಾನಕ್ಕೆ ತಕ್ಕುದಾದ ಸ್ಥಾನ ಗೌರವವಿದೆ, ಆ ಸ್ಥಾನಕ್ಕೊಂದು ಧರ್ಮವಿದೆ. ಯಾವುದೂ ದೊಡ್ಡದಲ್ಲ, ಯಾವುದೂ ಸಣ್ಣದಲ್ಲ.

ಒಮ್ಮೆ ಹೂವು ಮತ್ತು ಬೇರಿನ ನಡುವೆ ಜಗಳ ನಡೆಯಿತಂತೆ. ಹೂವು ಅಹಂಕಾರದಿಂದ ಹೇಳಿತು, 'ಇಡೀ ಬಳ್ಳಿಗೆ ಬೆಲೆ ಬಂದದ್ದೇ ನನ್ನಿಂದ. ಜನ ಇದನ್ನು ಹಾಕುವುದು ಕೇವಲ ನನ್ನ ಸಲುವಾಗಿ. ನನ್ನನ್ನು ದೇವರ ಮುಡಿಗೇರಿಸುತ್ತಾರೆ, ದುಂಬಿಗಳಿಗೂ ನಾನೇ ಬೇಕು. ನಾನಿರುವುದರಿಂದ ನಿನಗೊಂದು ಬೆಲೆ'. ಬೇರು ಹೇಳಿತು, 'ಅಷ್ಟು ಗರ್ವ ಒಳ್ಳೆಯದಲ್ಲ. ಈ ಬಳ್ಳಿ, ನೀನು, ನಿನ್ನ ಪರಿಮಳ ಎಲ್ಲವೂ ಬಂದಿದ್ದು ನನ್ನಿಂದ. ಅದನ್ನು ಮರೆಯದಿರು'. ಹೂವಿನ ಅಹಂಕಾರಕ್ಕೆ ಪೆಟ್ಟು ಬಿತ್ತು. 'ಹೇ ಬೇರೇ, ನೀನು ಇದ್ದದ್ದು ಪ್ರಪಂಚಕ್ಕೆ ಗೊತ್ತಿಲ್ಲ. ಮಣ್ಣಿನಲ್ಲಿ ಹೂತು ಹೋದ ನಿನ್ನನ್ನು ಯಾರು ಕಂಡಾರು? ನಿನ್ನ ಸೊಬಗಿಲ್ಲ, ಸುವಾಸನೆ ಇಲ್ಲ. ನಿನಗಾಗಿ ಈ ಬಳ್ಳಿಯನ್ನು ಯಾರೂ ಪೋಷಿಸುವುದಿಲ್ಲ' ಎಂದು ಹರಿತ ಮಾತನಾಡಿತು. ಬೇರು ಮಾತನಾಡದೆ ನೀರು ಮತ್ತು ಜೀವಸತ್ವಗಳನ್ನು ಮೇಲಕ್ಕೆ ಕಳುಹಿಸುವುದನ್ನು ನಿಲ್ಲಿಸಿತು. ಮರುದಿನವೆ ಹೂವು ತಲೆ ಚೆಲ್ಲಿ ಒಣಗಿತು. ಬೇರೂ ಘನವೇ, ಹೂವೂ ಘನವೇ. ಕಗ್ಗ ಹೇಳುವಂತೆ ಪ್ರತಿಯೊಂದಕ್ಕೂ, ಪ್ರತಿಯೊಂದು ವ್ಯಕ್ತಿಗೂ ಅವರವರ ಸ್ಥಾನದ ಧರ್ಮವಿದೆ. ಋತುಮಾನ ಬದಲಾದಂತೆ ಮನುಷ್ಯನ ಬದುಕೂ ಬದಲಾಗುತ್ತದೆ. ಆ ಬದಲಾದ ಪರಿಸ್ಥಿತಿಯಂತೆ ಜವಾಬ್ದಾರಿಯಿಂದ ನಡೆದರೆ ಅದೇ ಸರಿಯಾದ ಅರಿವು.

ಪದಬಂಧ 4892

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಿಂದು ಸಹಿತವಾದ ವರ್ಣ (4)
3.ಈ ಪರಿಯಾಗಿ ಎಲ್ಲವನ್ನೂ ತ್ಯಜಿಸುವಿಕೆ! (4)
5.ಮಣಭಾರದ ಹೆಣವನ್ನು ಸಾಗಿಸಿದ ಸ್ಮಶಾನ (3)
7.ದೀಪದ ಕುಡಿ (2)
8.ಕಲ್ಪಿತ ಸಂಗತಿಯು ಕವಿತೆಯಲ್ಲಿದೆ! (2)
11.ನರಕಾಧಿಪತಿ ಇಲ್ಲಿದ್ದಾನೆ (2)
13.ಅಂಕೆ ಇಲ್ಲದ್ದಕ್ಕೇ ಈ ಸಂದೇಹ! (2)
14.ವಿರಳವಾಗಿ ಕಾಣುತ್ತಿರುವ ರಕ್ತ (3)
16.ಬರಿದಾದ ಕೈ (4)
17.ಈ ರೀತಿ ಕಡೆಗಣಿಸುವಿಕೆ (4)

ಮೇಲಿಂದ ಕೆಳಕ್ಕೆ

1.ಅಳತೆಗೆ ಮೀರಿದ ಸ್ಥಿತಿ (4)
2.ವೃಕ್ಷವಿಲ್ಲಿ ತಿರುವು ಮುರುವಾಗಿದೆ (2)
3.ಪಯಣದಲ್ಲಿ ಕಟ್ಟಿದ ಬಾಜಿ! (2)
4.ಗರ ಬಡಿದಂತಿರುವಾಕೆ ಪತಿವ್ರತೆ! (3)
6.ಒಂದೇ ವಂಶದವನು (3)
7.ಬೆಳಕಿನಿಂದ ಕೂಡಿದುದು (4)
9.ಹೊಗಳಿಕೆಯ ವಿರುದ್ಧ ಪದ (4)
10.ಚಾವಟಿ ಇಲ್ಲಿದೆ (3)
12.ಮರದೊಳಗಿರುವ ಸ್ವಾರ್ಥ ಕಾಣುತ್ತಿದೆಯೇ (4)
13.ಪಾರ್ವತಿಯ ಇನ್ನೊಂದು ಹೆಸರು (3)
14.ತಿರುವು ಮುರುವಾಗಿರುವ ಮಡಿಕೆ (2)
15.ತರಗತಿಯಲ್ಲಿರುವ ಸಮೂಹ (2)

1			2	■	3			4
	■	■	5	6		■	■	
	■	■	■		■	■	7	
8	9	■	■		■	■		■
■		■	■	■	■	■		■
■		■	■	10	■	■	11	12
13		■	■		■	■	■	
	■	■	14		15	■	■	
16				■	17			

4891ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಮಾಸ 5.ಖಂಡಗ್ರಹಣ 6.ಪರಾತ 7.ವಾಚನ 8.ವಾಗ್ಗೇಯಕಾರ 9.ಸಮಾಧಿ 10.ಸುಭಿಕ್ಷ 13.ಆಹ್ಲಾದಕರ 14.ಸಸ್ತಾ

ಮೇಲಿಂದ ಕೆಳಕ್ಕೆ: 1.ಅನುರೂಪ 2.ನಿಗ್ರಹ 4.ಸಮಾಧಾನ 5.ಖಂಡಿತವಾದಿ 7.ವಾರಸುದಾರ 9.ಸಮುಲ್ಲಾಸ 11.ಕ್ಷಮಾದಾನ 12.ಕದನ

ಸುಡೊಕು 5278

	6				7		1	
8		7	6		4			
	2			8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5277 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,863
ಇಂದಿನ ಅಂತ್ಯ	16,013
▲	150
ದಿನದ ಗರಿಷ್ಠ	16,028

ವಿನಿಮಯ ದರ

$ ಡಾಲರ್	77
£ ಪೌಂಡ್	100.68
€ ಯೂರೊ	83.5
¥ ಯೆನ್ (100ಕ್ಕೆ)	66.63

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹370
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹370

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ಫಿಲ್ಟರ್ಡ್)	₹1560 (1540)
ಸೋಯಾ (ಫಿಲ್ಟರ್ಡ್)	₹1565 (1565)
ಸೂರ್ಯಕಾಂತಿ (ಫಿಲ್ಟರ್ಡ್)	₹1725 (1700)
ಪಾಮೋಲಿನ್	₹1545 (1540)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ವಿಜಯಪುರ/ಬಂಗಾರಪೇಟೆ ವಿವಿಧ ಮಾರುಕಟ್ಟೆಗಳ ದರ (ಕ್ವಿಂಟಲ್‌ಗೆ ₹):

ಚಿಕ್ಕ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹರಿಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 500
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಚನ್ನಗಿರಿ
ರಾಶಿ 44599-45699
ಚಿತ್ರದುರ್ಗ
ಆಪಿ 45719-46129
ಬೆಟ್ಟೆ 36049-36459
ಕೆಂಪುಗೋಟು 30510-30990
ರಾಶಿ 45239-45669
ಕಾರ್ಕಳ
ಹೊಸತು 40000-45000
ಕುಂದಾಪುರ
ಹಳೆಚಾಲಿ 51500-52500
ಹೊಸಚಾಲಿ 43500-44500
ಪುತ್ತೂರು
ಕೋಕ 11000-26000

ಹೊಸತು 27500-45000
ಬಿಳಿಗೋಟು 14342-27229
ಚಾಲಿ 21872-37113
ಕೋಕ 13272-31209
ಕೆಂಪುಗೋಟು 18219-35389
ರಾಶಿ 39699-46109
ಸಿಪ್ಪೆಗೋಟು 5690-19299
ಶಿವಮೊಗ್ಗ
ಬೆಟ್ಟೆ 46690-50909
ಗೊರಬಲು 18169-33900
ರಾಶಿ 42869-45909
ಸರಕು 51009-76640
ಸಿದ್ದಾಪುರ
ಬಿಳಿಗೋಟು 21899-28399
ಚಾಲಿ 45969-45969
ಕೋಕ 21089-32599
ಹೊಸಚಾಲಿ 32689-39499

ಕೆಂಪುಗೋಟು 28689-37869
ರಾಶಿ 43909-46399
ತಟ್ಟಿಬೆಟ್ಟೆ 37019-44489
ಶಿರಸಿ
ಬೆಟ್ಟೆ 18899-45799
ಬಿಳಿಗೋಟು 22119-34539
ಚಾಲಿ 34629-41291
ರಾಶಿ 37699-47899
ತುಮಕೂರು
ರಾಶಿ 44500-45800
ಯಲ್ಲಾಪುರ
ಅಪಿ 54169-56920
ಬಿಳಿಗೋಟು26899-32799
ಚಾಲಿ 35699-41629
ಕೋಕ 18899-28812
ಕೆಂಪುಗೋಟು 28699-35168
ರಾಶಿ 46099-52189
ತಟ್ಟಿಬೆಟ್ಟೆ 38190-45709
ರಾಮನಗರ ರೇಷ್ಮೆ
ಮಿಶ್ರ ತಳಿ: ₹400-766
ದ್ವಿತಳಿ: ₹ 740-975

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ				ಹಾಸನ
	ಮುದ್ದೆಮನೆ	ಪ್ರಾಂಟಿಯರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15,600	15600	224.25ಸೆಂಟ್ಸ್
ಎಪಿ	7560	7,600	7,700	
ಆರ್‌ಪಿ	8100	8,000	8,450	ಲಂಡನ್
ಆರ್‌ಸಿ	4000	3,800	3,875	2035 ಡಾಲರ್ಸ್

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹18000-20000
2ನೇ ದರ್ಜೆ
₹10000-16000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹1500-2700
ಮಧ್ಯಮ	₹1000-1500
ಸಣ್ಣ	₹500-1000

ಮುಂಬೈ ಧಾರಣೆ

ಶೇಂಗಾ

08-03-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	8400-8500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1555)
ಒಂದು ವಾರದ ಡೆಲಿವರಿ	1565 (1545)
ಸೋಯಾ ಕಚ್ಚಾ	1550 (1560)
ಪಾಮ್ ವಾರದ ಡೆಲಿವರಿ	1542(1538)
ಸೂರ್ಯಕಾಂತಿ ಎಣ್ಣೆ ಕಚ್ಚಾ	-- (--)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ	53,450 (53,200)
ಬೆಳ್ಳಿ ಕೆ.ಜಿ	70,950 (70,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕಿರಣ್, ತುಮಕೂರು

● **ಪ್ರಶ್ನೆ:** ನಾನು ಬ್ಯಾಂಕ್ ಮೂಲಕ ಎಸ್‌ಐಪಿ ಮಾಡುತ್ತಿದ್ದೇನೆ. ಸ್ಮಾಲ್ ಕ್ಯಾಪ್ ಫಂಡ್ ಇದು. ಉಕ್ರೇನ್ ಯುದ್ಧದ ಕಾರಣದಿಂದಾಗಿ ಸಣ್ಣ ಕಂಪನಿಗಳಿಗೆ ತೊಂದರೆ ಜಾಸ್ತಿ ಎಂದು ಕೆಲವರು ಹೇಳುತ್ತಿದ್ದಾರೆ. ನನ್ನ ಎಸ್‌ಐಪಿ ಹೂಡಿಕೆ ಸಣ್ಣ ಕಂಪನಿಗಳಲ್ಲಿ ಹೆಚ್ಚಿರುವ ಕಾರಣ, ಯುದ್ಧದಿಂದಾಗಿ ನನ್ನ ಅಸಲು ಮೊತ್ತಕ್ಕೂ ಹಾನಿಯಾದರೆ ಎಂಬ ಆತಂಕ ಇದೆ. ಎಸ್‌ಐಪಿ ನಿಲ್ಲಿಸಬೇಕೇ? ಹಣ ಪೂರ್ತಿಯಾಗಿ ಹಿಂಪಡೆಯಲೇ?

ಉತ್ತರ: ಯಾವುದೇ ಹೂಡಿಕೆಯ ಮೂಲ ಉದ್ದೇಶ ಲಾಭ ಗಳಿಸುವುದೇ ಆಗಿರುತ್ತದೆ. ಈ ಸಾಮಾನ್ಯ ತಿಳಿವಳಿಕೆಯ ಜೊತೆಗೆ ಹೂಡಿಕೆ ಮಾಡುವಾಗ ಉಂಟಾಗುವ ನಷ್ಟದ ಸಾಧ್ಯತೆಯನ್ನೂ ಗಮನಿಸಬೇಕು. ನಷ್ಟ ಅಥವಾ ಹೂಡಿಕೆಯ ವೃದ್ಧಿಯಲ್ಲಿ ನಿರೀಕ್ಷಿತ ಪ್ರಗತಿ ಕಾಣದಿರುವುದಕ್ಕೆ ಹೂಡಿಕೆ ಮಾಡಿರುವ ಕಂಪನಿ, ಹೂಡಿಕೆ ಮಾಡಿದ ಕ್ಷೇತ್ರ, ದೇಶದ ರಾಜಕೀಯ ಸ್ಥಿರತೆ ಹಾಗೂ ಆರ್ಥಿಕ ಸ್ಥಿತಿಗತಿ, ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟುಗಳು ಪ್ರಧಾನವಾಗಿ ಕಾರಣವಾಗುವ ಅಂಶಗಳು. ಇದು ಮ್ಯೂಚುವಲ್ ಫಂಡ್‌ಗಳಿಗೂ ಅನ್ವಯಿಸುವ ವಿಚಾರ. ಕಾರಣ, ಇವುಗಳು ಕೂಡ ಒಟ್ಟು ಅರ್ಥ ವ್ಯವಸ್ಥೆ ಒಂದು ಭಾಗ. ಹೀಗಾಗಿ ಯಾವುದೇ ಹೂಡಿಕೆಯ ನಿರ್ಧಾರ ಕೈಗೊಳ್ಳುವ ಮೊದಲು, ಹೂಡಿಕೆದಾರರು ತಾವು ಅಲ್ಪಾವಧಿ, ಮಧ್ಯಮಾವಧಿ ಅಥವಾ ದೀರ್ಘಾವಧಿ ಹೂಡಿಕೆದಾರರೇ ಎಂಬುದನ್ನು ತಾವೇ ನಿರ್ಧರಿಸಿ ಮಾರುಕಟ್ಟೆಗೆ ಹಣ ತೊಡಗಿಸಬೇಕು. ನೀವು ದೀರ್ಘಾವಧಿ ಹೂಡಿಕೆದಾರರಾಗಿದ್ದಲ್ಲಿ ಚಿಂತೆ ಬಿಡಿ, ಹೂಡಿಕೆ ಮುಂದುವರಿಸಿ. ಈ ಹಿಂದಿನ ಹಲವು ವರ್ಷಗಳ ಅಂಕಿ-ಅಂಶ ನೋಡಿದಾಗ ತಿಳಿಯುವುದೇನೆಂದರೆ, ಮಾರುಕಟ್ಟೆ ಎಂದೂ ಮೂರು ವರ್ಷಗಳ ಅವಧಿಗಿಂತ ಹೆಚ್ಚು ಕಾಲ ಇಂತಹ ಒಂದು ಮಹತ್ತರ ಆಘಾತದಿಂದ ಚೇತರಿಸಿಕೊಳ್ಳದೆ ಮುಂದುವರಿಯುವ ಅವಕಾಶವೂ ಕಡಿಮೆ. ಅದಕ್ಕಿಂತ ಹೆಚ್ಚು ಕಾಲ ಮುಂದುವರಿಯುವ ಸಾಧ್ಯತೆಯೂ ಕಡಿಮೆ. ಇದು ದೀರ್ಘಾವಧಿಯಲ್ಲಿ ಬ್ಯಾಂಕ್‌ಗಳು ನೀಡುವ ಬಡ್ಡಿಗಿಂತ ಅಧಿಕ ಆದಾಯ ನೀಡಬಲ್ಲದು.

ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರಿಂದ ಬಂದ ಹಣವನ್ನು ಆಯಾ ಫಂಡ್‌ಗಳ ಒಟ್ಟು ಆಶಯಕ್ಕೆ ಅನುಗುಣವಾಗಿ ವಿವಿಧ ಕಂಪನಿಗಳ ಷೇರು, ಬಾಂಡ್ ಮತ್ತು ಅಲ್ಪಾವಧಿಯ ಸಾಲಗಳಲ್ಲಿ ವ್ಯವಸ್ಥಿತವಾಗಿ ಮರುಹೂಡಿಕೆ ಮಾಡುತ್ತವೆ. ಇದು ಮಾರುಕಟ್ಟೆ ಯಾವುದೇ ಸ್ಥಿತಿಯಲ್ಲಿದ್ದರೂ ಮ್ಯೂಚುವಲ್ ಫಂಡ್ ಕಂಪನಿಗಳು ವ್ಯವಹರಿಸುವ ಕ್ರಮ. ನಿಮ್ಮ ಎಸ್‌ಐಪಿ ಪಾವತಿಯಾಗುವ ಸಮಯದಲ್ಲಿ ಮಾರುಕಟ್ಟೆ ಕೆಳಮುಖವಾಗಿ ಸಾಗುತ್ತಿದ್ದರೆ, ಆ ಸಂದರ್ಭದಲ್ಲಿ ಅನ್ವಯಿಸುವ ಎನ್‌ಎವಿ ನಿಮಗೆ ಲಭ್ಯವಾಗುತ್ತದೆ. ಒಂದು ರೀತಿಯಲ್ಲಿ ಇದು ನಿಮ್ಮ ಈಗಾಗಲೇ ಅಧಿಕ ಬೆಲೆ ನೀಡಿ ಖರೀದಿಸಿರುವ ಮ್ಯೂಚುವಲ್ ಫಂಡ್ ಯುನಿಟ್‌ಗಳ ಸರಾಸರಿ ಖರೀದಿ ಬೆಲೆಯನ್ನು ತಗ್ಗಿಸುತ್ತದೆ ಮತ್ತು ಮಾರುಕಟ್ಟೆ ಮತ್ತೆ ಮೇಲ್ಮುಖವಾಗಿ ಸಾಗಿದಾಗ ವೇಗವಾಗಿ ಲಾಭದತ್ತ ಸಾಗಲು ನೆರವಾಗುತ್ತದೆ. ಇದುವೇ ಎಸ್‌ಐಪಿ ವೈಶಿಷ್ಟ್ಯ. ಒಂದೇ ಬಾರಿ ಹೂಡಿಕೆ ಮಾಡಿದರೆ ಹೆಚ್ಚಿನ ನಷ್ಟ ಆಗುವುದನ್ನು ಎಸ್‌ಐಪಿ ತಡೆಯುತ್ತದೆ. ಮಾತ್ರವಲ್ಲ, ಪ್ರತಿ ದಿನದ ಷೇರುಪೇಟೆಯ ಏರಿಳಿತಗಳನ್ನು ಅರ್ಥೈಸಿ ಹೂಡಿಕೆ ನಿರ್ಧಾರ ಕೈಗೊಳ್ಳಲು ಕಷ್ಟವಾಗುವ ಜನರಿಗೆ ಇದು ಉತ್ತಮ ಹೂಡಿಕೆ ವಿಧಾನ.

ಧನಂಜಯ, ಕೈಗಾರಿಕೆ

● **ಪ್ರಶ್ನೆ:** ನಾನು ಒಂದು ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನಾನು ಮನೆಯೊಂದನ್ನು ಕಟ್ಟಿಸುತ್ತಿದ್ದು ಮುಂದಿನ ಕೆಲವು ತಿಂಗಳಲ್ಲಿ ಅದರ ನಿರ್ಮಾಣ ಪೂರ್ಣಗೊಳ್ಳಲಿದೆ. ನಂತರ ಒಂದು ಮಹಡಿಯನ್ನು ಬಾಡಿಗೆಗೂ ನೆಲಮಹಡಿಯನ್ನು ಸ್ವಂತ ಉಪಯೋಗಕ್ಕೂ ಬಳಸಲಿದ್ದೇನೆ. ನಾನು ಗೃಹ ನಿರ್ಮಾಣಕ್ಕಾಗಿ ಸುಮಾರು ₹ 50 ಲಕ್ಷ ಸಾಲ ಪಡೆದಿದ್ದು ಪ್ರಥಕ್ಕೆ ಸುಮಾರು ₹ 5 ಲಕ್ಷ ಬಡ್ಡಿ ಕಟ್ಟುತ್ತಿದ್ದೇನೆ. ಆದರೆ ಆದಾಯ ತೆರಿಗೆಯಡಿ ₹ 2 ಲಕ್ಷ ಮಾತ್ರ ಬಡ್ಡಿ ವಿನಾಯಿತಿ ಇದೆ ಎಂದು ತಿಳಿದಿದ್ದೇನೆ. ಉಳಿದ ₹ 3 ಲಕ್ಷವನ್ನು ಯಾವುದಾದರೂ ರೀತಿಯಲ್ಲಿ ತೆರಿಗೆ ವಿನಾಯಿತಿ ಒಳಪಡಿಸುವ ಸಾಧ್ಯತೆ ಇದೆಯೇ?

ಉತ್ತರ: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 24, ಯಾವುದೇ ತೆರಿಗೆದಾರ ಗೃಹ ನಿರ್ಮಾಣಕ್ಕಾಗಿ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಲ್ಲಿ ಅದಾಯ ತೆರಿಗೆ ಲೆಕ್ಕ ಹಾಕುವಾಗ ₹ 2 ಲಕ್ಷದ ತನಕ ವಾರ್ಷಿಕ ಬಡ್ಡಿ ವಿನಾಯಿತಿ ಪಡೆಯಲು ಅವಕಾಶ ನೀಡುತ್ತದೆ. ಮಾಲೀಕರು ಅಥವಾ ಅವರ ಕುಟುಂಬವು ಸ್ವಂತ ವಾಸಕ್ಕೆ ಮನೆಯನ್ನು ಉಪಯೋಗಿಸುತ್ತಿದ್ದರೆ ಈ ಸೌಲಭ್ಯ ಸಿಗುತ್ತದೆ. ಇಂತಹ ಸಂದರ್ಭದಲ್ಲಿ ಆ ಮನೆಯಿಂದ ಶೂನ್ಯ ಆದಾಯ ಎಂದು ಪರಿಗಣಿಸಿ, ಸ್ವಂತ ಮನೆ ಕಟ್ಟಲು ಪಾವತಿಸುವ ₹ 2 ಲಕ್ಷದವರೆಗಿನ ಬಡ್ಡಿಯನ್ನು ನಷ್ಟ ಎಂದು ಪರಿಗಣಿಸಿ ಮಾಲೀಕರ ಯಾವುದೇ ಇತರ ಆದಾಯದೊಡನೆ ವಜಾ ಮಾಡಲಾಗುತ್ತದೆ.

ಮನೆಯ ಬೇರೆ ಬೇರೆ ಮಹಡಿಗಳು ಬಾಡಿಗೆಗೆ ಇದ್ದಾಗ, ಮೇಲೆ ಉಲ್ಲೇಖಿಸಿದ ₹ 2 ಲಕ್ಷದ ಮಿತಿ ಅನ್ವಯಿಸುವುದಿಲ್ಲ. ಬದಲಾಗಿ, ಆಯಾ ಮನೆಗೆ ಸಂಬಂಧಿಸಿದ ಬಡ್ಡಿ ಮೊತ್ತಕ್ಕೆ ಸಂಪೂರ್ಣ ವಿನಾಯಿತಿ ಸಿಗುತ್ತದೆ. ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ, ನಿಮ್ಮ ಸ್ವಂತಕ್ಕಾಗಿ ಬಳಸುವ ಮನೆ ಸಾಲದ ಮೇಲೆ ಕಟ್ಟುವ ಬಡ್ಡಿ ಮೊತ್ತಕ್ಕೆ ₹ 2 ಲಕ್ಷದ ತನಕ ಪೂರ್ಣ ವಿನಾಯಿತಿ ಇದೆ. ಮೊದಲ ಮಹಡಿಯನ್ನು ಬಾಡಿಗೆಗೆ ಕೊಟ್ಟ ಪಕ್ಷದಲ್ಲಿ, ಬಾಡಿಗೆ ಆದಾಯ ಘೋಷಿಸುವಾಗ ನೀವು ಕಟ್ಟುವ ಹೆಚ್ಚುವರಿ ಬಡ್ಡಿಯ ಸಂಪೂರ್ಣ ಲಾಭ ಪಡೆಯಬಹುದು. ಮಾತ್ರವಲ್ಲದೆ, ನೀವು ಮನೆ ಸಾಲ ಪಡೆದು ನಿರ್ಮಾಣ ಪೂರ್ಣಗೊಳಿಸುವ ತನಕದ ಬಡ್ಡಿ ಮೊತ್ತವನ್ನು, ಮೇಲೆ ಉಲ್ಲೇಖಿಸಿದ ನಿಯಮಕ್ಕೊಳಪಟ್ಟು, ತೆರಿಗೆ ಲೆಕ್ಕ ಹಾಕುವಾಗ ಮುಂದಿನ ಐದು ವರ್ಷ ಸಮನಾಗಿ ವಿನಾಯಿತಿ ಪಡೆಯಬಹುದು. ಇಷ್ಟೇ ಅಲ್ಲದೆ, ನೀವು ಮುಂದಿನ ದಿನಗಳಲ್ಲಿ ಬಾಡಿಗೆಗೆ ಕೊಡುವ ಮನೆಗೆ ಕಟ್ಟುವ ಆಸ್ತಿ ತೆರಿಗೆಯೂ ವಿನಾಯಿತಿ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಫೀಚರ್ ಫೋನ್‌ಗಳಲ್ಲಿ ಯುಪಿಐ ಸೇವೆ

ಮುಂಬೈ (ಪಿಟಿಐ): ಸ್ಮಾರ್ಟ್‌ಫೋನ್ ಮೂಲಕ ಹಣ ಪಾವತಿಗೆ ಅವಕಾಶ ಕಲ್ಪಿಸುವ ಏಕೀಕೃತ ಪಾವತಿ ವ್ಯವಸ್ಥೆಯನ್ನು (ಯುಪಿಐ) ಆರಂಭಿಸಿ ಸರಿಸುಮಾರು ಆರು ವರ್ಷಗಳ ನಂತರದಲ್ಲಿ, ಈ ಸೌಲಭ್ಯದ ಬಳಕೆಯನ್ನು ಫೀಚರ್ ಫೋನ್‌ಗಳಲ್ಲಿಯೂ ಸಾಧ್ಯವಾಗಿಸುವ ಹೊಸ ಸೇವೆಯೊಂದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅವರು ಮಂಗಳವಾರ ಚಾಲನೆ ನೀಡಿದ್ದಾರೆ.

ದೇಶದಲ್ಲಿ ಫೀಚರ್ ಫೋನ್ ಬಳಸುವವರ ಸಂಖ್ಯೆಯು 40 ಕೋಟಿಗಿಂತ ಹೆಚ್ಚು ಎಂಬ ಅಂದಾಜು ಇದೆ. ಯುಪಿಐ ವ್ಯವಸ್ಥೆಯನ್ನು ರೂಪಿಸಿರುವ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ), ಯುಎಸ್‌ಎಸ್‌ಡಿ ಆಧಾರಿತ ಯುಪಿಐ ವ್ಯವಸ್ಥೆಯನ್ನು ಫೀಚರ್ ಫೋನ್‌ಗಳಿಗೆ ಈಗಾಗಲೇ ನೀಡಿತ್ತು. ಆದರೆ, ಯುಎಸ್‌ಎಸ್‌ಡಿ ಮೂಲಕ ಇದನ್ನು ಬಳಕೆ ಮಾಡುವುದು ತ್ರಾಸದಾಯಕ ಆಗಿತ್ತು.

ಶಕ್ತಿಕಾಂತ ದಾಸ್

'ಈ ಸೌಲಭ್ಯವನ್ನು ಎಲ್ಲ ದೂರಸಂಪರ್ಕ ಕಂಪನಿಗಳು ಬಳಕೆದಾರರಿಗೆ ನೀಡಿಲ್ಲದಿರುವುದು ಇದು ಒಂದು ಅಡೆತಡೆ' ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಟಿ. ರವಿಶಂಕರ್ ಹೇಳಿದರು. 'ಯುಪಿಐ 123ಪೇ ಸೇವೆಯು ಇದುವರೆಗೆ ಡಿಜಿಟಲ್ ಪಾವತಿ ಜಗತ್ತಿನಿಂದ ಹೊರಗುಳಿದಿದ್ದವರಿಗೂ ಯುಪಿಐ ಸೌಲಭ್ಯವು ಇನ್ನು ಮುಂದೆ ಸಿಗಲಿದೆ' ಎಂದು ದಾಸ್ ತಿಳಿಸಿದರು.

ಐವಿಆರ್ ಸಂಖ್ಯೆಗೆ ಕರೆಮಾಡಿ, ಫೀಚರ್ ಫೋನ್‌ಗಳಲ್ಲಿ ಇರುವ ಆ್ಯಪ್ ಬಳಸಿ ಅಥವಾ ಮಿಸ್ಡ್ ಕಾಲ್ ನೀಡಿ ಹಣ ಪಾವತಿಸಲು ಇನ್ನು ಸಾಧ್ಯವಾಗಲಿದೆ ಎಂದು ಆರ್‌ಬಿಐ ಹೇಳಿದೆ. ಫೀಚರ್ ಫೋನ್ ಬಳಸಿ ಸ್ನೇಹಿತರಿಗೆ ಹಣ ವರ್ಗಾವಣೆ ಮಾಡಬಹುದು, ಬಿಲ್ ಪಾವತಿಸಬಹುದು, ವಾಹನಗಳ ಫಾಸ್ಟ್ಯಾಗ್‌ಗೆ ಹಣ ಭರ್ತಿ ಮಾಡಿಕೊಳ್ಳಬಹುದು, ಬ್ಯಾಂಕ್ ಖಾತೆಯಲ್ಲಿರುವ ಹಣ ಎಷ್ಟು ಎಂಬುದನ್ನು ಪರಿಶೀಲಿಸಬಹುದು ಎಂದು ಆರ್‌ಬಿಐ ಹೇಳಿದೆ.

ದಾಸ್ ಅವರು ಇದೇ ಸಂದರ್ಭದಲ್ಲಿ ಡಿಜಿಸಾಥಿ ಹೆಸರಿನ ಸಹಾಯವಾಣಿಗೆ ಚಾಲನೆ ನೀಡಿದರು. ಡಿಜಿಟಲ್ ಪಾವತಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಇದರ ಮೂಲಕ ನೆರವು ಪಡೆಯಬಹುದು. ವೆಬ್‌ಸೈಟ್ ವಿಳಾಸ: www.digisaathi.info. ದೂರವಾಣಿ ಸಂಖ್ಯೆ: 14431 ಮತ್ತು 1800 891 3333.

ಸಿಎನ್‌ಜಿ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ದೆಹಲಿ ಮತ್ತು ಸುತ್ತಲಿನ ನಗರಗಳಲ್ಲಿ ಸಿಎನ್‌ಜಿ ಬೆಲೆಯನ್ನು ಕೆ.ಜಿ.ಗೆ 50 ಪೈಸೆಯಷ್ಟು ಹೆಚ್ಚಿಸಲಾಗಿದೆ.

ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯು ಯಾವ ಹಂತ ತಲುಪಲಿದೆ ಎಂಬುದನ್ನು ಗಮನಿಸಿ, ಪೆಟ್ರೋಲ್, ಡೀಸೆಲ್ ಬೆಲೆಯನ್ನು ತೀರ್ಮಾನಿಸಲಾಗುವುದು ಎಂದು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟಾರ್ ರೇಟಿಂಗ್ ವಾಟರ್ ಹೀಟರ್ ಬಿಡುಗಡೆ

ಬೆಂಗಳೂರು: ಸೌರಶಕ್ತಿ ಆಧರಿಸಿ ಕೆಲಸ ಮಾಡುವ ವಾಟರ್ ಹೀಟರ್‌ಗಳನ್ನು ತಯಾರಿಸುವ ಸುದರ್ಶನ್ ಸೌರ್ ಕಂಪನಿಯು ಕೇಂದ್ರ ಸರ್ಕಾರದ ಇಂಧನ ಕ್ಷಮತೆ ಬ್ಯೂರೊದಿಂದ (ಬಿಇಇ) ಮೂರು ಸ್ಟಾರ್ ರೇಟಿಂಗ್ ಪಡೆದಿರುವ ಸೋಲಾರ್ ವಾಟರ್ ಹೀಟರ್‌ಗಳನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಉತ್ಪನ್ನ ಬಿಡುಗಡೆ ಮಾಡಲಾಯಿತು. ಕೇಂದ್ರ ಸರ್ಕಾರದ ಇಂಧನ ಸಚಿವಾಲಯದ ಅಡಿಯಲ್ಲಿ ಕೆಲಸ ಮಾಡುವ ಬಿಇಇ ಈ ರೇಟಿಂಗ್ ನೀಡಿದೆ ಎಂದು ಕಂಪನಿ ತಿಳಿಸಿದೆ.

'ಇದೇ ಮೊದಲ ಬಾರಿಗೆ ಸೋಲಾರ್ ವಾಟರ್ ಹೀಟರ್‌ಗೆ ಈ ರೀತಿಯ ರೇಟಿಂಗ್ ದೊರೆತಿದೆ. ರೇಟಿಂಗ್ ಪಡೆದ ಮೊದಲಿಗರು ನಾವು' ಎಂದು ಕೂಡ ಕಂಪನಿ ಹೇಳಿದೆ.

ಸ್ಟಾರ್ ರೇಟಿಂಗ್ ವ್ಯವಸ್ಥೆಯು ಗ್ರಾಹಕರಿಗೆ ಅವರು ನೀಡುವ ಹಣಕ್ಕೆ ಉತ್ತಮ ಉತ್ಪನ್ನ ಸಿಗುತ್ತದೆ ಎಂಬುದನ್ನು ಖಾತರಿಪಡಿಸುತ್ತದೆ. ಈ ಉತ್ಪನ್ನಕ್ಕೆ 10 ವರ್ಷಗಳ ಗ್ಯಾರಂಟಿ ಕೂಡ ಇದೆ ಎಂದು ಕಂಪನಿಯು ತಿಳಿಸಿದೆ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರವಿ ಕುಲಕರ್ಣಿ ಮತ್ತು ಇತರರು ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸಂಕ್ಷಿಪ್ತ ಸುದ್ದಿ

'ತೈಲ ಬೆಲೆ: ಜನಹಿತ ಗಮನಿಸಿ ಕ್ರಮ'

ನವದೆಹಲಿ (ಪಿಟಿಐ): 'ಇಂಧನ ದರ ಏರಿಕೆಯ ಬಗ್ಗೆ ತೈಲ ಮಾರಾಟ ಕಂಪನಿಗಳು ತೀರ್ಮಾನಿಸುತ್ತವೆ. ಜನಸಾಮಾನ್ಯರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಕೇಂದ್ರ ಸರ್ಕಾರವು ನಿರ್ಧಾರ ಕೈಗೊಳ್ಳುತ್ತದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

'ದೇಶದಲ್ಲಿ ಕಚ್ಚಾ ತೈಲದ ಕೊರತೆ ಆಗುವುದಿಲ್ಲ ಎಂದು ಭರವಸೆ ನೀಡುತ್ತಿದ್ದೇನೆ' ಎಂದು ಅವರು ಹೇಳಿದ್ದಾರೆ. ದೇಶದಲ್ಲಿ ಚುನಾವಣೆಯ ಕಾರಣಕ್ಕೆ ತೈಲೋತ್ಪನ್ನಗಳ ಬೆಲೆ ತಗ್ಗಿಸಲಾಗಿತ್ತು ಎಂಬ ಆರೋಪದಲ್ಲಿ ಹುರುಳಿಲ್ಲ ಎಂದು ಕೂಡ ಹೇಳಿದ್ದಾರೆ.

ಚಿನ್ನ ₹ 406 ತುಟ್ಟಿ

ನವದೆಹಲಿ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು ಮಂಗಳವಾರ 10 ಗ್ರಾಂಗೆ ₹ 406ರಷ್ಟು ಹೆಚ್ಚಳವಾಗಿ, ₹ 53,812ಕ್ಕೆ ತಲುಪಿದೆ. ಬೆಳ್ಳಿಯ ಬೆಲೆಯು ₹ 985ರಷ್ಟು ಹೆಚ್ಚಳ ಆಗಿ ₹ 71,297ಕ್ಕೆ ತಲುಪಿದೆ.

ಕನಿಷ್ಠ ಮಟ್ಟದಲ್ಲಿ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಮಂಗಳವಾರ ಏಳು ಪೈಸೆ ಕುಸಿತ ಕಂಡು ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 77ಕ್ಕೆ ತಲುಪಿದೆ. ಕಚ್ಚಾ ತೈಲದ ಬೆಲೆ ಏರಿಕೆ, ರಷ್ಯಾ-ಉಕ್ರೇನ್ ಯುದ್ಧವು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗಿವೆ.

ದಿ|| ಶ್ರೀ. ಸಿ.ಎಂ. ನಾಗರಾಜ್

ಜನನ: 09-03-1942 ನಿಧನ: 18-08-2008

ಮಾಜಿ ಮಹಾಪೌರರು, ಮಹಾನಗರ ಪಾಲಿಕೆ, ಬೆಂಗಳೂರು.
ಸಂಸ್ಥಾಪಕ ಅಧ್ಯಕ್ಷರು,
ಈಸ್ಟ್ ವೆಸ್ಟ್ & ಎಸ್.ವಿ.ಎನ್. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್,
ರಾಜಾಜಿನಗರ, ಬೆಂಗಳೂರು.

80ನೇ ಹುಟ್ಟುಹಬ್ಬ ಹಾಗೂ ಸಂಸ್ಥಾಪಕರ ದಿನ
09-03-2022

ಶಿಕ್ಷಣ ಭೀಷ್ಮ, ಶ್ರೇಷ್ಠ ವಿದ್ಯಾದಾನಿ ಮತ್ತು ನಮ್ಮ ನಲ್ಮೆಯ ಸಂಸ್ಥಾಪಕ ಅಧ್ಯಕ್ಷರಾದ ದಿವಂಗತ ಶ್ರೀ ಸಿ.ಎಂ. ನಾಗರಾಜ್‌ರವರ 80ನೇ ಹುಟ್ಟುಹಬ್ಬ ಹಾಗೂ ಸಂಸ್ಥಾಪಕರ ದಿನವನ್ನಾಗಿ ಆಚರಿಸುವ ಈ ಸಂದರ್ಭದಲ್ಲಿ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಕೋರುತ್ತೇವೆ.

ಕಾರ್ಯದರ್ಶಿಗಳು, ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಶಿಕ್ಷಕವೃಂದ, ವಿದ್ಯಾರ್ಥಿಗಳು, ಸಿಬ್ಬಂದಿವರ್ಗದವರು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

SVM-21204-KAN

ಸವಿನೆನಪು

ಶ್ರೀಮತಿ. ದ್ರಾಕ್ಷಾಯಿಣಿ. ಹೆಚ್ ಮತ್ತು ಕುಮಾರಿ ವಿನುತ. ಎಲ್
ನಿಧನ: 09-03-2019

"ನಿಮ್ಮ ಸ್ವರ್ಗೀಯ ನೆನಪು ಸದಾ ವಸಂತ, ನಿಮ್ಮ ಸ್ಮರಣೆಯೇ ನಮ್ಮ ಜೀವನದ ದೀಪೋತ್ಸವ"

ಸದಾ ಸ್ಮರಿಸುವ
ಶ್ರೀ ಲವಕುಮಾರ್. ವಿ ಮತ್ತು ಕುಟುಂಬದವರು
ಮನ್ನಾರಾಯನ ಪಾಳ್ಯ, ಆರ್.ಟಿ.ನಗರ ಬೆಂಗಳೂರು.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME
ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲಿಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

SURVEY DEPARTMENT
ಯು.ಪಿ.ಓ.ಆರ್ ಪ್ರೋಜೆಕ್ಟಿಗೆ ಬಾಂಡು ಆಧಾರದ ಮೇಲೆ ಕೆಲಸಕ್ಕೆ ಆಧಾರದಲ್ಲಿ 25 ಅಭ್ಯರ್ಥಿಗಳು ಬೇಕಾಗಿದ್ದಾರೆ ಕನಿಷ್ಠ ವಿದ್ಯಾಹರ್ತೆ 1.ವಿದ್ಯಾರ್ಹತೆ: 7ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು 2.ವಯಸ್ಸು 50 ವರ್ಷಕ್ಕಿಂತ ಕಡಿಮೆ 3.ಫಿಟ್ನೆಸ್ ಯಾವುದೇ ಅಂಗವಿಕಲತೆ ದೇಹದ ದೌರ್ಬಲ್ಯವಿಲ್ಲದೆ ಕೆಲಸಕ್ಕೆ ಬೇಕಾಗಿ ಸಧ್ಯದಾರಂಭಿಸಬೇಕು : 09740704750

'REQUIRED LIBRARIANS, Male/ Female Hostel Wardens /Computer Operator/ Office / Residential/ Marketing/ Hospital Staffs/ Bus Drivers/ Science/ Maths/ English/ PT Teachers. Only Freshers Contact: K.T.G College, Hegganhalli Cross, Bengaluru-560091 E-mail: ktgcolleges@gmail.com Mob: 9845051023/ 9880453539'

ಬೇಕಾಗಿದ್ದಾರೆ ಟೊಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 9035363706, 9035364696

Accounts & Finance

WANTED ACCOUNTANT (Experienced) for Jewellery Showroom at Basaveshwara Nagar with Tally Knowledge Contact: 9008052173/ 9880320431

Cook

ಸಕಲೇಶ್ವರದ ರೆಸಾರ್ಟ್‌ಗೆ ಉತ್ತರ ಮತ್ತು ದಕ್ಷಿಣ ಭಾರತ ಶೈಲಿಯ ಅಡುಗೆ ಮಾಡಲು ನುರಿತ ಭಟ್ಟರು, ಮತ್ತು ಸಹಾಯಕರು ಬೆಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ:9448007111

ಬೆಂಗಳೂರಿನಲ್ಲಿರುವ ಮನೆಗೆ ಸ್ವಾಹಾರಿ ಅಡುಗೆ ಮಾಡುವ ಹೆಂಗಸು ಬೇಕಾಗಿದ್ದಾರೆ. ಊಟ, ವಸತಿ ಉಚಿತ, ಸಂಬಳ ರೂ. 15,000 ಸಂಪರ್ಕಿಸಿ: 9880855005

Marketing & Sales

URGENTLY REQUIRED: Field Sales Executive & Telemarketing Executive. Earn Rs. 25000 per month + Incentives. Position for graduates. Whatsapp/ Call: 7303996850

WANTED SALES EXECUTIVE/ HELPER for Jewellery Showroom at Basaveswarnagar with Good Communications Skills: 9008052173/ 9880320431

HINDBRO PIPES & WATER TANKS
JOB JOB JOB BANGALORE UNIT
MARKETING & SALES EXECUTIVE
2-3 years of experience in same trade preferred
Salary as per Company policy
All Karnataka Area
9538669090
Head office: Delhi
Email: hpl@hindbro.com

Multiple Vacancy

ಬೆಂಗಳೂರಿನ ಹತ್ತಿರವಿರುವ ಆಶ್ರಮಕ್ಕೆ ಸ್ಕೂಲಿಟೀಚ, ಹೌಸ್ ಕೀಪಿಂಗ್ ಕೆಲಸಗಳಿಗೆ ಗಂಡಸರು ಮತ್ತು ಹೆಂಗಸರು ಬೇಕಾಗಿದ್ದಾರೆ. ವಸತಿ ಉಚಿತ, ಸೂಕ್ತ ಸಂಬಳ. 9880855005

Part-Time Jobs

ಕನ್ನಡ ಮತ್ತು ಇಂಗ್ಲಿಷ್ ಓದಲು, ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೇ ಕುಳತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಇದೆ). 8884686861, 8884686860.

Wanted

ಆಯಾ ಬೇಕಾಗಿದ್ದಾರೆ ಚಿತ್ರಕೂಟ ಶಾಲೆಗೆ. ಸಂಬಳ 8000 ದಿಂದ 11000 ವರೆಗೆ. ಸ್ಥಳ: ನಾಗದೇವನಹಳ್ಳಿ, ರಿಂಗ್ ರೋಡ್, ವಿಶ್ವವಿದ್ಯಾಲಯ ಹಿಂಭಾಗ ಬೆಂಗಳೂರು56 ವೆ: 7829647333

ವ್ಯಾಪಾರ

Business Offers

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್,30/04/22 ವೈಷ್ಣೋದೇವಿ, ಕುಲು, ಮನಾಲಿ. 19/04/22 ಗುಜರಾತ್ ಸೋಮನಾಥ್, ನಾಗನಾಥ, ದ್ವಾರಕ. 12/05/22 ಚಾರ್‌ಧಾಮ್ ಯಾತ್ರಾ. 9964527782

Travel

23.03.2022, 19.04.2022, 18.05.2022 ಶ್ರೀಲಂಕಾ 8ದಿನಗಳು. 30.03.2022, 12.04.2022, 15.05.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 16.04.2022 ಗುಜರಾತ್ 8ದಿನಗಳು. 12.04.2022, 27.04.2022,04.05.2022 ಶಿಮ್ಲಾ,ಕುಲುಮನಾಲಿ 8ದಿನಗಳು. 22.04.2022,16.05.2022 ರಾಮೇಶ್ವರ, ಚಿದಂಬರ, ಮದುರೈ 6ದಿನಗಳು. ಮಲೆನಾಡು ಪ್ರವಾಸ 2/3 ದಿನಗಳು. ಇದ್ದಲ್ಲದೆ ಕಸ್ಟಮೈಸ್ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವೆಲ್, ಬೆಂಗಳೂರು-03. 9448402248, 7022547922

8 ದಿನಗಳ ಶಿರಡಿ ಪ್ರವಾಸ 16-03-2022, 7ದಿನಗಳ ಕೇರಳ ಪ್ರವಾಸ 18-04-2022, 5ದಿನಗಳ ಶ್ರೀಶೈಲ,ಅಹೋಬಿಲ ಪ್ರವಾಸ 11-04-2022, 8/10 ದಿನಗಳ ಕಾಶ್ಮೀರ್, ವೈಷ್ಣೋದೇವಿ ಪ್ರವಾಸ 11-04-2022, 18-04-2022,02-05-2022, 11ದಿನಗಳ ಅಮರನಾಥ್‌ಯಾತ್ರಾ 04-07-2022, 18-07-2022,11 ದಿನಗಳ ಕೊಲ್ಕತಾ, ಡಾರ್ಜಲಿಂಗ್ 05-05-2022, 7/12 ದಿನಗಳ ಕುಲುಮನಾಲಿ, 19-04-2022, 03-05-2022, 6 /7 ದಿನಗಳ ಕಾಶಿಯಾತ್ರೆ 18-04-2022, 02-05-2022, 16-05-2022, ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9880847001, 9342848791

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 15.03.2022 ರಿಂದ 8/10 ದಿನಗಳ ಗುಜರಾತ್, ರಾಜಸ್ಥಾನ್. 11.04.2022, 17.04.2022 ರಿಂದ 11ದಿನಗಳ ಕಾಶಿ, ನೇಪಾಳ. 17.04.2022, 22.04.2022 ರಿಂದ 13/7 ದಿನಗಳ ಕಾಶಿ,ಗಯಾ,ಅಲಹಾಬಾದ್. 12.04.2022,27.04.2022 ರಿಂದ 9/12 ದಿನಗಳ ಕಾಶ್ಮೀರ್, ವೈಷ್ಣೋದೇವಿ, ಅಮೃತ್-ಸರ್. 12.05.2022, 26.05.2022 ರಿಂದ 13/15 ದಿನಗಳ ಚಾರ್‌ಧಾಮ್-ಯಾತ್ರೆ. 25.04.2022, 07.05.2022 ರಿಂದ 12ದಿನಗಳ ಶಿಮ್ಲಾ,ಕುಲುಮನಾಲಿ. ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837, 8088887677

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರ್ವಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ಹಿಮಾಲಯ ಋಷಿಕೇಶ, ಹರಿದ್ವಾರ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ,/ಹಿಮಾ ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್ ಯಾತ್ರೆ, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸಾಧಿ ಟ್ರಾವಲ್ಸ್' 080-22429289, 9448119290, 9019301300

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್,ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

||ಯಲ್ಲಮ್ಮ ದೇವಿ ಜ್ಯೋತಿಷ್ಯ ಪೀಠಂ||ವಶೀಕರಣ ಸ್ಪೆಷಲಿಸ್ಟ್ ಕ್ಕೊಳಗಾದ ಪ್ರಯತ್ನ ದೈವಾಂಶ ಮೋಡಿಮಾಡಿಕೊಡು 'ಇಷ್ಟಪಟ್ಟವರು ನಿಮ್ಮವರಾಗಲು ನಿಮ್ಮ ಸಕಲಸಮಸ್ಯೆಗಳಿಗೆ ಪರಿಹಾರ.'ಅಸಾಧ್ಯವಾದದ್ದು ಇಲ್ಲಿ ಸಾಧ್ಯ'*.9535883556

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾಗುವ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm	Single Col	Double Col	Multi Col	
	430	450	475	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

‘ಚುನಾವಣೋತ್ತರ ನಿರ್ವಹಣೆ’: ಕಾಂಗ್ರೆಸ್‌ನಿಂದ ವೀಕ್ಷಕರ ನಿಯೋಜನೆ

ಭೂಪೇಶ್ ಬಘೇಲ್

ಅಜಯ್ ಮಾಕೆನ್

ನವದೆಹಲಿ: ಐದು ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆಗಳ ಫಲಿತಾಂಶಕ್ಕೆ ಕ್ಷಣಗಣನೆ ಆರಂಭವಾಗಿರುವಂತೆಯೇ, ಕಾಂಗ್ರೆಸ್ ಪಕ್ಷವು ಉತ್ತರಾಖಂಡ, ಗೋವಾ, ಪಂಜಾಬ್ ಹಾಗೂ ಮಣಿಪುರಕ್ಕೆ ಹಿರಿಯ ನಾಯಕರನ್ನು ಕಳಿಸಿದೆ ಎಂದು ಮೂಲಗಳು ಮಂಗಳವಾರ ಹೇಳಿವೆ.

ಗೋವಾದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದ್ದು, ಚುನಾವಣೋತ್ತರ ಸಮೀಕ್ಷೆಗಳು ‘ಅತಂತ್ರ ವಿಧಾನಸಭೆ’ಯ ಭವಿಷ್ಯ ನುಡಿದಿರುವ ಕಾರಣ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಗೋವಾಕ್ಕೆ ವಿಶೇಷ ವೀಕ್ಷಕರನ್ನಾಗಿ ನಿಯೋಜನೆ ಮಾಡಲಾಗಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್, ಛತ್ತೀಸಗಡ ಆರೋಗ್ಯ ಸಚಿವ ಟಿ.ಎಸ್.ಸಿಂಗ್ ದೇವ್ ಹಾಗೂ ವಿನ್ಸೆಂಟ್ ಪಾಲಾ ಅವರನ್ನು ಮಣಿಪುರಕ್ಕೆ ‘ಚುನಾವಣೋತ್ತರ ನಿರ್ವಹಣೆ’ಗಾಗಿ ನಿಯೋಜನೆ ಮಾಡಲಾಗಿದೆ ಎಂದೂ ಮೂಲಗಳು ಹೇಳಿವೆ.

ಪಂಜಾಬ್‌ಗೆ ವೀಕ್ಷಕರನ್ನಾಗಿ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕೆನ್ ಹಾಗೂ ವಕ್ತಾರ ಪವನ್ ಖೇರಾ ಅವರನ್ನು ನಿಯೋಜಿಸಲಾಗಿದೆ. ಖೇರಾ ಅವರು ಈಗಾಗಲೇ ಚಂಡೀಗಡ ತಲುಪಿದ್ದರೆ, ಮಾಕೆನ್ ಅವರು ಬುಧವಾರ ತೆರಳಲಿದ್ದಾರೆ ಎನ್ನಲಾಗಿದೆ.

ಉತ್ತರಾಖಂಡದಲ್ಲಿಯೂ ಅತಂತ್ರ ವಿಧಾನಸಭೆ ಪರಿಸ್ಥಿತಿ ನಿರ್ಮಾಣವಾದಲ್ಲಿ, ‘ಶಾಸಕರ ನಿರ್ವಹಣೆ’ಯ ಹೊಣೆಯನ್ನು ರಾಜ್ಯಸಭಾ ಸದಸ್ಯ ದೀಪಿಂದರ್ ಹೂಡಾ ಅವರಿಗೆ ವಹಿಸಲಾಗಿದೆ. ಈ ಕಾರ್ಯದಲ್ಲಿ ಅವರಿಗೆ ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ನೆರವಾಗಲಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

‘ಶಾಸಕರು ಬೇರೆ ಪಕ್ಷಗಳತ್ತ ಹೋಗದಂತೆ ತಡೆಯುವ ಸಲುವಾಗಿ ಅವರನ್ನು ಪಕ್ಷದ ಆಡಳಿತ ಇರುವ ರಾಜ್ಯಗಳಾದ ರಾಜಸ್ಥಾನ ಮತ್ತು ಛತ್ತೀಸಗಡಕ್ಕೆ ಸ್ಥಳಾಂತರಿಸಲು ಯೋಜನೆ ಸಿದ್ಧವಾಗಿದೆ. ಶಾಸಕರನ್ನು ರಾಜಸ್ಥಾನಕ್ಕೆ ಸ್ಥಳಾಂತರಗೊಳಿಸುವ ಸನ್ನಿವೇಶ ಎದುರಾದಲ್ಲಿ, ಕೈಗೊಳ್ಳಬೇಕಾದ ವ್ಯವಸ್ಥೆಯನ್ನು ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಈಗಾಗಲೇ ಪರಿಶೀಲಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ಗೋಧಿ ರಫ್ತು: ಅವಕಾಶದ ಸದ್ಬಳಕೆಗೆ ಮೋದಿ ಸಲಹೆ

ನವದೆಹಲಿ: ‘ರಷ್ಯಾ ಹಾಗೂ ಉಕ್ರೇನ್ ನಡುವಿನ ಯುದ್ಧದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಗೋಧಿಗೆ ಬೇಡಿಕೆ ಹೆಚ್ಚಿದ್ದು, ಪೂರೈಕೆ ಸಾಧ್ಯವಾಗುತ್ತಿಲ್ಲ. ದೇಶದ ಉದ್ದಿಮೆದಾರರು ಗೋಧಿ ರಫ್ತು ಕ್ಷೇತ್ರದಲ್ಲಿ ಒದಗಿರುವ ಈ ಅವಕಾಶದ ಸದ್ಬಳಕೆ ಮಾಡಿಕೊಳ್ಳಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ವೆಬಿನಾರ್‌ನಲ್ಲಿ ಮಾತನಾಡಿದ ಅವರು, ರಫ್ತು-ಆಮದು ಇಲಾಖೆ, ಉದ್ಯಮಿಗಳು, ರಫ್ತುದಾರರು, ಹಣಕಾಸು ಸಂಸ್ಥೆಗಳಿಗೆ ಈ ಕುರಿತು ಸಲಹೆ ನೀಡಿದ್ದಾರೆ.

‘ಈ ಅವಕಾಶವನ್ನೇ ಸಮರ್ಥವಾಗಿ ಬಳಸಿಕೊಂಡು, ಗುಣಮಟ್ಟದ ಗೋಧಿ ಹಾಗೂ ಸೇವೆಯನ್ನು ಒದಗಿಸಿದ್ದೇಯಾದಲ್ಲಿ, ವಿಶ್ವದ ಹಲವಾರು ರಾಷ್ಟ್ರಗಳು ಮುಂದಿನ ದಿನಗಳಲ್ಲಿ ಗೋಧಿಗಾಗಿ ಭಾರತವನ್ನೇ ಅವಲಂಬಿಸಲಿವೆ’ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.ಗೋಧಿ ಬೆಳೆಯುವಲ್ಲಿ ಜಗತ್ತಿನಲ್ಲಿಯೇ ಭಾರತಕ್ಕೆ ಎರಡನೇ ಸ್ಥಾನ ಇದೆ. ಆದರೆ, ರಫ್ತು ವಿಷಯಕ್ಕೆ ಬಂದಾಗ, ಈ ಪ್ರಮಾಣ ಶೇ 1ಕ್ಕಿಂತಲೂ ಕಡಿಮೆ ಇದೆ. ಇನ್ನೊಂದೆಡೆ, ಜಾಗತಿಕವಾಗಿ ರಫ್ತಾಗುವ ಗೋಧಿಯ ಪ್ರಮಾಣದಲ್ಲಿ, ರಷ್ಯಾ ಹಾಗೂ ಉಕ್ರೇನ್ ಪಾಲು ಒಟ್ಟು ಶೇ 25ರಷ್ಟಿದೆ.

ರಾಜ್ಯದ ಇಬ್ಬರಿಗೆ ನಾರಿಶಕ್ತಿ ಪುರಸ್ಕಾರ

ನವದೆಹಲಿ(ಪಿಟಿಐ): ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಕರ್ನಾಟಕದ ಇಬ್ಬರು ಸಾಧಕಿಯರು ಸೇರಿದಂತೆ 29 ಮಹಿಳಾ ಸಾಧಕಿಯರಿಗೆ (2020 ಮತ್ತು 2021ನೇ ಸಾಲಿನ) ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮಂಗಳವಾರ ನಾರಿಶಕ್ತಿ ಪುರಸ್ಕಾರ ಪ್ರದಾನ ಮಾಡಿದರು.

ಸಾಫ್ಟ್‌ವೇರ್ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಾಗಿ ಕರ್ನಾಟಕದ ಇಂಟೆಲ್ ಇಂಡಿಯಾ ಕಂಪನಿಯ ಕಂಟ್ರಿಹೆಡ್ ಆಗಿರುವ ನಿವೃತ್ತಿ ರಾಯ್ ಮತ್ತು ಮಹಿಳೆಯರ ಸಬಲೀಕರಣ ಮತ್ತು ದೇವದಾಸಿ ಪದ್ಧತಿಯ ನಿರ್ಮೂಲನೆಗೆ ಶ್ರಮಿಸುತ್ತಿರುವ ಬೆಳಗಾವಿ ಮೂಲದ ಶೋಭಾ ಗಸ್ತಿ ಅವರು ನಾರಿಶಕ್ತಿ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಗಸ್ತಿ ಅವರು 2021ನೇ ಸಾಲಿನ ಹಾಗೂ ನಿವೃತ್ತಿ ರಾಯ್ ಅವರು 2020ನೇ ಸಾಲಿನ ಪುರಸ್ಕಾರಕ್ಕೆ ಭಾಜನರಾದರು.

ಬೆಳಗಾವಿಯ ಶೋಭಾ ಗಸ್ತಿ(ಎಡ) ಮತ್ತು ನಿವೃತ್ತಿ ರಾಯ್ (ಬಲ)ಅವರಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮಂಗಳವಾರ ನಾರಿಶಕ್ತಿ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಭಾರತೀಯ ಮಹಿಳೆಯರ ಸಾಧನೆಗಳ ಬಗ್ಗೆ ಕೊಂಡಾಡಿದ್ದಾರೆ. ಅಲ್ಲದೆ ಹಲವು ಯೋಜನೆಗಳ ಮೂಲಕ ನಮ್ಮ ಸರ್ಕಾರ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತುನೀಡಿದೆ ಎಂದು ಟ್ವೀಟ್ ಮಾಡಿದ್ದಾರೆ.

ನಾರಿಶಕ್ತಿ ಮತ್ತು ಸಾಮಾಜಿಕ ಭದ್ರತೆ, ಗುಣಮಟ್ಟದ ಆರೋಗ್ಯ, ಶಿಕ್ಷಣ ಮತ್ತು ಉದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಮಾಡಿದ ಸಾಧನೆಗಳಿಗೆ ಸೆಲ್ಯೂಟ್ ಮಾಡುತ್ತೇನೆ. ಭಾರತದ ಅಭಿವೃದ್ಧಿಯಲ್ಲಿ ಮಹಿಳೆಯರ ಸಾಧನೆ ಅಗ್ರಗಣ್ಯವಾದದ್ದು ಎಂದು ಬಣ್ಣಿಸಿದ್ದಾರೆ.

ಮೊದಲ ಬಾರಿಗೆ ಮಹಿಳಾ ಪೀಠ

ಕೊಚ್ಚಿ(ಪಿಟಿಐ): ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಕೇರಳ ಹೈಕೋರ್ಟ್ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳಾ ನ್ಯಾಯಾಧೀಶರನ್ನು ಒಳಗೊಂಡ ಪೂರ್ಣ ಪೀಠವು ಹಲವು ಅರ್ಜಿಗಳ ವಿಚಾರಣೆಯನ್ನು ಮಂಗಳವಾರ ನಡೆಸಿತು.

ನ್ಯಾಯಮೂರ್ತಿಗಳಾದ ಅನು ಶಿವರಾಮನ್, ಶಿರ್ಸಿ.ವಿ ಮತ್ತು ಎಂ.ಆರ್. ಅನಿತಾ ಅವರಿದ್ದ ಪೀಠವು, ಗುರುವಾಯೂರು ದೇವಸ್ವಂ ವ್ಯವಸ್ಥಾಪಕ ಸಮಿತಿಯು ಮುಖ್ಯಮಂತ್ರಿಗಳ ಪರಿಹಾರ ನಿಧಿ ಅಥವಾ ಯಾವುದೇ ಪರಿಹಾರ ನಿಧಿಗೆ ದೇವಸ್ಥಾನದ ಹಣವನ್ನು ದೇಣಿಗೆ ನೀಡುವಂತಿಲ್ಲ ಎಂಬ ಆದೇಶವನ್ನು ಮರು ಪರಿಶೀಲನೆ ನಡೆಸುವಂತೆ ಸರ್ಕಾರ ಕೋರಿದ್ದ ಅರ್ಜಿಗಳ ವಿಚಾರಣೆ ನಡೆಸಿತು.

ಗಡಿ ಬಿಕ್ಕಟ್ಟು: ಭಾರತ, ಚೀನಾ ನಡುವೆ ಶುಕ್ರವಾರ ಮಾತುಕತೆ

ನವದೆಹಲಿ(ಪಿಟಿಐ): ಪೂರ್ವ ಲಡಾಖ್ ಗಡಿ ಬಿಕ್ಕಟ್ಟು ಶಮನಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಚೀನಾ ನಡುವೆ ಮಾರ್ಚ್ 11ರಂದು 15ನೇ ಸುತ್ತಿನ ಸೇನಾ ಅಧಿಕಾರಿಗಳ ಉನ್ನತ ಮಟ್ಟದ ಸಭೆ ನಿಗದಿಯಾಗಿದೆ ಎಂದು ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ.

ಗಾಲ್ವಾನ್ ಕಣಿವೆ ಸಂಘರ್ಷ ಉಂಟಾದ ಬಳಿಕ ಪಾಂಗಾಂಗ್ ಸೋ ನದಿಯ ಉತ್ತರ ಮತ್ತು ದಕ್ಷಿಣ ದಂಡೆ, ಗಾಲ್ವಾನ್ ಮತ್ತು ಇತರೆ ಪ್ರದೇಶಕ್ಕೆ ಸಂಬಂಧಪಟ್ಟಂತೆ ಇದುವರೆಗೆ 14 ಸುತ್ತಿನ ಮಾತುಕತೆಗಳು ನಡೆದಿವೆ. ಇದರಲ್ಲಿ ಯಾವುದೂ ಫಲಪ್ರದವಾಗಿಲ್ಲ.

ಕಳೆದ ಜನವರಿಯಲ್ಲಿ ನಡೆದ 14ನೇ ಸುತ್ತಿನ ಮಾತುಕತೆಯಲ್ಲೂ ಯಾವುದೇ ಹೊಸ ತೀರ್ಮಾನವನ್ನೂ ಕೈಗೊಂಡಿರಲಿಲ್ಲ. ಗಾಲ್ವಾನ್ ಸಂಘರ್ಷ ನಡೆದ 22 ತಿಂಗಳ ಬಳಿಕ ಉಭಯ ತಂಡಗಳು ಶುಕ್ರವಾರ ಲಡಾಖ್‌ನ ಚುಶುಲ್ ಮೊಲ್ಡೊದಲ್ಲಿ ಮಾತುಕತೆ ನಡೆಯಲಿದೆ ಎಂದು ತಿಳಿಸಿವೆ.

ಗೋವಾ: ರೆಸಾರ್ಟ್‌ನತ್ತ ಕಾಂಗ್ರೆಸ್ ಅಭ್ಯರ್ಥಿಗಳು

ಒಂದನೇ ಪುಟದಿಂದ

ಪಕ್ಷಕ್ಕೆ ಸರಳ ಬಹುಮತ ಸಿಗದಿದ್ದಲ್ಲಿ, ಎಎಪಿ ಮತ್ತು ಟಿಎಂಸಿ ಜೊತೆ ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ ಎನ್ನಲಾಗಿದೆ. ‘ಬಿಜೆಪಿಯೇತರ ಪಕ್ಷಗಳ ಜತೆಗೆ ಕಾಂಗ್ರೆಸ್ ಮಾತುಕತೆ ನಡೆಸುತ್ತಿದೆ’ ಎಂದು ವೀಕ್ಷಕ ಪಿ.ಚಿದಂಬರಂ ಹೇಳಿದ್ದಾರೆ. ಚಿದಂಬರಂ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ದಿನೇಶ್ ಗುಂಡೂರಾವ್ ಅವರು ಭಾನುವಾರದಿಂದ ಗೋವಾದಲ್ಲಿ ಬೀಡುಬಿಟ್ಟಿದ್ದಾರೆ.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ಅವರನ್ನು ದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿ, ಸರ್ಕಾರ ರಚನೆಯ ಸಾಧ್ಯತೆಗಳ ಬಗ್ಗೆ ಮಾತುಕತೆ ನಡೆಸಿದರು. ಟಿಎಂಸಿ ಹಾಗೂ ಎಂಜಿಪಿ ಮೈತ್ರಿಕೂಟ ಸಹ ಸರ್ಕಾರ ರಚನೆಯ ವಿಶ್ವಾಸದಲ್ಲಿದೆ. ಟಿಎಂಸಿ 7–8 ಸ್ಥಾನಗಳನ್ನು, ಎಂಜಿಪಿ 4–5 ಸ್ಥಾನಗಳನ್ನು ಗೆಲ್ಲಲಿದೆ ಎಂದು ಗೋವಾ ಟಿಎಂಸಿ ಮುಖ್ಯಸ್ಥ ಕಿರಣ್ ಕಂಡೋಲಕರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಹುಮತ ಸಿಗದಿದ್ದಲ್ಲಿ ಎಂಜಿಪಿ ಜತೆ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಹಾಗೂ ಬಿಜೆಪಿ ಮನವೊಲಿಕೆಯಲ್ಲಿ ತೊಡಗಿವೆ ಎನ್ನಲಾಗಿದೆ.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಅನಿಲ್ ಕುಂಬ್ಳೆ ಅವರ ಮಗ ಮಾಯಸ್ ಕುಂಬ್ಳೆ (ಎಡದಿಂದ ಮೂರನೇಯವರು) ಅವರ ‘ಸಫಾರಿ ಸಾಗಾ; ವೈಲ್ಡ್ ಎನ್‌ಕೌಂಟರ್ಸ್ ಆಫ್ ಎ ಯಂಗ್ ಫೋಟೊಗ್ರಾಫರ್’ ವನ್ಯಜೀವಿ ಛಾಯಾಗ್ರಹಣ ಸಂಗ್ರಹದ ಪುಸ್ತಕವನ್ನು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಬಿಡುಗಡೆ ಮಾಡಿದರು. ವನ್ಯಜೀವಿ ಛಾಯಾಗ್ರಾಹಕ ಮತ್ತು ಮೆಂಟರ್ ಜಯಂತ್ ಶರ್ಮಾ ಇದ್ದಾರೆ

17 ವರ್ಷದ ಮಾಯಸ್ ಕುಂಬ್ಳೆ ಛಾಯಾಗ್ರಹಣದ ಕೃತಿ

‘ಸಫಾರಿ ಸಾಗಾ’ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ತಂಡದ ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಅವರ ಮನೆಯಲ್ಲಿರುವ ಕ್ರಿಕೆಟ್ ಕಿಟ್‌ನತ್ತ ಅವರ ಮಗ ಮಾಯಸ್ ಕುಂಬ್ಳೆ ಕಣ್ಣುಹಾಯಿಸಲಿಲ್ಲ.

ಆದರೆ, ಅನಿಲ್ ಅವರಿಗೆ ನೆಚ್ಚಿನ ಹವ್ಯಾಸ ವನ್ಯಜೀವಿ ಛಾಯಾಗ್ರಹಣದತ್ತ ಮಾಯಸ್ ವಾಲಿದರು. ನಾಲ್ಕು ವರ್ಷಗಳ ಹಿಂದೆ ಅಪ್ಪ ಕೊಟ್ಟ ಕ್ಯಾಮೆರಾದ ಕಣ್ಣಿನಿಂದ ಅರಣ್ಯದೊಳಗಿನ ಬೆರಗಿನ ಲೋಕವನ್ನು ಸೆರೆಹಿಡಿಯಲು ಆರಂಭಿಸಿದ್ದರು. ಇದೀಗ ಆ ಚಿತ್ರಗಳ ಸಂಗ್ರಹವನ್ನು ಕೃತಿಯಾಗಿ ಹೊರತಂದಿದ್ದಾರೆ.

‘ಸಫಾರಿ ಸಾಗಾ; ವೈಲ್ಡ್ ಎನ್‌ಕೌಂಟರ್ ಆಫ್ ಎ ಯಂಗ್ ಫೋಟೊಗ್ರಾಫರ್’ ಕಾಫಿ ಟೇಬಲ್ ಪುಸ್ತಕವನ್ನು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಬಿಡುಗಡೆ ಮಾಡಿದರು.

ಮುಖಪುಟದಲ್ಲಿ ಹುಲಿಗಳು ನದಿಯಲ್ಲಿ ಮೈತಣಿಸಿಕೊಳ್ಳುವ ಸುಂದರ ಚಿತ್ರವಿದೆ. ಕೃತಿಯೊಳಗಡೆ ಮತ್ತಷ್ಟು ಮುದ ನೀಡುವ, ಮೈನವಿರೇಳಿಸುವ ಚಿತ್ರಗಳಿವೆ. ಕಬಿನಿ ಅರಣ್ಯಪ್ರದೇಶದಲ್ಲಿರುವ ಕಪ್ಪು ಚಿರತೆಯ ಚಿತ್ರದೊಂದಿಗೆ ಈ ಪುಸ್ತಕ ಆರಂಭವಾಗುತ್ತದೆ. ನಾಗಪುರ ಸಮೀಪದ ತಡೋಬಾ, ರಣಥಂಬೋರ್, ಹಂಪಿ ಮತ್ತು ರಾಮನಗರಗಳಲ್ಲಿ ಸೆರೆಹಿಡಿದ ಆನೆ, ಚಿರತೆ, ಕರಡಿ, ಹದ್ದು, ಕಾಡುಕೋಣ, ಸೀಳುನಾಯಿ ಮತ್ತು ಹಕ್ಕಿಗಳ ಲೋಕ ಗಮನಸೆಳೆಯುತ್ತವೆ.

‘ರಜೆಗಳನ್ನು ಕಳೆಯಲು ಅಪ್ಪ ಕುಟುಂಬವನ್ನು ಯಾವಾಗಲೂ ರಾಷ್ಟ್ರೀಯ ಸಂರಕ್ಷಿತ ಅರಣ್ಯಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಅದರಿಂದಾಗಿ ಬಾಲ್ಯದಿಂದಲೂ ಕಾಡಿನ ನಂಟು ಬೆಳೆಯಿತು. 13 ವರ್ಷದವನಿದ್ದಾಗ ನನ್ನ ಏಕತಾನತೆ ಕಳೆಯಲು ಅಪ್ಪ ಕ್ಯಾಮೆರಾ ನೀಡಿ ಫೋಟೊ ತೆಗೆಯಲು ಪ್ರೇರೆಪಿಸಿದರು. ಅಲ್ಲಿಂದ ಇಲ್ಲಿಯವರೆಗೆ ಪ್ರಕೃತಿಯೊಂದಿಗಿನ ನಂಟು ಬೆಸೆದುಕೊಂಡಿದೆ’ ಎಂದು ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಬೆಂಗಳೂರಿನ 12ನೇ ತರಗತಿಯಲ್ಲಿರುವ ಮಾಯಸ್ ಹೇಳಿದರು.

ಪುಸ್ತಕ ಬಿಡುಗಡೆ ಮಾಡಿದ ಲಕ್ಷ್ಮಣ್, ‘ಉತ್ತಮ ಛಾಯಾಗ್ರಾಹಕರಾಗಿರುವ ಅನಿಲ್ ಅವರ ಮಗ ಈಗ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಮಕ್ಕಳು ಗ್ಯಾಜೆಟ್‌ಗಳಲ್ಲಿ ಕಳೆದುಹೋಗುವ ಬದಲು ಇಂತಹ ಹವ್ಯಾಸಗಳನ್ನು ರೂಢಿಸಿಕೊಳ್ಳುವುದು ಉತ್ತಮ’ ಎಂದರು.

ಛಾಯಾಗ್ರಹಣ ಮಾರ್ಗದರ್ಶಕರಾಗಿರುವ ಜಯಂತ್ ಶರ್ಮಾ, ಅನಿಲ್ ಕುಂಬ್ಳೆಯವರ ಪತ್ನಿ ಚೇತನಾ, ಮಗಳು ಸ್ವಸ್ತಿ, ಹಾಜರಿದ್ದರು.

27ರಿಂದ ವಿಮಾನ ಸಂಚಾರ ಪುನರಾರಂಭ

ನವದೆಹಲಿ: ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಸಂಚಾರ ಇದೇ 27ರಿಂದ ಪುನರಾರಂಭಗೊಳ್ಳಲಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ. ಆರೋಗ್ಯ ಸಚಿವಾಲಯದ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು ಎಂದು ನಾಗರಿಕ ವಿಮಾನಯಾನ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ. ಕೋವಿಡ್–19 ಸಾಂಕ್ರಾಮಿಕದಿಂದಾಗಿ 2 ವರ್ಷಗಳ ಹಿಂದೆ ಅಂತರರಾಷ್ಟ್ರೀಯ ವಿಮಾನಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು.

ನಾಲ್ಕು ದಿನಗಳ ನಂತರ ಸೆನ್ಸೆಕ್ಸ್ ಚೇತರಿಕೆ

ಮುಂಬೈ (ಪಿಟಿಐ): ನಾಲ್ಕು ದಿನಗಳಿಂದ ಇಳಿಕೆ ಕಾಣುತ್ತಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಏರುಮುಖ ಚಲನೆ ಕಂಡವು. ಐ.ಟಿ., ಫಾರ್ಮಾ ಮತ್ತು ಹಣಕಾಸು ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ದಿನದ ವಹಿವಾಟಿನ ಒಂದು ಹಂತದಲ್ಲಿ 581 ಅಂಶ ಇಳಿಕೆ ಕಂಡಿತ್ತು. ಆದರೆ, ದಿನದ ಕೊನೆಯಲ್ಲಿ 581 ಅಂಶ ಏರಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 150 ಅಂಶ ಏರಿಕೆ ಕಂಡಿತು.

‘ವಿಧಾನಸಭಾ ಚುನಾವಣೆಗಳ ಮತದಾನೋತ್ತರ ಸಮೀಕ್ಷೆ ಫಲಿತಾಂಶಗಳು ಮಾರುಕಟ್ಟೆಯ ಮೇಲೆ ಪ್ರಭಾವ ಬೀರಿದ್ದವು. ಪಾಶ್ಚಿಮಾತ್ಯ ದೇಶಗಳ ಪ್ರಮುಖ ಷೇರು ಮಾರುಕಟ್ಟೆಗಳಲ್ಲಿಯೂ ತೇಜಿ ವಹಿವಾಟು ನಡೆದಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 126.6 ಅಮೆರಿಕನ್ ಡಾಲರ್‌ಗೆ ತಲುಪಿದೆ.

ಕೃಷಿಗೆ ಅರಣ್ಯ ಭೂಮಿ: ಸಕ್ರಮ– ಮಾಧುಸ್ವಾಮಿ

ಒಂದನೇ ಪುಟದಿಂದ

ವಿಷಯ ಪ್ರಸ್ತಾಪಿಸಿದ ಎಚ್.ಕೆ.ಪಾಟೀಲ, ‘ಅರಣ್ಯ ಇಲಾಖೆ ಸಿಬ್ಬಂದಿಯ ಕಿರುಕುಳದಿಂದ ಬೇಸತ್ತು ಇಬ್ಬರು ಮಹಿಳೆಯರು ವಿಷ ಸೇವಿಸಿದ್ದು, ಅದರಲ್ಲಿ ಒಬ್ಬ ಮಹಿಳೆ ಮೃತಪಟ್ಟಿದ್ದಾರೆ. ಇನ್ನೊಬ್ಬ ಮಹಿಳೆಯ ಸ್ಥಿತಿ ಗಂಭೀರವಾಗಿದೆ. ಹತ್ತಾರು ವರ್ಷಗಳಿಂದ ಕಷ್ಟ ಪಟ್ಟು ಬೆಳೆಸಿದ ತೋಟವನ್ನು ಅರಣ್ಯ ಇಲಾಖೆಯವರು ನಾಶ ಮಾಡಿದ್ದಾರೆ. ಈ ಪ್ರದೇಶದಲ್ಲಿ ರೈತರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನಡೆದಿದೆ. ರೈತರು ಭೂ ಒತ್ತುವಾರಿ ಮಾಡಿದ್ದಾರೆಯೇ ಹೊರತು ಭೂ ಕಬಳಿಕೆ ಮಾಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದನ ಸಮಿತಿ ರಚಿಸಬೇಕು’ ಎಂದು ಅವರು ಒತ್ತಾಯಿಸಿದರು.

ಪಾಟೀಲರ ಮಾತಿಗೆ ಧ್ವನಿಗೂಡಿಸಿದ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ, ‘ಅರಣ್ಯವಾಸಿಗಳಿಗೆ ಆಗುತ್ತಿರುವ ಕಿರುಕುಳಗಳ ವಿಷಯವನ್ನು ಮುಖ್ಯಮಂತ್ರಿಯವರು ಗಂಭೀರವಾಗಿ ಪರಿಗಣಿಸಬೇಕು. ವಿಶೇಷ ಸಭೆ ಮಾಡಿ ಸದನ ಸಮಿತಿ ರಚಿಸಲು ತೀರ್ಮಾನಿಸಬೇಕು’ ಎಂದರು.

ಅರಣ್ಯ ಇಲಾಖೆ ಅಧಿಕಾರಿಗಳನ್ನು ಹದ್ದು ಬಸ್ತಿನಲ್ಲಿಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್‌ನ ಕೆ.ಆರ್.ರಮೇಶ್‌ಕುಮಾರ್ ಅವರು ಒತ್ತಾಯಿಸಿದರು.

ವಿವಾದಿತ ಸ್ಥಳದಲ್ಲಿ ಆರ್‌ಎಸ್‌ಎಸ್ ಸಮಾವೇಶ

ಅಹಮದಾಬಾದ್: ಇಲ್ಲಿನ ಹೊರವಲಯದ ‘ಶ್ರೀ ನಿಷ್ಕಳಂಕಿ ನಾರಾಯಣ ತೀರ್ಥ ಧಾಮ ಪ್ರೇರಣಾತೀರ್ಥ’ದಲ್ಲಿ ಆರ್‌ಎಸ್‌ಎಸ್‌ನ ಮೂರು ದಿನಗಳ ವಾರ್ಷಿಕ ಸಮಾವೇಶ ಮಾರ್ಚ್ 11ರಿಂದ ಆರಂಭಗೊಳ್ಳಲಿದೆ.

ಆದರೆ, ಇದು ವಿವಾದಿತ ಸ್ಥಳ. ಈ ಸ್ಥಳದಲ್ಲಿ 14ನೇ ಶತಮಾನದ ಸೂಫಿ ಸಂತ ಇಮಾಮ್ ಶಾ ಬಾವಾ ಅವರ ಸಮಾಧಿ ಇದೆ. ಇದರ ಮಾಲೀಕತ್ವಕ್ಕಾಗಿ ಹಿಂದೂ ಹಾಗೂ ಮುಸ್ಲಿಮರ ನಡುವೆ ದಶಕಗಳಿಂದ ಕಾನೂನು ಹೋರಾಟವೂ ನಡೆಯುತ್ತಿದೆ.

ಭಾವೈಕ್ಯಕ್ಕೆ ಹೆಸರಾಗಿರುವ ಈ ಸ್ಥಳದ ಮೇಲ್ವಿಚಾರಣೆಗಾಗಿ ‘ಇಮಾಮ್‌ಶಾ ಬಾವಾ ಸಂಸ್ಥಾ ಟ್ರಸ್ಟ್’ ರಚಿಸಲಾಗಿದೆ.

ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿ; ಅಲಿಸಾ ಹೀಲಿ ಭರ್ಜರಿ ಬ್ಯಾಟಿಂಗ್

ಆಸ್ಟ್ರೇಲಿಯಾಕ್ಕೆ ಮಣಿದ ಬಿಸ್ಮಾ ಮರೂಫ್ ಬಳಗ

ಮೌಂಟ್ ಮಾಂಗನೂಯಿ (ಪಿಟಿಐ): ಆರಂಭದ ಬ್ಯಾಟರ್ ಅಲಿಸಾ ಹೀಲಿ ಹಾಗೂ ಬೌಲರ್‌ಗಳ ಪರಿಣಾಮಕಾರಿ ಆಟದ ಬಲದಿಂದ ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಜಯಿಸಿತು. ಮಂಗಳವಾರ ಪಾಕಿಸ್ತಾನ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ನಾಯಕಿ ಮೆಗ್ ಲ್ಯಾನಿಂಗ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಪಾಕ್ ತಂಡವು ನಾಯಕಿ ಬಿಸ್ಮಾ ಮರೂಫ್ (ಔಟಾಗದೆ 78) ಹಾಗೂ ಆಲ್‌ರೌಂಡರ್ ಅಲಿಯಾ ರಿಯಾಜ್ (53) ಅವರ ಆಟದ ನೆರವಿನಿಂದ ಆರು ವಿಕೆಟ್‌ಗೆ 190 ರನ್ ಕಲೆಹಾಕಿತು.

ವಿಕೆಟ್ ಕೀಪರ್ ಅಲಿಸಾ ಹೀಲಿ (72, 79 ಎ, 4X7) ಆಟದಲ್ಲಿ ಮಿನುಗಿದ ಆಸ್ಟ್ರೇಲಿಯಾ 15.3 ಓವರ್‌ಗಳು ಬಾಕಿ ಇರುವಂತೆಯೇ ಗೆಲುವಿನ ನಗೆ ಚೆಲ್ಲಿತು. ತಂಡಕ್ಕೆ ಟೂರ್ನಿಯಲ್ಲಿ ಇದು ಸತತ ಎರಡನೇ ಜಯ. ಮೊದಲ ಪಂದ್ಯದಲ್ಲಿ ಲ್ಯಾನಿಂಗ್ ಪಡೆ ಹಾಲಿ ಚಾಂಪಿಯನ್ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡಕ್ಕೆ ಸೋಲುಣಿಸಿತ್ತು.

191 ರನ್‌ಗಳ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಪರ ಹೀಲಿ ಮತ್ತು ರಚೆಲ್ ಹೇನ್ಸ್ (34) ಮೊದಲ ವಿಕೆಟ್‌ಗೆ 60 ರನ್‌ಗಳ ಜೊತೆಯಾಟ ಆಡಿದರು.

ಅಲಿಸಾ ಹೀಲಿ ಬ್ಯಾಟಿಂಗ್ ಪರಿ– ಎಎಫ್‌ಪಿ ಚಿತ್ರ

ಇವರಿಬ್ಬರ ಕ್ಯಾಚ್‌ಗಳನ್ನೂ ಕೈಚೆಲ್ಲಿದ್ದು, ಬಿಸ್ಮಾ ಪಡೆಗೆ ದುಬಾರಿಯಾಗಿ ಪರಿಣಮಿಸಿತು. ಹೇನ್ಸ್ ಅವರಿಗೆ ನಶ್ರಾ ಸಂಧು (30ಕ್ಕೆ 1) ಪೆವಿಲಿಯನ್ ದಾರಿ ತೋರಿದರು. ಬಳಿಕ ಲ್ಯಾನಿಂಗ್ (35) ಕೊಡುಗೆ ನೀಡಿದರು.

ಪಂದ್ಯದ 22ನೇ ಓವರ್‌ನಲ್ಲಿ ಸ್ಪಿನ್ನರ್ ಒಮೈಮಾ ಸೋಹೈಲ್ (39ಕ್ಕೆ2) ಲ್ಯಾನಿಂಗ್ ಅವರ ವಿಕೆಟ್ ಕಬಳಿಸಿದರು. 28ನೇ ಓವರ್‌ನಲ್ಲಿ ಹೀಲಿ ವಿಕೆಟ್ ಕೂಡ ಒಮೈಮಾ ಪಾಲಾಯಿತು. ಆದರೆ ಎಲಿಸ್ ಪೇರಿ ಮತ್ತು ಬೆಥ್ ಮೂನಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಆಸ್ಟ್ರೇಲಿಯಾದ ವೇಗಿಗಳಾದ ಮೇಗನ್ ಶುಟ್ (43ಕ್ಕೆ1), ಎಲಿಸ್ ಪೆರಿ (27ಕ್ಕೆ 1) ಮತ್ತು ಮಧ್ಯಮ ವೇಗಿ ನಿಕೋಲಾ ಕ್ಯಾರಿ (36ಕ್ಕೆ 1), ಸ್ಪಿನ್ನರ್‌ಗಳಾದ ಅಲಾನ ಕಿಂಗ್ (24ಕ್ಕೆ 2) ಮತ್ತು ಅಮಂಡಾ ಜೇಡ್ ವೆಲ್ಲಿಂಗ್ಟನ್ (25ಕ್ಕೆ 1) ಮಿಂಚಿದರು.

ಸ್ಕೋರ್ ಕಾರ್ಡ್

ಪಾಕಿಸ್ತಾನ 6 ವಿಕೆಟ್‌ಗೆ 190 (50 ಓವರ್)

ಸಿದ್ರಾ ಸಿ ಲ್ಯಾನಿಂಗ್ ಬಿ ಪೆರಿ 2 (9ಎ), ನಹೀದಾ ಸಿ ಮೂನಿ ಬಿ ಶುಟ್ 9 (10ಎ, 4X2), ಬಿಸ್ಮಾ ಔಟಾಗದೆ 78 (122ಎ, 4X8), ಒಮೈಮಾ ಬಿ ಅಲಾನ 12 (25ಎ, 4X2), ನಿದಾ ಸಿ ಲ್ಯಾನಿಂಗ್ ಬಿ ಅಮಂಡಾ 5 (8ಎ, 4X1), ಅಲಿಯಾ ಎಲ್‌ಬಿಡಬ್ಲ್ಯು ಕ್ಯಾರಿ 53 (109ಎ, 4X4), ಫಾತಿಮಾ ಸಿ ಹೀಲಿ ಬಿ ಅಲಾನ 14 (15ಎ, 4X1), ಡಯಾನಾ ಔಟಾಗದೆ 7 (4ಎ, 4X1)

ಇತರೆ (ಬೈ 2, ನೋಬಾಲ್ 2, ವೈಡ್ 6) 10

ವಿಕೆಟ್ ಪತನ: 1-11 (ನಿಧಾ ಖಾನ್, 2.6), 2-11 (ಸಿದ್ರಾ ಅಮೀನ್, 3.1), 3-38 (ಒಮೈಮಾ ಸೋಹೈಲ್, 10.6), 4-44 (ನಿದಾ ದರ್, 12.5), 5-143 (ಅಲಿಯಾ ರಿಯಾಜ್, 44.2), 6-177 (ಫಾತಿಮಾ ಸನಾ, 48.4)

ಬೌಲಿಂಗ್: ಮೇಗನ್ ಶುಟ್ 10–1–43–1, ಎಲಿಸ್ ಪೆರಿ 5–1–27–1, ಅಲಾನ ಕಿಂಗ್ 9–0–24–2, ಜೆಸ್ ಜೊನಾಸನ್ 10–0–33–0, ಅಮಂಡಾ ಜೇಡ್ ವೆಲ್ಲಿಂಗ್ಟನ್ 8–1–25–1, ನಿಕೋಲಾ ಕ್ಯಾರಿ 8–0–36–1

ಆಸ್ಟ್ರೇಲಿಯಾ 3ಕ್ಕೆ 190 (34.4 ಓವರ್)

ಅಲಿಸಾ ಸಿ ನಶ್ರಾ ಬಿ ಒಮೈಮಾ 72 (79ಎ, 4X7), ಹೇನ್ಸ್ ಸಿ ಬಿಸ್ಮಾ ಬಿ ನಶ್ರಾ 34 (34ಎ, 4X7), ಲ್ಯಾನಿಂಗ್ ಬಿ ಒಮೈಮಾ 35 (37ಎ, 4X6), ಎಲಿಸ್ ಔಟಾಗದೆ 26 (33ಎ, 4X2), ಮೂನಿ ಔಟಾಗದೆ 23 (26ಎ, 4X2)

ಇತರೆ (ಲೆಗ್‌ಬೈ 1,, ನೋಬಾಲ್ 1, ವೈಡ್ 1) 3

ವಿಕೆಟ್ ಪತನ: 1-60 (ರಚೆಲ್ ಹೇನ್ಸ್, 10.3), 2-123 (ಮೆಗ್ ಲ್ಯಾನಿಂಗ್, 21.1), 3-153 (ಅಲಿಸಾ ಹೀಲಿ, 27.1))

ಬೌಲಿಂಗ್: ಡಯಾನಾ ಬೇಗ್ 4–0–35–0, ಅನಮ್ ಅಮಿನ್ 6–0–31–0, ನಿದಾ ದರ್ 5.4–0–33–0, ಫಾತಿಮಾ ಸನಾ 4–0–24–0, ನಶ್ರಾ ಸಂಧು 7–0–30–1, ಒಮೈಮಾ ಸೋಹೈಲ್ 8–0–39–2

ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ ಏಳು ವಿಕೆಟ್‌ಗಳ ಜಯ

‘ಶೇನ್ ವಾರ್ನ್‌ಗೆ ಇಂಗ್ಲೆಂಡ್ ಕೋಚ್ ಆಗುವ ಆಸೆಯಿತ್ತು’

ಮೆಲ್ಬರ್ನ್ (ಪಿಟಿಐ): ತಾವು ಇಂಗ್ಲೆಂಡ್ ಕ್ರಿಕೆಟ್ ತಂಡದ ಕೋಚ್ ಆಗಿ ಕಾರ್ಯನಿರ್ವಹಿಸಬೇಕು ಎಂದು ಆಸ್ಟ್ರೇಲಿಯಾದ ಸ್ಪಿನ್ ದಿಗ್ಗಜ ಶೇನ್ ವಾರ್ನ್ ಇಂಗಿತ ವ್ಯಕ್ತಪಡಿಸಿದ್ದರು.

ಶೇನ್ ವಾರ್ನ್

ಸ್ಕೈ ಸ್ಪೋರ್ಟ್ಸ್ ಕ್ರಿಕೆಟ್ ಪಾಡ್‌ಕಾಸ್ಟ್‌ನಲ್ಲಿ ಅವರು ಇಂಗ್ಲೆಂಡ್ ಕೋಚ್ ಆಗುವ ಆಸೆಯ ಕುರಿತು ಹೇಳಿದ್ದರು.

ಈ ಚೆಗೆ ಇಂಗ್ಲೆಂಡ್ ತಂಡವು ಆ್ಯಷಸ್ ಸರಣಿಯಲ್ಲಿ 0–4ರಿಂದ ಸೋತಿತ್ತು. ಆಗ ತಂಡದ ಮುಖ್ಯ ಕೋಚ್ ಕ್ರಿಸ್ ಸಿಲ್ವರ್‌ವುಡ್ ಅವರನ್ನು ವಜಾ ಮಾಡಲಾಗಿತ್ತು.

‘ಇಂಗ್ಲೆಂಡ್ ಕೋಚ್ ಆಗಲು ಇದು ಬಹಳ ಸೂಕ್ತವಾದ ಕಾಲ. ಆ ತಂಡವು ಉತ್ತಮವಾಗಿ ಬೆಳೆಯಲು ನಾನು ನೆರವಾಗಬಲ್ಲೆ’ ಎಂದು ವಾರ್ನ್ ಹೇಳಿದ್ದರು.

2008ರ ಐಪಿಎಲ್‌ನಲ್ಲಿ ಶೇನ್ ರಾಜಸ್ಥಾನ್ ರಾಯಲ್ಸ್ ತಂಡದ ಕೋಚ್ ಮತ್ತು ನಾಯಕರಾಗಿದ್ದರು. ಆ ವರ್ಷ ರಾಯಲ್ಸ್ ಚಾಂಪಿಯನ್ ಆಗಿತ್ತು.

‘ಇಂಗ್ಲೆಂಡ್‌ನಲ್ಲಿ ಉತ್ತಮ ಆಟಗಾರರು ಇದ್ದಾರೆ. ಆದರೆ ಅವರಲ್ಲಿರುವ ಪ್ರತಿಭೆಯ ಅರಿವು ಮೂಡಿಸಬೇಕು. ಅದರಿಂದ ಆತ್ಮವಿಶ್ವಾಸ ಹೆಚ್ಚಿ ಉತ್ತಮವಾಗಿ ಆಡಬಲ್ಲರು’ ಎಂದಿದ್ದರು.

ಇಂಗ್ಲೆಂಡ್ ತಂಡದ ಕೋಚ್ ಆಗುವ ಕುರಿತು ವಾರ್ನ್ ಅವರು ತಮ್ಮ ಕೆಲವು ಆಪ್ತರಲ್ಲಿಯೂ ಹೇಳಿಕೊಂಡಿದ್ದರು ಎಂದು ಅವರ ಮ್ಯಾನೇಜರ್ ಜೇಮ್ಸ್ ಎರಸ್ಕಿನ್ ಕೂಡ ದೃಢಪಡಿಸಿದ್ದಾರೆ.

ಕ್ರೀಡಾ ವಿಜ್ಞಾನ ಒಪ್ಪಿರಲಿಲ್ಲ: ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಎರಡನೇ ಬೌಲರ್ ಹೆಗ್ಗಳಿಕೆ ವಾರ್ನ್‌ಗಿದೆ. ಆದರೆ, ಆಧುನಿಕ ಕ್ರಿಕೆಟ್‌ನಲ್ಲಿ ಆಟಗಾರರ ಫಿಟ್‌ನೆಸ್ ಮತ್ತು ಕೌಶಲ ವೃದ್ಧಿಗೆ ಬಳಸಲಾಗುತ್ತಿರುವ ಕ್ರೀಡಾ ವಿಜ್ಞಾನದ ಬಗ್ಗೆ ಅವರಿಗೆ ಅಷ್ಟೇನೂ ಒಲವು ಇರಲಿಲ್ಲ.

‘ಈ ಕಾಲದ ರಿಕವರಿ, ಮ್ಯಾಚ್‌ಅಪ್ಸ್ ಮತ್ತು ಕ್ರೀಡಾ ದತ್ತಾಂಶ ವಿಜ್ಞಾನದ ಸೂತ್ರಗಳು ನಮ್ಮ ಸಂದರ್ಭದಲ್ಲಿ ಇದ್ದಿದ್ದರೆ ನನ್ನನ್ನು ಬಿಟ್ಟುಬಿಡಿ ಎಂದು ಕೇಳಿಕೊಳ್ಳುತ್ತಿದ್ದೆ. ಆದರೆ, ಅಗ್ರಸ್ಥಾನಕ್ಕೇರಲು ಶೇಕಡಾ 100ರಷ್ಟು ಏಕಾಗ್ರತೆಯಿಂದ ಕಾರ್ಯನಿರ್ವಹಿಸಬೇಕು. ನಮ್ಮ ಪ್ರಯತ್ನಕ್ಕೆ ತಕ್ಕ ಫಲ ಸಿಗುತ್ತಿಲ್ಲವೆಂದಾದರೆ ಏಕಾಗ್ರತೆಯ ಕೊರತೆ ಇದೆ ಎಂದರ್ಥ. ಅದನ್ನು ಸರಿಪಡಿಸಿಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆಯೆಂಬುದನ್ನು ನಂಬಿದ್ದೇನೆ’ ಎಂದು ಶೇನ್ ಒಂದು ಸಂದರ್ಶನದಲ್ಲಿ ಹೇಳಿದ್ದರು.

ಎಂಸಿಜಿಯಲ್ಲಿ ಅಂತಿಮ ವಿಧಿವಿಧಾನ

ದಿಗ್ಗಜ ಕ್ರಿಕೆಟಿಗ ಶೇನ್ ವಾರ್ನ್ ಅವರ ಅಂತಿಮ ಸಂಸ್ಕಾರವನ್ನು ಇನ್ನು ಎರಡು ವಾರಗಳಲ್ಲಿ ನೆರವೇರಿಸಲಾಗುವುದು. ಅವರ ಅಂತಿಮ ವಿಧಿ ವಿಧಾನಗಳನ್ನು ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನೆರವೇರಿಸಲಾಗುವುದು. ಈ ವೇಳೆ ಒಂದು ಲಕ್ಷ ಅಭಿಮಾನಿಗಳು ಸೇರಲಿದ್ದಾರೆ ಎಂದು ಆಸ್ಟ್ರೇಲಿಯಾ ಮಾಧ್ಯಮಗಳು ವರದಿ ಮಾಡಿವೆ.

ಆದರೆ ಈ ವಿಷಯವನ್ನು ವಾರ್ನ್ ಅವರ ಮ್ಯಾನೇಜರ್ ಜೇಮ್ಸ್ ಎರಸ್ಕಿನ್ ಖಚಿತಪಡಿಸಿಲ್ಲ.

ಈಚೆಗೆ ಥಾಯ್ಲೆಂಡ್‌ನಲ್ಲಿದ್ದ ಶೇನ್ ವಾರ್ನ್ ಅವರು ಹೃದಯಾಘಾತದಿಂದ ನಿಧನರಾಗಿದ್ದರು.

ಎಂಸಿಜಿಯು ವಾರ್ನ್ ಅವರಿಗೆ ಅತ್ಯಂತ ಪ್ರಿಯವಾದ ತಾಣವಾಗಿತ್ತು. 1994ರ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಅವರು ಇಂಗ್ಲೆಂಡ್ ವಿರುದ್ಧ ಹ್ಯಾಟ್ರಿಕ್ ಸಾಧನೆ ಮಾಡಿದ್ದು ಇಲ್ಲಿಯೇ. ಈ ಮೈದಾನದಲ್ಲಿ ವಾರ್ನ್ ಅವರ ಪುತ್ಥಳಿಯೂ ಇದೆ ಎಂದೂ ಮಾಧ್ಯಮಗಳು ವರದಿ ಮಾಡಿವೆ.

ಐಪಿಎಲ್: ಗುಜರಾತ್ ಟೈಟನ್ಸ್‌ಗೆ ಗುರ್ಬಾಜ್?

ನವದೆಹಲಿ (ಪಿಟಿಐ): ಜೇಸನ್ ರಾಯ್ ಅವರ ಅಲಭ್ಯತೆಯಿಂದ ಗುಜರಾತ್ ಟೈಟನ್ಸ್ ತಂಡದಲ್ಲಿ ತೆರವಾಗುವ ಸ್ಥಾನಕ್ಕೆ ಅಫ್ಗಾನಿಸ್ತಾನದ ಆರಂಭ ಆಟಗಾರ ರಹಮಾನುಲ್ಲಾ ಗುರ್ಬಾಜ್ ಆಡುವ ಸಾಧ್ಯತೆ ಅಧಿಕವಾಗಿದೆ. ಮುಂಬರುವ ಐಪಿಎಲ್‌ನಲ್ಲಿ ಆಡಲಿರುವ ಎರಡು ಹೊಸ ತಂಡಗಳಲ್ಲಿ ಟೈಟನ್ಸ್ ಒಂದಾಗಿದೆ.

ದೀರ್ಘ ಕಾಲ ‘ಬಯೊಬಬಲ್’ನಲ್ಲಿ ಉಳಿದುಕೊಳ್ಳಲು ಬಯಸದ ಕಾರಣ, ಇಂಗ್ಲೆಂಡ್ ಬ್ಯಾಟರ್ ಜೇಸನ್ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

ಬಿರುಸಿನ ಹೊಡೆತಗಳ ಆಟಗಾರ ಗುರ್ಬಾಜ್ ಟಿ–20ಯಲ್ಲಿ 150ಕ್ಕಿಂತ ಹೆಚ್ಚಿನ ಸ್ಟ್ರೈಕ್‌ರೇಟ್ ಒಂದಿದ್ದಾರೆ. ಅವರು ಕೀಪಿಂಗ್ ಕೂಡ ಮಾಡುವ ಕಾರಣ ಬಹುಪಯೋಗಿ ಆಟಗಾರ ಆಗಬಲ್ಲರು. ಒಟ್ಟು 69 ಟಿ20 ಪಂದ್ಯಗಳಲ್ಲಿ 113 ಸಿಕ್ಸರ್‌ಗಳನ್ನು ಸಿಡಿಸಿರುವುದು ಅವರ ತೋಳ್ಬಲಕ್ಕೆ ನಿದರ್ಶನ.

ಅವರು ಅಫ್ಗಾನಿಸ್ತಾನ ತಂಡವನ್ನು ಒಂಬತ್ತು ಏಕದಿನ ಅಂತರರಾಷ್ಟ್ರೀಯ ಮತ್ತು 12 ಟಿ20 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ. ಈ ಅಲ್ಪಾವಧಿ ಕ್ರಿಕೆಟ್ ಜೀವನದಲ್ಲೇ ಛಾಪು ಮೂಡಿಸಿದ್ದಾರೆ. ಪಾಕ್ ಸೂಪರ್ ಲೀಗ್‌ನಲ್ಲಿ ಅವರು ಮುಲ್ತಾನ್ ಸುಲ್ತಾನ್ಸ್ ಮತ್ತು ಇಸ್ಲಾಮಾಬಾದ್ ಯುನೈಟೆಡ್ ತಂಡಕ್ಕೆ ಮತ್ತು ಲಂಕಾ ಪ್ರೀಮಿಯರ್ ಲೀಗ್‌ನಲ್ಲಿ ಕ್ಯಾಂಡಿ ಟಸ್ಕರ್ ತಂಡಕ್ಕೆ ಆಡಿದ್ದಾರೆ.

ದಕ್ಷಿಣ ವಲಯ ಕರಾಟೆ ಸ್ಪರ್ಧೆ: ಚೈತ್ರಶ್ರೀಗೆ ಕಂಚು

ಚೈತ್ರಶ್ರೀ

ಬೆಂಗಳೂರು: ಕರ್ನಾಟಕದ ಚೈತ್ರಶ್ರೀ ಎನ್. ಅವರು ದಕ್ಷಿಣ ವಲಯ ಕರಾಟೆ ಚಾಂಪಿಯನ್‌ಷಿಪ್‌ನ 21 ವರ್ಷದೊಳಗಿನ ಮಹಿಳೆಯರ ಕಟಾ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಹೈದರಾಬಾದ್‌ನ ಕೋಟ್ಲಾ ವಿಜಯ ಭಾಸ್ಕರರೆಡ್ಡಿ ಕ್ರೀಡಾಂಗಣದಲ್ಲಿ ಚಾಂಪಿಯನ್‌ಷಿಪ್ ಇತ್ತೀಚೆಗೆ ನಡೆದಿತ್ತು.

ಬೆಂಗಳೂರಿನ ಚೈತ್ರಶ್ರೀ ಅವರಿಗೆ ಅಖಿಲ ಕರ್ನಾಟಕ ಕರಾಟೆ ಸಂಸ್ಥೆಯ ಕಾರ್ಯದರ್ಶಿ ಭಾರ್ಗವ ರೆಡ್ಡಿ ಅವರು ಮಾರ್ಗದರ್ಶನ ನೀಡಿದ್ದರು.

ಮತ್ತೆ ತಮ್ಮದೇ ದಾಖಲೆ ಮುರಿದ ಡುಪ್ಲಾಂಟಿಸ್

ಬೆಲ್‌ಗ್ರೇಡ್ (ಎಎಫ್‌ಪಿ): ಸ್ವೀಡನ್‌ನ ಅರ್ಮಾಂಡ್ ಡುಪ್ಲಾಂಟಿಸ್ ಪುರುಷರ ಪೋಲ್‌ವಾಲ್ಟ್‌ನಲ್ಲಿ ತಮ್ಮದೇ ವಿಶ್ವದಾಖಲೆಯನ್ನು ಮೀರಿ ನಿಂತರು.

ಸೋಮವಾರ ಇಲ್ಲಿ ನಡೆದ ಒಳಾಂಗಣ ಟೂರ್ ಸಿಲ್ವರ್ ಸ್ಪರ್ಧೆಯಲ್ಲಿ ಅವರು 6.19 ಮೀಟರ್ಸ್ ಎತ್ತರದ ಸಾಧನೆ ಮಾಡಿದರು. 2020ರಲ್ಲಿ ಅವರು 6.17 ಮೀಟರ್ಸ್ ಸಾಧನೆ ಮಾಡಿದ್ದರು. ಗ್ಲಾಸ್ಗೋದಲ್ಲಿ 6.18 ಮೀಟರ್ಸ್ ಜಿಗಿತದ ದಾಖಲೆ ಬರೆದಿದ್ದರು. ಈಗ ಮೂರನೇ ಬಾರಿ ತಮ್ಮ ದಾಖಲೆಯನ್ನು ಮತ್ತಷ್ಟು ಉತ್ತಮಪಡಿಸಿಕೊಂಡಿದ್ದಾರೆ. ಇದೇ 18ರಿಂದ ಒಳಾಂಗಣ ವಿಶ್ವ ಚಾಂಪಿಯನ್‌ಷಿಪ್ ನಡೆಯುವ ಕ್ರೀಡಾಂಗಣದಲ್ಲಿಯೇ ಈಗ ಸ್ಪರ್ಧೆ ನಡೆಯುತ್ತಿದೆ. ‘ಮುಂದಿನ ಮಹತ್ವದ ಸ್ಪರ್ಧೆಗಳಲ್ಲಿ ಇನ್ನಷ್ಟು ಎತ್ತರದ ಸಾಧನೆ ಮೂಡಿಬರಲಿವೆ’ ಎಂದು ಡುಪ್ಲಾಂಟಿಸ್ ಹೇಳಿದ್ದಾರೆ.

ಅರ್ಮಾಂಡ್ ಡುಪ್ಲಾಂಟಿಸ್

ಭಾರತ ತಂಡಕ್ಕೆ ಸಾನಿಯಾ, ಕರ್ಮನ್

ಬಿಲ್ಲಿ ಜೀನ್ ಕಿಂಗ್ ಟೆನಿಸ್: ಏಷ್ಯಾ ಓಷೀನಿಯಾ ಸ್ಪರ್ಧೆ

ಸಾನಿಯಾ ಮಿರ್ಜಾ

ನವದೆಹಲಿ (ಪಿಟಿಐ): ಅನುಭವಿ ಸಾನಿಯಾ ಮಿರ್ಜಾ, ಸಿಂಗಲ್ಸ್ ಆಟಗಾರ್ತಿಯರಾದ ಅಂಕಿತಾ ರೈನಾ ಮತ್ತು ಕರ್ಮನ್ ಕೌರ್ ಥಂಡಿ ಅವರು ಬಿಲ್ಲಿ ಜೀನ್ ಕಿಂಗ್ ಕಪ್ ಟೆನಿಸ್ ಟೂರ್ನಿಯ ಏಷ್ಯಾ ಓಷೀನಿಯಾ ಗುಂಪು 1ರ ಸ್ಪರ್ಧೆಗೆ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ಏಪ್ರಿಲ್ 12ರಿಂದ ಟರ್ಕಿಯ ಅಂಟಲ್ಯಾದಲ್ಲಿ ಈ ಪಂದ್ಯಗಳು ನಡೆಯಲಿವೆ. ಋತುಜಾ ಭೋಸ್ಲೆ ಸ್ಥಾನ ಉಳಿಸಿಕೊಂಡಿದ್ದು, ರಿಯಾ ಭಾಟಿಯಾ ಅವರು ಜೀಲ್ ದೇಸಾಯಿ ಬದಲಿಗೆ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಶಾಲಿನಿ ಠಾಕೂರ್ ಅವರು ತಂಡದ ಕೋಚ್ ಆಗಿದ್ದಾರೆ.

ಕಳೆದ ವರ್ಷ ಏಪ್ರಿಲ್‌ನಲ್ಲಿ ಲಾಟ್ವಿಯಾ ಎದುರು ನಡೆದ ಪ್ಲೇ ಆಫ್‌ನಲ್ಲಿ ಭಾರತ ತಂಡದ ಆಟಗಾರ್ತಿಯರು 1–3ರಿಂದ ಸೋಲುವ ಮೂಲಕ ವಲಯ ಸ್ಪರ್ಧೆಗೆ ಮರಳಿದ್ದರು.

ಭಾರತವು ಚೀನಾ, ಇಂಡೊನೇಷ್ಯಾ, ಜಪಾನ್, ಕೊರಿಯಾ ರಿಪಬ್ಲಿಕ್ ಮತ್ತು ನ್ಯೂಜಿಲೆಂಡ್ ಎದುರು ರೌಂಡ್-ರಾಬಿನ್ ಮಾದರಿಯಲ್ಲಿ ಸ್ಪರ್ಧಿಸಲಿದ್ದು, ಅಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು ಪ್ಲೇ ಆಫ್‌ನಲ್ಲಿ ಸ್ಪರ್ಧಿಸುವ ಅವಕಾಶವನ್ನು ಪಡೆಯುತ್ತವೆ.

ಮುಂದಿನ ಹಂತಕ್ಕೆ ಮುನ್ನಡೆಯಲು ಭಾರತದ ಆಟಗಾರ್ತಿಯರು ಭಾರಿ ಬೆವರು ಹರಿಸಬೇಕು ಎಂದು ನಾಯಕ ವಿಶಾಲ್ ಉಪ್ಪಳ್ ಹೇಳಿದ್ದಾರೆ.

‘ಉತ್ತಮ ಶ್ರೇಯಾಂಕ ಹೊಂದಿರುವ ರಿಯಾ ಅವರಿಗೆ ಅವಕಾಶ ನೀಡಿರುವುದು ಅರ್ಹವಾಗಿದೆ ಎಂದು ಆಯ್ಕೆ ಸಮಿತಿಯು ಭಾವಿಸಿದೆ. ಕೊರೊನಾ ಸೋಂಕಿನ ಕಾರಣ ಅವರು ಕಳೆದ ಬಾರಿ ಆಡಿರಲಿಲ್ಲ. ಇದು ತೀವ್ರ ಪೈಪೋಟಿಯಿಂದ ಕೂಡಿರುವ ವಲಯವಾಗಿದೆ. ಚೀನಾ ಮತ್ತು ಜಪಾನ್ ನಮಗೆ ಭಾರಿ ಸವಾಲಾಗಬಹುದು’ ಎಂದು ಉಪ್ಪಳ್ ತಿಳಿಸಿದ್ದಾರೆ.

ಪ್ರಶಸ್ತಿ ವಿಜೇತ ಮೌಂಟ್ಸ್ ಕ್ಲಬ್ ತಂಡ: ಕುಳಿತವರು (ಎಡದಿಂದ) ಗೋಮೇಧಾ, ಸಾಗರಿಕಾ, ಕೃತಿಕಾ ಮತ್ತು ಆಸ್ಥಾ. ನಿಂತವರು: ಗ್ರೀಷ್ಮಾ, ಲೋಪಾಮುದ್ರಾ, ರೋಶಿನಿ, ನಿಹಾರಿಕಾ, ಜಯವಂತಿ (ಕೋಚ್), ಪಾವನಿ, ಹನ್ನಾ, ನಕ್ಷತ್ರ ಮತ್ತು ನಿಧಿ– ಪ್ರಜಾವಾಣಿ ಚಿತ್ರ– ಬಿ.ಎಚ್. ಶಿವಕುಮಾರ್

ಮಾತೃ ಕಪ್ ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಮೌಂಟ್ಸ್ ಕ್ಲಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಹಾರಿಕಾ ರೆಡ್ಡಿ ಅವರ ಉತ್ತಮ ಆಟದ ಬಲದಿಂದ ಮೌಂಟ್ಸ್ ಕ್ಲಬ್ ತಂಡವು ಎಸ್.ಎಮ್.ಎನ್. ಟ್ರೋಫಿಗಾಗಿ ನಡೆದ ರಾಜ್ಯ ಮಾತೃಕಪ್ ಮಹಿಳಾ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮೌಂಟ್ಸ್ ಆಟಗಾರ್ತಿಯರು 68–53ರಿಂದ ಬೀಗಲ್ಸ್ ಬಿ.ಸಿ ತಂಡವನ್ನು ಸೋಲಿಸಿದರು. ವಿಜೇತ ತಂಡದ ಪರ ನಿಹಾರಿಕಾ 22 ಸ್ಕೋರ್ ದಾಖಲಿಸಿದರೆ, ಲೋಪಾಮುದ್ರಾ 14 ಮತ್ತು ಕೃತ್ತಿಕಾ ಲಕ್ಷ್ಮಣ್ ಅವರು 9 ಪಾಯಿಂಟ್ಸ್ ಗಳಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಡಿವೈಇಎಸ್ ವಸತಿ ನಿಲಯ ತಂಡವು 75–42ರಿಂದ ರಾಜ್‌ಮಹಲ್ ಬಿ.ಸಿ. ತಂಡವನ್ನು ಮಣಿಸಿತು. ಡಿವೈಇಎಸ್ ಪರ ಮೇಘನಾ ಅಮೋಘ 37 ಪಾಯಿಂಟ್ಸ್ ದಾಖಲಿಸಿದರು.

ಟ್ರೋಫಿ ವಿಜೇತ ಮೌಂಟ್ಸ್ ₹ 50 ಸಾವಿರ, ರನ್ನರ್ಸ್ ಅಪ್ ಬೀಗಲ್ಸ್ ₹ 30 ಸಾವಿರ ತಮ್ಮದಾಗಿಸಿಕೊಂಡವು. ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದ ತಂಡಗಳು ಕ್ರಮವಾಗಿ ₹ 20 ಸಾವಿರ ಮತ್ತು ₹ 10 ಸಾವಿರ ಪಡೆದವು.

ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿ: ಲಕ್ಷ್ಯ, ಸೈನಾ ನೆಹ್ವಾಲ್ ಮುನ್ನಡೆ

ಶ್ರೀಕಾಂತ್, ಸಿಂಧುಗೆ ಜಯದ ಆರಂಭ

ಮುಲ್ಹೆಮ್ ಆ್ಯನ್ ಡರ್ ರುಹ್ರ್, ಜರ್ಮನಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ.

ಮಂಗಳವಾರ ಇಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಶ್ರೀಕಾಂತ್ ಅವರು ಫ್ರಾನ್ಸ್‌ನ ಬ್ರೈಸ್ ಲೆವರ್ಡೆಜ್ ಅವರನ್ನು ಪರಾಭವಗೊಳಿಸಿದರು. 48 ನಿಮಿಷಗಳ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಎಂಟನೇ ಶ್ರೇಯಾಂಕದ ಭಾರತದ ಆಟಗಾರ 21-10, 13-21, 21-7ರಿಂದ ವಿಶ್ವ ರ‍್ಯಾಂಕಿಂಗ್‌ನಲ್ಲಿ 39ನೇ ಸ್ಥಾನದಲ್ಲಿರುವ ಆಟಗಾರನ ಸವಾಲು ಮೀರಿದರು.

ಇದರೊಂದಿಗೆ ಲೆವರ್ಡೆಜ್ ಎದುರು ಆಡಿದ ನಾಲ್ಕೂ ಪಂದ್ಯಗಳಲ್ಲೂ ಶ್ರೀಕಾಂತ್ ಜಯ ಸಾಧಿಸಿದಂತಾಗಿದೆ.

ಮುಂದಿನ ಸುತ್ತಿನ ಹಣಾಹಣಿಯಲ್ಲಿ ಶ್ರೀಕಾಂತ್ ಅವರು ಚೀನಾದ ಲು ಗುವಾಂಗ್ ಜು ಅವರನ್ನು ಎದುರಿಸುವರು. ವಿಶ್ವ ಕ್ರಮಾಂಕದಲ್ಲಿ 27ನೇ ಸ್ಥಾನದಲ್ಲಿರುವ ಗುವಾಂಗ್ ವಿರುದ್ಧ ಭಾರತದ ಆಟಗಾರ ಈ ಹಿಂದೆ ಆಡಿದ ಎರಡೂ ಪಂದ್ಯಗಳಲ್ಲೂ ಜಯ ಸಾಧಿಸಿದ ದಾಖಲೆ ಹೊಂದಿದ್ದಾರೆ.

ಪಿ.ವಿ.ಸಿಂಧು– ಪಿಟಿಐ ಚಿತ್ರ

ಕಿದಂಬಿ ಶ್ರೀಕಾಂತ್– ಎಎಫ್‌ಪಿ ಚಿತ್ರ

ಮೊದಲ ಗೇಮ್‌ನ ಆರಂಭದಲ್ಲಿ 6-6ರಿಂದ ಸಮಬಲದಲ್ಲಿದ್ದ ಪಂದ್ಯವನ್ನು 19-8ಕ್ಕೆ ಕೊಂಡೊಯ್ದ ಶ್ರೀಕಾಂತ್, ಸುಲಭವಾಗಿ ಗೆದ್ದುಕೊಂಡರು. ಆದರೆ ಎರಡನೇ ಗೇಮ್‌ನಲ್ಲಿ ತಿರುಗೇಟು ನೀಡಿದ ಲೆವರ್ಡೆಜ್, ಆರಂಭದಿಂದಲೂ ಪಾರಮ್ಯ ಮೆರೆದು ಗೇಮ್ ತಮ್ಮದಾಗಿಸಿಕೊಂಡರು.

ಮೂರನೇ ಮತ್ತು ನಿರ್ಣಾಯಕ ಗೇಮ್‌ನಲ್ಲಿ ಲಯ ಕಂಡುಕೊಂಡ ಭಾರತದ ಆಟಗಾರ ನಿರಂತರವಾಗಿ ಪಾಯಿಂಟ್ಸ್ ಕಲೆಹಾಕುತ್ತ ಸಾಗಿದರು. ಆರಂಭದಲ್ಲಿ 11-5ರಿಂದ ಮುನ್ನಡೆ ಗಳಿಸಿದ ಅವರು ಅದೇ ಲಯದೊಂದಿಗೆ 18-7ರಿಂದ ಮೇಲುಗೈ ಪಡೆದು ಗೇಮ್‌ನೊಂದಿಗೆ ಪಂದ್ಯವನ್ನೂ ಜಯಿಸಿ ಸಂಭ್ರಮಿಸಿದರು.

ಲಕ್ಷ್ಯ ಸೇನ್ ಅವರು 21-6, 22-20ರಿಂದ ಥಾಯ್ಲೆಂಡ್‌ನ ಕಾಂತಫೋನ್ ವಾಂಗ್‌ಚರೋನ್ ಎದುರು,

ಇಲ್ಲಿ ಏಳನೇ ಶ್ರೇಯಾಂಕ ಪಡೆದಿರುವ ಸಿಂಧು, ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 21-8, 21-7ರಿಂದ ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್‌ಪನ್ ಅವರನ್ನು ಮಣಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ ಬುಸಾನನ್ ಎದುರು ಸಿಂಧು ಅವರಿಗೆ ಇದು 15ನೇ ಜಯವಾಗಿದೆ.

ಸೈನಾ ನೆಹ್ವಾಲ್ 21-15 17-21 21-14ರಿಂದ ಸ್ಪೇನ್‌ನ ಕ್ಲಾರಾ ಅಜುರ್ಮೆಂಡಿ ಎದುರು ಜಯಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಸಾಯಿ ಪ್ರತೀಕ್– ಎನ್. ಸಿಕ್ಕಿರೆಡ್ಡಿ ಅವರು ಮೊದಲ ಸುತ್ತಿನಲ್ಲಿ ನಿರಾಸೆ ಅನುಭವಿಸಿದರು. ಥಾಯ್ಲೆಂಡ್‌ನ, ಅಗ್ರಶ್ರೇಯಾಂಕದ ದೆಚ್‌ಪೋಲ್ ಪುವಾರಣುಕ್ರೊವ್–ಸಾಪ್‌ಸೈರಿ ತೀರತ್ತನಾಚೈ 21–19, 21–8ರಿಂದ ಭಾರತದ ಜೋಡಿಗೆ ಸೋಲುಣಿಸಿದರು.



ಶರ್ಮಿಳಾ ದೇವಿ –ಟ್ವಿಟರ್ ಚಿತ್ರ

ಹಾಕಿ ಆಟಗಾರ್ತಿಯರಿಗೆ ಐಒಸಿ ಉದ್ಯೋಗ

ನವದೆಹಲಿ: ಕ್ರೀಡಾ ಉತ್ತೇಜನ ನೀತಿಯ ಭಾಗವಾಗಿ ಭಾರತೀಯ ತೈಲ ನಿಗಮವು (ಐಒಸಿ) ಮೊದಲ ಬಾರಿಗೆ ಭಾರತ ಹಾಕಿ ತಂಡದ ಒಂಬತ್ತು ಆಟಗಾರ್ತಿಯರಿಗೆ ಉದ್ಯೋಗ ನೀಡಿದೆ.

ಸುಮನ್ ದೇವಿ ತೌದಮ್, ರಾಜ್ವಿಂದರ್ ಕೌರ್, ರಶ್ಮಿತಾ ಮಿಂಜ್, ಶರ್ಮಿಳಾ ದೇವಿ, ಇಶಿಕಾ ಚೌಧರಿ, ಬಿಚು ದೇವಿ ಖರಿಬಮ್, ದೀಪಿಕಾ, ಬಲ್ಜೀತ್ ಕೌರ್ ಮತ್ತು ಅಕ್ಷತಾ ಢೇಕಲೆ ಸೇರಿದ್ದಾರೆ ಉದ್ಯೋಗ ಪಡೆದ ಹಾಕಿ ಆಟಗಾರ್ತಿಯರು ಎಂದು ಕಂಪನಿಯು ತಿಳಿಸಿದೆ.ಹರಿಯಾಣ, ಪಂಜಾಬ್, ಮಣಿಪುರ, ಒಡಿಶಾ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳ ಈ ಆಟಗಾರ್ತಿಯರು ಟೋಕಿಯೊ ಒಲಿಂಪಿಕ್ಸ್ ಮತ್ತು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಸೇರಿದಂತೆ ಹಲವು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಭಾಗವಹಿಸಿದ್ದಾರೆ.

ಹೈದರಾಬಾದ್ ರೇಸ್

ಬಗ್ಗಿ ಗೆಲ್ಲುವ ನಿರೀಕ್ಷೆ

ಮಿರ್ಜಾ ಜುನ್ನೂರ್ ಅಹ್ಮದ್ ಮೆಮೋರಿಯಲ್ ಟ್ರೋಫಿ ಬುಧವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬಗ್ಗಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.40ಕ್ಕೆ ಪ್ರಾರಂಭವಾಗಲಿರುದ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡೆಸರ್ಟ್ ಸುಲ್ತಾನ್ 3, ಬೆಲ್ಲಾಗಿಯೊ 8, ಸ್ವೀಟ್ ಡ್ಯಾನ್ಸರ್ 10
2ನೇ ರೇಸ್: ಅನ್‌ಮ್ಯಾಚ್ಡ್ 1, ಸಾಲಿಸ್‌ಬರಿ 3, ಕಮಿಂಗ್ ಹೋಮ್ 10
ನೇ ರೇಸ್: ಐಬ್ಯಾಕ್ 1, ಲಾಚ್ ಸ್ಟೆಲ್ಲಾ 2, ಬಕ್ಸಿ 7
4ನೇ ರೇಸ್: ಥಂಡರ್ ರೋಡ್ 5, ಲೈನ್‌ವೈಲರ್ 1, ಸೋಲ್ ಎಂಪ್ರೆಸ್ 6
5ನೇ ರೇಸ್: ಬಗ್ಗಿ 5, ಅಕಿಡೊ 2, ಮ್ಯಾಕ್ಸಿಮಸ್ ಗ್ಲಾಮರ್ 4
6ನೇ ರೇಸ್: ಆಯುರ್ ತೇಜ್ 1, ಆರ್ಕೇಡಿಯನ್ ಏಂಜೆಲ್ 8, ಸ್ಪೆಕ್ಟಾಕ್ಯುಲರ್ ಕ್ರ್ಯೂಝ್ 6

ಉತ್ತಮ ಬೆಟ್: ಥಂಡರ್ ರೋಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಪೊಲೀಸ್ ಇಲಾಖೆಯಲ್ಲಿರುವ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯವೇ?

ಜನಾಭಿಪ್ರಾಯ:

ಹೌದು	ಇಲ್ಲ
58%	42%

ಜರ್ಮನಿ ತಂಡಕ್ಕೆ ಕೋವಿಡ್ ಕಾಟ: ಹಾಕಿ ಪಂದ್ಯಗಳು ಮುಂದಕ್ಕೆ

ಭುವನೇಶ್ವರ (ಪಿಟಿಐ): ಪ್ರವಾಸಿ ಜರ್ಮನಿ ತಂಡದಲ್ಲಿ ಏಕಾಏಕಿ ಕೋವಿಡ್–19 ಪ್ರಕರಣಗಳು ಪತ್ತೆಯಾದ ಕಾರಣ ಈ ವಾರಾಂತ್ಯದಲ್ಲಿ ಭಾರತದ ಹಾಕಿ ತಂಡದ ವಿರುದ್ಧ ಆಡಬೇಕಿದ್ದ ಪ್ರೊ ಲೀಗ್‌ನ ಪಂದ್ಯಗಳನ್ನು ಮುಂದೂಡಲಾಗಿದೆ ಎಂದು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಮಂಗಳವಾರ ತಿಳಿಸಿದೆ.

‘ಮಾರ್ಚ್ 12 ಮತ್ತು 13ರಂದು ಪಂದ್ಯಗಳು ನಿಗದಿಯಾಗಿದ್ದವು. ಆದರೆ ಜರ್ಮನಿ ತಂಡದ ಆಟಗಾರರಲ್ಲಿ ಸೋಂಕು ಪತ್ತೆಯಾದ ಕಾರಣ ಮುಂದೂಡಲಾಗಿದೆ. ಎಫ್‌ಐಎಚ್, ಹಾಕಿ ಇಂಡಿಯಾ ಮತ್ತು ಹಾಕಿ ಜರ್ಮನಿ ಪರ್ಯಾಯ ದಿನಾಂಕಗಳನ್ನು ಹೊಂದಿಸಲು ಮಾತುಕತೆ ನಡೆಸುತ್ತಿವೆ’ ಎಂದು ಎಫ್‌ಐಎಚ್ ತಿಳಿಸಿದೆ.

ಅನುಚಿತ ವರ್ತನೆ: ಜ್ವೆರೆವ್‌ಗೆ ವರ್ಷದ ಗಡುವು

ಅಕಪಲ್ಕೊ (ಎಪಿ): ಮೆಕ್ಸಿಕೊ ಓಪನ್ ಟೆನಿಸ್ ಟೂರ್ನಿಯ ವೇಳೆ ಅನುಚಿತ ವರ್ತನೆ ತೋರಿದ ಜರ್ಮನಿಯ ಟೆನಿಸ್ ಆಟಗಾರ ಅಲೆಕ್ಸಾಂಡರ್ ಜ್ವೆರೆವ್ ಅವರಿಗೆ ನಡವಳಿಕೆ ಸುಧಾರಿಸಿಕೊಳ್ಳಲು ಎಟಿಪಿ ಒಂದು ವರ್ಷದ ಗಡುವು ನೀಡಿದೆ.

ಆ ಟೂರ್ನಿಯ ಡಬಲ್ಸ್‌ನಲ್ಲಿ ಸೋತಿದ್ದ ಜ್ವೆರೆವ್ ಅವರು ಚೇರ್ ಅಂಪೈರ್ ಸ್ಟ್ಯಾಂಡ್‌ಗೆ ರ‍್ಯಾಕೆಟ್‌ನಿಂದ ಪದೇ ಪದೇ ಹೊಡೆದಿದ್ದರು.

‘ಕ್ರೀಡಾಸ್ಫೂರ್ತಿಗೆ ವಿರುದ್ಧವಾದ ನಡವಳಿಕೆ ತೋರಿದರೆ, ಅಧಿಕಾರಿ, ಪ್ರೇಕ್ಷಕ ಅಥವಾ ಯಾವುದೇ ವ್ಯಕ್ತಿಗೆ ನಿಂದನೆ ಅಥವಾ ದೈಹಿಕ ಹಲ್ಲೆ ಮಾಡಿದರೆ ಅವರನ್ನು ಎಂಟು ವಾರಗಳ ಅವಧಿಗೆ ಜ್ವೆರೆವ್ ಅವರನ್ನು ಅಮಾನತು ಮಾಡಬಹುದಾಗಿದೆ. ಹೆಚ್ಚುವರಿಯಾಗಿ ₹ 19 ಲಕ್ಷ ದಂಡವನ್ನೂ ವಿಧಿಸಬಹುದು‘ ಎಂದು ಎಟಿಪಿ ತಿಳಿಸಿದೆ.

ಈ ‘ಶಿಕ್ಷೆ’ಯ ವಿರುದ್ಧ ಮೇಲ್ಮನವಿ ಸಲ್ಲಿಸಲಿ ಜ್ವೆರೆವ್ ಅವರಿಗೆ ಶುಕ್ರವಾರದವರೆಗೆ ಅವಕಾಶವಿದೆ.